ಶ್ರೀ ಶಾಂಕರಭಾಷ್ಯಸಮೇತ

# ಮುಂಡಕೋಪನಿಷತ್ತು

ಅಧ್ಯಾತ್ಮಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ
ಹಾಸನ ಜಿಲ್ಲೆ - ಕರ್ನಾಟಕ

1999

# ಶ್ರೀ ಶಂಕರಾಚಾರ್ಯರ ದಶೋಪನಿಷದ್ಭಾಷ್ಯಗಳು

ಇವುಗಳಲ್ಲಿ ಮೂಲ, ಭಾಷ್ಯ, ಟಿಪ್ಪಣಿ, ಸಾರ, ಶಬ್ದಾನುಕ್ರಮಣಿಕೆ - ಇವೆಲ್ಲವೂ ಇವೆ. ಭಾಷ್ಯದ ಸಂಸ್ಕೃತಮೂಲವನ್ನು ಕನ್ನಡದ ಅಕ್ಷರದಲ್ಲಿ ಕೊಟ್ಟಿರುತ್ತದೆ. ಅನುವಾದವನ್ನು ಪರಿಷ್ಕರಿಸಿ ಪೀಠಿಕೆ, ಟಿಪ್ಪಣಿ - ಮುಂತಾದವುಗಳನ್ನು ಹೊಸದಾಗಿಯೇ ಸೇರಿಸಿ ಸಂಸ್ಕೃತದ ಮೂಲಕ್ಕೆ ಬಿಂಬ ಪ್ರತಿಬಿಂಬದಂತೆ ಅನುವಾದವನ್ನು ಕೊಟ್ಟಿರುವದರಿಂದ ಮೂಲಸಂಸ್ಕೃತದ ಭಾಷ್ಯವನ್ನು ಓದುವದಕ್ಕೆ ಪ್ರಯತ್ನಿಸುವವರಿಗೂ, ಶಾಂಕರಭಾಷ್ಯವನ್ನು ಪ್ರಸ್ಥಾನತ್ರಯಭಾಷ್ಯ ಗಳ ಮತ್ತು ಪ್ರಕರಣಗಳ ಪರಸ್ಪರ ಹೋಲಿಕೆಯಿಂದ ಅರ್ಥಮಾಡಿಕೊಳ್ಳಬೇಕೆನ್ನುವವರಿಗೂ ಈ ಗ್ರಂಥಗಳು ಅತ್ಯಮೂಲ್ಯವಾಗಿವೆ. ಶಂಕರಾಚಾರ್ಯರ ಸಂಪೂರ್ಣಗ್ರಂಥಗಳನ್ನು ಪುಸ್ತಕ ಭಂಡಾರದಲ್ಲಿ ಸಂಗ್ರಹಿಸಿಟ್ಟುಕೊಳ್ಳಬೇಕೆನ್ನುವವರಿಗೆ ಇದೊಂದು ಸುಸಂಧಿ. ಸ್ಕೂಲುಗಳೂ ಕಾಲೇಜುಗಳೂ ತಮ್ಮ ಪುಸ್ತಕಭಂಡಾರದಲ್ಲಿ ಅವಶ್ಯವಾಗಿ ಈ ಪುಸ್ತಕಗಳನ್ನು ಸಂಗ್ರಹಿಸಬೇಕು.

**1. ಈಶಾವಾಸ್ಯೋಪನಿಷತ್ತು** : ಇದು ಶುಕ್ಲಯಜುರ್ವೇದಕ್ಕೆ ಸೇರಿದ್ದು. ಇದರಲ್ಲಿ ಕರ್ಮ, ಉಪಾಸನೆ, ಜ್ಞಾನ - ಇವುಗಳ ಸಂಬಂಧವನ್ನು ಸ್ಪಷ್ಟಪಡಿಸಿರುತ್ತದೆ. ಆಚಾರ್ಯರು ಇದಕ್ಕೆ ರಚಿಸಿರುವ ಭಾಷ್ಯದಲ್ಲಿ ಪ್ರವೃತ್ತಿ - ನಿವೃತ್ತಿ ಎಂಬ ಎರಡು ಬಗೆಯಾಗಿರುವ ವೇದೋಕ್ತ ಧರ್ಮಗಳನ್ನು ವಿವರಿಸಿ ಪರಮಾತ್ಮನ ಸ್ವರೂಪವನ್ನು ಮುಖ್ಯವಾಗಿ ತಿಳಿಸುವದೇ ಈ ಉಪನಿಷತ್ತಿನ ಉದ್ದೇಶವೆಂದು ಸ್ಫುಟಗೊಳಿಸಿದ್ದಾರೆ. ಮಾಧ್ಯಂದಿನಪಾಠವನ್ನೂ ಕೊಡಲಾಗಿದೆ.

(ಐದನೆಯ ಮುದ್ರಣ : ಪುಟಗಳು ಡೆಮ್ಮಿ ೬+೬೨)

**2. ಕೇನೋಪನಿಷತ್ತು** : ಬ್ರಹ್ಮವು ಎಲ್ಲವನ್ನೂ ಬೆಳಗುವ ಚೈತನ್ಯಸ್ವರೂಪವಾದ ನಮ್ಮೆಲ್ಲರ ಆತ್ಮನು : ಅದರ ಶಕ್ತಿಯಿಂದಲೇ ಎಲ್ಲವೂ ತನ್ನ ಕೆಲಸಮಾಡುತ್ತಿರುವದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಉಪನಿಷತ್ತಿಗೆ ಪದಭಾಷ್ಯ, ವಾಕ್ಯಭಾಷ್ಯ - ಎಂಬ ಎರಡು ಭಾಷ್ಯಗಳಿವೆ.

(ಐದನೆಯ ಮುದ್ರಣ : ಪುಟಗಳು ಡೆಮ್ಮಿ ೬+೧೧೧)

**3. ಕಾಠಕೋಪನಿಷತ್ತು** : ಧರ್ಮಾಧರ್ಮಗಳಿಗೂ ಕಾಲತ್ರಯಕ್ಕೂ ಕಾರ್ಯಕಾರಣಭಾವಕ್ಕೂ ಕಟ್ಟು ಬೀಳದ ಬ್ರಹ್ಮವೇ ನಮ್ಮೆಲ್ಲರ ಆತ್ಮವೆಂಬುದನ್ನು ತಿಳಿಸುವ ಉಪನಿಷತ್ತಿದು.

(ಐದನೆಯ ಮುದ್ರಣ : ಪುಟಗಳು ಡೆಮ್ಮಿ ೧೪+೨೦೮)

**4. ಮುಂಡಕೋಪನಿಷತ್ತು** : ವೇದೋಕ್ತವಾದ ವಿದ್ಯೆಯನ್ನು ಪರವಿದ್ಯೆ, ಅಪರವಿದ್ಯೆ - ಎಂದು ಎರಡು ವರ್ಗಗಳಾಗಿ ವಿಂಗಡಿಸಿ ಜಗತ್ಕಾರಣವಾದ ಅಕ್ಷರವೆಂಬ ಹೆಸರಿನ ಅದ್ವಿತೀಯ ಬ್ರಹ್ಮವನ್ನು ಅರಿತುಕೊಳ್ಳುವ ವಿದ್ಯೆಯೇ ಪರವಿದ್ಯೆ ಎಂದು ಇಲ್ಲಿ ತಿಳಿಸಿದೆ. ಎಲ್ಲವೂ ಬ್ರಹ್ಮವೊಂದೇ ಆಗಿರುವದರಿಂದ ಅದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತಂತೆ ಆಗುವದೆಂತಲೂ, ಈ ಬ್ರಹ್ಮಜ್ಞಾನದಿಂದ ಜೀವನ್ಮುಕ್ತಿಯು ಲಭಿಸುವದೆಂತಲೂ ಪ್ರತಿಪಾದಿಸಿದೆ. ಜ್ಞಾನಕ್ಕೆ ಬೇಕಾದ ಸತ್ಯಾದಿಸಾಧನಗಳನ್ನು ಪ್ರತಿಪಾದಿಸಿರುವದು ಇದರ ವಿಶೇಷ. ಇದು ಈಗ ನಿಮ್ಮ ಕೈಯಲ್ಲಿದೆ.

(ನಾಲ್ಕನೆಯ ಮುದ್ರಣ : ಪುಟಗಳು ಡೆಮ್ಮಿ ೧೮+೧೭೦)

**5. ಪ್ರಶ್ನೋಪನಿಷತ್ತು** : ಮುಂಡಕೋಪನಿಷತ್ತಿನ ವಿಷಯವನ್ನು ಇಲ್ಲಿ ವಿವರಿಸಿದೆ. ಮುಂಡಕ - ಪ್ರಶ್ನೆಗಳ ಸಂಬಂಧವನ್ನು ವಿಶದೀಕರಿಸಿ ಅಕ್ಷರಾಖ್ಯಪರಮಾತ್ಮನ ಜ್ಞಾನದಿಂದ ಸದ್ಯೋಮುಕ್ತಿಯೂ ಉಪಾಸನೆಯಿಂದ ಕ್ರಮಮುಕ್ತಿಯೂ ಆಗುವದೆಂದು ನಿರೂಪಿಸುವ ಪ್ರಸಂಗದಿಂದ ಈ ಉಪನಿಷತ್ತಿನ ಭಾಷ್ಯದಲ್ಲಿ ಆಚಾರ್ಯರವರು ಅವಸ್ಥಾತ್ರಯ, ಜ್ಞಾನ ಸ್ವರೂಪ, ಕರ್ತೃತ್ವ ಭೋಕ್ತೃತ್ವ - ಎಂಬ ಮೂರು ವಿಷಯಗಳನ್ನು ವಿಸ್ತಾರವಾಗಿ ಚರ್ಚಿಸಿರುತ್ತಾರೆ.

(ನಾಲ್ಕನೆಯ ಮುದ್ರಣ : ಪುಟಗಳು ಡೆಮ್ಮಿ ೧೮+೧೬೮)

**6. ಮಾಂಡೂಕ್ಯೋಪನಿಷತ್ತು** : ಎಚ್ಚರ, ಕನಸು, ತನಿನಿದ್ರೆ - ಎಂಬ ಮೂರವಸ್ಥೆಗಳ ಸೋಂಕೂ ಇಲ್ಲದ ನಿರ್ಮಲವಾಗಿರುವ ನಮ್ಮೆಲ್ಲರ ಆತ್ಮನಾದ ಬ್ರಹ್ಮದ ಸ್ವರೂಪವನ್ನು ಅನುಭವಾನುಸಾರವಾಗಿ ವರ್ಣಿಸಿರುತ್ತದೆ. ಶ್ರೀ ಗೌಡಪಾದಾಚಾರ್ಯರು ಬರೆದಿರುವ ನಾಲ್ಕು ಪ್ರಕರಣಗಳುಳ್ಳ

ಅಧ್ಯಾತ್ಮ ಗ್ರಂಥಾವಳಿ

ಶ್ರೀ ಶಾಂಕರಭಾಷ್ಯಸಮೇತ

# ಮುಂಡಕೋಪನಿಷತ್ತು

(ಉಪನಿಷತ್ತಿನ ಮತ್ತು ಭಾಷ್ಯದ ಸಂಸ್ಕೃತಮೂಲ,
ಅನುವಾದ, ಟಿಪ್ಪಣಿ, ಸಾರ - ಮುಂತಾದವುಗಳೊಡನೆ)

ಬರೆದವರು :

**ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಕ್ರಮಾಂಕ ೪

ಪ್ರಕಾಶಕರು :

**ಅಧ್ಯಾತ್ಮಪ್ರಕಾಶ ಕಾರ್ಯಾಲಯ**

ಹೊಳೆನರಸೀಪುರ

1999

ಮೊದಲನೆಯ ಸಂಸ್ಕರಣ : 1927
ಎರಡನೆಯ ಸಂಸ್ಕರಣ : 1946
ಮೂರನೆಯ ಸಂಸ್ಕರಣ : 1974 (ಪ್ರತಿಗಳು : 2,000)
ನಾಲ್ಕನೆಯ ಸಂಸ್ಕರಣ : 1999 (ಪ್ರತಿಗಳು : 2,000)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
(All Rights Reserved)

ಅಕ್ಷರ ಜೋಡಣೆ ಮತ್ತು ವಿನ್ಯಾಸ :
**ಎಲ್.ಎಂ. ಗ್ರಾಫಿಕ್ಸ್**
1752/3, 'ಅಕ್ಷಯ ಮ್ಯಾನ್‌ಷನ್'
ಮಲ್ಲೇಶ್ವರಂ ರೈಲ್ವೆ ನಿಲ್ದಾಣದ ಎದಿರು,
ಮಾರುತಿ ಬಡಾವಣೆ, ಬೆಂಗಳೂರು - 560 021
✆ : 3321182

ಮುದ್ರಣ ಸ್ಥಾನ :
**ಪ್ರಾಜ್ಞ ಪ್ರಿಂಟರ್ಸ್**
222, ಗೌಡನಪಾಳ್ಯ ಮುಖ್ಯರಸ್ತೆ,
ಬೆಂಗಳೂರು - 560 061.
✆ : 6662232

# ಕೃತಜ್ಞತಾ ಸಮರ್ಪಣೆ

ಬೆಂಗಳೂರುನಗರ ಟಾಟಾ ಸಿಲ್ಕ್‌ಫಾರಂ ನಲ್ಲಿರುವ ಕನ್ಸಲ್ಟಿಂಗ್ ಇಂಜಿನಿಯರ್ ಮತ್ತು ಆರ್ಕಿಟೆಕ್ಟ್ ಆದ ಶ್ರೀ ಕೆ.ಎಸ್.ಕೆ. ಪ್ರಭಾತ್ ಮತ್ತು ಶ್ರೀದೇವಿ ಪ್ರಭಾತ್‌ರವರು ತಮ್ಮ ಪೂಜ್ಯ ಮಾತಾಪಿತೃಗಳಾದ ಶ್ರೀಮತಿ ಕುಸುಮ ಎಸ್. ಮಾಣಿಕ್ಯಮ್ಮ ಮತ್ತು ಶ್ರೀ ಕುಸುಮ ಸುಬ್ಬರಾಯ ಚೆಟ್ಟಿ ಇವರುಗಳ ನೆನಪಾಗಿ ಈ ಗ್ರಂಥಪ್ರಕಟನೆಯ ಪೂರ ವೆಚ್ಚವನ್ನು (35,000 ರೂ.) ವಹಿಸಿಕೊಂಡು ಪುಸ್ತಕವನ್ನು ಪ್ರಕಾಶನಗೊಳಿಸಲು ಉದಾರವಾಗಿ ಸಹಾಯ ಮಾಡಿರುತ್ತಾರೆ.

ಶ್ರೀಯುತರಿಗೂ, ಅವರ ಕುಟುಂಬ, ಬಂಧು-ಮಿತ್ರರಿಗೂ ಭಗವಂತನು ಹಾಗೂ ಸದ್ಗುರುಗಳು ಆಯುರಾರೋಗ್ಯ ಐಶ್ವರ್ಯಾದಿ ಸಕಲ ಶ್ರೇಯಃ ಪರಂಪರೆಗಳನ್ನು ನೀಡಿ ಕಾಪಾಡಲೆಂದು ನಾವು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಪ್ರಕಾಶಕರು



ಶ್ರೀ ಕುಸುಮ ಸುಬ್ಬರಾಯ ಚೆಟ್ಟಿ ಬಿ.ಎ. ಎಲ್‌ಎಲ್.ಬಿ. (ವಕೀಲರು)
(1884-1981)

ಶ್ರೀಮತಿ ಕುಸುಮ ಎಸ್. ಮಾಣಿಕ್ಯಮ್ಮ
(1909-1993)

# ಪ್ರಕಾಶಕರ ಬಿನ್ನಹ

## (ನಾಲ್ಕನೆಯ ಸಂಸ್ಕರಣ)

ಅಧ್ಯಾತ್ಮಪ್ರಕಾಶಕಾರ್ಯಾಲಯವು ಶಂಕರವೇದಾಂತದ ಉಪದೇಶಗಳನ್ನು ಕನ್ನಡ ಭಾಷೆಯಲ್ಲಿ ಪ್ರಚಾರಮಾಡುವ ಘನೋದ್ದೇಶದಿಂದ 1920ರಲ್ಲಿಯೇ ಸಂಸ್ಥಾಪಕರಿಂದ ಜನ್ಮವನ್ನು ಪಡೆದು ಈವರೆಗೂ ನಿರಂತರವಾಗಿ ತನ್ನ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಕೆಲಸಮಾಡುತ್ತಿದೆ. ಸಂಸ್ಥಾಪಕರ ಕೃಪಾ-ಶೀರ್ವಾದಗಳಿಂದ ಅಧ್ಯಾತ್ಮವಿದ್ಯೆಯ ಪ್ರಚಾರವನ್ನು ಮಹಾಜನರ ಸಹಕಾರ ಪ್ರೋತ್ಸಾಹಗಳಿಂದ ನಡೆಯಿಸುತ್ತಿದೆ. ಮುಖ್ಯವಾಗಿ ಅಧ್ಯಾತ್ಮಗ್ರಂಥಗಳ ಪ್ರಕಟನೆ, ಪ್ರವಚನೋಪನ್ಯಾಸಗಳ ಮೂಲಕ ಅಧ್ಯಾತ್ಮಸಂಸ್ಕೃತಿಯ ಪ್ರಚಾರವನ್ನು ಎಂದಿನಂತೆ ಮುಂದುವರೆಸಿದೆ.

ಈ ಸನ್ನಿವೇಶದಲ್ಲಿ ಸಂಸ್ಥಾಪಕರು ಬರೆದು ಪ್ರಕಟಿಸಿದ್ದ ನೂರಾರು ಗ್ರಂಥಗಳನ್ನು ಸಂಸ್ಥೆಯು ಪುನರ್ಮುದ್ರಿಸಿ ಪ್ರಚಾರಮಾಡುತ್ತಿದೆ. ವಿಶೇಷವಾಗಿ ಶ್ರೀ ಶಂಕರ ಭಗವತ್ಪಾದರ ಪ್ರಸ್ಥಾನತ್ರಯ ಭಾಷ್ಯಗಳ ಪ್ರಕಟನೆಯನ್ನು ಕೈಗೊಂಡು ಈಗ ನಾಲ್ಕನೆಯ ಬಾರಿಗೆ ಕನ್ನಡ ಅನುವಾದ ಸಹಿತವಾದ ಮುಂಡಕೋಪನಿಷತ್ತನ್ನು ಪ್ರಕಟಿಸಿ ವಾಚಕರಿಗೆ ಸಮರ್ಪಿಸಲಾಗಿದೆ.

ಈ ಗ್ರಂಥದ ಪ್ರಕಟನೆಗೆ ಬೆಂಗಳೂರಿನ ಶ್ರೀ ಕೆ.ಎಸ್.ಕೆ. ಪ್ರಭಾತ್‌ರವರು ಉದಾರವಾಗಿ ಧನಸಹಾಯವನ್ನು ನೀಡಿ ಅಧ್ಯಾತ್ಮಸಾಹಿತ್ಯಪ್ರಚಾರಸೇವೆಗೆ ಸಹಕರಿಸಿರುತ್ತಾರೆ. ಸಂಸ್ಥೆಯ ಪರವಾಗಿ ಅವರಿಗೆ ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಈ ಮೂಲಕ ಸಮರ್ಪಿಸಲಾಗಿದೆ.

ಕಾರ್ಯಾಲಯದ ಪಂಡಿತರಾದ ವೇ|| ಹೆಚ್. ಎಸ್. ಲಕ್ಷ್ಮೀನರಸಿಂಹ-ಮೂರ್ತಿಗಳು ಗ್ರಂಥದ ಅಚ್ಚಿನ ಕರಡುಗಳ ಶೋಧನೆ ಹಾಗೂ ಪ್ರಕಟನೆಯ ಕಾರ್ಯಗಳಲ್ಲಿ ಎಂದಿನಂತೆ ಸಹಕರಿಸಿದ್ದಾರೆ. ಬೆಂಗಳೂರಿನ ಕೆಲವು ಅಧ್ಯಾತ್ಮ ವಿಚಾರಾಭಿಮಾನಿಗಳು ಈ ಗ್ರಂಥದ ಮುದ್ರಣಕ್ಕೆ ಅಗತ್ಯವಾದ ಸಹಾಯವನ್ನು ನೀಡಿರುತ್ತಾರೆ. ಇವರೆಲ್ಲರಿಗೂ ನಾವು ಕೃತಜ್ಞರಾಗಿದ್ದೇವೆ.

ಇತಿ

ಕಾರ್ಯಾಲಯದ ಪರವಾಗಿ
ಅರಕಲಗೂಡು ತಾಂಡವೇಶ್ವರ,
ಅಧ್ಯಕ್ಷರು

ಅಧ್ಯಾತ್ಮಪ್ರಕಾಶ ಕಾರ್ಯಾಲಯ,
ಹೊಳೆನರಸೀಪುರ
16.9.1999

# ಪೀಠಿಕೆ

## ಉಪನಿಷತ್ತಿನ ಸ್ಥಾನ

ಮುಂಡಕೋಪನಿಷತ್ತು ಅಥರ್ವವೇದಕ್ಕೆ ಸೇರಿದ್ದು. ಆಧುನಿಕಸಂಶೋಧಕರು ಈ ವೇದವು ಪ್ರಾಚೀನವಲ್ಲವೆಂದೂ ಅಥರ್ವವೇದದ ಹೆಸರಿನಲ್ಲಿ ಎಷ್ಟೋ ಉಪನಿಷತ್ತುಗಳು ಈಚೆಗೆ ಹುಟ್ಟಿಕೊಂಡಿರುತ್ತವೆಯೆಂದೂ ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಇಷ್ಟು ಮಾತ್ರದಿಂದ ಆಸ್ತಿಕರಾದ ನಮ್ಮ ದೇಶದ ವಾಚಕರಿಗೆ ಈ ಉಪನಿಷತ್ತಿನಲ್ಲಿ ಎಂದಿಗೂ ಶ್ರದ್ಧೆಯು ಕಡಿಮೆಯಾಗುವಂತಿಲ್ಲ. ನಮ್ಮ ದೇಶದಲ್ಲಿ ವೇದವು ಕಾಲವನ್ನು ಮೀರಿದ್ದೆಂಬ ಉದಾತ್ತಭಾವನೆಯಿರುವದರಿಂದ ಇದು ಯಾವಾಗ ರಚಿತವಾಯಿತು ? ಎಂಬ ಪ್ರಶ್ನೆಯೇ ಇಲ್ಲಿ ಎದ್ದುಕೊಳ್ಳುವಂತಿಲ್ಲ. ಇದೂ ಅಲ್ಲದೆ ಪ್ರಾಮಾಣ್ಯಕ್ಕೆ ಪ್ರಾಚೀನತೆಯೇನೂ ಕಾರಣವಲ್ಲವಾದ್ದರಿಂದ ಉಪನಿಷತ್ತಿನ ಯೋಗ್ಯತೆಯನ್ನು ನಿರ್ಣಯಿಸುವದಕ್ಕೆ ಕಾಲನಿರ್ಣಯವು ಉಪಯೋಗಕ್ಕೂ ಬರುವಹಾಗಿಲ್ಲ. ಪ್ರತಿಯೊಬ್ಬ ದ್ವಿಜನೂ ತನ್ನ ತನ್ನ ಶಾಖೆಯ ವೇದವನ್ನು ಅಧ್ಯಯನಮಾಡಿದ ಮೇಲೆ ಮಿಕ್ಕ ಶಾಖೆಗಳನ್ನೂ ಅಧ್ಯಯನಮಾಡಬಹುದು ; ಅವಕಾಶವು ದೊರೆತರೆ ಮಾಡಲೂಬೇಕು - ಎಂದು ಧರ್ಮಶಾಸ್ತ್ರಗಳಲ್ಲಿ ಹೇಳಿರುತ್ತದೆ. ಇಂಥ ಸಂದರ್ಭಗಳಲ್ಲಿ ಅಥರ್ವವೇದವನ್ನು ಬೇರೆಯ ಶಾಖೆಯವರು ಅಧ್ಯಯನ ಮಾಡಬೇಕಾದರೆ ಮತ್ತೊಂದು ಸಲ ಉಪನಯನವಾಗಬೇಕು ಎಂಬ ನಂಬಿಕೆಯಿದೆ. ಇದರಿಂದ ಅಥರ್ವವೇದದ ವಿಷಯದಲ್ಲಿ ನಮ್ಮವರಿಗೆ ಎಂಥ ಹೆಚ್ಚಿನ ಪೂಜ್ಯಬುದ್ಧಿ ಇರುವದೆಂಬುದು ವ್ಯಕ್ತವಾಗುತ್ತದೆ.

ಈ ವೇದದ ಹೆಸರಿನಲ್ಲಿ ಅನೇಕ ಹೊಸ ಉಪನಿಷತ್ತುಗಳು ತಲೆದೋರಿರುವವೆಂಬ ವಾದವೇನೋ ಸಾಧಾರವಾಗಿಯೇ ಇದೆ. ಆದರೆ ಇದು ಮಿಕ್ಕ ವೇದಗಳಿಗೂ ಅನ್ವಯಿಸುತ್ತದೆ. ವೇದಾಂತವಿಚಾರವು ಕಡಿಮೆಯಾಗಿ, ಗ್ರಂಥಗಳ ಸ್ವರೂಪ ನಿರ್ಣಯವನ್ನು ಮಾಡುವದು ಕಷ್ಟವಾದ ಕಾಲದಲ್ಲಿ ತಮ್ಮ ತಮ್ಮ ಮತವು ಉಪನಿಷತ್ಪ್ರತಿಪಾದ್ಯವೆಂದು ತೋರಿಸುವದಕ್ಕಾಗಿ ಆಯಾ ಮತದವರು ತಮ ತಮಗೆ ಬೇಕಾದಂತೆ ಕೆಲವು ಉಪನಿಷತ್ತುಗಳನ್ನು ಕಲ್ಪಿಸಿಕೊಂಡಿದ್ದರೆ, ಅದು ಸ್ವಾಭಾವಿಕವಾಗಿಯೇ ಇದೆ. ಇದು ಹೇಗಾದರೂ ಇರಲಿ. ಪೂಜ್ಯಪಾದರಾದ ಶ್ರೀಶಂಕರಾಚಾರ್ಯರವರು ತಮ್ಮ ಭಾಷ್ಯಕ್ಕೆಂದು ಆರಿಸಿಕೊಂಡಿರುವ ಮುಂಡಕ ಪ್ರಶ್ನಮಾಂಡೂಕ್ಯಗಳ ಪ್ರಾಮಾಣ್ಯವನ್ನು ಮಿಕ್ಕ ಭಾಷ್ಯಕಾರರುಗಳೆಲ್ಲ ಒಪ್ಪಿರುವದ

ರಿಂದ ಈ ಉಪನಿಷತ್ತುಗಳ ಹೆಚ್ಚುಗಾರಿಕೆಯ ಬಗ್ಗೆ ಯಾವ ಸಂಶಯವೂ ಉಂಟಾಗುವದಕ್ಕೆ ಕಾರಣವಿರುವದಿಲ್ಲ.

## ಉಪನಿಷತ್ತಿನ ಪ್ರತಿಪಾದ್ಯವಿಷಯ

ಅಥರ್ವವೇದಕ್ಕೆ ಬ್ರಹ್ಮೋಪನಿಷತ್ತು, ಗರ್ಭೋಪನಿಷತ್ತು - ಮುಂತಾದ ಹಲವು ಉಪನಿಷತ್ತುಗಳಿದ್ದರೂ ಅವು ಬ್ರಹ್ಮಸೂತ್ರದಲ್ಲಿ ವಿಚಾರಕ್ಕೆ ಬಂದಿಲ್ಲ ವಾದ್ದರಿಂದ ಶ್ರೀ ಶಂಕರಭಗವತ್ಪಾದರವರು ಆ ಉಪನಿಷತ್ತುಗಳನ್ನು ಬಿಟ್ಟು ಸೂತ್ರದಲ್ಲಿ ಉಪಯುಕ್ತವಾಗಿರುವ ಈ ಉಪನಿಷತ್ತಿಗೇ ಭಾಷ್ಯವನ್ನು ಬರೆದಿರುವ ರೆಂದು **ವ್ಯಾಖ್ಯಾನಕಾರರು** ಹೇಳುತ್ತಾರೆ. ಇದು ನಿಜವಾಗಿದ್ದರೆ ಸೂತ್ರದಲ್ಲಿ ವಿನಿಯುಕ್ತವಾಗದೆ ಇರುವ ಮಾಂಡೂಕ್ಯಕ್ಕೂ ಆಚಾರ್ಯರು ಭಾಷ್ಯವನ್ನು ಬರೆಯ ಬಾರದಾಗಿತ್ತೆಂದಾಗುತ್ತದೆ. ಆದ್ದರಿಂದ ಉಪನಿಷತ್ತಿನಲ್ಲಿ ಪ್ರತಿಪಾದ್ಯವಾಗಿರುವ ವಿಷಯಮಹತ್ತ್ವವನ್ನು ಕಂಡೇ ಆಚಾರ್ಯರು ಇದಕ್ಕೆ ಭಾಷ್ಯವನ್ನು ಬರೆದಿರುತ್ತಾ ರೆಂದು ನಮಗೆ ತೋರುತ್ತದೆ. ಈ ಉಪನಿಷತ್ತು ಆಕಾರದಲ್ಲಿ ಸಣ್ಣದಾದರೂ ಇದರಲ್ಲಿ ವೇದಾಂತಕ್ಕೆ ಬಹುಮುಖ್ಯವಾಗಿರುವ ಬ್ರಹ್ಮವಿದ್ಯೆಯನ್ನು ಸಾಧನಫಲಗಳ ಸಮೇತವಾಗಿ ಸುಸ್ಪಷ್ಟವಾದ ನುಡಿಗಳಿಂದ ಸಂಗ್ರಹಿಸಿರುತ್ತದೆ.

ಉಪನಿಷತ್ತೆಂಬ ಮಾತಿಗೆ ಬ್ರಹ್ಮವಿದ್ಯೆಯೆಂಬುದೇ ಮುಖ್ಯವಾದ ಅರ್ಥ. ''ಯಾವದೊಂದನ್ನು ಅರಿತರೆ ಇದೆಲ್ಲವನ್ನೂ ಅರಿತಂತೆ ಆಗುವದು ?'' ಎಂಬ ಶೌನಕನ ಪ್ರಶ್ನೆಗೆ ಉತ್ತರವಾಗಿ ಅಂಗಿರಸ್ಸು ಹೇಳಿರುವ ಉತ್ತರವನ್ನು ಈ ಗ್ರಂಥದಲ್ಲಿ ವಿಸ್ತರಿಸಿರುವದರಿಂದ ಇದಕ್ಕೂ ''ಉಪನಿಷತ್ತು'' - ಉಪನಿಷತ್ತೆಂಬ ಹೆಸರಿನ ಬ್ರಹ್ಮ ವಿದ್ಯೆಯನ್ನು ತಿಳಿಸುವ ಗ್ರಂಥ - ಎಂಬ ಹೆಸರು ನ್ಯಾಯವಾಗಿ ಸಲ್ಲುತ್ತದೆ. ಬ್ರಹ್ಮವಿದ್ಯೆಗೆ ಉಪಕಾರಕವಾಗಿಯೇ ಎಲ್ಲಾ ವಿದ್ಯೆಗಳೂ ಹೊರಟಿರುವವು ; ಎಲ್ಲಾ ವಿದ್ಯೆಗಳೂ ಹೇಳುವ ಆಯಾ ವಿಶೇಷವಿಷಯದ ನಿಜವೇ ಬ್ರಹ್ಮವಾಗಿರುವದರಿಂದ ಬ್ರಹ್ಮ ವಿದ್ಯೆಯು ಎಲ್ಲಾ ವಿಷಯಗಳನ್ನೂ ತಿಳಿಸುತ್ತದೆ. ಆದ್ದರಿಂದ ಈ ವಿದ್ಯೆಯು ಬ್ರಹ್ಮ ನಿಂದ ಮೊದಲು ಉಪದಿಷ್ಟವಾದ ವಿದ್ಯೆ - ಎಂಬ ಅರ್ಥದಲ್ಲಿ ಮಾತ್ರವೇ ಅಲ್ಲ, ಎಲ್ಲಕ್ಕೂ ಹೆಚ್ಚಿನದಾದ ಪರಬ್ರಹ್ಮವನ್ನು ತಿಳಿಸಿಕೊಡುವದರಿಂದಲೂ ''ಬ್ರಹ್ಮವಿದ್ಯೆ'' ಎನಿಸಿರುತ್ತದೆ (೮) ಎಂದು ಆಚಾರ್ಯರು ಬರೆದಿರುತ್ತಾರೆ. ಅಂಗಿರಸ್ಸು ವಿದ್ಯೆಗಳನ್ನು ಪರವಿದ್ಯೆ, ಅಪರವಿದ್ಯೆ-ಎಂದು ಎರಡು ಭಾಗಗಳಾಗಿ ವಿಂಗಡಿಸಿರುತ್ತಾನೆ. ವೇದೋಕ್ತ ವಾದ ಕರ್ಮ, ಅದರ ಫಲವಾದ ಸ್ವರ್ಗ ; ಉಪಾಸನೆ, ಕರ್ಮೋಪಾಸನೆಗಳಿಂದ ಪಡೆಯಬಹುದಾದ ದೇವಲೋಕ-ಇವೆರಡೂ **ಅಪರವಿದ್ಯೆ**. ಯಾವದರಿಂದ ಬ್ರಹ್ಮವನ್ನು ಇದ್ದಂತೆಯೇ ಅರಿತುಕೊಳ್ಳಬಹುದೋ ಅದೇ **ಪರವಿದ್ಯೆ**, ಗುರುವಿನ

ಉಪದೇಶದಿಂದ ಈ ಪರವಿದ್ಯೆಯನ್ನು ಸಂಪಾದಿಸಿಕೊಂಡವನು ಪರಬ್ರಹ್ಮವೇ ಆಗಿ ಬಿಡುತ್ತಾನೆ. ಅಪರವಿದ್ಯೆಯಲ್ಲಿ ವಿರಕ್ತನಾಗಿ (ಪು. ೪೭) ಸತ್ಯಾದಿಸಾಧನಗಳನ್ನೂ (ಪು. ೧೧೭) ಯೋಗಮಾರ್ಗ (ಪು. ೧೪೦)ವನ್ನೂ ಅನುಸರಿಸುವವನಿಗೆ ಮಾತ್ರ ಈ ವಿದ್ಯೆಯಲ್ಲಿ ಅಧಿಕಾರವಿರುತ್ತದೆ ಎಂದು ಈ ಉಪನಿಷತ್ತಿನಲ್ಲಿ ಹೇಳಿರುತ್ತದೆ.

## ಭಾಷ್ಯದ ಮುಖ್ಯಾಂಶಗಳು

ಭಾಷ್ಯದಲ್ಲಿ ಆಚಾರ್ಯರ ಸಿದ್ಧಾಂತಕ್ಕೆ ಅಸಾಧಾರಣವಾಗಿರುವ ಹಲವು ವಿಷಯಗಳನ್ನು ಪ್ರತಿಪಾದಿಸಿರುತ್ತದೆ. ಉಪನಿಷತ್ತಿನಿಂದ ಅದ್ವೈತಪ್ರಕ್ರಿಯೆಯನ್ನು ಸಿದ್ಧಗೊಳಿಸಿರುವ ಬಗೆ, ಜ್ಞಾನಕರ್ಮಗಳ ಸ್ವಭಾವತಾರತಮ್ಯವನ್ನು ವಿಶದ ಪಡಿಸಿರುವದು, ಮುಕ್ತಿಯ ಸ್ವರೂಪವನ್ನು ಸ್ಪಷ್ಟಗೊಳಿಸಿರುವ ಪ್ರಕಾರ, ಸಾಧನಗಳ ಸ್ಥಾನವನ್ನು ನಿರ್ಧರಿಸಿರುವ ಕ್ರಮ. ಈ ನಾಲ್ಕೂ ಮುಖ್ಯವಾಗಿ ಲಕ್ಷ್ಯದಲ್ಲಿಡ ತಕ್ಕವುಗಳಾಗಿವೆ. ಜಿಜ್ಞಾಸುಗಳ ಉಪಯೋಗಕ್ಕಾಗಿ ಇಲ್ಲಿ ಒಂದೊಂದರ ವಿಷಯಕ್ಕೂ ಎರಡು ಮಾತುಗಳನ್ನು ಬರೆದಿಡುವೆವು.

## (೧) ಉಪನಿಷತ್ತಿನ ಬಲದಿಂದ ಅದ್ವೈತಸಿದ್ಧಿ

ಪರವಿದ್ಯೆಗೆ ವಿಷಯವಾದ ಪರಮಾರ್ಥವನ್ನು ಉಪನಿಷತ್ತಿನಲ್ಲಿ ''ಅಕ್ಷರ'' (೧.೧.೬), ಬ್ರಹ್ಮ (೧.೧.೮), ಸತ್ಯ (೨.೧.೧), ಪುರುಷ (೨.೧.೨) ಆತ್ಮಾ (೨.೨.೭) - ಎಂಬ ಹೆಸರುಗಳಿಂದ ಕರೆದಿರುತ್ತದೆ. ಈ ಹೆಸರುಗಳಲ್ಲಿ ಒಂದೊಂದರಲ್ಲಿಯೂ ಒಂದೊಂದು ವಿಶೇಷವಾದ ಅಭಿಪ್ರಾಯವು ಅಡಗಿರುತ್ತದೆ. ಅಕ್ಷರವೆಂದರೆ (೪೮) ನಾಶವಾಗುವದಲ್ಲ (ಅಕ್ಷರಣಾತ್), ಮತ್ತೊಂದರಿಂದ ಗಾಸಿಯಾಗುವದಲ್ಲ (ಅಕ್ಷತತ್ವಾತ್), ಎಂದಿಗೂ ಸವೆಯುವದಲ್ಲ (ಅಕ್ಷಯತ್ವಾತ್). ಬ್ರಹ್ಮವೆಂದರೆ (೧೦೩), ಎಲ್ಲಕ್ಕೂ ದೊಡ್ಡದು, ಎಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದ ದೇಶಕಾಲಾದಿಗಳ ಕಟ್ಟು ಇಲ್ಲದ್ದು. **ಪುರುಷ**ನೆಂದರೆ (೫೩, ೮೦) ಎಲ್ಲೆಲ್ಲಿಯೂ ತುಂಬಿಕೊಂಡು ಹೃದಯವೆಂಬ ಪುರದಲ್ಲಿ ಸಾಕ್ಷಿಯಾಗಿ ಕಾಣಿಸಿಕೊಳ್ಳುತ್ತಿರುವದು. **ಆತ್ಮ**ನೆಂದರೆ (೮೦) ನಮ್ಮ ಒಳಗಿನ ಸ್ವರೂಪ. ಇಂಥ ನಿರ್ವಿಶೇಷವಾದ (೧೯) ಪರಮಾರ್ಥದಿಂದ ವಿಶೇಷರೂಪವಾದ ಜಗತ್ತು ಉಂಟಾಯಿತು, ನಿರ್ವಿಕಾರವಾದ ಅಕ್ಷರದಿಂದ ಪ್ರಾಣ (ಹಿರಣ್ಯಗರ್ಭನೇ) ಮುಂತಾದ ಜಗತ್ತು ಉಂಟಾಯಿತು, ಪೂರ್ಣನಾದ ಪುರುಷನಿಂದ ಅಪೂರ್ಣವಾದ ಪರಿಚ್ಛಿನ್ನವಾದ ಜಗತ್ತು ಉಂಟಾಯಿತು, ಎಲ್ಲಕ್ಕೂ ಮಿಗಿಲಾಗಿರುವ ಬ್ರಹ್ಮದಿಂದ ಅಬ್ರಹ್ಮವಾದ ಜಗತ್ತು ಉಂಟಾಯಿತು, ನಮ್ಮಗಳ ಒಳಸ್ವರೂಪವಾದ ಆತ್ಮನಿಂದ

ಅನಾತ್ಮರೂಪವಾದ ಜಗತ್ತು ಉಂಟಾಯಿತು - ಎಂದು ಶ್ರುತಿ ಹೇಳುತ್ತಿದೆ. ಇದು ಹೇಗೆ ಸಾಧ್ಯ ? ಎಂದರೆ ಇದಕ್ಕೆ **'ಸತ್ಯ'** ಎಂಬ ವಿಶೇಷಣದಲ್ಲಿ ಉತ್ತರವಿದೆ. ಬ್ರಹ್ಮವೊಂದೇ ಸತ್ಯವು, ಪರಮಾರ್ಥವಾಗಿ ಇರತಕ್ಕದ್ದು ; ಮಿಕ್ಕದ್ದೆಲ್ಲವೂ ಅನೃತವು ಹುಸಿತೋರಿಕೆ (೫೦). ಹಗ್ಗದಲ್ಲಿ ತೋರುವ ಹಾವಿನಂತೆ ಪರಮಾರ್ಥ ಸತ್ಯವಾದ ಬ್ರಹ್ಮದಲ್ಲಿ ತೋರುವ ತಪ್ಪುತಿಳಿವಳಿಕೆ ಮಾತ್ರವೇ ಈ ಜಗತ್ತನ್ನು ತೋರಿಸುತ್ತಿರುವದು (೮೯). ಆದ್ದರಿಂದಲೇ ಶ್ರುತಿಯು ಪುರುಷನು, ಅಪ್ರಾಣನು, ಅಮನಸ್ಕನು (೫೪), ಅಜನು (೫೩) - ಎಂದು ಹೇಳಿರುವದಲ್ಲದೆ ಇದೆಲ್ಲವೂ ಪುರುಷನೇ (೬೯), ''ಇದೆಲ್ಲವೂ ಬ್ರಹ್ಮವೇ'' (೮೯) - ಎಂದು ಸಾರುತ್ತಿದೆ. ಆದ್ದರಿಂದ ಪ್ರಾಣಾದಿ ಜಗತ್ತು ತಾನು ಹುಟ್ಟುವದಕ್ಕಿಂತ ಮೊದಲೂ ನಾಶವಾದಮೇಲೂ ಇರುವದಿಲ್ಲವಾದ್ದರಿಂದ ಮಧ್ಯದಲ್ಲಿ ತೋರುತ್ತಿದ್ದರೂ ಕನಸಿನ ದೃಶ್ಯದಂತೆ ಅನೃತವೇ (೫೭) ಎಂದು ತೋರಿಸುವದಕ್ಕೆ ಶ್ರುತಿಯು ಈ ಅಕ್ಷರ, ಪುರುಷ ಅಥವಾ ಬ್ರಹ್ಮ - ಎಂಬ ಸತ್ಯದಿಂದ ಅನೃತವಾದ ಜಗತ್ತಿನ ಸೃಷ್ಟಿಯನ್ನು ಪ್ರತಿಪಾದಿಸುತ್ತದೆ. ಆದ್ದರಿಂದ ಬ್ರಹ್ಮವು ಅದ್ವಿತೀಯವೆಂದು ತಿಳಿಸುವದರಲ್ಲಿಯೇ ಶ್ರುತಿಗೆ ತಾತ್ಪರ್ಯವಿರುತ್ತದೆ. ಜೀವರುಗಳಾಗಿ ಕಾಣುವ ನಾವೆಲ್ಲರೂ ಉಪಾಧಿವಶದಿಂದ ಹುಟ್ಟುಹೊಂದುಗಳುಳ್ಳವರೆಂದು ತೋರುತ್ತಿದ್ದರೂ ಪರಮಾರ್ಥವಾಗಿ ಬೆಂಕಿಯಿಂದ ಸಿಡಿದುಬಂದ ಕಿಡಿಗಳು ಬೆಂಕಿಯೇ ಆಗಿರುವಂತೆ ನಿಜವಾಗಿ ಅಕ್ಷರವಾದ ಈ ಪುರುಷನ ಚೈತನ್ಯಸ್ವರೂಪರೇ ಆಗಿರುವೆವು (೫೧). ಈ ಅಕ್ಷರವೆಂಬುದು ಯಾವ ಉಪಾಧಿಗಳ ಹಂಗೂ ಇಲ್ಲದೆ ವ್ಯಾಕೃತಾವ್ಯಾಕೃತರೂಪಗಳೆರಡಕ್ಕಿಂತಲೂ ವಿಲಕ್ಷಣವಾದ, ಇಂಥದ್ದೆಂದು ಹೇಳುವದಕ್ಕೆ ಬಾರದ, ಸ್ವರೂಪವುಳ್ಳದ್ದಾಗಿರುತ್ತದೆ (೫೨) - ಎಂದು ಆಚಾರ್ಯರು ಶ್ರುತ್ಯರ್ಥವನ್ನು ನಿರ್ಣಯಿಸಿರುತ್ತಾರೆ.

## (೨) ಕರ್ಮಜ್ಞಾನಗಳ ಸ್ವಭಾವತಾರತಮ್ಯ

**ಕರ್ಮ**ವೆಂಬ ಮಾತಿಗೆ ಹೀಗೆ ಮಾಡಬೇಕೆಂದು ವಿಧಿಸುವದಕ್ಕೆ ಬರುವ ಅಪರ ವಿದ್ಯಾವಿಷಯವಾದ ಕ್ರಿಯೆ ಎಂಬ ಅರ್ಥವನ್ನಿಟ್ಟುಕೊಂಡರೆ ಕರ್ಮ, ಉಪಾಸನೆ - ಈ ಎರಡೂ ಕರ್ಮವೇ ಆಗುವವು. ಕರ್ಮಕ್ಕೆ ವಿಧಿಯ ಜ್ಞಾನ, ಕಾರಕಗಳ ಉಪಯೋಗ - ಇವೆರಡೂ ಬೇಕು (೧೮). ತಾವು ಕರ್ತೃರೂಪರೆಂದು ಭಾವಿಸಿಕೊಂಡು ತಮಗಿಂತ ಹೊರಗಿರುವ ಫಲವನ್ನು ಬಯಸುವವರಿಗೇ ಕರ್ಮವನ್ನು ವಿಧಿಸಿರುತ್ತದೆ (೪೫). ಆದ್ದರಿಂದ ಕರ್ಮವನ್ನು ಮಾಡುವವರು ಆಯಾ ಫಲವನ್ನು ಅನುಭವಿಸುವದಕ್ಕೆ ತಕ್ಕ ಶರೀರಗಳನ್ನು ಧರಿಸಬೇಕಾಗುವದು (೧೧೨). **ಇದಿಷ್ಟೂ ಕರ್ಮದ ಸ್ವಭಾವವು.**

ಪರವಿದ್ಯೆ ಎಂದು ಕರೆಯಿಸಿಕೊಳ್ಳುವ ಆತ್ಮಜ್ಞಾನವು ಇದಕ್ಕಿಂತ ತೀರ ವಿಲಕ್ಷಣವಾಗಿರುತ್ತದೆ. ಆ ಜ್ಞಾನವು ವಸ್ತುವಿಗೆ ಅಧೀನವಾಗಿ ಉಂಟಾಗುವದಾದ್ದರಿಂದ ಕರ್ತ್ರಾದಿಕಾರಕಗಳಿಗೆ ವಶವಾಗಿ ಉಂಟಾಗತಕ್ಕದ್ದಲ್ಲ. ಪರಮಾರ್ಥವು ಅದ್ವಿತೀಯ ವಾಗಿರುವದರಿಂದ ಅದನ್ನರಿತವನಿಗೆ ಕಾಮ, ಕಾಮಿ, ಕಾಮಯಿತವ್ಯ - ಎಂಬ ಭೇದವೇ ಇರುವದಿಲ್ಲ. ಅದೆಲ್ಲವೂ ಆತ್ಮನಲ್ಲಿಯೇ ಅಡಗಿಹೋಗಿರುವದು (೧೧೨). ಈ ಜ್ಞಾನದ ಫಲವು ಜ್ಞಾನದ ಸಮಕಾಲದಲ್ಲಿಯೇ ಆಗುತ್ತದೆ ; ಕರ್ಮಿಗಳಂತೆ ಜ್ಞಾನಿಗಳು ಫಲಪ್ರಾಪ್ತಿಗಾಗಿ ಎಲ್ಲಿಗೂ ಹೋಗಬೇಕಾದದ್ದಿರುವದಿಲ್ಲ, ಯಾವ ಶರೀರವನ್ನೂ ಧರಿಸಬೇಕಾದದ್ದಿರುವದಿಲ್ಲ (೧೧೯).

ಜ್ಞಾನದ ಫಲವಾದ ಮುಕ್ತಿಯು ದೇಶಕಾಲಪರಿಚ್ಛೇದವಿಲ್ಲದ್ದಾಗಿರುವದ ರಿಂದ ಅದು ನಿತ್ಯವೂ ಆಗಿರುತ್ತದೆ, ಕರ್ಮಫಲದಂತೆ ಸಾಧನವು ಸವೆದಬಳಿಕ ನಾಶ ವಾಗತಕ್ಕದ್ದಲ್ಲ (೧೧೯). ಬ್ರಹ್ಮವನ್ನು ಅರಿತವನು ವಿದ್ಯಾಮಾತ್ರದಿಂದ ಕೂಡಲೆ ಬ್ರಹ್ಮವಾಗಿಬಿಡುತ್ತಾನಾದ್ದರಿಂದ ಬ್ರಹ್ಮವಿದ್ಯೆಯ ಫಲವು ನಿಶ್ಚಿತವಾಗಿ ಆಗುವದೊ, ಇಲ್ಲವೊ ? - ಎಂದು ಶಂಕಿಸುವದಕ್ಕೆ ಬರುವದಿಲ್ಲ. ಜ್ಞಾನಿಗೆ ಇನ್ನು ಮುಂದೆ ಶೋಕಮೋಹಾದಿಗಳು ಎಂದಿಗೂ ಆಗುವದಿಲ್ಲ (೧೨೩).

ಹೀಗೆ ವೇದಾಂತವಾಕ್ಯದ ಅರ್ಥವನ್ನು ಅರಿತುಕೊಂಡ ಬಳಿಕ ಬ್ರಹ್ಮಜ್ಞಾನಿಯು ಮಾಡತಕ್ಕದ್ದೆಂಬುದು ಏನೂ ಉಳಿಯುವದೇ ಇಲ್ಲ (೧೮, ೯೫)ವಾದ್ದರಿಂದ ಇದ ಕ್ಕಿಂತ ತೀರವಿರುದ್ಧವಾದ ಸ್ವಭಾವದ ಕರ್ಮವನ್ನು ಇದರೊಡನೆ ಸೇರಿಸಿಕೊಂಡು ಮುಮುಕ್ಷುಗಳು ಅನುಷ್ಠಾನಮಾಡಬೇಕೆನ್ನುವ ವಾದಿಗಳು ಜ್ಞಾನದ ಸ್ವಭಾವವನ್ನಾಗಲಿ ಕರ್ಮದ ಸ್ವಭಾವವನ್ನಾಗಲಿ ಅರಿಯರೆನ್ನಬೇಕಾಗುತ್ತದೆ. ಕರ್ಮಕ್ಕೆ ಬಾಹ್ಯದೃಷ್ಟಿ ಬೇಕು, ಜ್ಞಾನಕ್ಕೆ ಪ್ರತ್ಯಗ್ದೃಷ್ಟಿಬೇಕು ; ಕರ್ಮವು ದ್ವೈತವಿಷಯ, ಜ್ಞಾನವು ಅದ್ವೈತವಿಷಯವಾದದ್ದು. ಆದ್ದರಿಂದಲೇ ಜ್ಞಾನಿಗಳು ಸರ್ವಕರ್ಮಸಂನ್ಯಾಸ ವನ್ನು ಮಾಡಿರುವರೆಂದು ಈ ಉಪನಿಷತ್ತಿನಲ್ಲಿದೆ (೪). ಗೃಹಸ್ಥರೂ ಜ್ಞಾನೋಪದೇಶ ವನ್ನು ಮಾಡಿದರೆಂದು ಹೇಳುವ ವಚನಗಳನ್ನು ನ್ಯಾಯೋಪೇತವಾದ ಈ ಶ್ರುತಿಗೆ ಅನುಗುಣವಾಗಿಯೇ ಅರ್ಥವನ್ನು ಮಾಡಬೇಕು (೫). ಆದ್ದರಿಂದ ಉಪಾಸನಾರೂಪ ವಾದ ಜ್ಞಾನದೊಡನೆ ಕರ್ಮವನ್ನು ಅನುಷ್ಠಾನಮಾಡುವವರು ಉತ್ತರಾಯಣಮಾರ್ಗ ದಿಂದ ಹೋಗಿ ಪಡೆಯುವ **ಬ್ರಹ್ಮಲೋಕಪ್ರಾಪ್ತಿಯನ್ನೇ ಸಮುಚ್ಚಯವಾದಿಗಳು ಪರಮಾರ್ಥಮುಕ್ತಿಯೆಂದು ಭ್ರಮಿಸಿರುತ್ತಾರೆಂದು ನಿಶ್ಚಯಿಸಬೇಕು (೪೨, ೪೩).**

## (೩) ಮುಕ್ತಿಯ ಸ್ವರೂಪ

**ತಾನು ಬ್ರಹ್ಮವೇ ಆಗಿರುವೆನೆಂಬ ತಿಳಿವಳಿಕೆಯಲ್ಲದೆ ಅದಕ್ಕಿಂತ ಬೇರೆಯಾಗಿ**

ಬ್ರಹ್ಮದ ಪ್ರಾಪ್ತಿಯೆಂಬುದು ಇರುವದಿಲ್ಲವಾದ್ದರಿಂದ ಅವಿದ್ಯೆಯ ನಿವೃತ್ತಿಯೇ **ಮುಕ್ತಿ** (೧೬, ೧೧೯) ಎಂದು **ಏರ್ಪಡುತ್ತದೆ**. ಅವಿದ್ಯಾಕಾಮಕರ್ಮಗಳು ಜ್ಞಾನವು ತಲೆದೋರಿದ ಕೂಡಲೆ ಹೋಗಿಬಿಡುವವೆಂದೂ (೭೦, ೮೩, ೧೧೨), ಅವಿದ್ಯೆಯು ಹೋದಬಳಿಕ ಬ್ರಹ್ಮಸ್ವರೂಪವನ್ನು ಪಡೆಯುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲವೆಂದೂ ಬ್ರಹ್ಮವನ್ನರಿತವನು ಬ್ರಹ್ಮವೇ ಆಗುತ್ತಾನೆಂದೂ (೧೨೨) ಶ್ರುತಿಯಲ್ಲಿ ಹೇಳಿದೆ. ಇದೇ **ಭಾಷ್ಯಕಾರರಿಗೆ ಸಮ್ಮತವಾದ ಸದ್ಯೋಮುಕ್ತಿಯು**. ಜ್ಞಾನವುಂಟಾದರೆ ಶರೀರವು ಬಿದ್ದುಹೋಗುವದೆಂಬ ಮಂಡನಾದಿಗಳ ಮತವಾಗಲಿ ಜೀವನ್ಮುಕ್ತನಿಗೂ ಒಂದಿಷ್ಟು ಅವಿದ್ಯೆಯಿರುವದೆಂಬ ಈಚಿನ ವೇದಾಂತಿಗಳ ಮತವಾಗಲಿ ಆಚಾರ್ಯರಿಗೆ ಒಪ್ಪಿಲ್ಲ. ಶ್ರುತಿಯಲ್ಲಿ ಬ್ರಹ್ಮಜ್ಞಾನಿಗಳು ದೇಹವನ್ನು ಬಿಡುವ ಕಾಲವನ್ನು 'ಪರಾನ್ತ ಕಾಲ' (ತೀರ ಕೊನೆಯಕಾಲ)ವೆಂದು ಕರೆದಿರುವದು (೩-೨-೬), ಮುಕ್ತರ ಪ್ರಾಣಾದಿಕಲೆಗಳು ತಮ್ಮ ತಮ್ಮ ಕಾರಣದಲ್ಲಿ ಲಯವಾಗುವವೆಂದು ಹೇಳಿರುವದು (೩-೨-೭), ಜ್ಞಾನಿಗಳು ಶರೀರಪಾತಕಾಲದಲ್ಲಿ ಸರ್ವಾತ್ಮವಾದ ಬ್ರಹ್ಮವನ್ನೇ ಸೇರಿಕೊಳ್ಳುವರೆಂದಿರುವದು (೩-೨-೫), ನದಿಗಳು ತಮ್ಮ ನಾಮರೂಪಗಳನ್ನು ಕಳಚಿಕೊಂಡು ಕಡಲಿನಲ್ಲಿ ಒಂದಾಗುವಂತೆ ಮುಕ್ತಜೀವರು ಬ್ರಹ್ಮದಲ್ಲಿ ಒಂದಾಗುವರೆಂದು ಹೇಳಿರುವದು (೩-೨-೮) - ಇವುಗಳಿಂದ **ವಿದೇಹಮುಕ್ತಿಯನ್ನು** ಮುಖ್ಯವೆಂದು ಯಾರಾದರೂ ಎಣಿಸಿಕೊಂಡಾರೆಂದು ಆಚಾರ್ಯರು ಮುಕ್ತಿಯ ವರ್ಣನೆಯಲ್ಲಿ ದೀಪವು ಆರಿಹೋಗುವ ದೃಷ್ಟಾಂತ (೧೧೮)ವೇ ಅಲ್ಲದೆ, ಘಟಾಕಾಶವು ಮಹಾಕಾಶದಲ್ಲಿ ಬೆರೆತುಕೊಳ್ಳುವದು (೧೧೭), ಸೂರ್ಯಪ್ರತಿಬಿಂಬವು ಬಿಂಬದಲ್ಲಿ ಒಂದಾಗುವದು (೧೨೦) - ಎಂಬ ದೃಷ್ಟಾಂತಗಳನ್ನೂ ಕೊಟ್ಟಿರುತ್ತಾರೆ. ಘಟಾಕಾಶವು ಯಾವಾಗಲೂ ಆಕಾಶವೇ ಆಗಿರುವಂತೆಯೂ ಪ್ರತಿಬಿಂಬವು ಬಿಂಬಕ್ಕಿಂತ ಯಾವಾಗಲೂ ಬೇರೆಯಿಲ್ಲದಿರುವಂತೆಯೂ ಜೀವರು ಯಾವಾಗಲೂ ಬ್ರಹ್ಮವೇ ಆಗಿರುವರೆಂಬುದನ್ನು ತಿಳಿಸುವ ಉದ್ದೇಶದಿಂದ ಈ ದೃಷ್ಟಾಂತಗಳನ್ನು ಆಚಾರ್ಯರು ಉದಾಹರಿಸಿರುವರೆಂಬ ರಹಸ್ಯವನ್ನು ಹಿಡಿಯಲಾರದೆ ಈಚಿನ ವೇದಾಂತಿಗಳು ಕೆಲವರು ಅವಚ್ಛಿನ್ನವಾದ, ಪ್ರತಿಬಿಂಬವಾದ - ಎಂಬ ಎರಡು ವಾದಗಳನ್ನೇ ಕಲ್ಪಿಸಿಕೊಂಡು ಜೀವನ ಸ್ವರೂಪದ ವಿಷಯಕ್ಕೆ ವಾಕ್ಕಲಹವನ್ನು ಎಬ್ಬಿಸಿರುತ್ತಾರೆ.

## (೪) ಆತ್ಮಜ್ಞಾನಕ್ಕೆ ಸಾಧನಗಳು

ವಾಕ್ಯಾರ್ಥಜ್ಞಾನದಿಂದಲೇ ಮುಕ್ತಿಯಾಗುವದೆಂಬ ಭಾಷ್ಯಕಾರರ ಪ್ರಕ್ರಿಯೆಯಲ್ಲಿ ಸಾಧನಗಳ ಅವಶ್ಯಕತೆಯೇನೆಂದು ಕೆಲವರಿಗೆ ಶಂಕೆಯುಂಟಾಗ

ಬಹುದು. ಆದರೆ ಬ್ರಹ್ಮವಿದ್ಯೆ ಎಂಬುದು ಒಂದು ಲೌಕಿಕವಿಜ್ಞಾನವಲ್ಲ. ಇಂದ್ರಿಯಗಳ ತಿಳಿವಳಿಕೆಯಾಗಲಿ, ಆ ತಿಳಿವಳಿಕೆಯನ್ನು ಆಧಾರವಾಗಿಟ್ಟುಕೊಂಡಿರುವ ಮನಸ್ಸಿನ ತಿಳಿವಳಿಕೆಯಾಗಲಿ, ಆತ್ಮನನ್ನು ಅರಿತುಕೊಳ್ಳುವದಕ್ಕೆ ಸ್ವಲ್ಪವೂ ಉಪಯೋಗವಾಗುವದಿಲ್ಲ (೭೩, ೮೫, ೧೦೫). ಆತ್ಮದರ್ಶನಕ್ಕೆ ಶಾಸ್ತ್ರೋಪದೇಶ, ಆಚಾರ್ಯೋಪದೇಶ, ಶಮ, ದಮ, ಧ್ಯಾನ, ಸರ್ವತ್ಯಾಗ, ವೈರಾಗ್ಯ - ಎಂಬ ಸಾಧನಗಳಿಂದ ಒಂದಾನೊಂದು ವಿಶೇಷರೂಪವಾದ ಸಾಕ್ಷಾದನುಭವರೂಪವಾದ ಜ್ಞಾನವನ್ನುಂಟುಮಾಡಿಕೊಳ್ಳಬೇಕಾಗುತ್ತದೆ. ಇದನ್ನೇ ವೇದಾಂತದಲ್ಲಿ **ವಿಜ್ಞಾನ**ವೆಂದು ಕರೆದಿರುವದು (೮೧, ೮೩, ೯೫, ೧೧೨, ೧೧೮). ಆತ್ಮಜ್ಞಾನವನ್ನು ತಾನೇ ಶಾಸ್ತ್ರವಿಚಾರದಿಂದ ಸಂಪಾದಿಸಿಕೊಳ್ಳುವದಕ್ಕೆ ಆಗುವದಿಲ್ಲ ; ಅದಕ್ಕೆ ಸರಿಯಾದ ಶಿಷ್ಯಗುಣವನ್ನು ಸಂಪಾದಿಸಿಕೊಂಡು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆಗಿರುವ ಸದ್ಗುರುವಿನ ಉಪದೇಶದಿಂದಲೇ ಅರಿಯಬೇಕು (೮, ೧೦, ೪೬, ೪೭, ೧೨೬). ವ್ಯಾಕೃತಾವ್ಯಾಕೃತರೂಪವಾದದ್ದನ್ನು ತಿಳಿಯುವದರಿಂದ ಏನೂ ತಿಳಿವಳಿಕೆಯುಂಟಾಗಲಾರದು (೧೪) ; ಅದೆಲ್ಲವೂ ದುಃಖರೂಪವಾದದ್ದು (೨೭, ೩೭), ಹುರುಳಿಲ್ಲದ್ದು (೪೫) ಎಂಬ **ವೈರಾಗ್ಯವು** ಅವಶ್ಯವಾಗಿರಬೇಕು. ವೇದಾಧ್ಯಯನ, ಗ್ರಂಥಧಾರಣ, ಅರ್ಥವಿಚಾರ - ಇವುಗಳೂ ಬೇಕು ; ಆದರೆ ಇವುಗಳಿಗಿಂತಲೂ ಮುಖ್ಯವಾಗಿ ಆತ್ಮಪ್ರಾಪ್ತಿಯಲ್ಲಿ ಅತ್ಯುತ್ಕಟವಾದ ಹಂಬಲಿಕೆಯಿರಬೇಕು (೭೭, ೧೧೪).

**ಸತ್ಯವಚನ, ಬ್ರಹ್ಮಚರ್ಯ, ಎಚ್ಚರತಪ್ಪದ ಆತ್ಮಚಿಂತನೆ** - ಇವುಗಳನ್ನು ಎಡೆಬಿಡದೆ ಹಿಂಬಾಲಿಸುತ್ತಾ (೯೯) ದೇಹಾತ್ಮಭಾವವನ್ನು ಬಿಟ್ಟು ತನ್ನ ಸ್ವರೂಪವನ್ನು ಬ್ರಹ್ಮರೂಪದಿಂದ ಕಾಣುವವರೆಗೂ ಆತ್ಮಚಿಂತನೆಯಲ್ಲಿ ತೊಡಗಿರಬೇಕು (೭೬, ೯೧, ೯೨). ಆತ್ಮನು ನಮ್ಮ ಹೃದಯದಲ್ಲಿ ಅಂತಃಕರಣವೃತ್ತಿಗಳಿಗೆಲ್ಲ ಸಾಕ್ಷಿಯಾಗಿಯೇ ಕಂಡುಬರಬೇಕಾಗಿರುವದರಿಂದ, ಹೊರಮುಖವಾಗಿರುವ ಬುದ್ಧಿಯನ್ನು ಒಳಕ್ಕೆ ತಿರುಗಿಸಿಕೊಂಡು **ಆತ್ಮಪ್ರತ್ಯಯವನ್ನೇ ಹಿಂಬಾಲಿಸುವದು** ಅತ್ಯಂತ ಅವಶ್ಯವಾಗಿರುತ್ತದೆ (೭೦, ೭೧, ೭೮, ೮೧, ೮೫) ಎಂಬುದು ಆಚಾರ್ಯರ ಉಪದೇಶವು.

## ಭಾಷ್ಯದ ವ್ಯಾಖ್ಯಾನಕಾರರು

ಮುಂಡಕೋಪನಿಷತ್ತಿನ ವ್ಯಾಖ್ಯಾನಕಾರರನ್ನು **ಆನಂದಗಿರಿಗಳು** ಎಂದು ಆನಂದಾಶ್ರಮದಲ್ಲಿ ಮುದ್ರಿತವಾಗಿರುವ ಗ್ರಂಥದ ಪ್ರಕಾಶಕರು ಕರೆದಿರುತ್ತಾರೆ ; ಅವರ ಹೆಸರು ''**ಶ್ರೀಮದಾನಂದಜ್ಞಾನರು**'' ಎಂದು ಟೀಕಾಪರಿಸಮಾಪ್ತಿಯ ವಾಕ್ಯದಲ್ಲಿ

ಕಂಡುಬರುತ್ತದೆ. ಈ ವ್ಯಾಖ್ಯಾನದಲ್ಲಿ **ಪ್ರಕಟಾರ್ಥ**ವೆಂಬ ಗ್ರಂಥವನ್ನು ಪರಾಮರ್ಶಿಸಿರುತ್ತದೆ (ಪು. ೩೨)[1] ; **ಭಾಸ್ಕರರ** ಸಮುಚ್ಚಯವಾದವನ್ನು ಖಂಡಿಸಿರುತ್ತದೆ (ಪು. ೩೮) ; **ಏಕಜೀವವಾದ**ವನ್ನು ತಿರಸ್ಕರಿಸಿರುತ್ತದೆ (ಪು. ೧೧) ; ಅವ್ಯಾಕೃತವೆಂದರೆ ಕರ್ಮಾಪೂರ್ವಸಮವಾಯಿಯಾದ ಭೂತಸೂಕ್ಷ್ಮವು ಎಂಬ **ಕೆಲವರು ಅದ್ವೈತಿಗಳ ವಾದ**ವನ್ನು ದೂಷಿಸಿರುತ್ತದೆ (ಪು. ೯). ಇದೆಲ್ಲವನ್ನೂ ನೋಡಿದರೆ ಈ ವ್ಯಾಖ್ಯಾನಕಾರರು ಶಂಕರಾಚಾರ್ಯರಿಗಿಂತ ಬಹು ಈಚಿನವರೆಂದು ಸ್ಪಷ್ಟವಾಗುತ್ತದೆ. ಈ ವ್ಯಾಖ್ಯಾನಕಾರರು ''ಜ್ಞಾತೋಽರ್ಥಸ್ತಜ್ಜ್ಞಪ್ತಿರ್ವಾಽವಿದ್ಯಾನಿವೃತ್ತಿಃ' ಎಂಬುದರ ವ್ಯಾಖ್ಯಾನವನ್ನು ಮಾಡುವಾಗ ಅವಿದ್ಯೆಯು ತೊಲಗುವದೆಂದರೆ ಬ್ರಹ್ಮದ ಅವಗತಿಯೇ ಎಂದು ನಾವು ವಿವರಿಸಿರುತ್ತೇವೆ - ಎಂದು ಹೇಳಿಕೊಂಡಿರುತ್ತಾರೆ (ಪು. ೭). ''ಜ್ಞಾತೋಽರ್ಥಸ್ತಜ್ಜ್ಞಪ್ತಿರ್ವಾ ತದಜ್ಞಾನಹಾನಿಃ'' ಎಂಬ ವಾಕ್ಯವು **ಇಷ್ಟಸಿದ್ಧಿಯಲ್ಲಿ** (೮-೨, ಪು. ೩೯೯ರಲ್ಲಿ) ಕಂಡುಬರುತ್ತದೆ.[2] ಆದ್ದರಿಂದ ಈ ವ್ಯಾಖ್ಯಾನಕಾರರು ಇಷ್ಟಸಿದ್ಧಿಗೂ ವ್ಯಾಖ್ಯಾನವನ್ನು ಬರೆದಿದ್ದಾರೆಯೆ ? - ಎಂಬುದು ವಿಚಾರಣೀಯವಾಗಿರುತ್ತದೆ. ಇದು ಹೇಗಾದರೂ ಇರಲಿ **ವ್ಯಾಖ್ಯಾನಕಾರರು ಆಚಾರ್ಯರಿಗಿಂತ ಬಹಳ ಈಚಿನವರೆಂಬುದು ನಿರ್ವಿವಾದವಾಗಿರುತ್ತದೆ**. ಆದ್ದರಿಂದ ನಾವು ಭಾಷ್ಯಕ್ಕೆ ಅನುವಾದವನ್ನು ಬರೆಯುವಾಗ ಪೂರ್ವಾಪರಸಂದರ್ಭಕ್ಕೂ ಆಚಾರ್ಯರ ಭಾಷ್ಯಾಂತರಗಳಿಗೂ ಹೊಂದುವ ಅರ್ಥವನ್ನೇ ಒಪ್ಪಿ, ಭಾಷ್ಯಕ್ಕೆ ಅನನುಗುಣವೆಂದು ತೋರಿದ ಕಡೆಗಳಲ್ಲಿ ವ್ಯಾಖ್ಯಾನವನ್ನು ಕೈಬಿಟ್ಟಿರುತ್ತೇವೆ. ಉಪನಿಷತ್ತಿನಲ್ಲಿ ಜ್ಞಾನಪ್ರಕರಣದಲ್ಲಿ ಹೇಳಿರುವ ''ಪ್ರಣವಚಿಂತನೆ'' (೨-೨-೪)ಯನ್ನೂ ''ಮನೋಮಯಃ ಪ್ರಾಣಶರೀರನೇತಾ'' (೨-೨-೮) ಎಂಬ ವಾಕ್ಯವನ್ನೂ ಉಪಾಸನಾವಿಧಿಪ್ರಧಾನವಾಗಿ ಮಾಡಿ ಇವು ಕ್ರಮಮುಕ್ತಿಯ ವಿಷಯವೆಂದು ವ್ಯಾಖ್ಯಾನಕಾರರು ಹೇಳಿರುವದನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳದೆ ಇರುವದಕ್ಕೆ ಇದೇ ಕಾರಣವು.

ಈ ವ್ಯಾಖ್ಯಾನಕಾರರು ಆಚಾರ್ಯರಿಂದ ಈಚೆಗೆ ಪ್ರಚಾರಕ್ಕೆ ಬಂದಿರುವ **ಅನಿರ್ವಚನೀಯಾವಿದ್ಯಾವಾದ**ವನ್ನು ಅಲ್ಲಲ್ಲಿ ಪರಾಮರ್ಶಿಸಿರುತ್ತಾರೆ. ಮುಖ್ಯವಾಗಿ ''ಭಿದ್ಯತೇ ಹೃದಯಗ್ರನ್ಥಿಃ'' ಎಂಬ (೨-೨-೯) ಮಂತ್ರಕ್ಕೆ ಹೃದಯಗ್ರಂಥಿ ಎಂದರೆ

1. ಇಲ್ಲಿರುವ ಪುಟಸಂಖ್ಯೆಗಳು ಆನಂದಾಶ್ರಮಮುದ್ರಿತವಾದ ಮುಂಡಕೋಪನಿಷತ್ತಿಗೆ ಸಂಬಂಧಪಟ್ಟವುಗಳಾಗಿವೆ.

2. ''ವೇದಾಂತವಿಚಾರದ ಇತಿಹಾಸ''ವೆಂಬ ಹೆಸರಿನಿಂದ ಕಾರ್ಯಾಲಯದಲ್ಲಿ ಪ್ರಕಟವಾಗಿರುವ ಪುಸ್ತಕದ ೧೪೭ನೆಯ ಪುಟವನ್ನು ನೋಡಿರಿ.

ಅವಿದ್ಯೆಯ ವಾಸನೆಗಳ ಹಿಂಡಾದ ಕಾಮವು ಎಂದು ಬರೆದಿರುವ ಭಾಷ್ಯಕ್ಕೆ ಇವರು ಬರೆದಿರುವ ಆಕ್ಷೇಪಸಮಾಧಾನಗಳನ್ನು ವಾಚಕರು ಲಕ್ಷ್ಯದಲ್ಲಿಡುವದು ಒಳ್ಳೆಯದು. ಅವರು ಹೇಳಿರುವದೇನೆಂದರೆ :

''ಅವಿದ್ಯೆಯ ವಾಸನೆಗಳ ಹಿಂಡು ನಾಶವಾಗುತ್ತದೆ, ಎಂಬುದರ ಅರ್ಥವೇನು ? ಬುದ್ಧಿಯು ಇದ್ದುಕೊಂಡಿರುವಾಗಲೇ ಅವಿದ್ಯಾದಿಗಳು ನಾಶವಾಗುವದು ಜ್ಞಾನದ ಫಲವೆ, ಅಥವಾ ಅದು ಹೋದ ಬಳಿಕ ಅವು ನಾಶವಾಗುವದೆ ? ಮೊದಲನೆಯದೆಂದು ಹೇಳುವದು ಸರಿಯಲ್ಲ ; ಏಕೆಂದರೆ ಉಪಾದಾನಕಾರಣವಾದ ಬುದ್ಧಿಯು ಇರುವಾಗ ಕಾರ್ಯವಾದ ಅವಿದ್ಯಾದಿಗಳು ಅತ್ಯಂತವಾಗಿ ನಾಶವಾಗಲಾರವು. ಎರಡನೆಯ ಕಲ್ಪವೂ ಸರಿಯಲ್ಲ ; ಏಕೆಂದರೆ ಜ್ಞಾನಕ್ಕೆ ಅಜ್ಞಾನದೊಂದಿಗೇ ನೇರಾಗಿ ವಿರೋಧವಿದೆಯೇ ಹೊರತು (ಬುದ್ಧ್ಯಾದಿಗಳಿಗೂ ಅದಕ್ಕೂ ವಿರೋಧವಿಲ್ಲ). ಇದಲ್ಲದೆ ಬುದ್ಧಿಯಾದರೂ ಅನಾದಿಯೊ, ಸಾದಿಯೊ ? ಮೊದಲನೆಯ ಪಕ್ಷವು ಸರಿಯಲ್ಲ ; ಏಕೆಂದರೆ ''ಈ ಆತ್ಮನಿಂದ ಪ್ರಾಣವೂ ಮನಸ್ಸೂ ಸರ್ವೇಂದ್ರಿಯಗಳೂ ಹುಟ್ಟುತ್ತವೆ'' ಎಂಬ ಶ್ರುತಿಗೆ ಇದು ವಿರೋಧವಾಗುತ್ತದೆ. ಎರಡನೆಯ ಪಕ್ಷವೂ ಸರಿಯಲ್ಲ ; ಏಕೆಂದರೆ ಪ್ರಲಯದಲ್ಲಿ ಬ್ರಹ್ಮಜ್ಞಾನವಿಲ್ಲದೆಯೇ ಬುದ್ಧಿಯು ನಾಶವಾಗಬಹುದಾದ್ದರಿಂದ ಜ್ಞಾನವೇ ಅನರ್ಥಕ ವೆಂದಾಗುತ್ತದೆ. ಇದೂ ಅಲ್ಲದೆ ಬುದ್ಧಿಯು ಸಾದಿ ಎನ್ನುವಾಗ ಬುದ್ಧಿಗೆ ಉಪಾದಾನವು ನೇರಾಗಿ ಬ್ರಹ್ಮವೇ ಆದರೆ ಬ್ರಹ್ಮವು ನಾಶವಾಗದೆ ಅದು ಅತ್ಯಂತವಾಗಿ ನಾಶವಾಗದು. ಮಾಯೆಯೇ ಕಾರಣವಾದರೆ ದ್ರಷ್ಟೃವಿನ ಜ್ಞಾನದಿಂದ ಆ ಮಾಯೆಯು ನಾಶವಾಗಲಾರದು ; ಏಕೆಂದರೆ ಲೋಕದಲ್ಲಿ ಮಾಯಾವಿಯ ಮಾಯೆಯು ನೋಟಕರ ಜ್ಞಾನದಿಂದ ಅಳಿದದ್ದು ಎಲ್ಲಿಯೂ ಕಂಡುಬಂದಿರುವದಿಲ್ಲ. ಇನ್ನೊಂದು ಮಾತು : ಬುದ್ಧಿಯು ನಾಶವಾಗುವದೆಂಬುದು ಆ ಬುದ್ಧಿಗೆ ಬೇಕಾದ ಫಲವಲ್ಲ ; ಏಕೆಂದರೆ ತನ್ನ ನಾಶವು ತನಗೇ ಫಲವಾಗಲಾರದು. ಅದು ಆತ್ಮನಿಗೂ ಫಲವಾಗಲಾರದು ; ಏಕೆಂದರೆ ಆತ್ಮನಿಗೆ ಬುದ್ಧಿಯ ಸಂಬಂಧವಿರುವದಿಲ್ಲ. ಎಲ್ಲಕ್ಕೂ ಮೇಲಾಗಿ ಆತ್ಮನು ಅವಿದ್ಯಾದಿಗಳಿಗೆ ಆಶ್ರಯನಲ್ಲವೆಂದು ಹೇಳಿರುವದು ಶ್ರುತಿವಿರುದ್ಧವಾಗಿರುತ್ತದೆ. ಏಕೆಂದರೆ ''ಅವಿದ್ಯೆಯ ನಡುವೆ ಇರುವವರಾಗಿ'' (ಮುಂ. ೧-೨-೮) ಎಂದು ಶ್ರುತಿಯ (ಉಪಕ್ರಮ)ದಲ್ಲಿದೆ. ಉಪಸಂಹಾರದಲ್ಲಿಯೂ ''ಅಸ್ವಾತಂತ್ರ್ಯದಿಂದ ಮೋಹಗೊಂಡು ಶೋಕಿಸುತ್ತಿರುವನು'' (ಮುಂ. ೩-೧-೨) ಎಂದಿದೆ. ಬುದ್ಧಿಯಲ್ಲಿರುವ ಅವಿದ್ಯೆಯನ್ನೇ ಆತ್ಮನಲ್ಲಿ ಅಧ್ಯಾಸಮಾಡಿದೆ ಎನ್ನುವದಾದರೆ 'ಅಧ್ಯಾಸಮಾಡಿದೆ' ಎಂಬ ಮಾತಿಗೇನರ್ಥ ? ಆತ್ಮನ ಮೇಲೆ ಹಾಕಿರುತ್ತದೆ ಎಂದರ್ಥವೊ, ಭ್ರಾಂತಿಯಿಂದ ತೋರುತ್ತದೆಯೆಂದೊ ? ಮೇಲೆ ಹಾಕಿರುತ್ತದೆ ಎಂಬರ್ಥವು ಸರಿಯಲ್ಲ ; ಏಕೆಂದರೆ ಒಂದರ ಧರ್ಮವನ್ನು ಮತ್ತೊಂದರ ಮೇಲೆ ಹಾಕುವದು ಆಗುವದಿಲ್ಲ. ಭ್ರಾಂತಿಯಿಂದ ತೋರುತ್ತದೆ ಎಂದರೆ ಯಾರಿಗೆ ತೋರುತ್ತದೆ ? ಆತ್ಮನಿಗಲ್ಲ ; ಏಕೆಂದರೆ ಅವನಿಗೆ ಅವಿದ್ಯೆಯಿಲ್ಲವೆಂದು ಹೇಳಿರುತ್ತೀರಿ. ಬುದ್ಧಿಗೂ ತೋರುವ ಹಾಗಿಲ್ಲ ; ಏಕೆಂದರೆ ಬುದ್ಧಿಗೆ ಆತ್ಮನು ವಿಷಯನಲ್ಲವಾದ್ದರಿಂದ ಆತ್ಮನಲ್ಲಿರುವ ಅವಿದ್ಯೆಯನ್ನು ಅದು ಕಾಣಲಾರದು. ಆ ಭ್ರಾಂತಿಯೆಂಬುದು ತನಗೆ ಆಶ್ರಯವಾಗಿರುವಾತನ ತತ್ತ್ವಾನುಭವದಿಂದಲೇ ಹೋಗುವದೆಂದು ಪ್ರಸಿದ್ಧವಾಗಿರುವದರಿಂದ, ಈ ಪಕ್ಷದಲ್ಲಿ ಬುದ್ಧಿಯೇ ಅನುಭವಕ್ಕೆ

ಆಶ್ರಯವೆಂದು ಹೇಳಬೇಕಾಗುವದು. ಆದ್ದರಿಂದ ಈ ಭಾಷ್ಯಕ್ಕೆ ಸರಿಯಾದ ಅರ್ಥವೇ ಕಾಣುವದಿಲ್ಲವಲ್ಲ !

**"ಮೇಲಿನ ಆಕ್ಷೇಪಕ್ಕೆ ಉತ್ತರವನ್ನು ಹೇಳುತ್ತೇವೆ : ಚೈತನ್ಯಕ್ಕೆ ಅಧೀನವಾಗಿ ಅನಾದಿಯಾದ ಅನಿರ್ವಾಚ್ಯವಾಗಿರುವ ಅವಿದ್ಯೆಯು ಚೈತನ್ಯವನ್ನು ಪರಿಚ್ಛೇದಗೊಳಿಸಿ ತನ್ನಿಂದ ಪರಿಚ್ಛಿನ್ನವಾಗಿರುವ ಚೈತನ್ಯದ ಬುದ್ಧಿಯೇ ಮುಂತಾದವುಗಳ ರೂಪವಾಗಿ ವಿವರ್ತವಾಗುತ್ತದೆ. ಅದಕ್ಕೆ ಬ್ರಹ್ಮಾತ್ಮಸಾಕ್ಷಾತ್ಕಾರದಿಂದ ನಿವೃತ್ತಿಯಾಗುವದೆಂದು ನಾವು ಅಂಗೀಕರಿಸಿರುತ್ತೇವೆ. ಆದ್ದರಿಂದ ಅದು ನಿವೃತ್ತಿಯಾದಾಗ ಅದರಿಂದುಂಟಾಗಿದ್ದ ಹೃದಯಗ್ರಂಥಿಯೂ ನಾಶವಾಗುವದೆಂದು ಶ್ರುತಿಯಲ್ಲಿ ಹೇಳಿರುತ್ತದೆ.**

"**ಭಾಷ್ಯಕಾರರು** 'ಅವಿದ್ಯೆಯು ಬುದ್ಧಿಯನ್ನಾಶ್ರಯಿಸಿರುತ್ತದೆ' ಎಂದು ಹೇಳಿರುವದು ಅವಿದ್ಯೆಯೇ ಮುಂತಾದದ್ದು ಅಹಂಕಾರಕ್ಕೆ ವಿಶೇಷಣವಾಗಿ ವ್ಯವಹಾರದಲ್ಲಿ ತೋರುತ್ತದೆ ಎಂಬ ಅಭಿಪ್ರಾಯದಿಂದ ; ಅದು ಆತ್ಮನನ್ನು ಆಶ್ರಯಿಸಿಲ್ಲವೆಂದು ಹೇಳಿರುವದು ಆತ್ಮನು ನಿರ್ವಿಕಾರನೆಂಬ ಅಭಿಪ್ರಾಯದಿಂದ. ಜೀವನ್ಮುಕ್ತನಲ್ಲಿ ಜ್ಞಾನಬಾಧಿತವಾದ ಅವಿದ್ಯೆಯೂ ಅನುವೃತ್ತವಾಗಿ ತೋರಿಕೊಂಡಿರುತ್ತದೆ ಎಂಬುದನ್ನು ಪ್ರಕಟಾರ್ಥವೆಂಬ ಗ್ರಂಥದಲ್ಲಿ ತೋರಿಸಿ ಕೊಟ್ಟಿರುತ್ತೇವೆ ; ಆದ್ದರಿಂದ ಜೀವನ್ಮುಕ್ತಿಯೂ ಉಂಟೆಂಬ ವಾದವು ವಿರುದ್ಧವಲ್ಲ."

**ಮೇಲೆ ಕೊಟ್ಟಿರುವ ವ್ಯಾಖ್ಯಾನವು ಭಾಷ್ಯಕಾರರ ಪ್ರಕ್ರಿಯೆಗೆ ಅಡಿಗಲ್ಲಾಗಿರುವ ಅಧ್ಯಾಸವಾದವು ಪೂರ್ವಪಕ್ಷದ ಹೊಡೆತಕ್ಕೆ ನಿಲ್ಲಲಾರದೆಂಬ ಅಭಿಪ್ರಾಯವನ್ನೊಳಗೊಂಡಿದೆ. ಅಧ್ಯಾಸಕ್ಕೂ ಅಂತಃಕರಣಕ್ಕೂ ಉಪಾದಾನವಾದ ಅನಿರ್ವಾಚ್ಯಾವಿದ್ಯೆಯೊಂದು ಆತ್ಮನನ್ನು ಆಶ್ರಯಿಸಿದೆ ಎಂಬ ವಾದವು ಪ್ರಸ್ಥಾನತ್ರಯಭಾಷ್ಯದಲ್ಲೆಲ್ಲ ಹಗಲು ಬತ್ತಿಯನ್ನು ಹಚ್ಚಿಕೊಂಡು ಹುಡುಕಿದರೂ ಕಾಣಬರದೆ ಇರುವ - ನವೀನ** ಪ್ರಕ್ರಿಯೆಯನ್ನು ಮುಂದಕ್ಕೊಡ್ಡಿರುತ್ತದೆ. ಜೀವನ್ಮುಕ್ತಿಯನ್ನು ಉಳಿಸುವದಕ್ಕಾಗಿ ಆತ್ಮನನ್ನು ಆಶ್ರಯಿಸಿ ಆತ್ಮನನ್ನೇ ವಿಷಯಗೊಳಿಸಿಕೊಂಡಿರುವ ಅವಿದ್ಯೆಯ ಲೇಶವು ಜ್ಞಾನಿಗಳಲ್ಲಿಯೂ ಇದೆ - ಎಂದು ಭಾಷ್ಯವಿರುದ್ಧ ಯುಕ್ತಿವಿರುದ್ಧವಾದ ಅಭಿಪ್ರಾಯವನ್ನೇ ಭಾಷ್ಯಕಾರರ ಅಭಿಪ್ರಾಯವೆಂದು ಸಾರಿರುತ್ತದೆ. ಈ ಹೊಸ ಪ್ರಕ್ರಿಯೆಯು **ಇಷ್ಟಸಿದ್ಧಿಯೇ** ಮುಂತಾದ ಗ್ರಂಥಗಳಲ್ಲಿ ವಿಸ್ತಾರವಾಗಿ ಕಂಡುಬರುತ್ತಿದ್ದರೂ ಇದರ ಸೆಲೆಯೇ ಭಾಷ್ಯದಲ್ಲಿ ಕಂಡುಬರುವದಿಲ್ಲವೆಂದು ನಾವು "**ಶಂಕರಹೃದಯ**"ವೆಂಬ ಸಂಸ್ಕೃತಗ್ರಂಥದಲ್ಲಿಯೂ "**ಶಂಕರಸಿದ್ಧಾಂತ**"ವೆಂಬ ಕನ್ನಡಗ್ರಂಥದಲ್ಲಿಯೂ ವಿಶದಪಡಿಸಿರುತ್ತೇವೆ. ಪ್ರಸ್ಥಾನತ್ರಯಭಾಷ್ಯಗಳನ್ನು ಮನಮುಟ್ಟಿ ನೋಡುವವರಿಗೆ ಈ ವಿಷಯದಲ್ಲಿ ಯಾವ ಸಂಶಯವೂ ಉಳಿಯಲಾರದೆಂದು ನಾವು ನೆರೆನಂಬಿರುತ್ತೇವೆ. ಈ ವಾದಗ್ರಸ್ತವಿಚಾರವು ಹೇಗಾದರೂ ಇರಲಿ. ಇತ್ತೀಚೆಗೆ ವೇದಾಂತಿಗಳಲ್ಲಿ ಹುಟ್ಟಿಕೊಂಡಿರುವ ಹೊಸ ಪ್ರಕ್ರಿಯೆಗಳನ್ನವಲಂಬಿಸಿರುವ ವ್ಯಾಖ್ಯಾನಗಳ ಬಲದಿಂದಲೇ ಭಾಷ್ಯಾರ್ಥವನ್ನು

ನಿರ್ಣಯಿಸುವದಕ್ಕೆ ಹೋಗುವದು ಸರಿಯಲ್ಲವೆಂದು ವಾಚಕರಿಗೆ ಈ ಪೀಠಿಕೆಯಿಂದ ಮನದಟ್ಟಾಗುವದೆಂಬ ನಂಬಿಕೆಯಿಂದ ಇಷ್ಟು ಬರೆಯಬೇಕಾಯಿತಲ್ಲದೆ ವ್ಯಾಖ್ಯಾನಗಳಿಂದ ಯಾವ ಪ್ರಯೋಜನವೂ ಇಲ್ಲವೆಂಬುದು ನಮ್ಮ ಅಭಿಪ್ರಾಯವಲ್ಲವೆಂಬುದನ್ನು ವಾಚಕರು ಮರೆಯದಿರಬೇಕು.[1]

## ಉಪಸಂಹಾರ

ಮುಂಡಕೋಪನಿಷತ್ತಿನ ನಿಜವಾದ ಆಶಯವನ್ನು ಗೊತ್ತುಪಡಿಸುವದಕ್ಕೆ ಈಗಿನ ಅನುವಾದವೂ ಈ ಪೀಠಿಕೆಯೂ ಎಷ್ಟರಮಟ್ಟಿಗೆ ಉಪಯುಕ್ತವಾಗಿರುವವೆಂಬುದನ್ನು ನಿರ್ಧರಿಸುವ ಕಾರ್ಯವನ್ನು ಓದುಗರಿಗೆ ಬಿಟ್ಟು ಈ ನಮ್ಮ ಅಲ್ಪ ಸೇವೆಯನ್ನು ಸ್ವೀಕರಿಸಿ ಅನುಗ್ರಹಿಸಿರುವ ಭಗವತ್ಪಾದರ ಸ್ಮರಣೆಯನ್ನು ಮಾಡಿ ಪೀಠಿಕೆಯನ್ನು ಇಲ್ಲಿಗೆ ನಿಲ್ಲಿಸುವೆವು.

ಗ್ರಂಥಕರ್ತ.

---

1. ಈಚೆಗೆ ಕಾರ್ಯಾಲಯದಿಂದ ಪ್ರಕಾಶಿತವಾಗಿರುವ 'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ' ಎಂಬ ಸಂಸ್ಕೃತಗ್ರಂಥವನ್ನೂ ಅದರ ಇಂಗ್ಲೀಷು ಪೀಠಿಕೆಯನ್ನೂ ನೋಡಿದರೆ ಇದು ಇನ್ನಷ್ಟು ಸ್ಫುಟವಾಗುವದು.

# ಸಂಕೇತಗಳ ವಿವರ

ಉಪನಿಷತ್ತುಗಳು, ಗೀತೆ - ಇವುಗಳನ್ನು ಆಯಾ ಹೆಸರಿನ ಮೊದಲನೆಯ ಅಕ್ಷರದಿಂದ ಸೂಚಿಸಿರುತ್ತದೆ.

| | |
|---|---|
| ಅ.ವೇ. | ಅಥರ್ವವೇದ. |
| ಆ\|\| | ಆನಂದಾಶ್ರಮಮುದ್ರಿತ ಪುಸ್ತಕದಲ್ಲಿರುವ ಪಾಠ. |
| ಆ\|\| ಧ\|\| ಆ.ಧ.ಸೂ. | ಆಪಸ್ತಂಬಧರ್ಮಸೂತ್ರ. |
| ಆ\|\| ವ್ಯಾ\|\| | ಆನಂದಜ್ಞಾನರ ವ್ಯಾಖ್ಯಾನ |
| ಕಾ\|\| | ಕಾಶಿಯಲ್ಲಿ ಹಿತಚಿಂತಕಮುದ್ರಣಾಲಯದಲ್ಲಿ ಅಚ್ಚಾಗಿರುವ ಪುಸ್ತಕದ ಪಾಠ. |
| ಗೌ. ಕಾ. | ಗೌಡಪಾದರವರ ಕಾರಿಕೆ. |
| ಗೌ. ಧ. | ಗೌತಮಧರ್ಮಸೂತ್ರ. |
| ತೈ. ಸಂ. | ತೈತ್ತಿರೀಯಸಂಹಿತೆ. |
| ಮೋ. ಧ. | ಮೋಕ್ಷಧರ್ಮ. (ಮಹಾಭಾರತ) |
| ವಾ\|\| | ಶ್ರೀರಂಗದ ವಾಣೀವಿಲಾಸಮುದ್ರಣಾಲಯದಲ್ಲಿ ಅಚ್ಚಾಗಿರುವ ಪುಸ್ತಕದ ಪಾಠ. |
| ವಿ. ಪು. | ವಿಷ್ಣುಪುರಾಣ. |
| ಶ. ಶಾ. | ಶಬ್ದಾನುಶಾಸನ, ಭಟ್ಟಾಕಲಂಕನು ಸಂಸ್ಕೃತದಲ್ಲಿ ಬರೆದಿರುವ ಕರ್ಣಾಟಕವ್ಯಾಕರಣ. |

# ವಿಷಯಾನುಕ್ರಮಣಿಕೆ

## ಭಾಷ್ಯಕಾರರ ಅವತರಣಿಕೆ


| ಕ್ರಮಸಂಖ್ಯೆ | ವಿಷಯ | (ಭಾ.ಭಾ.) | ಪುಟಸಂಖ್ಯೆ |
|---|---|---|---|
| ೧. | ಬ್ರಹ್ಮವಿದ್ಯೆಯ ಸಂಬಂಧಪ್ರಯೋಜನಗಳು | (೧-೩) | ೧ |
| ೨. | ಬರಿಯ ವಿದ್ಯೆಯೇ ಮುಕ್ತಿಗೆ ಸಾಧನ | (೪-೫) | ೩ |
| ೩. | ಉಪಸಂಹಾರ | (೬). | ೫ |


## ಒಂದನೆಯ ಮುಂಡಕ - ಒಂದನೆಯ ಖಂಡ


| | | | |
|---|---|---|---|
| ೪. | ವಿದ್ಯಾಸಂಪ್ರದಾಯಕರ್ತೃಗಳ ಪರಂಪರೆ | (೭-೯) | ೭ |
| ೫. | ಶೌನಕನ ಪ್ರಶ್ನೆ | (೧೦-೧೨) | ೧೧ |
| ೬. | ಅಂಗಿರಸ್ಸಿನ ಉತ್ತರ | (೧೩-೧೪) | ೧೪ |
| ೭. | ಅಪರವಿದ್ಯೆ | (೧೫) | ೧೬ |
| ೮. | ಪರವಿದ್ಯೆ | (೧೬-೧೭) | ೧೬ |
| ೯. | ಪರವಿದ್ಯೆಯ ವಿಶೇಷ | (೧೮-೧೯) | ೧೮ |
| ೧೦. | ಅಕ್ಷರದಿಂದಾಗುವ ಸೃಷ್ಟಿ | (೨೦-೨೧) | ೨೨ |
| ೧೧. | ಸೃಷ್ಟಿಕ್ರಮ | (೨೨-೨೩) | ೨೪ |
| ೧೨. | ಪರವಿದ್ಯೆಯ ಉಪಸಂಹಾರ | (೨೪-೨೫) | ೨೭. |


## ಒಂದನೆಯ ಮುಂಡಕ - ಎರಡನೆಯ ಖಂಡ


| | | | |
|---|---|---|---|
| ೧೩. | ಮುಂದಿನ ಗ್ರಂಥದ ಸಂಬಂಧ | (೨೬) | ೨೯ |
| ೧೪. | ಅಪರವಿದ್ಯೆಯ ವಿಷಯವನ್ನು ಮೊದಲು-ಹೇಳಿರುವದೇಕೆ ? | (೨೭) | ೨೯ |
| ೧೫. | ಕರ್ಮಮಾರ್ಗ | (೨೮-೩೦) | ೩೧ |
| ೧೬. | ಕರ್ಮಮಾರ್ಗದಲ್ಲಿ ಅಡಚಣೆಗಳು | (೩೧-೩೨) | ೩೪ |
| ೧೭. | ಕರ್ಮಫಲ | (೩೩-೩೬) | ೩೭ |
| ೧೮. | ಕರ್ಮದ ನಿಂದೆ | (೩೭-೪೧) | ೪೦ |
| ೧೯. | ಕರ್ಮೋಪಾಸನೆಗಳ ಫಲ | (೪೨-೪೩) | ೪೫ |
| ೨೦. | ಸಮುಚ್ಚಯಾನುಷ್ಠಾನದ ಫಲವು-ಪರಮಾರ್ಥಮೋಕ್ಷವಲ್ಲ | (೪೩) | ೪೬ |
| ೨೧. | ವಿರಕ್ತನಾದವನು ಪರವಿದ್ಯೆಗಾಗಿ ಗುರುವಿನ-ಬಳಿಗೇ ಹೋಗಬೇಕು | (೪೪-೪೭) | ೪೮ |
| ೨೨. | ಗುರುವು ಶಿಷ್ಯನಿಗೆ ತತ್ತ್ವವನ್ನು ಉಪದೇಶಿಸಬೇಕು | (೪೮). | ೫೩ |

## ಎರಡನೆಯ ಮುಂಡಕ - ಒಂದನೆಯ ಖಂಡ


| | | | |
|---|---|---|---|
| ೨೩. | ಮುಂದಿನ ಗ್ರಂಥದ ಸಂಬಂಧ | (೪೯) | ೫೫ |
| ೨೪. | ಅಕ್ಷರದಿಂದ ಜೀವರ ಉತ್ಪತ್ತಿ | (೫೦-೫೧) | ೫೫ |
| ೨೫. | ಅಕ್ಷರದ ಸ್ವರೂಪ | (೫೨-೫೫) | ೫೮ |
| ೨೬. | ಅಕ್ಷರದಿಂದ ಪ್ರಾಣಾದಿಗಳ ಉತ್ಪತ್ತಿ | (೫೬-೫೮) | ೬೨ |
| ೨೭. | ಪರಮಾತ್ಮನನ್ನು ಸವಿಶೇಷರೂಪದಿಂದ-ವರ್ಣಿಸುವದೇಕೆ ? | (೫೯) | ೬೫ |
| ೨೮. | ಅಕ್ಷರದಿಂದ ವಿರಾಟ್ಪುರುಷನ ಉತ್ಪತ್ತಿ | (೬೦-೬೧) | ೬೬ |
| ೨೯. | ಅಕ್ಷರದಿಂದ ಪ್ರಜೆಗಳ ಉತ್ಪತ್ತಿ | (೬೨-೬೩) | ೬೮ |
| ೩೦. | ಅಕ್ಷರದಿಂದ ಕರ್ಮಸಾಧನಗಳ ಮತ್ತು-ಫಲಗಳ ಉತ್ಪತ್ತಿ | (೬೪-೬೬) | ೭೦ |
| ೩೧. | ಅಕ್ಷರದಿಂದ ಅಧ್ಯಾತ್ಮಪ್ರಾಣಗಳ ಸೃಷ್ಟಿ | (೬೭) | ೭೩ |
| ೩೨. | ಸಮುದ್ರಾದಿಬಾಹ್ಯವಸ್ತುಗಳೂ-ಅಕ್ಷರದಿಂದಲೇ ಆಗಿವೆ | (೬೮) | ೭೫ |
| ೩೩. | ಉಪಸಂಹಾರ : ಎಲ್ಲವೂ ಪುರುಷನೇ | (೬೯-೭೦) | ೭೭ |


## ಎರಡನೆಯ ಮುಂಡಕ - ಎರಡನೆಯ ಖಂಡ


| | | | |
|---|---|---|---|
| ೩೪. | ಅಕ್ಷರವನ್ನು ಅರಿತುಕೊಳ್ಳುವ ಬಗೆ | (೭೧-೭೪) | ೮೦ |
| ೩೫. | ಓಂಕಾರದ ಮೂಲಕ ಧ್ಯಾನ | (೭೫-೭೬) | ೮೫ |
| ೩೬. | ಏನೆಂದು ಧ್ಯಾನಿಸಬೇಕು ? | (೭೭) | ೮೮ |
| ೩೭. | ಎಲ್ಲಿ ಧ್ಯಾನಿಸಬೇಕು ? | (೭೮-೮೧) | ೯೦ |
| ೩೮. | ಪರಮಾತ್ಮಜ್ಞಾನದ ಫಲ | (೮೨-೮೪) | ೯೬ |
| ೩೯. | ಉಪಸಂಹಾರ | (೮೫-೮೯) | ೯೮ |


## ಮೂರನೆಯ ಮುಂಡಕ - ಒಂದನೆಯ ಖಂಡ


| | | | |
|---|---|---|---|
| ೪೦. | ಮುಂದಿನ ಗ್ರಂಥದ ಸಂಬಂಧ | (೯೦) | ೧೦೫ |
| ೪೧. | ಜೀವನಿಗೂ ಪರಮಾತ್ಮನಿಗೂ ಇರುವ-ಸ್ವಭಾವವೈಲಕ್ಷಣ್ಯ | (೯೧-೯೨) | ೧೦೬ |
| ೪೨. | ಪರಮಾತ್ಮಜ್ಞಾನದ ಫಲ | (೯೩-೯೭) | ೧೧೧ |
| ೪೩. | ಆತ್ಮದರ್ಶನಕ್ಕೆ ಸಾಧನಗಳು | (೯೮-೧೦೩) | ೧೧೮ |
| ೪೪. | ಆತ್ಮನನ್ನು ಕಾಣುವದಕ್ಕೆ ಅಸಾಧಾರಣಸಾಧನ | (೧೦೪-೧೦೬) | ೧೨೫ |
| ೪೫. | ಆತ್ಮಜ್ಞಾನದ ಪ್ರಶಂಸೆ | (೧೦೭-೧೦೮) | ೧೨೯ |

## ಮೂರನೆಯ ಮುಂಡಕ - ಎರಡನೆಯ ಖಂಡ


| | | | |
|---|---|---|---|
| ೪೬. | ಆತ್ಮಜ್ಞಾನದ ಪ್ರಶಂಸೆ | (೧೦೯-೧೧೦) | ೧೩೧ |
| ೪೭. | ಕಾಮತ್ಯಾಗವೇ ಮುಂತಾದ ಸಾಧನಗಳು | (೧೧೧-೧೧೬) | ೧೩೨ |
| ೪೮. | ಜ್ಞಾನಿಯು ಮುಕ್ತನಾಗುವ ಬಗೆ | (೧೧೭-೧೨೩) | ೧೩೮ |
| ೪೯. | ಉಪಸಂಹಾರ | (೧೨೪-೧೨೬) | ೧೪೦ |

ಉಪನಿಷತ್ತಿನ ಸಾರ - ಪುಟ ೧೪೪-೧೪೭

ಶಬ್ದಾನುಕ್ರಮಣಿಕೆ - ಪುಟ ೧೪೮-೧೬೭

ಮಂತ್ರಗಳ ಅನುಕ್ರಮಣಿಕೆ - ಪುಟ ೧೬೮-೧೬೯


* * *

## ಶಾಂತಿಪಾಠ

ಓಂ ॥ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ।
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಙ್ಗೈಸ್ತುಷ್ಟುವಾಗ್ಂಸಸ್ತನೂಭಿಃ ।
ವ್ಯಶೇಮ ದೇವಹಿತಂ ಯದಾಯುಃ ॥

ಓಂ ಶಾನ್ತಿಃ ಶಾನ್ತಿಃ ಶಾನ್ತಿಃ

* * *

|| ಓಮ್ ||

# ಮುಂಡಕೋಪನಿಷತ್ತು

## ಭಾಷ್ಯಕಾರರ ಅವತರಣಿಕೆ

### ಬ್ರಹ್ಮವಿದ್ಯೆಯ ಸಂಬಂಧಪ್ರಯೋಜನಗಳು

(ಭಾಷ್ಯ)

೧. ಓಂ[1] 'ಬ್ರಹ್ಮಾ ದೇವಾನಾಮ್' ಇತ್ಯಾದ್ಯಾ ಅಥರ್ವಣೋಪನಿಷತ್ । ಅಸ್ಯಾಶ್ಚ ವಿದ್ಯಾಸಂಪ್ರದಾಯಕರ್ತೃಪಾರಮ್ಪರ್ಯಲಕ್ಷಣಸಂಬನ್ಧಮ್[2] ಆದಾವೇವ ಆಹ ಸ್ವಯಮೇವ ಸ್ತುತ್ಯರ್ಥಮ್ । ಏವಂ ಹಿ ಮಹದ್ಭಿಃ ಪರಮ ಪುರುಷಾರ್ಥಸಾಧನತ್ವೇನ ಗುರುಣಾ ಆಯಾಸೇನ ಲಬ್ಧಾ ವಿದ್ಯಾ ಇತಿ । ಶ್ರೋತೃ ಬುದ್ಧಿಪ್ರರೋಚನಾಯ ವಿದ್ಯಾಂ ಮಹೀಕರೋತಿ । ಸ್ತುತ್ಯಾ ಪ್ರರೋಚಿತಾಯಾಂ ಹಿ ವಿದ್ಯಾಯಾಂ ಸಾದರಾಃ ಪ್ರವರ್ತೇರನ್[3] ಇತಿ ॥

(ಭಾಷ್ಯಾರ್ಥ)

ಓಂ 'ಬ್ರಹ್ಮಾ ದೇವಾನಾಂ' ಮುಂತಾದದ್ದು ಅಥರ್ವ(ವೇದ)ದ ಉಪನಿಷತ್ತು. ಈ (ಉಪನಿಷತ್ತಿಗೆ) ವಿದ್ಯಾಸಂಪ್ರದಾಯವನ್ನು ನಡೆಯಿಸಿದವರ ಪರಂಪರೆ ಎಂಬ ಸಂಬಂಧವನ್ನು (ಶ್ರುತಿಯು) ತಾನೇ ಮೊಟ್ಟಮೊದಲೇ (ವಿದ್ಯೆಯನ್ನು) - ಹೀಗೆಯೇ ದೊಡ್ಡವರು (ಇದು) ಪರಮಪುರುಷಾರ್ಥಕ್ಕೆ ಸಾಧನವಾಗಿರುವದೆಂದು ಗುರುವಿನಿಂದ ಹೆಚ್ಚಿನ ಆಯಾಸದಿಂದ (ಈ) ವಿದ್ಯೆಯನ್ನು ಸಂಪಾದಿಸಿಕೊಂಡರು - ಎಂದು ಹೊಗಳುವದಕ್ಕಾಗಿ[4] ಹೇಳಿರುತ್ತದೆ. ಕೇಳುವವರ ಬುದ್ಧಿಗೆ (ಇದರಲ್ಲಿ) ರುಚಿಯನ್ನು

---

1. ಓಂ ಎಂಬ ಮಾತು ಭಾಷ್ಯದ ಆರಂಭದಲ್ಲಿ ಬರೆದವರು ಸೇರಿಸಿಕೊಂಡಿರಬಹುದು ; ಏಕೆಂದರೆ ಇದು ಎಲ್ಲಾ ಪುಸ್ತಕಗಳಲ್ಲಿಯೂ ಇಲ್ಲ.

2. "ಪಾರಮ್ಪರ್ಯಲಕ್ಷಣಂ ಸಂಬನ್ಧಮ್" ಎಂದು ಬಿಡಿಸಿದ ಕಾ।। ವಾ।। ಪಾಠಕ್ಕೂ ಇದೇ ಅರ್ಥ.

3. "ಪ್ರವರ್ತೇಯುಃ" ಎಂದು ಕೆಲವು ಪುಸ್ತಕಗಳ ಪಾಠವಿದೆ ; ಅದಕ್ಕಿಂತ ಈ ಪಾಠವೇ ಉತ್ತಮ. ವೃತ್ ಧಾತು ಆತ್ಮನೇಪದಿ.

4. "ಇತಿ ಸ್ತುತ್ಯರ್ಥಮ್" ಎಂದು ಸಂಬಂಧಿಸಿಕೊಂಡಿದೆ. ದೊಡ್ಡದೊಡ್ಡ ಸಂಪ್ರದಾಯ ಕರ್ತೃಗಳನ್ನು ಹೇಳಿರುವದು ವಿದ್ಯೆಯನ್ನು ಹೊಗಳುವದಕ್ಕೆ ಎಂದು ಭಾವ.

ಹತ್ತಿಸುವದಕ್ಕಾಗಿ ವಿದ್ಯೆಯನ್ನು (ಹೀಗೆ) ಗೌರವಿಸಿರುತ್ತದೆ[1] ; ಏಕೆಂದರೆ (ಹೀಗೆ) ಹೊಗಳಿ ವಿದ್ಯೆಯಲ್ಲಿ ರುಚಿಹುಟ್ಟುವಂತೆ ಮಾಡಿದರೆ (ಜನರು ಅದರಲ್ಲಿ) ಆದರದಿಂದ ಪ್ರವರ್ತಿಸುವರು[2]

(ಭಾಷ್ಯ)

೭ ಪ್ರಯೋಜನೇನ ತು ವಿದ್ಯಾಯಾಃ ಸಾಧ್ಯಸಾಧನಲಕ್ಷಣಸಂಬನ್ಧಮ್ ಉತ್ತರತ್ರ ವಕ್ಷ್ಯತಿ - 'ಭಿದ್ಯತೇ ಹೃದಯಗ್ರನ್ಥಿಃ' (೨-೨-೮) ಇತ್ಯಾದಿನಾ । ಅತ್ರ ಚ ಅಪರಶಬ್ದವಾಚ್ಯಾಯಾಮ್ ಋಗ್ವೇದಾದಿಲಕ್ಷಣಾಯಾಮ್ ವಿಧಿಪ್ರತಿಷೇಧಮಾತ್ರಪರಾಯಾಂ ವಿದ್ಯಾಯಾಂ ಸಂಸಾರಕಾರಣಾವಿದ್ಯಾದಿದೋಷನಿವರ್ತಕತ್ವಂ ನಾಸ್ತಿ ಇತಿ ಸ್ವಯಮೇವ ಉಕ್ತ್ವಾ ಪರಾಪರೇತಿ[3] ವಿದ್ಯಾಭೇದಕರಣಪೂರ್ವಕಮ್ 'ಅವಿದ್ಯಾಯಾಮನ್ತರೇ ವರ್ತಮಾನಾಃ' (೧-೨-೮) ಇತ್ಯಾದಿನಾ ತಥಾ ಪರಪ್ರಾಪ್ತಿಸಾಧನಂ ಸರ್ವಸಾಧನಸಾಧ್ಯವಿಷಯವೈರಾಗ್ಯಪೂರ್ವಕಂ ಗುರುಪ್ರಸಾದಲಭ್ಯಾಂ ಬ್ರಹ್ಮವಿದ್ಯಾಮ್ ಆಹ 'ಪರೀಕ್ಷ್ಯ ಲೋಕಾನ್' (೧-೨-೧೨) ಇತ್ಯಾದಿನಾ ॥

(ಭಾಷ್ಯಾರ್ಥ)

ಪ್ರಯೋಜನಕ್ಕೂ ವಿದ್ಯೆಗೂ ಸಾಧ್ಯಸಾಧನ ಎಂಬ[4] (ರೂಪದ) ಸಂಬಂಧ (ವಿದೆಯೆಂಬುದನ್ನು) ಮುಂದೆ 'ಹೃದಯದ ಗಂಟು ಭಿನ್ನವಾಗುತ್ತದೆ' (೨-೨-೮) ಎಂದು ಮುಂತಾದ (ವಾಕ್ಯ)ದಿಂದ (ಶ್ರುತಿಯು) ಹೇಳುವದು. ಇಲ್ಲಿಯೂ ಪರ, ಅಪರ - ಎಂದು ವಿದ್ಯೆಯನ್ನು (ಎರಡು) ಬಗೆಯಾಗಿ ವಿಂಗಡಿಸಿದ ಬಳಿಕ 'ಅವಿದ್ಯೆಯ ನಡುವೆ ಇರುವವರಾಗಿ' (೧-೨-೮) ಎಂದು ಮುಂತಾಗಿರುವ (ವಾಕ್ಯ) ದಿಂದ ಬರಿಯ ವಿಧಿ, ನಿಷೇಧ - ಇವುಗಳನ್ನು ಮಾತ್ರ ತಾತ್ಪರ್ಯದಿಂದ ಹೇಳುವ ಅಪರ[5] (ಕಡಿಮೆಯದು) ಎಂಬ ಶಬ್ದದಿಂದ ಕರೆಯಲ್ಪಡುವ ಋಗ್ವೇದಾದಿರೂಪ

---

1 ವಿದ್ಯೆಯನ್ನು ಹೊಗಳುವದೇಕೆ ? - ಎಂದರೆ ಅದರಲ್ಲಿ ರುಚಿಯನ್ನು ಹತ್ತಿಸುವದಕ್ಕೆ.

2 ವಿದ್ಯೆಯನ್ನು ಸಂಪಾದಿಸಬೇಕೆಂದು ಮುಮುಕ್ಷುಗಳು ಹವಣಿಸುವರು.

3. "ಪರಾಪರವಿದ್ಯಾ" ಎಂಬ ಆ॥ ಪಾಠಕ್ಕಿಂತ ಈ ಕಾ॥ ವಾ॥ ಪಾಠವು ಮೇಲು.

4 ವಿದ್ಯೆಯು ಸಾಧನ, ಮುಕ್ತಿಯು ಸಾಧ್ಯ. ಮುಕ್ತಿಯು ನಮ್ಮ ಸ್ವರೂಪವೇ ಆಗಿದ್ದರೂ ವಿದ್ಯೆಯಿಂದ ಅದು ಹೊಸದಾಗಿ ದೊರೆತಂತೆ ಆಗುವದು. ಆದ್ದರಿಂದ ಅದನ್ನು ಸಾಧ್ಯವೆಂದು ಉಪಚಾರಕ್ಕೆ ಕರೆದಿದೆ. ಕರ್ಮ, ಉಪಾಸನೆ - ಇವುಗಳ ಫಲದಂತೆ ಮುಖ್ಯಾರ್ಥದಲ್ಲಿ ಅದು ಸಾಧ್ಯವೆಂದು ತಿಳಿಯಬಾರದು.

5. ಮಂತ್ರಬ್ರಾಹ್ಮಣಭಾಗವು ಅಪರವಿದ್ಯೆಯು ; ಅದು ವಿಧಿನಿಷೇಧಗಳನ್ನು ಮಾತ್ರ ಹೇಳುವದು ; ಆತ್ಮಜ್ಞಾನವನ್ನು ಹೇಳುವದಿಲ್ಲ. ಕ. ಭಾ. ಭಾ. ೩೨.

ವಾದ ವಿದ್ಯೆಯು ಸಂಸಾರಕ್ಕೆ ಕಾರಣವಾಗಿರುವ ಅವಿದ್ಯೆಯೇ ಮುಂತಾದ[1] ದೋಷವನ್ನು ನಿವಾರಿಸಲಾರದೆಂದು (ಶ್ರುತಿಯು) ತಾನೇ ಹೇಳಿ ಆಮೇಲೆ[2] ಉತ್ತಮವಾದ (ಬ್ರಹ್ಮವನ್ನು) ಪಡೆಯುವದಕ್ಕೆ ಸಾಧನವಾಗಿರುವ, ಎಲ್ಲಾ (ಬಗೆಯ) ಸಾಧನಸಾಧ್ಯಗಳಲ್ಲಿಯೂ[3] ವೈರಾಗ್ಯವನ್ನು ಹೊಂದಿ ಗುರುಪ್ರಸಾದದಿಂದ(ಲೇ) ಪಡೆಯತಕ್ಕದ್ದಾಗಿರುವ, ಬ್ರಹ್ಮವಿದ್ಯೆಯನ್ನು '(ಕರ್ಮಗಳಿಂದ ಆಗಿರುವ) ಲೋಕಗಳನ್ನು ಪರೀಕ್ಷೆಮಾಡಿ' (೧-೨-೧೨) ಎಂದುಮುಂತಾದ (ವಾಕ್ಯ)ದಿಂದ ಹೇಳಿರುತ್ತದೆ.

## (ಭಾಷ್ಯ)

೩. ಪ್ರಯೋಜನಂ ಚ ಅಸಕೃತ್ ಬ್ರವೀತಿ 'ಬ್ರಹ್ಮ ವೇದ ಬ್ರಹ್ಮೈವ ಭವತಿ' (೩-೨-೯) ಇತಿ । 'ಪರಾಮೃತಾಃ ಪರಿಮುಚ್ಯನ್ತಿ ಸರ್ವೇ' (೩-೨-೬) ಇತಿ ಚ ॥

## (ಭಾಷ್ಯಾರ್ಥ)

ಮತ್ತು (ಈ ವಿದ್ಯೆಯ) ಪ್ರಯೋಜನವನ್ನು 'ಬ್ರಹ್ಮವನ್ನು (ಯಾವಾತನು) ಅರಿತುಕೊಳ್ಳುವನೋ (ಅವನು) ಬ್ರಹ್ಮವೇ ಆಗುವನು' (೩-೨-೯) ಎಂದೂ 'ಎಲ್ಲರೂ ಹೆಚ್ಚಿನ ಅಮೃತರಾಗಿ ಎಲ್ಲಾ ವಿಧದಿಂದ ಮುಕ್ತರಾಗುವರು' (೩-೨-೬) ಎಂದೂ ಮತ್ತೆ ಮತ್ತೆ (ಶ್ರುತಿಯು) ಹೇಳುತ್ತದೆ.

# ಬರಿಯ ವಿದ್ಯೆಯೇ ಮುಕ್ತಿಗೆ ಸಾಧನ

## (ಭಾಷ್ಯ)

೪. ಜ್ಞಾನಮಾತ್ರೇ ಯದ್ಯಪಿ ಸರ್ವಾಶ್ರಮಿಣಾಮ್ ಅಧಿಕಾರಃ, ತಥಾಪಿ ಸಂನ್ಯಾಸನಿಷ್ಠೈವ ಬ್ರಹ್ಮವಿದ್ಯಾ ಮೋಕ್ಷಸಾಧನಮ್ ನ ಕರ್ಮಸಹಿತಾ ಇತಿ 'ಭೈಕ್ಷ್ಯಚರ್ಯಾಂ ಚರನ್ತಃ' (೧-೨-೧೧), 'ಸಂನ್ಯಾಸಯೋಗಾತ್' - (೩-೨-೬) ಇತಿ ಚ ಬ್ರುವನ್ ದರ್ಶಯತಿ ॥

---

1. ಅವಿದ್ಯೆ, ಕಾಮ, ಕರ್ಮ - ಎಂಬ ದೋಷಗಳನ್ನು.

2. ತಥಾ ಎಂಬ ಮಾತು ಮೂಲದಲ್ಲಿ ಹೆಚ್ಚು.

3. ಪುತ್ರ, ಕರ್ಮ, ಉಪಾಸನೆ - ಇವು ಸಾಧನಗಳು ; ಮನುಷ್ಯಲೋಕ, ಪಿತೃಲೋಕ, ದೇವಲೋಕ - ಇವು ಸಾಧ್ಯಗಳು. 'ಸಾಧನಸಾಧ್ಯ' ಎಂಬ ಮಾತು ಭಾಷ್ಯದಲ್ಲಿ ಬರುವದು ಕಡಿಮೆ ; 'ಸಾಧ್ಯಸಾಧನ' ಎಂಬ ರೂಪದಲ್ಲಿ ಈ ಶಬ್ದವು ಪ್ರಸ್ಥಾನತ್ರಯದಲ್ಲಿ ಬಹುಕಡೆಗಳಲ್ಲಿ ಕಂಡುಬರುತ್ತದೆ. ಈ.ಭಾ.ಭಾ. ೨೧, ಕೇ.ಭಾ.ಭಾ. ೩, ಕ.ಭಾ. ೩೨ - ಇವುಗಳನ್ನು ನೋಡಿ.

(ಭಾಷ್ಯಾರ್ಥ)

ಬರಿಯ ಜ್ಞಾನಕ್ಕೆ ಎಲ್ಲಾ ಆಶ್ರಮದವರೂ ತಕ್ಕವರಾದರೂ[1] ಸಂನ್ಯಾಸದಲ್ಲಿ ನಿಂತಿರುವ ಬ್ರಹ್ಮವಿದ್ಯೆಯೇ ಮೋಕ್ಷಕ್ಕೆ ಸಾಧನವು, ಕರ್ಮಸಹಿತವಾಗಿದ್ದು (ಸಾಧನ)ವಾಗುವದಿಲ್ಲ ಎಂಬುದನ್ನು 'ಭೈಕ್ಷ್ಯಚರ್ಯವನ್ನು ಮಾಡುವವರಾಗಿ' (೧-೨-೧೧) ಎಂದೂ, 'ಸಂನ್ಯಾಸಯೋಗದಿಂದ (ಶುದ್ಧಸತ್ತ್ವರಾದವರು)' (೩-೨-೬) ಎಂದೂ ಹೇಳಿ ತಿಳಿಸಿಕೊಟ್ಟಿರುತ್ತದೆ.[2]

(ಭಾಷ್ಯ)

ವಿದ್ಯಾಕರ್ಮವಿರೋಧಾಚ್ಚ । ನ ಹಿ ಬ್ರಹ್ಮಾತ್ಮೈಕತ್ವದರ್ಶನೇನ ಸಹ ಕರ್ಮ ಸ್ವಪ್ನೇಽಪಿ ಸಂಪಾದಯಿತುಂ ಶಕ್ಯಮ್ । ವಿದ್ಯಾಯಾಃ ಕಾಲವಿಶೇಷಾಭಾವಾತ್ ಅನಿಯತನಿಮಿತ್ತತ್ವಾಚ್ಚ ಕಾಲಸಂಕೋಚಾನುಪಪತ್ತಿಃ । ಯತ್ತು ಗೃಹಸ್ಥೇಷು ಬ್ರಹ್ಮವಿದ್ಯಾಸಂಪ್ರದಾಯಕರ್ತೃತ್ವಾದಿಲಿಙ್ಗಮ್, ನ ತತ್ ಸ್ಥಿತಂ ನ್ಯಾಯಂ ಬಾಧಿತುಮುತ್ಸಹತೇ । ನ ಹಿ ವಿಧಿಶತೇನಾಪಿ ತಮಃಪ್ರಕಾಶಯೋರೇಕತ್ರ ಸದ್ಭಾವಃ ಶಕ್ಯತೇ ಕರ್ತುಮ್, ಕಿಮುತ ಲಿಙ್ಗೈಃ ಕೇವಲೈಃ ಇತಿ ॥

(ಭಾಷ್ಯಾರ್ಥ)

ವಿದ್ಯೆ, ಕರ್ಮ - ಇವುಗಳಿಗೆ (ಒಂದಕ್ಕೊಂದಕ್ಕೆ) ವಿರೋಧವಿರುವದರಿಂದಲೂ,[3] (ಜ್ಞಾನವು ಕರ್ಮಸಹಿತವಾಗಿಯೇ ಮೋಕ್ಷಸಾಧನವೆಂಬುದು ಸರಿಯಾಗುವದಿಲ್ಲ). ಬ್ರಹ್ಮರೂಪನಾದ ಆತ್ಮನು ಒಬ್ಬನೇ ಎಂದು ಕಂಡುಕೊಂಡಿರುವ (ಜ್ಞಾನ)ದೊಡನೆ ಕರ್ಮವನ್ನೂ ಸೇರಿಸಿ (ಅನುಷ್ಠಾನ) ಮಾಡುವದೆಂಬುದು ಕನಸಿನಲ್ಲಿಯೂ ಆಗುವ ಹಾಗಿಲ್ಲವಷ್ಟೆ.[4] ವಿದ್ಯೆಗೆ (ಇಂಥದ್ದೊಂದು) ಕಾಲವೆಂಬ ವಿಶೇಷವಿಲ್ಲವಾದ್ದರಿಂದಲೂ

1. ಆಶ್ರಮಿಗಳೆಲ್ಲರಿಗೂ ಜ್ಞಾನದಲ್ಲಿ ಅಧಿಕಾರವುಂಟು. ತೈ. ಭಾ. ಶೀಕ್ಷಾವಲ್ಲಿಯ ಕೊನೆಯ ವಾಕ್ಯವನ್ನು ನೋಡಿ.

2. ಸಂನ್ಯಾಸವು ಜ್ಞಾನಪರಿಪಾಕಕ್ಕೆ ಅವಶ್ಯವಾಗುತ್ತದೆ. ಗೀ.ಭಾ. ೧೮-೫೫, ಸೂ. ಭಾ. ೩-೪-೨೦

3. ಹಿಂದೆ ವಾಕ್ಯವನ್ನು ಪ್ರಮಾಣವಾಗಿ ಹೇಳಿತ್ತು ; ಈಗ ಯುಕ್ತಿಯನ್ನೂ ಹೇಳಿರುತ್ತದೆ. ನ್ಯಾಯೋಪಬೃಂಹಿತಶ್ರುತಿಯ ಬಲದಿಂದ ವಿದ್ಯೆಯು ಸ್ವತಂತ್ರವಾಗಿ ಮುಕ್ತಿಸಾಧನವೆಂದು ನಿರ್ಣಯಿಸಬೇಕು ಎಂದು ಭಾವ. ಜ್ಞಾನಕರ್ಮಗಳ ಸಮುಚ್ಚಯವೇ ಮೋಕ್ಷಸಾಧನವೆಂಬ ವಾದಿಗಳ ಮತವು ಯುಕ್ತಿವಿರುದ್ಧ.

4. ಎಚ್ಚರದಲ್ಲಿ ಮಾಡಲಾಗದ ಎಷ್ಟೋ ಕೆಲಸಗಳನ್ನು ಕನಸಿನಲ್ಲಿ ನಾವು ಮಾಡುವೆವು ; ಆದರೆ ಅಕರ್ತೃವಾದ ಬ್ರಹ್ಮವು ನಾನು ಎಂಬ ಜ್ಞಾನದೊಡನೆ ಕರ್ತೃತ್ವಬುದ್ಧಿಯನ್ನು ಮಾತ್ರ ಅಲ್ಲಿಯೂ ಕೂಡಿಸುವದಕ್ಕೆ ಆಗುವಹಾಗಿಲ್ಲ.

(ಅದು ಯಾವುದಾದರೊಂದು) ಗೊತ್ತಾದ ನಿಮಿತ್ತದಿಂದ ಆಗತಕ್ಕದ್ದಲ್ಲವಾದ್ದ ರಿಂದಲೂ ಇದಕ್ಕೆ ಕಾಲಸಂಕೋಚವು[1] ಹೊಂದುವದಿಲ್ಲ. ಗೃಹಸ್ಥರು ಬ್ರಹ್ಮವಿದ್ಯಾ ಸಂಪ್ರದಾಯಕರ್ತರಾಗಿದ್ದದ್ದು ಮುಂತಾದ ಲಿಂಗ[2]ವಿದೆಯಲ್ಲ, ಅದೋ ಎಂದರೆ (ಅದು) ಇಲ್ಲಿ ನಿಶ್ಚಿತವಾಗಿರುವ ಯುಕ್ತಿಯನ್ನು ಬಾಧಿಸಲಾರದು. **ನೂರು ವಿಧ ಗಳಿಂದಲೂ, ಕತ್ತಲೆಬೆಳಕುಗಳನ್ನು ಒಂದೇ ಕಡೆಯಲ್ಲಿರುವಂತೆ ಮಾಡುವದಾಗ ಲಾರದು[3] ; ಹೀಗಿರುವಲ್ಲಿ ಬರಿಯ ಲಿಂಗಗಳಿಂದ (ಆಗಲಾರದೆಂಬುದನ್ನು) ಹೇಳ ತಕ್ಕದ್ದೇನಿದೆ ?[4]**

## ಉಪಸಂಹಾರ

### (ಭಾಷ್ಯ)

೬. ಏವಮ್ ಉಕ್ತಸಂಬನ್ಧಪ್ರಯೋಜನಾಯಾ ಉಪನಿಷದಃ ಅಲ್ಪಾಕ್ಷರಂ ಗ್ರನ್ಥವಿವರಣಂ ಆರಭ್ಯತೇ । ಯೇ ಇಮಾಂ ಬ್ರಹ್ಮವಿದ್ಯಾಮ್ ಉಪಯನ್ತಿ ಆತ್ಮ ಭಾವೇನ ಶ್ರದ್ಧಾಭಕ್ತಿಪುರಃಸರಾಃ ಸನ್ತಃ ತೇಷಾಂ ಗರ್ಭಜನ್ಮಜರಾರೋಗಾದ್ಯನರ್ಥ ಪೂಗಂ ನಿಶಾತಯತಿ, ಪರಂ ವಾ ಬ್ರಹ್ಮ ಗಮಯತಿ, ಅವಿದ್ಯಾದಿಸಂಸಾರಕಾರಣಂ ಚ ಅತ್ಯನ್ತಮ್ ಅವಸಾದಯತಿ ವಿನಾಶಯತಿ ಇತಿ ಉಪನಿಷತ್ । ಉಪನಿಪೂರ್ವಸ್ಯ ಸದೇಃ ಏವಮರ್ಥಸ್ಮರಣಾತ್ ॥

1. ಈ ಜ್ಞಾನವು ಘಟಜ್ಞಾನಾದಿಗಳಂತೆ ಆಗಿಹೋಗುವದಿಲ್ಲ. ಏಕೆಂದರೆ ಇದರ ವಿಷಯವಾದ ಆತ್ಮನು ನಿತ್ಯನು ಮತ್ತು ಇದರ ಸ್ವರೂಪವೇ ಆತ್ಮನು. ಆದ್ದರಿಂದ ಜ್ಞಾನಿಯು ಸ್ವಲ್ಪ ಕಾಲವನ್ನು ಅದಕ್ಕೆ ವಿನಿಯೋಗಿಸಿ ಉಳಿದ ಸಮಯವನ್ನು ಕರ್ಮಕ್ಕೆ ವಿನಿಯೋಗಿಸಬಹುದು ಎಂದು ಶಂಕಿಸುವದಕ್ಕೆ ಆಗುವದಿಲ್ಲ ಎಂದು ಭಾವ.

2. ಶೌನಕನೇ ಮೊದಲಾದ ಗೃಹಸ್ಥರು ಈ ವಿದ್ಯೆಯನ್ನು ಕುರಿತು ವಿಚಾರಮಾಡಿದರೆಂದು ಈ ಉಪನಿಷತ್ತಿನಲ್ಲಿ ಹೇಳಿದೆ. ಇದರಂತೆ ಜನಕಾದಿಗಳು ಜ್ಞಾನವನ್ನು ಬೇರೆಯವರಿಗೆ ಹೇಳಿ ಕೊಟ್ಟರೆಂದು ಭಾರತಾದಿಗಳಲ್ಲಿದೆ. ಇದರಿಂದ ಗೃಹಸ್ಥರ ಕರ್ಮವೂ ಜ್ಞಾನದೊಡನೆ ಇದ್ದಿ ತೆಂದು ತೋರುತ್ತದೆ. ಇದು ಲಿಂಗವು, ಗುರುತು.

3. ಜ್ಞಾನಕರ್ಮಗಳೆರಡನ್ನೂ ಸೇರಿಸಿಕೊಳ್ಳಬೇಕು ಎಂದು ವೇದವು ವಿಧಿಸಿದ್ದರೂ ಆಗುತ್ತಿರಲಿಲ್ಲ. ಏಕೆಂದರೆ ಈ ಸಮುಚ್ಚಯವೇ ಅಸಾಧ್ಯವೆಂಬುದು ಅನುಭವಸಿದ್ಧ.

4. ಗೃಹಸ್ಥರು ಜ್ಞಾನಕರ್ತೃಗಳಾಗಿದ್ದಂತೆ ಲಿಂಗಗಳಿಂದ ತೋರಿದರೂ ಅವರು ನಿಜವಾಗಿ ಜ್ಞಾನಿಗಳಾಗಿದ್ದರೆಂದೂ, ಅವರ ಕರ್ಮವು ನಿಜವಾಗಿ ಕರ್ಮವಲ್ಲವೆಂದೂ ಭಾವಿಸಬೇಕು. ಗೀ.ಭಾ. ೪-೨೦, ೨೩, ೨೪ ಇವನ್ನು ನೋಡಿರಿ.

## (ಭಾಷ್ಯಾರ್ಥ)

ಹೀಗೆ (ಈ) ಉಪನಿಷತ್ತಿಗೆ[1] (ಮೇಲೆ) ಹೇಳಿದ(ಂತೆ) ಸಂಬಂಧ ಪ್ರಯೋಜನಗಳು ಇರುವದರಿಂದ ಇದನ್ನು ಅಲ್ಪಾಕ್ಷರಗಳಿಂದ[2] ಗ್ರಂಥವಿವರಣೆಯನ್ನು (ಮಾಡುವದಕ್ಕೆ) ಪ್ರಾರಂಭಿಸಿರುತ್ತದೆ.

ಯಾರು ಶ್ರದ್ಧಾಭಕ್ತಿಗಳಿಂದ ಕೂಡಿದವರಾಗಿ ಈ ಬ್ರಹ್ಮವಿದ್ಯೆಯನ್ನು 'ಉಪಯನ್ತಿ' ಬಳಿಸಾರುವರೋ ಎಂದರೆ (ಈ ಬ್ರಹ್ಮವು) ತಾವೇ ಎಂಬ ಭಾವನೆಯಿಂದ (ಮನಗಾಣುವರೋ) ಅವರ ಗರ್ಭ(ವಾಸ), ಹುಟ್ಟುವದು, ಮುಪ್ಪು, ರೋಗಗಳು - ಇವೇ ಮುಂತಾದ ಅನರ್ಥಸಮೂಹವನ್ನು ಕತ್ತರಿಸುತ್ತದೆ ; ಅಥವಾ (ಅಂಥವರನ್ನು) ಪರಬ್ರಹ್ಮವನ್ನು 'ಗಮಯತಿ' ಮುಟ್ಟಿಸುತ್ತದೆ ; ಅವಿದ್ಯೆಯೇ ಮುಂತಾದ ಸಂಸಾರಕಾರಣವನ್ನು ಅತ್ಯಂತವಾಗಿ 'ಅವಸಾದಯತಿ' ಹಾಳುಮಾಡುತ್ತದೆ. ಆದ್ದರಿಂದ (ಇದಕ್ಕೆ) ಉಪನಿಷತ್ತು ಎಂದು ಹೆಸರು.[3] ಏಕೆಂದರೆ 'ಉಪ', 'ನಿ' ಎಂಬ (ಉಪಸರ್ಗಗಳಿಂದ) ಕೂಡಿದ 'ಸದ್' ಧಾತುವಿಗೆ ಈ ಅರ್ಥವೆಂದು ವ್ಯಾಕರಣ ಸ್ಮೃತಿಯಲ್ಲಿ ಹೇಳಿದೆ.[4]

---

1. ಬ್ರಹ್ಮವಿದ್ಯೆಗೆ ಸಂಪ್ರದಾಯಕರ್ತೃಸಂಬಂಧ, ಮುಕ್ತಿ ಎಂಬ ಸಾಧ್ಯದ ಸಂಬಂಧ - ಎಂಬ ಎರಡು ಸಂಬಂಧಗಳನ್ನೂ ಮುಕ್ತಿ ಎಂಬ ಪ್ರಯೋಜನವನ್ನೂ ಹೇಳಿದ್ದಾಯಿತು. ಆ ವಿದ್ಯೆಯನ್ನು ತಿಳಿಸುವ ಈ ಉಪನಿಷತ್ತಿಗೂ ಸಂಬಂಧಪ್ರಯೋಜನಗಳಿವೆ ಎಂಬುದು ಸ್ಪಷ್ಟವು.

2. ಸಂಕ್ಷೇಪವಾಗಿ

3. ಉಪನಿಷತ್ ಎಂಬಲ್ಲಿ ಉಪ ಎಂಬ ಉಪಸರ್ಗದ ಅರ್ಥವನ್ನು ಉಪಯನ್ತಿ, ಆತ್ಮಭಾವೇನ ಗಚ್ಛನ್ತಿ ಎಂದು ವಿವರಿಸಿದೆ. ಬ್ರಹ್ಮವು ನಮ್ಮ ಆತ್ಮನೇ ಎಂಬ ಸಾಕ್ಷಾತ್ಕಾರವನ್ನು ಪಡೆದವರಿಗೆ ಇಲ್ಲಿ ಹೇಳಿರುವ ಫಲವು ಆಗುತ್ತದೆ.

4. 'ಷದ್ ಲೃ-ವಿಶರಣಗತ್ಯವಸಾದನೇಷು' ಎಂದು ವ್ಯಾಕರಣದಲ್ಲಿ ಸದ್ ಧಾತುವಿಗೆ ಅರ್ಥವನ್ನು ಹೇಳಿದೆ. ಅಲ್ಲಿ ಹೇಳಿರುವ ಮೂರು ಅರ್ಥವೂ ಬ್ರಹ್ಮವಿದ್ಯೆಗೆ ಒಪ್ಪುತ್ತದೆ. ಆದ್ದರಿಂದ ವಿದ್ಯೆಯು ಉಪನಿಷತ್ತು. ಆ ವಿದ್ಯೆಯನ್ನು ತಿಳಿಸುವ ಗ್ರಂಥವನ್ನೂ ಉಪಚಾರದಿಂದ ಉಪನಿಷತ್ತು ಎನ್ನುತ್ತಾರೆ. ಕ.ಭಾ.ಭಾ. ೨, ೩ ಇವನ್ನು ನೋಡಿರಿ.

# ಒಂದನೆಯ ಮುಂಡಕ - ಒಂದನೆಯ ಖಂಡ

## ವಿದ್ಯಾಸಂಪ್ರದಾಯಕರ್ತೃಗಳ ಪರಂಪರೆ

ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ
ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ ।
ಸ ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾ-
ಮಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ ॥೧॥

೧. ಬ್ರಹ್ಮನು ದೇವತೆಗಳಿಗೆ ಮೊದಲನೆಯವನಾಗಿ, ವಿಶ್ವಕ್ಕೆ ಕರ್ತನಾಗಿ, ಭುವನಕ್ಕೆ ಗೋಪ್ತನಾಗಿ ಉಂಟಾದನು. ಆತನು ಎಲ್ಲಾ ವಿದ್ಯೆಗಳಿಗೂ ಪ್ರತಿಷ್ಠೆಯಾಗಿರುವ ಬ್ರಹ್ಮವಿದ್ಯೆಯನ್ನು ಅಥರ್ವನೆಂಬ ಹಿರಿಯಮಗನಿಗೆ ಹೇಳಿಕೊಟ್ಟನು.

### (ಭಾಷ್ಯ)

೭. ಬ್ರಹ್ಮಾ ಪರಿವೃಢಃ ಮಹಾನ್ ಧರ್ಮಜ್ಞಾನವೈರಾಗ್ಯೈಶ್ವರ್ಯೈಃ ಸರ್ವಾನನ್ಯಾನ್ ಅತಿಶೇತೇ ಇತಿ । ದೇವಾನಾಂ ದ್ಯೋತನವತಾಮ್ ಇನ್ದ್ರಾದೀನಾಂ ಪ್ರಥಮಃ ಗುಣೈಃ ಪ್ರಧಾನಃ ಸನ್, ಪ್ರಥಮಃ ಅಗ್ರೇ ವಾ, ಸಂಬಭೂವ ಅಭಿವ್ಯಕ್ತಃ ಸಮ್ಯಕ್ ಸ್ವಾತನ್ತ್ರ್ಯೇಣ ಇತಿ ಅಭಿಪ್ರಾಯಃ । ನ ತಥಾ ಯಥಾ ಧರ್ಮಾಧರ್ಮವಶಾತ್ ಸಂಸಾರಿಣೋಽನ್ಯೇ ಜಾಯನ್ತೇ । 'ಯೋಽಸಾವತೀನ್ದ್ರಿಯೋಽಗ್ರಾಹ್ಯಃ' (ಮನು. ೧-೭) ಇತ್ಯಾದಿಸ್ಮೃತೇಃ । ವಿಶ್ವಸ್ಯ ಸರ್ವಸ್ಯ ಜಗತಃ ಕರ್ತಾ ಉತ್ಪಾದಯಿತಾ । ಭುವನಸ್ಯ ಉತ್ಪನ್ನಸ್ಯ ಗೋಪ್ತಾ ಪಾಲಯಿತಾ ಇತಿ ವಿಶೇಷಣಂ ಬ್ರಹ್ಮಣೋ ವಿದ್ಯಾಸ್ತುತಯೇ ॥

### (ಭಾಷ್ಯಾರ್ಥ)

ಬ್ರಹ್ಮನು ಎಂದರೆ (ಎಲ್ಲರಿಗೂ) ಹಿರಿಯವನು ; ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ ಇವುಗಳಲ್ಲಿ - ಮಿಕ್ಕೆಲ್ಲರನ್ನೂ ಮೀರಿರುತ್ತಾನಾದ್ದರಿಂದ ದೊಡ್ಡವನು. ದೇವತೆಗಳಿಗೆ ಎಂದರೆ ಪ್ರಕಾಶವುಳ್ಳ ಇಂದ್ರಾದಿಗಳಲ್ಲಿ ಮೊದಲನೆಯವನಾಗಿ ಎಂದರೆ ಗುಣಗಳಿಂದ ಮುಖ್ಯನಾಗಿ, ಅಥವಾ ಮೊದಲನೆಯವನಾಗಿ, ಮುಂಚಿತವಾಗಿ ಉಂಟಾದನು, ಹೊರತೋರಿಕೊಂಡನು, (ಸಂಬಭೂವ ಎಂಬಲ್ಲಿ ಸಮ್ ಎಂದರೆ) ಚೆನ್ನಾಗಿ, ಸ್ವಾತಂತ್ರ್ಯದಿಂದ ಎಂದು ಅಭಿಪ್ರಾಯ ; ಹೇಗೆ ಮಿಕ್ಕ ಸಂಸಾರಿಗಳು

ಧರ್ಮ, ಅಧರ್ಮ - ಇವುಗಳಿಗೆ ವಶರಾಗಿ ಹುಟ್ಟುವರೋ ಹಾಗಲ್ಲ,[1] ಇದಕ್ಕೆ 'ಇಂದ್ರಿಯಗಳನ್ನು ಮೀರಿ, (ಕರ್ಮೇಂದ್ರಿಯ) ಗಳಿಂದ ಹಿಡಿಯುವದಕ್ಕೆ ಬರದವನಾದ ಯಾವ ಈತನು ಇದಾನಲ್ಲ' (ಮನು. ೧-೭) ಎಂಬ ಸ್ಮೃತಿಯು[2] ಪ್ರಮಾಣವು. ವಿಶ್ವಕ್ಕೆ ಎಂದರೆ ಜಗತ್ತೆಲ್ಲಕ್ಕೂ ಕರ್ತನಾಗಿ, (ಎಲ್ಲವನ್ನೂ) ಉಂಟುಮಾಡುವವನಾಗಿ ಹುಟ್ಟಿದ ಭುವನಕ್ಕೆ ಗೋಪ್ತನಾಗಿ ಎಂದರೆ (ಅದನ್ನು) ಕಾಪಾಡುವವನಾಗಿ ಎಂದು ಬ್ರಹ್ಮನಿಗೆ (ಎರಡು) ವಿಶೇಷಣವನ್ನು ಕೊಟ್ಟಿರುವದು ವಿದ್ಯೆಯನ್ನು ಹೊಗಳುವದಕ್ಕೆ.

## (ಭಾಷ್ಯ)

೮. ಸಃ ಏವಂ ಪ್ರಖ್ಯಾತಮಹತ್ತ್ವೋ ಬ್ರಹ್ಮಾ ಬ್ರಹ್ಮವಿದ್ಯಾಂ ಬ್ರಹ್ಮಣಃ ಪರಮಾತ್ಮನಃ ವಿದ್ಯಾಂ ಬ್ರಹ್ಮವಿದ್ಯಾಮ್ । 'ಯೇನಾಕ್ಷರಂ ಪುರುಷಂ ವೇದ ಸತ್ಯಮ್' (೧-೨-೧೩) ಇತಿ ವಿಶೇಷಣಾತ್ ಪರಮಾತ್ಮ ವಿಷಯಾ ಹಿ ಸಾ । ಬ್ರಹ್ಮಣಾ ವಾ ಅಗ್ರಜೇನ ಉಕ್ತಾ ಇತಿ ಬ್ರಹ್ಮವಿದ್ಯಾ । ತಾಂ ಸರ್ವವಿದ್ಯಾಪ್ರತಿಷ್ಠಾಂ ಸರ್ವವಿದ್ಯಾಭಿವ್ಯಕ್ತಿಹೇತುತ್ವಾತ್ ಸರ್ವವಿದ್ಯಾಶ್ರಯಾಮ್ ಇತ್ಯರ್ಥಃ । ಸರ್ವ ವಿದ್ಯಾವೇದ್ಯಂ ವಾ ವಸ್ತು ಅನಯೈವ ವಿಜ್ಞಾಯತೇ ಇತಿ । 'ಯೇನಾಶ್ರುತಂ ಶ್ರುತಂ ಭವತ್ಯಮತಂ ಮತಮವಿಜ್ಞಾತಂ ವಿಜ್ಞಾತಮ್' (ಛಾಂ. ೬-೧-೩) ಇತಿ ಶ್ರುತೇಃ । ಸರ್ವವಿದ್ಯಾಪ್ರತಿಷ್ಠಾಮ್ ಇತಿ ಚ ಸ್ತೌತಿ ವಿದ್ಯಾಮ್ । ಅಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ । ಜ್ಯೇಷ್ಠಶ್ಚ ಅಸೌ ಪುತ್ರಶ್ಚ । ಅನೇಕೇಷು ಬ್ರಹ್ಮಣಃ ಸೃಷ್ಟಿಪ್ರಕಾರೇಷು ಅನ್ಯತಮಸ್ಯ ಸೃಷ್ಟಿಪ್ರಕಾರಸ್ಯ ಪ್ರಮುಖೇ ಪೂರ್ವಮ್ ಅಥರ್ವಾ ಸೃಷ್ಟಃ ಇತಿ ಜ್ಯೇಷ್ಠಃ । ತಸ್ಮೈ ಜ್ಯೇಷ್ಠಪುತ್ರಾಯ ಪ್ರಾಹ ಉಕ್ತವಾನ್ ॥

## (ಭಾಷ್ಯಾರ್ಥ)

ಹೀಗೆ ಪ್ರಸಿದ್ಧವಾದ ಮಹಿಮೆಯುಳ್ಳ ಆ ಬ್ರಹ್ಮನು ಬ್ರಹ್ಮವಿದ್ಯೆಯನ್ನು-ಬ್ರಹ್ಮದ ಎಂದರೆ ಪರಮಾತ್ಮನ ವಿಷಯವಾದ ವಿದ್ಯೆಯಾದ್ದರಿಂದ (ಇದಕ್ಕೆ) ಬ್ರಹ್ಮವಿದ್ಯೆ (ಎಂದು ಹೆಸರು). 'ಯಾವದರಿಂದ ಸತ್ಯವಾದ ಅಕ್ಷರನಾದ ಪುರುಷನನ್ನು

---

1. ತಂದೆ ತಾಯಿಗಳ ಶುಕ್ಲಶೋಣಿತಗಳ ಸಂಪರ್ಕವಾಗದೆಯೇ ಹುಟ್ಟಿದನು. ಹಿರಣ್ಯ-ಗರ್ಭನು ಪರಮಾತ್ಮನೆ, ಸಂಸಾರಿಯೆ ? - ಎಂಬ ವಿಷಯಕ್ಕೆ ಬೃ.ಭಾ. ೧-೪-೬ ನ್ನು ನೋಡಿರಿ.

2. ಯೋऽಸಾವತೀನ್ದ್ರಿಯೋऽಗ್ರಾಹ್ಯಃ ಸೂಕ್ಷ್ಮೋऽವ್ಯಕ್ತಃ ಸನಾತನಃ ।
ಸರ್ವಭೂತಮಯೋऽಚಿನ್ತ್ಯಃ ಸ ಏಷ ಸ್ವಯಮುದ್ಬಭೌ ॥

(ಇಂದ್ರಿಯಗಳನ್ನು ಮೀರಿ, ಕರ್ಮೇಂದ್ರಿಯಗಳಿಗೆ ಸಿಕ್ಕದೆ, ಸೂಕ್ಷ್ಮನಾಗಿ, ಅವ್ಯಕ್ತನಾಗಿ, ಎಂದೆಂದಿಗೂ ಇರುವ, ಸರ್ವಭೂತಸ್ವರೂಪನಾದ, ಹೀಗೆಂದು ಚಿಂತಿಸುವದಕ್ಕೂ ಬರದ ಯಾವ ಈ ಹಿರಣ್ಯಗರ್ಭನುಂಟಲ್ಲ, ಆ ಈತನು ತಾನೇ ಉಂಟಾದನು) ಎಂಬುದು ಪೂರ್ಣವಾಕ್ಯ.

ತಿಳಿಯಬಹುದೋ (ಆ ಬ್ರಹ್ಮವಿದ್ಯೆಯನ್ನು ಹೇಳಿಕೊಡಬೇಕು)' (೧-೨-೧೩) ಎಂದು ವಿಶೇಷಣವನ್ನು ಹಾಕಿರುವದರಿಂದ ಆ (ಬ್ರಹ್ಮವಿದ್ಯೆಯು) ಪರಮಾತ್ಮನ ವಿಷಯಪ್ಟೇ (ಎಂದು ನಿಶ್ಚಯವಾಗುತ್ತದೆ).[1] ಅಥವಾ (ಎಲ್ಲರಿಗಿಂತಲೂ) ಮೊದಲು ಹುಟ್ಟಿದ (ಹಿರಣ್ಯಗರ್ಭ) ಬ್ರಹ್ಮನು ಹೇಳಿದ್ದರಿಂದ ಅದು **ಬ್ರಹ್ಮವಿದ್ಯೆ** (ಎನಿಸುವದು). (ಅದು) ಎಲ್ಲಾ ವಿದ್ಯೆಗಳಿಗೂ ಪ್ರತಿಷ್ಠೆಯಾಗಿರುತ್ತದೆ. ಏಕೆಂದರೆ ಎಲ್ಲಾ ವಿದ್ಯೆಗಳೂ ಕಾಣಿಸಿಕೊಳ್ಳುವದಕ್ಕೆ ಕಾರಣವಾಗಿರುತ್ತದೆ. ಎಂದರೆ ಎಲ್ಲಾ ವಿದ್ಯೆಗಳಿಗೂ ಆಶ್ರಯವಾಗಿರುವ[2] (ಬ್ರಹ್ಮವಿದ್ಯೆಯನ್ನು ಹೇಳಿದನು) ಎಂದರ್ಥ. ಅಥವಾ ಎಲ್ಲಾ ವಿದ್ಯೆಗಳಿಗೂ ವೇದ್ಯವಾಗಿರುವ ವಸ್ತು ಇದರಿಂದಲೇ ತಿಳಿಯಬರುತ್ತದೆ[3] ಯಾದ್ದರಿಂದ (ಇದು ಸರ್ವವಿದ್ಯೆಗಳಿಗೂ ಪ್ರತಿಷ್ಠೆಯಾಗಿರುತ್ತದೆ ಎಂದಾದರೂ ವ್ಯಾಖ್ಯಾನಮಾಡಬಹುದು.) 'ಯಾವದರಿಂದ ಅಶ್ರುತವಾದದ್ದನ್ನು ಕೇಳಿದಂತಾಗುವದೋ ಅಮತವಾದದ್ದನ್ನು ಮನನಮಾಡಿದಂತೆ ಆಗುವದೋ ಅವಿಜ್ಞಾತವಾದದ್ದನ್ನು ಅರಿತಂತೆ ಆಗುವದೋ (ಅದನ್ನು ಕುರಿತು ಕೇಳಿದೆಯ ?)' (ಛಾಂ. ೬-೧-೩) ಎಂಬ ಶ್ರುತಿಯ ಪ್ರಮಾಣದಿಂದ ಹೀಗೆಂದು ತಿಳಿಯಬೇಕು. 'ಎಲ್ಲಾ ವಿದ್ಯೆಗಳಿಗೂ ಪ್ರತಿಷ್ಠೆಯಾಗಿರುತ್ತದೆ' ಎಂದೂ ವಿದ್ಯೆಯನ್ನು ಶ್ರುತಿಯು ಹೊಗಳುತ್ತದೆ.[4] (ಬ್ರಹ್ಮನು ಈ ವಿದ್ಯೆಯನ್ನು) ಹಿರಿಯಮಗನಾದ **ಅಥರ್ವನಿಗೆ** ಹೇಳಿಕೊಟ್ಟನು. ಅವನು ಜ್ಯೇಷ್ಠನೂ ಪುತ್ರನೂ ಆಗಿದ್ದನು. ಅನೇಕವಾಗಿರುವ ಬ್ರಹ್ಮನ ಸೃಷ್ಟಿಪ್ರಕಾರಗಳಲ್ಲಿ ಒಂದಾನೊಂದು ಸೃಷ್ಟಿಪ್ರಕಾರದಲ್ಲಿ ಮುಂಚೆ (ಎಲ್ಲರಿಗೂ) ಮೊದಲು ಅಥರ್ವನು ಸೃಷ್ಟನಾದನಾದ್ದರಿಂದ (ಅವನು) ಹಿರಿಯ (ಮಗನಾದನು). ಆ ಹಿರಿಯ ಮಗನಿಗೆ (ಬ್ರಹ್ಮವಿದ್ಯೆಯನ್ನು) ಹೇಳಿಕೊಟ್ಟನು, ತಿಳಿಸಿಕೊಟ್ಟನು.

---

1. ಬ್ರಹ್ಮವನ್ನು ತಿಳಿಸುವ ವಿದ್ಯೆ ಅಥವಾ ಬ್ರಹ್ಮನು ಮಗನಿಗೆ ತಿಳಿಸಿದ ವಿದ್ಯೆ ಎಂಬ ವ್ಯುತ್ಪತ್ತಿಯಿಂದ ಈ ವಿದ್ಯೆಗೆ ಬ್ರಹ್ಮವಿದ್ಯೆ ಎಂದು ಹೆಸರು ಬಂದಿದೆ.

2. ಬ್ರಹ್ಮವಿದ್ಯೆಗೆ ಉಪಕಾರಕವಾಗಿಯೇ ಎಲ್ಲ ವಿದ್ಯೆಗಳೂ ಉಂಟಾಗಿರುತ್ತವೆ. ಈ ವಿದ್ಯೆಯು ಎಲ್ಲಾ ವಿದ್ಯೆಗಳಿಗೂ ಆಸರೆಯನ್ನು ಕೊಡುತ್ತದೆ, ಏಕೆಂದರೆ ಅವು ಅರಿಯಬೇಕಾದ ಬ್ರಹ್ಮವಸ್ತುವಿನ ಒಂದೊಂದಂಶವನ್ನು ತಿಳಿಸುವವು.

3. ಬ್ರಹ್ಮವೊಂದೇ ನಿಜವಾಗಿ ವೇದ್ಯವು. ಅದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತಂತೆ ಆಗುವದು, ಏಕೆಂದರೆ ಎಲ್ಲವೂ ಬ್ರಹ್ಮದಲ್ಲಿಯೇ ಅಧ್ಯಸ್ತವಾಗಿರುತ್ತದೆ. ಅಜ್ಞಾನವು ಪೂರ್ಣವಾಗಿ ಹೋಗಬೇಕಾದರೆ ಬ್ರಹ್ಮವನ್ನೇ ಅರಿಯಬೇಕು. ಇತರ ವಿದ್ಯೆಗಳ ಜ್ಞೇಯವೆಂಬುದು ಬ್ರಹ್ಮದಲ್ಲಿ ಕಲ್ಪಿತವಾದ ಜ್ಞೇಯಾಭಾಸವಾದ್ದರಿಂದ ಇದನ್ನು ಅರಿತರೆ ಮತ್ತೇನೂ ಅರಿತುಕೊಳ್ಳಬೇಕಾದದ್ದು ಉಳಿಯುವಂತಿಲ್ಲ.

4. ಬ್ರಹ್ಮನ ಗುಣಗಳನ್ನು ಹೇಳಿ ವಿದ್ಯೆಯನ್ನು ಹೊಗಳಿತ್ತಷ್ಟೆ ; ಈಗ ವಿದ್ಯೆಯ ಸ್ವರೂಪವನ್ನು ತಿಳಿಸುವದರಿಂದಲೂ ಹೊಗಳಿದೆ ಎಂದು ಅರ್ಥ.

ಅಥರ್ವಣೇ ಯಾಂ ಪ್ರವದೇತ ಬ್ರಹ್ಮಾ-
(ಅ)ಥರ್ವಾ ತಾಂ ಪುರೋವಾಚಾಙ್ಗಿರೇ ಬ್ರಹ್ಮವಿದ್ಯಾಮ್ ।
ಸ ಭಾರದ್ವಾಜಾಯ ಸತ್ಯವಹಾಯ ಪ್ರಾಹ
ಭಾರದ್ವಾಜೋಽಙ್ಗಿರಸೇ ಪರಾವರಾಮ್ ॥೨॥

೨. ಅಥರ್ವನಿಗೆ ಬ್ರಹ್ಮನು ಯಾವ ಬ್ರಹ್ಮವಿದ್ಯೆಯನ್ನು ಹೇಳಿಕೊಟ್ಟನೋ ಅದನ್ನು ಅಥರ್ವನು ಪೂರ್ವದಲ್ಲಿ ಅಂಗಿರನಿಗೆ ಹೇಳಿಕೊಟ್ಟನು. ಆತನು ಭಾರದ್ವಾಜ ಸತ್ಯವಹನಿಗೆ ಹೇಳಿದನು. (ಆ) ಪರಾವರ(ವಿದ್ಯೆಯನ್ನು) ಭಾರದ್ವಾಜನು ಅಂಗಿರಸ್ಸಿಗೆ ಹೇಳಿದನು.

(ಭಾಷ್ಯ)

೬. ಯಾಮ್ ಏತಾಮ್ ಅಥರ್ವಣೇ ಪ್ರವದೇತ ಅವದತ್ ಬ್ರಹ್ಮವಿದ್ಯಾಂ ಬ್ರಹ್ಮಾ ತಾಮೇವ ಬ್ರಹ್ಮಣಃ ಪ್ರಾಪ್ತಾಮ್ ಅಥರ್ವಾ ಪುರಾ ಪೂರ್ವಮ್ ಉವಾಚ ಉಕ್ತವಾನ್ ಅಙ್ಗಿರೇ[1] ಅಙ್ಗೀರ್ನಾಮ್ನೇ ಬ್ರಹ್ಮವಿದ್ಯಾಮ್ । ಸ ಚ ಅಙ್ಗೀಃ ಭಾರದ್ವಾಜಾಯ ಭರದ್ವಾಜಗೋತ್ರಾಯ ಸತ್ಯವಹಾಯ ಸತ್ಯವಹನಾಮ್ನೇ ಪ್ರಾಹ ಪ್ರೋಕ್ತವಾನ್ । ಭಾರದ್ವಾಜೋಽಙ್ಗಿರಸೇ ಸ್ವಶಿಷ್ಯಾಯ ಪುತ್ರಾಯ ವಾ ಪರಾವರಾಂ ಪರಸ್ಮಾತ್ಪರಸ್ಮಾತ್ ಅವರೇಣ ಪ್ರಾಪ್ತಾ ಇತಿ ಪರಾವರಾ ಪರಾವರ ಸರ್ವವಿದ್ಯಾವಿಷಯವ್ಯಾಪ್ತೇರ್ವಾ । ತಾಂ ಪರಾವರಾಮ್ ಅಙ್ಗಿರಸೇ ಪ್ರಾಹ ಇತಿ ಅನುಷಙ್ಗಃ ॥೨॥

(ಭಾಷ್ಯಾರ್ಥ)

ಯಾವ ಈ ಬ್ರಹ್ಮವಿದ್ಯೆಯನ್ನು ಬ್ರಹ್ಮನು ಅಥರ್ವನಿಗೆ ಹೇಳಿಕೊಟ್ಟನೋ 'ಪ್ರವದೇತ' - ಅವದತ್ - ಬ್ರಹ್ಮನಿಂದ (ತನಗೆ) ದೊರೆತಿದ್ದ ಆ ಬ್ರಹ್ಮವಿದ್ಯೆಯನ್ನೇ ಅಥರ್ವನು ಪುರಾ-ಪುರ್ವದಲ್ಲಿ **ಅಂಗಿರನಿಗೆ** ಅಂಗಿರನೆಂಬ ಹೆಸರುಳ್ಳಾತನಿಗೆ ಹೇಳಿದನು, ಹೇಳಿಕೊಟ್ಟನು. ಮತ್ತು ಆ ಅಂಗಿರನು ಭಾರದ್ವಾಜನಾದ ಎಂದರೆ ಭರದ್ವಾಜಗೋತ್ರದ

1. ಅಙ್ಗಿರೇ ಎಂಬುದು ಅಙ್ಗಿರ್ ಶಬ್ದದ ಚತರ್ಥೀವಿಭಕ್ತಿ. ಅಙ್ಗಿರಸೇ ಎಂಬುದು ಅಙ್ಗಿರಸ್ ಶಬ್ದದ ಚತುರ್ಥೀವಿಭಕ್ತಿ. ವ್ಯಂಜನಾಂತಶಬ್ದಗಳಿಗೆ ದ್ವಿತೀಯಾಬಹುವಚನದಂತೆ ರೂಪವೂ ವಿಸರ್ಗಲೋಪವೂ ಆಗುವದೆಂಬ ಶ.ಶಾ. ೨-೧೭೯ ಸೂತ್ರದಂತೆ 'ಅಂಗಿರ' ಎಂದೇ ಎರಡು ಶಬ್ದಗಳೂ ಕನ್ನಡದಲ್ಲಿ ರೂಪವನ್ನು ಹೊಂದಬೇಕಾಗುತ್ತದೆ. ಸಕಾರಾಂತಶಬ್ದಕ್ಕೆ ಉ ಎಂಬ ಆಗಮವೂ ಬರಬಹುದು - ಎಂಬ ಶ.ಶಾ. ೨-೧೩೩ ಸೂತ್ರವನ್ನು ಅನುಸರಿಸಿ ಅಂಗಿರಸ್ಸು ಎಂಬ ರೂಪವನ್ನು ಎರಡನೆಯ ಶಬ್ದಕ್ಕೆ ಇಟ್ಟುಕೊಂಡಿರುತ್ತೇವೆ.

ಸತ್ಯವಹನಿಗೆ ಸತ್ಯವಹ[1] ಎಂಬ ಹೆಸರುಳ್ಳಾತನಿಗೆ ಹೇಳಿದನು, ತಿಳಿಸಿಕೊಟ್ಟನು. ಭಾರದ್ವಾಜನು ತನ್ನ ಶಿಷ್ಯನಾದ ಅಥವಾ ಮಗ[2]ನಾದ ಅಂಗಿರಸ್ಸಿಗೆ ಪರಾವರ (ವಿದ್ಯೆಯನ್ನು) - ಹಿರಿಯಹಿರಿಯವರಿಂದ ಕಿರಿಯ ಕಿರಿಯ(ವರಿಗೆ) ದೊರಕಿತಾದ್ದರಿಂದ ಅಧಕ್ಕೆ 'ಪರಾವರ' (ಎಂದು ಹೆಸರು)[3] ಅಥವಾ ಹೆಚ್ಚಿನ ಮತ್ತು ಕಡಿಮೆಯ (ಬ್ರಹ್ಮದ) ವಿದ್ಯೆಯ ವಿಷಯವನ್ನೆಲ್ಲ ಸೇರಿಸಿಕೊಂಡಿರುವದರಿಂದ (ಪರಾವರವೆಂದು ಹೆಸರು ಎಂದಾದರೂ ಹೇಳಬಹುದು).[4] ಆ ಪರಾವರವಿದ್ಯೆಯನ್ನು ಅಂಗಿರಸ್ಸಿಗೆ ಹೇಳಿದನು ಎಂದು (ಹಿಂದಿನ ಮಾತನ್ನೇ) ಸೇರಿಸಿಕೊಳ್ಳಬೇಕು.

## ಶೌನಕನ ಪ್ರಶ್ನೆ

**ಶೌನಕೋ ಹ ವೈ ಮಹಾಶಾಲೋಽಙ್ಗಿರಸಂ ವಿಧಿವದುಪಸನ್ನಃ ಪಪ್ರಚ್ಛ ।**
**ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತೀತಿ ॥೩॥**

೩. ಮಹಾಶಾಲನಾದ ಶೌನಕನು ಅಂಗಿರಸ್ಸನ್ನು ವಿಧಿವತ್ತಾಗಿ ಉಪಸತ್ತಿಯನ್ನು ಮಾಡಿದವನಾಗಿ 'ಭಗವಂತನೆ, ಯಾವದನ್ನು ಅರಿತುಕೊಂಡರೆ ಇದೆಲ್ಲವೂ ಅರಿತಂತಾಗುವದು ?' ಎಂದು ಕೇಳಿದನು.

### (ಭಾಷ್ಯ)

೧೦. ಶೌನಕಃ ಶುನಕಸ್ಯ ಅಪತ್ಯಂ ಮಹಾಶಾಲಃ ಮಹಾಗೃಹಸ್ಥಃ ಅಙ್ಗಿರಸಂ ಭಾರದ್ವಾಜಶಿಷ್ಯಮ್ ಆಚಾರ್ಯಂ ವಿಧಿವತ್ ಯಥಾಶಾಸ್ತ್ರಮ್ ಇತ್ಯೇತತ್ । ಉಪಸನ್ನಃ ಉಪಗತಃ ಸನ್ ಪಪ್ರಚ್ಛ ಪೃಷ್ಟವಾನ್ । ಶೌನಕಾಙ್ಗಿರಸೋಃ ಸಂಬನ್ಧಾದರ್ವಾಕ್ 'ವಿಧಿವತ್' ವಿಶೇಷಣಾತ್ ಉಪಸದನವಿಧೇಃ ಪೂರ್ವೇಷಾಮ್ ಅನಿಯಮಃ ಇತಿ ಗಮ್ಯತೇ । ಮರ್ಯಾದಾಕರಣಾರ್ಥಂ ಮಧ್ಯದೀಪಿಕಾನ್ಯಾಯಾರ್ಥಂ ವಾ ವಿಶೇಷಣಮ್ । ಅಸ್ಮದಾದಿಷ್ವಪಿ ಉಪಸದನವಿಧೇರಿಷ್ಟತ್ವಾತ್ । ಕಿಮಿತಿ ? ಆಹ-

1. 'ಸತ್ಯವಾಹ' ಎಂದೂ ಈ ಹೆಸರು ಕೆಲವು ಪಾಠಗಳಲ್ಲಿ ಕಾಣಬರುತ್ತದೆ.

2. ತತ್ತ್ವವನ್ನು ಶಿಷ್ಯವೃತ್ತಿಯಿಂದ ತನ್ನಲ್ಲಿಗೆ ವಿನಯದಿಂದ ಬಂದವನಿಗೆ ಅಥವಾ ಪ್ರೇಮದ ಪುತ್ರನಿಗೆ ಮಾತ್ರ ತಿಳಿಸಬೇಕು. ಶ್ವೇ. ೬-೨೨.

3. ಗುರುಶಿಷ್ಯಪರಂಪರೆಯಿಂದ ಅಥವಾ ತಂದೆಮಕ್ಕಳ ಪರಂಪರೆಯಿಂದ ಬಂದದ್ದು ; ಸುಲಭವಾಗಿ ದೊರೆಯತಕ್ಕದ್ದಲ್ಲ - ಎಂಬುದನ್ನು ಈ ವಿಶೇಷಣವು ತಿಳಿಸುವದು. ಇದರಿಂದ ಈವರೆಗೆ ಹೇಳಿದ ಗುರುಶಿಷ್ಯಪರಂಪರೆಯ ಪ್ರಯೋಜನವನ್ನೂ ತಿಳಿಸಿದಂತೆ ಆಯಿತು.

4. ಅಪರಬ್ರಹ್ಮವಿದ್ಯೆಯಾದ ಉಪಾಸನೆ, ಪರಬ್ರಹ್ಮವಿದ್ಯೆಯಾದ ಜ್ಞಾನ - ಈ ಎರಡಕ್ಕೂ ಬ್ರಹ್ಮವಿದ್ಯೆ ಎಂದೇ ಹೆಸರು ಎಂಬುದನ್ನು ಈ ವಿಶೇಷಣವು ಸೂಚಿಸುತ್ತದೆ ಎಂದು ಭಾವ.

ಕಸ್ಮಿನ್ ನು ಭಗವೋ ವಿಜ್ಞಾತೇ । ನು ಇತಿ ವಿತರ್ಕೇ । ಭಗವಃ ಹೇ ಭಗವನ್ । ಸರ್ವಂ ಯದಿದಂ ವಿಜ್ಞೇಯಂ ವಿಜ್ಞಾತಂ ವಿಶೇಷೇಣ ಜ್ಞಾತಂ ಅವಗತಂ ಭವತಿ ಇತಿ ॥

## (ಭಾಷ್ಯಾರ್ಥ)

ಶೌನಕನು ಶುನಕನೆಂಬುವನ ಮಗನು. ಮಹಾಶಾಲನು, ಮಹಾಗೃಹಸ್ಥನು. (ಅವನು)[1] ಭಾರದ್ವಾಜನ ಶಿಷ್ಯನಾದ ಅಂಗಿರಸ್ಸೆಂಬ ಆಚಾರ್ಯನನ್ನು ವಿಧಿವತ್ತಾಗಿ (ಎಂದರೆ ಶಾಸ್ತ್ರದಲ್ಲಿ ಹೇಳಿರುವಂತೆ ಎಂದರ್ಥ). ಉಪಸತ್ತಿಯನ್ನು ಮಾಡಿದವನಾಗಿ (ವಿನಯದಿಂದ) ಸಮೀಪಿಸಿದವನಾಗಿ ಕೇಳಿದನು. ಶೌನಕ, ಅಂಗಿರಸ್ಸು-ಇವರಿಬ್ಬರ ಸಂಬಂಧವಾದ ಈಚೆಗೆ 'ವಿಧಿವತ್ತಾಗಿ' ಎಂಬ ವಿಶೇಷಣವನ್ನು ಹಾಕಿರುವದರಿಂದ[2] ಉಪಸತ್ತಿಯ ವಿಧಿಯು ಹಿಂದಿನವರಿಗೆ ನಿಯಮದಿಂದ (ಬೇಕಾಗಿರಲಿಲ್ಲ)ವೆಂದು ನಿಶ್ಚಯಿಸಬೇಕಾಗುತ್ತದೆ. ಅಥವಾ ಇವನಿಂದ ವಿಧಿಯಂತೆಯೇ ನಡೆಯಿತು ಎಂದು ಗೊತ್ತಾದ ಎಲ್ಲೆಯನ್ನು ತಿಳಿಸುವದಕ್ಕೆ (ಈ ವಿಶೇಷಣವನ್ನು ಹಾಕಿದೆ ಎಂದಾದರೂ ಅರ್ಥವನ್ನು ಮಾಡಬಹುದು).[3] ನಡುವೆ ಇಟ್ಟ ದೀವಿಗೆಯಂತೆ (ಎಲ್ಲರಿಗೂ ಆಗುತ್ತದೆ) ಎಂದು ತಿಳಿಸುವದಕ್ಕಾಗಿ (ಈ) ವಿಶೇಷಣವನ್ನು ನಡುವೆ ಇಟ್ಟಿದೆ ಎಂದಾದರೂ (ಅರ್ಥಮಾಡಬಹುದು).[4] ಏಕೆಂದರೆ ನಮ್ಮಗಳಿಗೂ ಉಪಸತ್ತಿಯನ್ನು ಮಾಡಬೇಕೆಂಬ ವಿಧಿಯಿದೆ (ಎಂಬುದು) ಸಮ್ಮತವಾಗಿರುತ್ತದೆ.

(ಶೌನಕನು ಉಪಸನ್ನನಾಗಿ) ಏನು (ಕೇಳಿದನು) ? ಎಂದರೆ (ಶ್ರುತಿ) ಹೇಳುತ್ತದೆ : 'ಭಗವಂತನೆ, ಯಾವದನ್ನು ಅರಿತುಕೊಂಡರೆ - ಮೂಲದಲ್ಲಿ ನು ಎಂಬುದು (ಯಾವದನ್ನೋ) ಎಂದು ವಿತರ್ಕವನ್ನು ತಿಳಿಸುವದಕ್ಕೆ ಬಂದಿರುತ್ತದೆ. ಭಗವಃ ಎಲೈ ಭಗವಂತನೆ, (ಯಾವದನ್ನು ಅರಿತುಕೊಂಡರೆ) - (ಇಲ್ಲಿ) ಅರಿತು

---

1. ಶೌನಕನು ಮಹಾಗೃಹಸ್ಥನು ಎಂದದ್ದರಿಂದ ಜ್ಞಾನಕರ್ಮಗಳ ಸಮುಚ್ಚಯವು ಶ್ರುತಿಗೆ ವಿವಕ್ಷಿತವೆಂದು ತಿಳಿಯಬಾರದು. ಜ್ಞಾನಮಾತ್ರಕ್ಕೆ ಎಲ್ಲರಿಗೂ ಅಧಿಕಾರವೆಂದು ಅರ್ಥಮಾಡಬೇಕು. ಭಾ.ಭಾ. ೪, ೫ ನ್ನು ನೋಡಿ.

2. 'ವಿಧಿವದ್ವಿಶೇಷಣಾಭಾವಾತ್' ಎಂಬ ಕಾ॥ ವಾ॥ ಪಾಠಕ್ಕಿಂತ ನಾವು ಇಟ್ಟುಕೊಂಡಿರುವ ಆ॥ ಪಾಠವೇ ಮೇಲು.

3. ಹಿಂದಿನವರಿಗೆ ನಿಯಮವಿಲ್ಲದಿದ್ದರೂ ಸಾಗುತ್ತಿತ್ತು. ಇಲ್ಲಿಂದ ಮುಂದಕ್ಕೆ ನಿಯಮದಿಂದ ಉಪಸತ್ತಿಯನ್ನು ಮಾಡಿಯೇ ತತ್ತ್ವವನ್ನು ತಿಳಿದುಕೊಳ್ಳಬೇಕಾಯಿತು ಎಂದು ಹೇಳಿದ್ದರಿಂದ ಹಿಂದಿನವರ ಹೆಚ್ಚಿನ ಚಿತ್ತಶುದ್ಧಿಯನ್ನು ತಿಳಿಸಿದಂತೆ ಆಗುತ್ತದೆ.

4. ಎಲ್ಲರೂ ಉಪಸತ್ತಿಪೂರ್ವಕವಾಗಿಯೇ ತಿಳಿದುಕೊಂಡರು. ಉಪಸತ್ತಿಯು ಅವಶ್ಯವೆಂಬುದನ್ನು ನಡುವೆ ಒಂದು ಕಡೆಯಲ್ಲಿ ಸೂಚಿಸಿದೆ. ಇದು ಎಲ್ಲರಿಗೂ ಬೇಕೆಂಬುದೇ ಶ್ರುತಿಯ ಅಭಿಪ್ರಾಯ ಎಂದು ಭಾವ.

ಕೊಳ್ಳಬೇಕಾದದ್ದಿದೆಯಲ್ಲ, ಇದೆಲ್ಲವೂ ವಿಜ್ಞಾತವಾಗುತ್ತದೆ, (ಇಂಥದ್ದೇ ಎಂದು) ವಿಶೇಷರೂಪದಿಂದ ಅರಿತಂತೆ ಆಗುತ್ತದೆ ?' ಎಂದು ಕೇಳಿದನು.

೧೧. ಏಕಸ್ಮಿನ್ ವಿಜ್ಞಾತೇ ಸರ್ವವಿದ್ ಭವತಿ ಇತಿ ಶಿಷ್ಟಪ್ರವಾದಂ ಶ್ರುತವಾನ್ ಶೌನಕಃ ತದ್ವಿಶೇಷಂ ವಿಜ್ಞಾತುಕಾಮಃ ಸನ್ ಕಸ್ಮಿನ್ ನು ಇತಿ ವಿತರ್ಕಯನ್ ಪಪ್ರಚ್ಛ । ಅಥವಾ ಲೋಕಸಾಮಾನ್ಯದೃಷ್ಟ್ಯಾ ಜ್ಞಾತ್ವೈವ ಪಪ್ರಚ್ಛ । ಸನ್ತಿ ಹಿ ಲೋಕೇ ಸುವರ್ಣಾದಿಶಕಲಭೇದಾಃ ಸುವರ್ಣತ್ವಾದ್ಯೇಕತ್ವವಿಜ್ಞಾನೇನ ವಿಜ್ಞಾಯಮಾನಾ ಲೌಕಿಕೈಃ । ತಥಾ ಕಿಂ ನ್ವಸ್ತಿ ಸರ್ವಸ್ಯ ಜಗದ್ಭೇದಸ್ಯ ಏಕಂ ಕಾರಣಮ್ ? ಯದೇಕಸ್ಮಿನ್ ವಿಜ್ಞಾತೇ ಸರ್ವಂ ವಿಜ್ಞಾತಂ ಭವತಿ ಇತಿ ॥

## (ಭಾಷ್ಯಾರ್ಥ)

ಒಂದನ್ನು ಅರಿತರೆ ಎಲ್ಲವನ್ನೂ ಅರಿತಂತಾಗುವದು - ಎಂದು ಬಲ್ಲವರು ಆಡಿಕೊಳ್ಳುತ್ತಿದ್ದದ್ದನ್ನು ಕೇಳಿದ್ದ ಶೌನಕನು ಅದು ಇಂಥದ್ದೆಂದು ತಿಳಿದುಕೊಳ್ಳುವ ಇಚ್ಛೆಯಿಂದ ಯಾವದನ್ನು ಅರಿತರೆ ? - ಎಂದು ವಿತರ್ಕಮಾಡುತ್ತಾ ಕೇಳಿದನು. ಅಥವಾ ಸಾಮಾನ್ಯಜನರ ದೃಷ್ಟಿಯಿಂದ (ಇದನ್ನು) ತಿಳಿದೇ ಕೇಳಿದನು. (ಹೇಗೆಂದರೆ) ಲೋಕದಲ್ಲಿ ಚಿನ್ನವೇ ಮುಂತಾದವುಗಳ ಬೇರೆಬೇರೆಯ ಚೂರುಗಳನ್ನು ಸುವರ್ಣತ್ವವೇ ಮುಂತಾದ ರೂಪದ ಏಕತ್ವದ ಜ್ಞಾನದಿಂದ ಜನರು ಅರಿತುಕೊಳ್ಳುವದುಂಟಷ್ಟೆ ? ಅದರಂತೆಯೇ ಜಗತ್ತಿನ ಭೇದಕ್ಕೆಲ್ಲ ಕಾರಣವಾಗಿ ತನ್ನೊಂದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತುಕೊಂಡಂತೆ ಆಗುವ ಯಾವದಾದರೊಂದು ಇದೆಯೇನು ?[1] - ಎಂದು (ಕೇಳಿದನು.)

## (ಭಾಷ್ಯ)

೧೨. ನನು ಅವಿದಿತೇ ಹಿ 'ಕಸ್ಮಿನ್ ?' ಇತಿ ಪ್ರಶ್ನೋಽನುಪಪನ್ನಃ । 'ಕಿಮಸ್ತಿ ತತ್' ಇತಿ ತದಾ ಪ್ರಶ್ನೋ ಯುಕ್ತಃ । ಸಿದ್ಧೇ ಹಿ ಅಸ್ತಿತ್ವೇ 'ಕಸ್ಮಿನ್' ಇತಿ ಸ್ಯಾತ್ । ಯಥಾ ''ಕಸ್ಮಿನ್ ನಿಧೇಯಮ್ ?'' ಇತಿ । ನ । ಅಕ್ಷರಬಾಹುಲ್ಯಾತ್ ಆಯಾಸಭೀರುತ್ವಾತ್ ಪ್ರಶ್ನಃ ಸಂಭವತ್ಯೇವ ''ಕಸ್ಮಿನ್[2] ವಿಜ್ಞಾತೇ ಸರ್ವವಿತ್ ಸ್ಯಾತ್ ?'' ಇತಿ ॥

1. ಸುವರ್ಣದ ವಿಕಾರಗಳಲ್ಲಿ ಸುವರ್ಣತ್ವವಿರುವಂತೆ ಜಗತ್ತಿನ ಭೇದಗಳಲ್ಲೆಲ್ಲ ಹೊಂದಿಕೊಂಡು ಯಾವದಾದರೊಂದು ಸಾಮಾನ್ಯವಿರುವದೆ ? ಎಂದು ಕೇಳಿದನು ಎಂದು ಭಾವ.

2. 'ಕಿಂ ತ್ವೇಕಸ್ಮಿನ್' ಎಂಬ ಆ॥ ಪಾಠವಾಗಲಿ 'ಕಿಂ ನ್ವಸ್ತಿ ತತ್ ಯಸ್ಮಿನ್' ಎಂಬ ವಾ॥ ಕಾ॥ ಪಾಠಗಳಾಗಲಿ ಪ್ರಕೃತಕ್ಕೆ ಹೊಂದುವದೇ ಇಲ್ಲ ; ಅಕ್ಷರಬಾಹುಲ್ಯಕ್ಕೆ ಉದಾಹರಣೆಯನ್ನು

(ಭಾಷ್ಯಾರ್ಥ)

(ಆಕ್ಷೇಪ :-) (ವಸ್ತು ಇದೆ ಎಂಬುದೇ) ಗೊತ್ತಿಲ್ಲದಿದ್ದರೆ 'ಯಾವದನ್ನು (ಅರಿತರೆ)' ಎಂದು ಕೇಳುವದು ಸರಿಯಾಗುವದಿಲ್ಲವಲ್ಲ ! ಆ ಸಂದರ್ಭದಲ್ಲಿ 'ಅದು ಇದೆಯೇ ?' ಎಂದು ಕೇಳುವದು ಯುಕ್ತವಾಗುತ್ತದೆ. (ವಸ್ತು) ಇದೆ ಎಂಬುದು ಗೊತ್ತಾಗಿದ್ದರೇ ಅಲ್ಲವೆ 'ಯಾವದನ್ನು (ಅರಿತರೆ)' ಎಂಬ ಪ್ರಶ್ನೆ ಸರಿಯಾಗುವದು ? ಉದಾಹರಣೆಗೆ 'ಯಾವದರಲ್ಲಿಡಬೇಕು ?' - (ಎಂಬ ಪ್ರಶ್ನೆ ಇದೆ ಎಂದು ಗೊತ್ತಾಗಿರುವ ವಸ್ತುವಿಗೆ ಹೊಂದುತ್ತದೆ).

(ಸಮಾಧಾನ :-) ಹಾಗಲ್ಲ, ಹೆಚ್ಚು ಮಾತುಗಳನ್ನುಪಯೋಗಿಸಿದರೆ ಆಯಾಸವಾಗುವದರಿಂದ "ಯಾವದನ್ನು ಅರಿತರೆ ಎಲ್ಲವನ್ನೂ ಅರಿತವನಾಗುವನು ?" ಎಂಬ ಪ್ರಶ್ನೆಯೂ ಆಗಬಹುದಾಗಿದೆ.

## ಅಂಗಿರಸ್ಸಿನ ಉತ್ತರ : ಪರಾಪರವಿದ್ಯೆಗಳು

**ತಸ್ಮೈ ಸ ಹೋವಾಚ । ದ್ವೇ ವಿದ್ಯೇ ವೇದಿತವ್ಯೇ ಇತಿ ಹ ಸ್ಮ ಯದ್**
**ಬ್ರಹ್ಮವಿದೋ ವದನ್ತಿ ಪರಾ ಚೈವಾಪರಾ ಚ ॥೪॥**

೪. ಅವನಿಗೆ ಆತನು ಹೇಳಿದನಂತೆ : ಎರಡು ವಿದ್ಯೆಗಳು ತಿಳಿಯತಕ್ಕವು. ಹೀಗೆಂದು ಬ್ರಹ್ಮವಿದರು ಹೇಳಿರುತ್ತಾರಲ್ಲವೆ ? ಪರವಿದ್ಯೆ ಮತ್ತು ಅಪರವಿದ್ಯೆ (ಇವೇ ಆ ವಿದ್ಯೆಗಳು).

(ಭಾಷ್ಯ)

೧೩. ತಸ್ಮೈ ಶೌನಕಾಯ ಸಃ[1] ಅಙ್ಗಿರಾಃ ಹ ಕಿಲ ಉವಾಚ । ಕಿಮಿತಿ ? ಉಚ್ಯತೇ । ದ್ವೇ ವಿದ್ಯೇ ವೇದಿತವ್ಯೇ ಜ್ಞಾತವ್ಯೇ[2] ಇತಿ । ಏವಂ ಹ ಸ್ಮ ಕಿಲ ಯದ್ ಬ್ರಹ್ಮವಿದಃ ವೇದಾರ್ಥಾಭಿಜ್ಞಾಃ ಪರಮಾರ್ಥದರ್ಶಿನಃ ವದನ್ತಿ । ಕೇ ತೇ ಇತಿ ? ಆಹ । ಪರಾ ಚ ಪರಮಾತ್ಮವಿದ್ಯಾ । ಅಪರಾ ಚ ಧರ್ಮಾಧರ್ಮಸಾಧನತತ್ಫಲವಿಷಯಾ ॥

---

ಹೇಳಿದೆ ಎಂದು ಹೇಗೋ ಹೊಂದಿಸಿಕೊಳ್ಳಬೇಕಾಗುತ್ತದೆ. "ಕಸ್ಮಿನ್ನೇಕಸ್ಮಿನ್" ಎಂಬ ಗೋ॥ ಪಾಠದಲ್ಲಿ 'ಏಕಸ್ಮಿನ್' ಎಂಬುದು ಅರ್ಥಿಕ.

1. ಸಃ ಎಂಬ ಮಾತು ಆ॥ ಕಾ॥ ಪಾಠಗಳಲ್ಲಿ ಬಿಟ್ಟುಹೋಗಿದೆ.

2. ಜ್ಞಾತವ್ಯೇ ಎಂಬ ಮಾತು ವಾ॥ ಪಾಠದಲ್ಲಿ ಮಾತ್ರ ಇದೆ. ಅದಿಲ್ಲದಿದ್ದರೂ ಸಾಗುತ್ತದೆ.

(ಭಾಷ್ಯಾರ್ಥ)

ಆ ಶೌನಕನಿಗೆ ಆತನು (ಆ) ಅಂಗಿರಸ್ಸು (ಹೀಗೆಂದು) ಹೇಳಿದನಂತೆ. ಏನೆಂದು ? ಎಂದರೆ (ಶ್ರುತಿ) ಹೇಳುತ್ತದೆ. ಎರಡು ವಿದ್ಯೆಗಳು ತಿಳಿಯತಕ್ಕವು, ಅರಿತುಕೊಳ್ಳತಕ್ಕವು. ಹೀಗೆಂದು ಬ್ರಹ್ಮವಿದರು, ವೇದಾರ್ಥವನ್ನು ಬಲ್ಲವರು ಪರಮಾರ್ಥವನ್ನು ಕಂಡುಕೊಂಡಿರುವವರು ಹೇಳಿರುತ್ತಾರಲ್ಲವೆ ? ಅವೆರಡು ಯಾವವು ? ಎಂದರೆ ಹೇಳುತ್ತಾನೆ : ಪರವಿದ್ಯೆ ಎಂದರೆ ಪರಮಾತ್ಮವಿದ್ಯೆ ; ಮತ್ತು ಅಪರವಿದ್ಯೆ ಎಂದರೆ ಧರ್ಮ, ಅಧರ್ಮ ಎಂಬ ಸಾಧನಗಳು ಮತ್ತು (ಅವುಗಳ) ಫಲ - ಇವುಗಳ ವಿಷಯವಾದ (ವಿದ್ಯೆ).

(ಭಾಷ್ಯ)

೧೪. ನನು 'ಕಸ್ಮಿನ್ ವಿದಿತೇ ಸರ್ವವಿದ್ ಭವತಿ ?' ಇತಿ ಶೌನಕೇನ ಪೃಷ್ಟಮ್ । ತಸ್ಮಿನ್ ವಕ್ತವ್ಯೇ ಅಪೃಷ್ಟಮ್ ಆಹ ಅಙ್ಗಿರಾಃ 'ದ್ವೇ ವಿದ್ಯೇ' ಇತ್ಯಾದಿನಾ । ನೈಷ ದೋಷಃ । ಕ್ರಮಾಪೇಕ್ಷತ್ವಾತ್ ಪ್ರತಿವಚನಸ್ಯ । ಅಪರಾ ಹಿ ವಿದ್ಯಾ ಅವಿದ್ಯಾ । ಸಾ ನಿರಾಕರ್ತವ್ಯಾ । ತದ್ವಿಷಯೇ ಹಿ ವಿದಿತೇ ನ ಕಿಂಚಿತ್ ತತ್ತ್ವತೋ ವಿದಿತಂ ಸ್ಯಾದಿತಿ । ನಿರಾಕೃತ್ಯ ಹಿ ಪೂರ್ವಪಕ್ಷಂ ಪಶ್ಚಾತ್ ಸಿದ್ಧಾನ್ತೋ ವಕ್ತವ್ಯೋ ಭವತಿ ಇತಿ ನ್ಯಾಯಾತ್ ॥

(ಭಾಷ್ಯಾರ್ಥ)

(ಆಕ್ಷೇಪ :-) 'ಯಾವದನ್ನು ಅರಿತರೆ ಎಲ್ಲವನ್ನೂ ಬಲ್ಲವನಾಗುವನು ?' ಎಂದು ಶೌನಕನು ಕೇಳಿರುತ್ತಾನೆ. ಅದನ್ನು ಹೇಳಬೇಕಾಗಿರುವಲ್ಲಿ ಕೇಳದೆ ಇದ್ದದ್ದನ್ನು ಅಂಗಿರಸ್ಸು 'ಎರಡು ವಿದ್ಯೆಗಳು (ತಿಳಿಯತಕ್ಕವು)' ಎಂದು ಮುಂತಾದ (ವಾಕ್ಯದಿಂದ) ಹೇಳಿರುತ್ತಾನಲ್ಲ !

(ಪರಿಹಾರ :-) ಇದೇನೂ ತಪ್ಪಲ್ಲ. ಏಕೆಂದರೆ ಉತ್ತರಕ್ಕೆ (ಒಂದು) ಕ್ರಮವು ಬೇಕಾಗಿರುತ್ತದೆ. ಹೇಗೆಂದರೆ, ಅಪರವಿದ್ಯೆಯು (ನಿಜವಾಗಿ) ಅವಿದ್ಯೆಯೇ, (ಆದ್ದರಿಂದ) ಅದನ್ನು ನಿರಾಕರಿಸಬೇಕಾಗಿದೆ. ಏಕೆಂದರೆ ಅದರ ವಿಷಯವನ್ನು ಅರಿತರೆ ಏನನ್ನೂ ನಿಜವಾಗಿ[1] ಅರಿತಂತಾಗುವದಿಲ್ಲ. ಪೂರ್ವಪಕ್ಷವನ್ನು ನಿರಾಕರಿಸಿದ ಮೇಲೆಯೇ ಸಿದ್ಧಾಂತವನ್ನು ಹೇಳಬೇಕು ಎಂಬುದು ನ್ಯಾಯವಾಗಿದೆ.

---

1. ಅಪರವಿದ್ಯೆಯಿಂದ ಕ್ರಿಯೆ, ಕಾರಕ, ಫಲ - ಇವುಗಳ ವಿಂಗಡವು ತಿಳಿಯ ಬರುತ್ತದೆಯಾದರೂ ಈ ವಿಂಗಡವು ಪರಮಾರ್ಥವಲ್ಲ ; ಆದ್ದರಿಂದ ನಿಜವಾದ ಜ್ಞೇಯ ವಲ್ಲ. ಪರವಿದ್ಯೆಯ ದೃಷ್ಟಿಯಿಂದ ಅಪರವಿದ್ಯೆಯು ವಿದ್ಯಾಭಾಸ, ಅದರ ಜ್ಞೇಯವೂ ಜ್ಞೇಯಾಭಾಸ.

## ಅಪರವಿದ್ಯೆ

**ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವವೇದಃ**
**ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛನ್ದೋ ಜ್ಯೋತಿಷಮಿತಿ ॥೫॥**

೫. ಇವುಗಳಲ್ಲಿ ಅಪರ(ವಿದ್ಯೆ ಯಾವದೆಂದರೆ) ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷೆ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ (ಇವು).

### (ಭಾಷ್ಯ)

೧೫. ತತ್ರ ಕಾ ಅಪರಾ ಇತಿ ? ಉಚ್ಯತೇ । ಋಗ್ವೇದಃ ಯಜುರ್ವೇದಃ ಸಾಮವೇದಃ ಅಥರ್ವವೇದಃ ಇತಿ ಏತೇ ಚತ್ವಾರೋ ವೇದಾಃ । ಶಿಕ್ಷಾ, ಕಲ್ಪಃ, ವ್ಯಾಕರಣಮ್, ನಿರುಕ್ತಮ್, ಛನ್ದಃ, ಜ್ಯೋತಿಷಮ್ ಇತಿ ಅಙ್ಗಾನಿ ಷಟ್ । ಏಷಾ ಅಪರಾ ವಿದ್ಯಾ ಉಕ್ತಾ[1] ॥

### (ಭಾಷ್ಯಾರ್ಥ)

ಇವುಗಳಲ್ಲಿ ಅಪರ(ವಿದ್ಯೆ) ಎಂದರೆ ಯಾವದು ? ಎಂದರೆ ಹೇಳುತ್ತಾನೆ ; ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ - ಎಂಬಿವು **ನಾಲ್ಕು ವೇದಗಳು** ; ಶಿಕ್ಷೆ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ ಎಂಬಿ(ವು) ಆರು (ವೇದದ) **ಅಂಗಗಳು**. ಈ ಹೇಳಿದ್ದು ಅಪರವಿದ್ಯೆ.

## ಪರವಿದ್ಯೆ

**ಅಥ ಪರಾ ಯಯಾ ತದಕ್ಷರಮಧಿಗಮ್ಯತೇ ॥೫॥**
**ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣ-**
**ಮಚಕ್ಷುಃಶ್ರೋತ್ರಂ ತದಪಾಣಿಪಾದಮ್ ।**
**ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ**
**ತದವ್ಯಯಂ ಯದ್ ಭೂತಯೋನಿಂ ಪರಿಪಶ್ಯನ್ತಿ ಧೀರಾಃ ॥೬॥**

೫-೬. ಇನ್ನು ಪರ(ವಿದ್ಯೆ) : ಯಾವದರಿಂದ ಆ ಅಕ್ಷರವು ಪ್ರಾಪ್ತವಾಗುತ್ತದೆಯೋ (ಅದು). ಯಾವ ಅದು ಅದೃಶ್ಯವಾದದ್ದು, ಅಗ್ರಾಹ್ಯವಾದದ್ದು, ಅಗೋತ್ರವಾದದ್ದು, ಅವರ್ಣವಾದದ್ದು, ಅಚಕ್ಷುಃಶ್ರೋತ್ರವಾದದ್ದು ; ಅದು ಅಪಾಣಿ

1. ವಾ॥ ಪಾಠ.

ಪಾದವಾದದ್ದು, ನಿತ್ಯವಾದದ್ದು, ವಿಭುವಾದದ್ದು, ಸರ್ವಗತವಾದದ್ದು, ಸುಸೂಕ್ಷ್ಮ ವಾದದ್ದು ; ಅದು ಅವ್ಯಯವಾದದ್ದು. ಯಾವ (ಈ) ಭೂತಯೋನಿಯನ್ನು ಧೀರರು ಎಲ್ಲೆಲ್ಲಿಯೂ ಕಾಣುತ್ತಾರೆ.

(ಭಾಷ್ಯ)

೧೬. ಅಥ ಇದಾನೀಮ್ ಇಯಂ ಪರಾ ವಿದ್ಯಾ ಉಚ್ಯತೇ । ಯಯಾ ತತ್ ವಕ್ಷ್ಯಮಾಣವಿಶೇಷಣಮ್ ಅಕ್ಷರಮ್ ಅಧಿಗಮ್ಯತೇ ಪ್ರಾಪ್ಯತೇ । ಅಧಿಪೂರ್ವಸ್ಯ ಗಮೇಃ ಪ್ರಾಯಶಃ ಪ್ರಾಪ್ತ್ಯರ್ಥತ್ವಾತ್ । ನ ಚ ಪರಪ್ರಾಪ್ತೇಃ ಅವಗಮಾರ್ಥಸ್ಯ ಭೇದೋಽಸ್ತಿ । ಅವಿದ್ಯಾಯಾ ಅಪಾಯ ಏವ ಹಿ ಪರಪ್ರಾಪ್ತಿಃ, ನಾರ್ಥಾನ್ತರಮ್ ॥

(ಭಾಷ್ಯಾರ್ಥ)

ಇನ್ನು ಈಗ ಈ ಪರವಿದ್ಯೆಯನ್ನು ಹೇಳಲಾಗುತ್ತದೆ : ಯಾವ ಅದರಿಂದ ಮುಂದಿನ (ಮಂತ್ರದಲ್ಲಿ) ಹೇಳುವ ವಿಶೇಷಣಗಳುಳ್ಳ ಆ ಅಕ್ಷರವು (ಅಧಿಗಮ್ಯತೇ) ಪ್ರಾಪ್ತವಾಗುತ್ತದೆ (ಎಂದರ್ಥ. ಏಕೆಂದರೆ) ಅಧಿ ಎಂಬ ಉಪಸರ್ಗದೊಡನೆ ಗಮ್ ಧಾತು ಸೇರಿದರೆ (ಅದಕ್ಕೆ) ಬಲುಮಟ್ಟಿಗೆ ಪಡೆಯುವದೆಂಬುದೇ ಅರ್ಥವಾಗುತ್ತದೆ. **ಪರ(ಬ್ರಹ್ಮ)ದ ಪ್ರಾಪ್ತಿಗಿಂತ ಅದನ್ನು ಅರಿಯುವದೆಂಬ ಅರ್ಥವು ಬೇರೆಯಾಗಿರುವದೂ ಇಲ್ಲ. ಏಕೆಂದರೆ ಪರ(ಬ್ರಹ್ಮವನ್ನು) ಪಡೆಯುವದೆಂದರೆ ಅವಿದ್ಯೆಯು ತೊಲಗುವದೇ ಹೊರತು ಮತ್ತೆ ಬೇರೆ ಒಂದು ಪದಾರ್ಥವಲ್ಲ.**[1]

(ಭಾಷ್ಯ)

೧೭. ನನು ಋಗ್ವೇದಾದಿಬಾಹ್ಯಾ ತರ್ಹಿ ಸಾ ಕಥಂ ಪರಾ ವಿದ್ಯಾ ಸ್ಯಾತ್, ಮೋಕ್ಷಸಾಧನಂ ಚ ? "ಯಾ ವೇದಬಾಹ್ಯಾಃ ಸ್ಮೃತಯಃ" (ಮನು. ೧೨-೯೫)[2] ಇತಿ ಹಿ ಸ್ಮರನ್ತಿ । ಕುದೃಷ್ಟಿತ್ವಾತ್ ನಿಷ್ಫಲತ್ವಾತ್ ಅನಾದೇಯಾ ಸ್ಯಾತ್ । ಉಪನಿಷದಾಂ ಚ ಋಗ್ವೇದಾದಿಬಾಹ್ಯತ್ವಂ ಸ್ಯಾತ್ । ಋಗ್ವೇದಾದಿತ್ವೇ ತು ಪೃಥಕ್ಕರಣಂ ಅನರ್ಥಕಮ್ । ಅಥ ಕಥಂ ಪರಾ ಇತಿ ? ನ । ವೇದ್ಯವಿಷಯವಿಜ್ಞಾನಸ್ಯ ವಿವಕ್ಷಿತತ್ವಾತ್ । ಉಪನಿಷದ್ವೇದ್ಯಾಕ್ಷರವಿಷಯಂ ಹಿ ವಿಜ್ಞಾನಮ್ ಇಹ ಪರಾ ವಿದ್ಯಾ ಇತಿ

---

1. ತೈ. ಭಾ. ೨-೧ 'ಬ್ರಹ್ಮವಿದಾಪ್ನೋತಿ ಪರಮ್' ಎಂಬಲ್ಲಿ 'ಆಪ್ನೋತಿ' ಎಂಬುದರ ವ್ಯಾಖ್ಯಾನವನ್ನು ನೋಡಿರಿ.

2. **"ಯಾ ವೇದಬಾಹ್ಯಾಃ ಸ್ಮೃತಯೋ ಯಾಶ್ಚ ಕಾಶ್ಚ ಕುದೃಷ್ಟಯಃ ।**
**ಸರ್ವಾಸ್ತಾ ನಿಷ್ಫಲಾಃ ಪ್ರೇತ್ಯ ತಮೋನಿಷ್ಠಾ ಹಿ ತಾಃ ಸ್ಮೃತಾಃ ॥"**

ಎಂಬುದು ಪೂರ್ಣವಾಕ್ಯ. ಕೆಲವು ಪುಸ್ತಕಗಳಲ್ಲಿ 'ಕುದೃಷ್ಟಯಃ' ಎಂಬವರೆಗೂ ಗೋ॥ ಪಾಠದಲ್ಲಿ ಪೂರ್ತಿಯಾಗಿಯೂ ಶ್ಲೋಕವನ್ನು ಕೊಟ್ಟಿರುತ್ತದೆ. ಇಲ್ಲಿರುವಷ್ಟೇ ಇದ್ದರೂ ಸಾಕು.

ಪ್ರಾಧಾನ್ಯೇನ ವಿವಕ್ಷಿತಮ್, ನೋಪನಿಷಚ್ಛಬ್ದರಾಶಿಃ । ವೇದಶಬ್ದೇನ ತು ಸರ್ವತ್ರ ಶಬ್ದರಾಶಿರ್ವಿವಕ್ಷಿತಃ । ಶಬ್ದರಾಶ್ಯಧಿಗಮೇಽಪಿ ಯತ್ನಾನ್ತರಮನ್ತರೇಣ ಗುರ್ವಭಿಗಮನಾದಿಲಕ್ಷಣಂ ವೈರಾಗ್ಯಂ ಚ ನಾಕ್ಷರಾಧಿಗಮಃ ಸಂಭವತಿ ಇತಿ ಪೃಥಕ್ಕರಣಂ ಬ್ರಹ್ಮವಿದ್ಯಾಯಾಃ "ಪರಾ ವಿದ್ಯಾ" ಇತಿ ಕಥನಂ ಚ[1] ಇತಿ ॥

## (ಭಾಷ್ಯಾರ್ಥ)

(ಆಕ್ಷೇಪ) :- ಹಾಗಾದರೆ ಋಗ್ವೇದವೇ ಮುಂತಾದದ್ದಕ್ಕೆ ಹೊರಚ್ಚಾಗಿರುವ ಆ (ವಿದ್ಯೆಯು) ಹೇಗೆತಾನೆ ಪರವಿದ್ಯೆಯಾದೀತು, (ಹೇಗೆತಾನೆ) ಮೋಕ್ಷಸಾಧನ (ವಾದೀತು) ? "ಯಾವ ಸ್ಮೃತಿಗಳು ವೇದಬಾಹ್ಯಗಳಾಗಿರುವವೋ (ಅವುಗಳೆಲ್ಲ ನಿಷ್ಫಲ)" (ಮನು. ೧೨-೯೫) ಎಂದಲ್ಲವೆ ? **ಸ್ಮೃತಿಯಿದೆ** ? (ಇದು) ಕುದೃಷ್ಟಿಯಾದ್ದರಿಂದ ನಿಷ್ಫಲವೆಂಬ ಕಾರಣದಿಂದ ಸ್ವೀಕರಿಸಬಾರದ್ದಾಗುವದಲ್ಲ ! ಮತ್ತು ಉಪನಿಷತ್ತುಗಳೂ ಋಗ್ವೇದವೇ ಮುಂತಾದದ್ದಕ್ಕಿಂತ ಹೊರಚ್ಚೆಂದಾಗುವದು. (ಇವು) ಋಗ್ವೇದವೇ ಮುಂತಾದ(ದ್ದರಲ್ಲಿಯೇ ಸೇರಿದ್ದರೋ, ಇವನ್ನು ಪರವಿದ್ಯೆ ಎಂದು) ಬೇರೆಮಾಡಿದ್ದು ವ್ಯರ್ಥವಾಗುವದು. ಹೀಗಿರುವಲ್ಲಿ ಪರ (ವಿದ್ಯೆಯೆಂಬುದಾದರೂ) ಹೇಗೆ ?

(ಪರಿಹಾರ) :- ಹಾಗಲ್ಲ. ಏಕೆಂದರೆ ವೇದ್ಯವಾದದ್ದರ ವಿಷಯವಾದ ಜ್ಞಾನವನ್ನೇ (ಇಲ್ಲಿ ಪರವಿದ್ಯೆಯೆಂದು) ಹೇಳಹೊರಟಿರುತ್ತದೆ. ಉಪನಿಷತ್ತುಗಳಿಂದ ತಿಳಿಯಬೇಕಾಗಿರುವ ಅಕ್ಷರವಿಷಯವಾದ ವಿಜ್ಞಾನವನ್ನೇ ಇಲ್ಲಿ ಮುಖ್ಯವಾಗಿ ಪರವಿದ್ಯೆಯೆಂದು ಹೇಳುವದಕ್ಕೆ ಹೊರಟಿರುತ್ತದೆಯೇ ಹೊರತು ಉಪನಿಷತ್ತೆಂಬ ಶಬ್ದರಾಶಿಯನ್ನು (ಹೇಳ)ಹೊರಟಿಲ್ಲ. ವೇದ ಎಂಬ ಶಬ್ದದಿಂದ ಮಾತ್ರ ಎಲ್ಲೆಲ್ಲಿಯೂ ಶಬ್ದರಾಶಿಯೇ ವಿವಕ್ಷಿತವಾಗಿರುತ್ತದೆ. ಶಬ್ದರಾಶಿಯನ್ನು ಸಂಪಾದಿಸಿಕೊಂಡರೂ ಗುರುವಿನ ಬಳಿಸಂದು (ಸೇವಿಸುವದು) ಮುಂತಾದ ಯತ್ನಾಂತರವೂ ವೈರಾಗ್ಯವೂ ಇಲ್ಲದೆ ಅಕ್ಷರದ ಪ್ರಾಪ್ತಿಯಾಗುವದಿಲ್ಲವೆಂಬ ಕಾರಣದಿಂದ **ಬ್ರಹ್ಮವಿದ್ಯೆಯನ್ನು** (ಬೇರೆಮಾಡಿ) ಹೇಳಿರುವದೂ (ಅದನ್ನು) ಪರವಿದ್ಯೆಯೆಂದು ಕರೆದಿರುವದೂ (ಸರಿಯಾಗಿರುತ್ತದೆ).

## ಪರವಿದ್ಯೆಯ ವಿಶೇಷ

### (ಭಾಷ್ಯ)

೧೮. ಯಥಾ ವಿಧಿವಿಷಯೇ ಕರ್ತ್ರಾದ್ಯನೇಕಕಾರಕೋಪಸಂಹಾರದ್ವಾರೇಣ

---

1. ವಾ॥ ಪಾಠದಲ್ಲಿ "ಬ್ರಹ್ಮವಿದ್ಯಾಯಾ ಅಥ ಪರಾ ವಿದ್ಯೇತಿ" ಎಂದಿದೆ. ಈ ಆ॥ ಪಾಠವೇ ಮೇಲು.

ವಾಕ್ಯಾರ್ಥಜ್ಞಾನಕಾಲಾದನ್ಯತ್ರ ಅನುಷ್ಠೇಯೋಽರ್ಥೋಽಸ್ತಿ ಅಗ್ನಿಹೋತ್ರಾದಿಲಕ್ಷಣಃ ನ ತಥಾ ಇಹ ಪರವಿದ್ಯಾವಿಷಯೇ । ವಾಕ್ಯಾರ್ಥಜ್ಞಾನಸಮಕಾಲೇ ಏವ ತು ಪರ್ಯವಸಿತೋ ಭವತಿ । ಕೇವಲಶಬ್ದಪ್ರಕಾಶಿತಾರ್ಥಜ್ಞಾನ ಮಾತ್ರನಿಷ್ಠಾವ್ಯತಿರಿಕ್ತಾಭಾವಾತ್ । ತಸ್ಮಾತ್ ಇಹ ಪರಾಂ ವಿದ್ಯಾಂ ಸವಿಶೇಷಣೇನ ಅಕ್ಷರೇಣ ವಿಶಿನಷ್ಟಿ - ''ಯತ್ತದದ್ರೇಶ್ಯಮ್'' ಇತ್ಯಾದಿನಾ ॥

## (ಭಾಷ್ಯಾರ್ಥ)

ವಿಧಿವಿಷಯದಲ್ಲಿ ಹೇಗೆ ಕರ್ತೃವೇ ಮುಂತಾದ ಅನೇಕ ಕಾರಕಗಳನ್ನು ಕೂಡಿ ಹಾಕುವದರ ಮೂಲಕವಾಗಿ ವಾಕ್ಯಾರ್ಥವನ್ನು ತಿಳಿದುಕೊಂಡ ಕಾಲವಾದ ಬಳಿಕ ಬೇರೆಯ ಕಾಲದಲ್ಲಿ ಅಗ್ನಿಹೋತ್ರವೇ ಮುಂತಾದ ಮಾಡತಕ್ಕ ವಿಷಯವು ಇದ್ದುಕೊಂಡಿರುವದೋ **ಈ ಪರವಿದ್ಯಾವಿಷಯದಲ್ಲಿ ಹಾಗಲ್ಲ, ವಾಕ್ಯದ ಅರ್ಥವನ್ನು ಅರಿತುಕೊಂಡ ಸಮಕಾಲದಲ್ಲಿಯೇ (ಎಲ್ಲವೂ) ಮುಗಿದುಹೋಗುತ್ತದೆ ; ಏಕೆಂದರೆ (ಇಲ್ಲಿ) ಬರಿಯ ಶಬ್ದವು ತೋರಿಸಿಕೊಟ್ಟ ಪದಾರ್ಥದ ಜ್ಞಾನವೊಂದರಲ್ಲಿಯೇ ನೆಲೆನಿಲ್ಲುವದನ್ನು ಬಿಟ್ಟರೆ ಮತ್ತೇನೂ (ಮಾಡಬೇಕಾದದ್ದು ಇರುವದಿಲ್ಲ)**. ಆದ್ದರಿಂದ ಇಲ್ಲಿ ವಿಶೇಷಣಗಳಿಂದೊಡಗೂಡಿದ ಅಕ್ಷರದಿಂದ ಪರವಿದ್ಯೆಯನ್ನು ವಿಶೇಷವಾಗಿ (ಬಿಡಿಸಿ ಶ್ರುತಿಯು) 'ಯತ್ತದದ್ರೇಶ್ಯಮ್' ಎಂದು ಮುಂತಾಗಿ ಹೇಳುತ್ತದೆ.

## (ಭಾಷ್ಯ)

೧೯. ವಕ್ಷ್ಯಮಾಣಂ ಬುದ್ಧ್ಯಾ ಸಂಹೃತ್ಯ ಸಿದ್ಧವತ್ ಪರಾಮೃಶ್ಯತೇ - 'ಯತ್ತದ್' ಇತಿ । ಅದ್ರೇಶ್ಯಮ್ ಅದೃಶ್ಯಮ್ । ಸರ್ವೇಷಾಂ ಬುದ್ಧೀನ್ದ್ರಿಯಾಣಾಮ್ ಅಗಮ್ಯಮ್ ಇತ್ಯೇತತ್ । ದೃಶೇರ್ಬಹಿಃಪ್ರವೃತ್ತಸ್ಯ ಪಞ್ಚೇನ್ದ್ರಿಯದ್ವಾರಕತ್ವಾತ್ । 'ಅಗ್ರಾಹ್ಯಂ' ಕರ್ಮೇನ್ದ್ರಿಯಾವಿಷಯಮಿತ್ಯೇತತ್ । 'ಅಗೋತ್ರಮ್' ಗೋತ್ರಮ್ ಅನ್ವಯಃ ಮೂಲಮ್ ಇತ್ಯನರ್ಥಾನ್ತರಮ್ । ಅಗೋತ್ರಮ್ ಅನನ್ವಯಮ್ ಇತ್ಯರ್ಥಃ । ನ ಹಿ ತಸ್ಯ ಮೂಲಮ್ ಅಸ್ತಿ ಯೇನ ಅನ್ವಿತಂ ಸ್ಯಾತ್ । ವರ್ಣ್ಯನ್ತೇ ಇತಿ ವರ್ಣಾಃ ದ್ರವ್ಯಧರ್ಮಾಃ ಸ್ಥೂಲತ್ವಾದಯಃ । ಶುಕ್ಲತ್ವಾದಯೋ ವಾ । ಅವಿದ್ಯಮಾನಾಃ ವರ್ಣಾಃ ಯಸ್ಯ ತತ್ ಅವರ್ಣಮ್ ಅಕ್ಷರಮ್ । ಅಚಕ್ಷುಃಶ್ರೋತ್ರಮ್ । ಚಕ್ಷುಶ್ಚ ಶ್ರೋತ್ರಂ ಚ ನಾಮರೂಪವಿಷಯೇ ಕರಣೇ ಸರ್ವಜನ್ತೂನಾಮ್ । ತೇ ಅವಿದ್ಯಮಾನೇ ಯಸ್ಯ ತತ್ ಅಚಕ್ಷುಃಶ್ರೋತ್ರಮ್ । ''ಯಃ ಸರ್ವಜ್ಞಃ ಸರ್ವವಿತ್'' (೧-೧-೯) ಇತ್ಯಾದಿಚೇತನಾವತ್ತ್ವವಿಶೇಷಣತ್ವಾತ್ ಪ್ರಾಪ್ತಂ ಸಂಸಾರಿಣಾಮಿವ ಚಕ್ಷುಃಶ್ರೋತ್ರಾದಿಭಿಃ ಕರಣೈರರ್ಥಸಾಧಕತ್ವಮ್ । ತದಿಹ ''ಅಚಕ್ಷುಃಶ್ರೋತ್ರಮ್'' ಇತಿ ವಾರ್ಯತೇ । ''ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ'' (ಶ್ವೇ. ೩-೧೯) ಇತ್ಯಾದಿ

ದರ್ಶನಾತ್ । ಕಿಂಚ ತದಪಾಣಿಪಾದಮ್ । ಕರ್ಮೇನ್ದ್ರಿಯರಹಿತಮ್ ಇತ್ಯೇತತ್ । ಯತ ಏವಮ್ ಅಗ್ರಾಹ್ಯಮಗ್ರಾಹಕಂ ಚ ಅತೋ ನಿತ್ಯಮ್ ಅವಿನಾಶಿ । ವಿಭುಂ ವಿವಿಧಂ ಬ್ರಹ್ಮಾದಿಸ್ಥಾವರಾನ್ತಪ್ರಾಣಿಭೇದೈಃ ಭವತಿ ಇತಿ ವಿಭುಮ್ । ಸರ್ವಗತಂ ವ್ಯಾಪಕಮ್ ಆಕಾಶವತ್ । ಸುಸೂಕ್ಷ್ಮಮ್ ಶಬ್ದಾದಿ ಸ್ಥೂಲತ್ವಕಾರಣರಹಿತತ್ವಾತ್ । ಶಬ್ದಾದಯೋ ಹಿ ಆಕಾಶವಾಯ್ವಾದೀನಾಮ್ ಉತ್ತರೋತ್ತರಂ ಸ್ಥೂಲತ್ವಕಾರಣಾನಿ । ತದಭಾವಾತ್ ಸುಸೂಕ್ಷ್ಮಮ್ । ಕಿಂ ಚ ತದವ್ಯಯಮ್ । ಉಕ್ತಧರ್ಮತ್ವಾದೇವ ನ ವ್ಯೇತಿ ಇತ್ಯವ್ಯಯಮ್ । ನ ಹಿ ಅನಙ್ಗಸ್ಯ ಸ್ವಾಙ್ಗಾಪಚಯಲಕ್ಷಣೋ ವ್ಯಯಃ ಸಂಭವತಿ ಶರೀರಸ್ಯೇವ । ನಾಪಿ ಕೋಶಾಪಚಯಲಕ್ಷಣೋ ವ್ಯಯಃ ಸಂಭವತಿ ರಾಜ್ಞ ಇವ । ನಾಪಿ ಗುಣದ್ವಾರಕೋ ವ್ಯಯಃ ಸಂಭವತಿ ಅಗುಣತ್ವಾತ್, ಸರ್ವಾತ್ಮಕತ್ವಾಚ್ಚ । ಯದೇವಂಲಕ್ಷಣಂ ಭೂತಯೋನಿಂ ಭೂತಾನಾಂ ಕಾರಣಂ ಪೃಥಿವೀವ ಸ್ಥಾವರಜಙ್ಗಮಾನಾಂ ಪರಿಪಶ್ಯನ್ತಿ ಸರ್ವತಃ ಆತ್ಮಭೂತಂ ಸರ್ವಸ್ಯ ಅಕ್ಷರಂ ಪಶ್ಯನ್ತಿ ಧೀರಾ ಧೀಮನ್ತಃ, ವಿವೇಕಿನಃ । ಈದೃಶಮ್ ಅಕ್ಷರಂ ಯಯಾ ವಿದ್ಯಯಾ ಅಧಿಗಮ್ಯತೇ ಸಾ ಪರಾ ವಿದ್ಯಾ ಇತಿ ಸಮುದಾಯಾರ್ಥಃ ॥

## (ಭಾಷ್ಯಾರ್ಥ)

ಮುಂದೆ ಹೇಳಲಿರುವ (ಅಕ್ಷರವನ್ನು) ಮನಸ್ಸಿನಲ್ಲಿಟ್ಟುಕೊಂಡು (ಅದನ್ನು ಈಗಲೇ) ಸಿದ್ಧವಾಗಿರುವಂತೆ "ಯಾವ ಅದು" ಎಂದು ಪರಾಮರ್ಶಿಸಿರುತ್ತದೆ. **ಅದ್ರೇಶ್ಯಮ್ = ಅದೃಶ್ಯಮ್** (ಕಾಣದೆ ಇರುವದು) ಎಂದರೆ ಯಾವ ಬುದ್ಧೀಂದ್ರಿಯ**ಗಳಿಗೂ**[1] ತಿಳಿಯಬರದೆ ಇರುವದು ಎಂದು ಅಭಿಪ್ರಾಯ. ಏಕೆಂದರೆ ನೋಟವು (ಅರಿವು) ಹೊರಕ್ಕೆ ಹೊರಟರೆ ಐದು ಇಂದ್ರಿಯಗಳ ಮೂಲಕವೇ ಹೊರಕ್ಕೆ ಬರಬೇಕಾಗುತ್ತದೆ. ಅಗ್ರಾಹ್ಯವಾದದ್ದು, ಎಂದರೆ ಕರ್ಮೇಂದ್ರಿಯಗಳಿಗೆ ವಿಷಯವಲ್ಲದ್ದು ಎಂದು ಅಭಿಪ್ರಾಯ. ಅಗೋತ್ರವಾದದ್ದು : ಗೋತ್ರ, ಅನ್ವಯ, ಮೂಲ - ಇವೆಲ್ಲ ಒಂದೇ ಅರ್ಥದ (ಮಾತುಗಳು). ಅಗೋತ್ರವಾದದ್ದು, ಎಂದರೆ ಅನ್ವಯವಿಲ್ಲದ್ದು ಎಂದರ್ಥ. ಅದಕ್ಕೆ ಮೂಲವೇ ಇಲ್ಲ ; ಇದ್ದರೆ ಅದರಿಂದ ಅನ್ವಿತವಾಗಬಹುದಾಗಿತ್ತು. ವರ್ಣಿಸಲ್ಪಡುತ್ತವೆಯಾದ್ದರಿಂದ ದ್ರವ್ಯಧರ್ಮಗಳಾದ ಸ್ಥೂಲತ್ವವೇ ಮುಂತಾದವುಗಳು ಅಥವಾ ಬಿಳುಪು ಮುಂತಾದವುಗಳು ವರ್ಣಗಳು (ಎನಿಸುವವು). ಯಾವ (ಈ) ಅಕ್ಷರಕ್ಕೆ (ಈ) ವರ್ಣಗಳು ಇಲ್ಲವಾದ್ದರಿಂದ (ಇದು) ಅವರ್ಣವು. "ಅಚಕ್ಷುಃ ಶ್ರೋತ್ರವಾದದ್ದು" ಚಕ್ಷುವೂ ಶ್ರೋತ್ರವೂ ನಾಮ, ರೂಪ -

---

1. ಚಕ್ಷು, ಶ್ರೋತ್ರ, ಜಿಹ್ವೆ, ಚರ್ಮ, ಘ್ರಾಣ - ಎಂಬಿವು ರೂಪಾದಿಗಳನ್ನು ಅರಿಯುವ ಬುದ್ಧೀಂದ್ರಿಯಗಳು.

ಇವುಗಳನ್ನು ಗೋಚರಿಸಿ (ಅರಿಯುವದಕ್ಕೆ) ಎಲ್ಲಾ ಪ್ರಾಣಿಗಳಿಗೂ (ಇರುವ) ಕರಣಗಳು ; ಅವುಗಳು ಯಾವದಕ್ಕೆ ಇಲ್ಲವೋ ಆ (ಅಕ್ಷರವು) ಅಚಕ್ಷುಃಶ್ರೋತ್ರ(ವೆನಿಸುವದು). ''ಯಾವನು ಸರ್ವಜ್ಞನೋ ಸರ್ವವಿದನೋ'' (೧-೧-೯) ಎಂದು ಮುಂತಾಗಿ ಚೇತನವುಳ್ಳದ್ದೆಂಬ ವಿಶೇಷಣವನ್ನು (ಹಾಕಿರುವದರಿಂದ ಈ ಅಕ್ಷರವೂ) ಸಂಸಾರಿಗಳಂತೆ ಚಕ್ಷು, ಶ್ರೋತ್ರ - ಮುಂತಾದ (ಇಂದ್ರಿಯ)ಗಳಿಂದ ವಿಷಯಗಳನ್ನು ಅರಿಯುವದೆಂದು ಆಗುತ್ತದೆ. ಅದನ್ನು ಇಲ್ಲಿ ''ಅಚಕ್ಷುಃಶ್ರೋತ್ರವಾದದ್ದು'' ಎಂದು ಅಲ್ಲಗಳೆದಿರುತ್ತದೆ. ''ಚಕ್ಷುವಿಲ್ಲದೆಯೇ ನೋಡುತ್ತಾನೆ, ಅವನು ಕರ್ಣವಿಲ್ಲದೆಯೇ ಕೇಳುತ್ತಾನೆ'' (ಶ್ವೇ. ೩-೧೯) ಎಂದು ಮುಂತಾಗಿ (ಮಂತ್ರವರ್ಣದಲ್ಲಿ) ಕಂಡುಬರುವದರಿಂದ[1] (ಹೀಗೆಂದು ಗೊತ್ತಾಗುತ್ತದೆ). ಮತ್ತು ಅದು ಅಪಾಣಿಪಾದವಾದದ್ದು, ಎಂದರೆ **ಕರ್ಮೇಂದ್ರಿಯಗಳು**[2] ಇಲ್ಲದ್ದು ಎಂದು ಅಭಿಪ್ರಾಯ. ಹೀಗೆ (ಇದು) ಗ್ರಹಿಸುವದಕ್ಕೆ ಆಗದ್ದೂ (ತಾನು) ಗ್ರಹಿಸದೆ ಇರುವದೂ[3] ಆಗಿರುವದರಿಂದ ನಿತ್ಯವಾದದ್ದು, ನಾಶವಾಗತಕ್ಕದ್ದಲ್ಲ. ವಿಭು ಎಂದರೆ ಬ್ರಹ್ಮನು ಮೊದಲಾಗಿ ಸ್ಥಾವರದವರೆಗಿನ ಪ್ರಾಣಿವಿಶೇಷಗಳ ರೂಪದಲ್ಲಿ ವಿಧವಿಧವಾಗಿರುವದು. ಸರ್ವಗತವಾದದ್ದು, ಎಂದರೆ ಆಕಾಶದಂತೆ (ಎಲ್ಲೆಲ್ಲಿಯೂ) ಹಬ್ಬಿಕೊಂಡಿರುವದು. 'ಸುಸೂಕ್ಷ್ಮವಾದದ್ದು' ಏಕೆಂದರೆ ಶಬ್ದವೇ ಮುಂತಾದ ಸ್ಥೂಲತ್ವಕ್ಕೆ ಕಾರಣವಾದ (ಧರ್ಮಗಳು) ಅದರಲ್ಲಿರುವದಿಲ್ಲ. ಆಕಾಶ, ವಾಯು - ಮುಂತಾದವುಗಳು ಮುಂದು ಮುಂದಕ್ಕೆ ಹೋದಹಾಗೆಲ್ಲ (ಒಂದಕ್ಕಿಂತ ಒಂದು) ಸ್ಥೂಲವಾಗಿರುವದಕ್ಕೆ ಶಬ್ದವೇ ಮುಂತಾದವುಗಳು ಕಾರಣವಾಗಿರುವವಷ್ಟೆ.[4] ಅವು ಇಲ್ಲದ್ದರಿಂದ (ಈ ಅಕ್ಷರವು) ಸುಸೂಕ್ಷ್ಮವಾಗಿರುವದು. ಮತ್ತು ಅದು ಅವ್ಯಯವಾಗಿರುತ್ತದೆ. ಅದು ಮೇಲೆ ಹೇಳಿದಂಥ ಧರ್ಮವುಳ್ಳದ್ದಾಗಿದೆಯಾದ್ದರಿಂದಲೇ ವ್ಯಯವಾಗುವದಿಲ್ಲ, ಆದ್ದರಿಂದ ಅವ್ಯಯವು. ಅವಯವಗಳಿಲ್ಲದ್ದಕ್ಕೆ ಶರೀರದಹಾಗೆ ತನ್ನ ಅವಯವಗಳು ಕಡಿಮೆಯಾಗುವದೆಂಬ ವ್ಯಯವು ಹೊಂದುವಹಾಗಿಲ್ಲವಷ್ಟೆ. ಅರಸನಿಗೆ (ಬೊಕ್ಕಸವು ಬರಿದಾಗುವಂತೆ) ತನ್ನ ಕೋಶವು ಕಡಿಮೆಯಾಗುವದೆಂಬ

---

1. ಆತ್ಮನು ಅರಿವಿನ ಸ್ವರೂಪವೇ ಆಗಿರುವದರಿಂದ ಅವನಿಗೆ ವಿಷಯಗಳನ್ನು ಬೆಳಗುವದಕ್ಕೆ ಕರಣಗಳು ಬೇಡ.

2. ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ - ಎಂಬಿವು ಕರ್ಮೇಂದ್ರಿಯಗಳು.

3. ಕರಣಗಳಿಂದ ಅರಿಯದಿರುವದು. ಅರಿವಿಗೆ ಗೋಚರವಾಗಿರುವದೂ ಅರಿಯುವ ವಿಕಾರವುಳ್ಳದ್ದೂ ಆಗಿರುವದು ಅನಿತ್ಯವಾಗಿರುತ್ತದೆ. ಇದು ಅಂಥದ್ದಲ್ಲ.

4. ಶಬ್ದ, ಸ್ಪರ್ಶ, ರೂಪ, ರಸ, ಗಂಧ - ಈ ಗುಣಗಳು ಹೆಚ್ಚಿದಂತೆಲ್ಲ ಭೂತಗಳು ಸ್ಥೂಲವಾಗುತ್ತವೆ. ಕ. ಭಾ. ಭಾ. ೧೦೬.

ವ್ಯಯವೂ ಆಗುವಹಾಗಿಲ್ಲ. ಗುಣಗಳ ಮೂಲಕವಾಗಿಯೂ (ಇದಕ್ಕೆ) ವ್ಯಯವು ಆಗುವ ಹಾಗಿಲ್ಲ ; ಏಕೆಂದರೆ ಇದು ನಿರ್ಗುಣವಾಗಿರುತ್ತದೆ. ಮತ್ತು ಎಲ್ಲದರ ರೂಪದಲ್ಲಿಯೂ ಇದ್ದುಕೊಂಡಿರುತ್ತದೆ.

ಈ ಮೇಲೆ ಹೇಳಿದ ಸ್ವರೂಪವುಳ್ಳ ಯಾವ (ಈ) ಭೂತಯೋನಿಯನ್ನು[1] ಭೂತಗಳ ಕಾರಣವನ್ನು ಪೃಥಿವಿಯು ಸ್ಥಾವರಗಳಿಗೆ ಹೇಗೋ ಹಾಗೆ (ಭೂತಗಳಿಗೆ ಕಾರಣವಾಗಿರುವ ಇದನ್ನು) ಪರಿಪಶ್ಯನ್ತಿ ಎಲ್ಲಾ ಕಡೆಗಳಲ್ಲಿಯೂ ಎಲ್ಲರಿಗೂ ಆತ್ಮನಾಗಿರುವ (ಈ) ಅಕ್ಷರವನ್ನು ಧೀರರು, ಧೀಮಂತರು, ವಿವೇಕಿಗಳಾದವರು ಕಂಡುಕೊಳ್ಳುವರು. ಇಂಥ ಅಕ್ಷರವು ಯಾವ ವಿದ್ಯೆಯಿಂದ ಪ್ರಾಪ್ತವಾಗುತ್ತದೆಯೋ ಅದು **ಪರವಿದ್ಯೆ**[2] ಎಂಬುದು ಒಟ್ಟರ್ಥವು.

## ಅಕ್ಷರದಿಂದಾಗುವ ಸೃಷ್ಟಿ

### (ಭಾಷ್ಯ)

೨೦. ಭೂತಯೋನಿರಕ್ಷರಮಿತ್ಯುಕ್ತಮ್[3] । ತತ್ ಕಥಂ ಭೂತಯೋನಿತ್ವಮಿತಿ ಉಚ್ಯತೇ ಪ್ರಸಿದ್ಧದೃಷ್ಟಾನ್ತೈಃ ।

### (ಭಾಷ್ಯಾರ್ಥ)

ಅಕ್ಷರವು ಭೂತಗಳಿಗೆ ಯೋನಿ ಎಂದು ಹೇಳಿದೆಯಷ್ಟೆ. ಹಾಗಾದರೆ ಭೂತಗಳಿಗೆ ಯೋನಿ ಎಂದರೆ ಹೇಗೆ ? ಎಂಬುದನ್ನು ಪ್ರಸಿದ್ಧವಾದ ದೃಷ್ಟಾಂತಗಳಿಂದ (ಈ ಮಂತ್ರದಲ್ಲಿ) ಹೇಳಲಾಗುತ್ತದೆ :-

**ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ**
**ಯಥಾ ಪೃಥಿವ್ಯಾಮೋಷಧಯಃ ಸಂಭವನ್ತಿ ।**
**ಯಥಾ ಸತಃ ಪುರುಷಾತ್ ಕೇಶಲೋಮಾನಿ**
**ತಥಾಽಕ್ಷರಾತ್ ಸಂಭವತೀಹ ವಿಶ್ವಮ್** ॥೭॥

೭. ಹೇಗೆ ಜೇಡರಹುಳು ಸೃಷ್ಟಿಮಾಡಿ ಮತ್ತೆ (ಹಿಂದಕ್ಕೆ)

1. ಪೃಥಿವಿಯೇ ಸ್ಥಾವರಜಂಗಮವಸ್ತುಗಳಾಗಿ ಪರಿಣಮಿಸುವಂತೆ ಬ್ರಹ್ಮವೇ ಆಕಾಶಾದಿ ಭೂತಗಳಾಗಿರುತ್ತದೆ. ಇಲ್ಲಿ 'ಭೂತಯೋನಿ' (ಭೂತಗಳಿಗೆ ಕಾರಣ) ಎಂದು ಕರೆದಿರುವದು ಸಾಂಖ್ಯರ ಪ್ರಧಾನವಲ್ಲ, ಪರಮಾತ್ಮನೇ ಎಂಬುದನ್ನು ಸೂ.ಭಾ. ೧-೨-೨೧ ರಲ್ಲಿ ವಿಚಾರಮಾಡಿ ನಿರ್ಣಯಿಸಿರುತ್ತದೆ.

2. ಅದೃಶ್ಯತ್ವಾದಿಧರ್ಮಗಳಿಂದೊಡಗೂಡಿದ್ದು ಜಗತ್ಕಾರಣವಾಗಿರುವದೇ ಬ್ರಹ್ಮವು ; ಅದನ್ನು ಅರಿತುಕೊಳ್ಳುವ ವಿದ್ಯೆಯೇ ಪರವಿದ್ಯೆ. ಅದನ್ನು ಅರಿತುಕೊಂಡರೇ ಎಲ್ಲವನ್ನೂ ಅರಿತಂತೆ ಆಗುತ್ತದೆ ಎಂದಭಿಪ್ರಾಯ.

3. ಭೂತಯೋನ್ಯಕ್ಷರಮ್ ಎಂಬ ಆ॥ ಪಾಠಕ್ಕಿಂತ ಈ ವಾ॥ ಕಾ॥ ಪಾಠವು ಉತ್ತಮ.

ತೆಗೆದುಕೊಳ್ಳುವದೋ, ಹೇಗೆ ಪೃಥಿವಿಯಲ್ಲಿ ಗಿಡಮರಗಳು ಉಂಟಾಗುವವೋ, (ಹೇಗೆ) ಇರುವ ಮನುಷ್ಯನಿಂದ ದೊಡ್ಡಕೂದಲು ಸಣ್ಣ ಕೂದಲುಗಳು (ಹುಟ್ಟುವವೋ) ಹಾಗೆ ಅಕ್ಷರದಿಂದ ಇಲ್ಲಿ ಎಲ್ಲವೂ ಉಂಟಾಗುತ್ತದೆ.

(ಭಾಷ್ಯ)

೨೧. ಯಥಾ ಲೋಕೇ ಪ್ರಸಿದ್ಧಮ್[1] । ಊರ್ಣನಾಭಿಃ ಲೂತಾಕೀಟಃ ಕಿಂಚಿತ್ ಕಾರಣಾನ್ತರಮ್ ಅನಪೇಕ್ಷ್ಯ ಸ್ವಯಮೇವ ಸೃಜತೇ ಸ್ವಶರೀರಾವ್ಯತಿ ರಿಕ್ತಾನೇವ ತನ್ತೂನ್ ಬಹಿಃ ಪ್ರಸಾರಯತಿ । ಪುನಃ ತಾನೇವ ಗೃಹ್ಣತೇ ಚ ಸ್ವಾತ್ಮಭಾವಮೇವ ಆಪಾದಯತಿ । ಯಥಾ ಚ ಪೃಥಿವ್ಯಾಮ್ ಓಷಧಯಃ ವ್ರೀಹ್ಯಾದಿಸ್ಥಾವರಾಣಿ[2] ಇತ್ಯರ್ಥಃ । ಸ್ವಾತ್ಮಾವ್ಯತಿರಿಕ್ತಾ ಏವ (ಸಂಭವನ್ತಿ) ಪ್ರಭವನ್ತಿ[3] । ಯಥಾ ಚ ಸತಃ ವಿದ್ಯಮಾನಾತ್ ಜೀವತಃ ಪುರುಷಾತ್ ಕೇಶಲೋಮಾನಿ ಕೇಶಾಶ್ಚ ಲೋಮಾನಿ ಚ ಸಂಭವನ್ತಿ ವಿಲಕ್ಷಣಾನಿ । ಯಥಾ ಏತೇ ದೃಷ್ಟಾನ್ತಾಃ ತಥಾ ವಿಲಕ್ಷಣಂ ಸಲಕ್ಷಣಂ ಚ ನಿಮಿತ್ತಾನ್ತರಾನಪೇಕ್ಷಾತ್ ಯಥೋಕ್ತಲಕ್ಷಣಾತ್ ಅಕ್ಷರಾತ್ ಸಂಭವತಿ ಸಮುತ್ಪದ್ಯತೇ ಇಹ ಸಂಸಾರಮಣ್ಡಲೇ ವಿಶ್ವಂ ಸಮಸ್ತಂ ಜಗತ್ । ಅನೇಕದೃಷ್ಟಾನ್ತೋಪಾದಾನಂ ತು ಸುಖಾವಬೋಧನಾರ್ಥಮ್[4] ॥

(ಭಾಷ್ಯಾರ್ಥ)

ಹೇಗೆ ಲೋಕದಲ್ಲಿ ಪ್ರಸಿದ್ಧವಾಗಿರುವಂತೆ ಜೇಡರಹುಳುವೆಂಬ ನೂಲೆಳೆಯನ್ನು ಮಾಡುವ ಹುಳು ಮತ್ತೊಂದು ಕಾರಣವನ್ನು ಬಯಸದೆ[5] ತಾನೇ ಸೃಷ್ಟಿಮಾಡುತ್ತದೆಯೋ, ತನ್ನ ಮೈಗಿಂತ ಬೇರೆಯಲ್ಲದ ನೂಲೆಳೆಗಳನ್ನೇ ಹೊರಕ್ಕೆ ಹಾಕುತ್ತದೆಯೋ ; ಮತ್ತೆ ಅವುಗಳನ್ನೇ ಹಿಂದಕ್ಕೆ ತೆಗೆದುಕೊಳ್ಳುವದೋ ಎಂದರೆ ತನ್ನ

1. 'ಪ್ರಸಿದ್ಧಃ' ಎಂಬ ಕಾ॥ವಾ॥ಮೈ॥ ಪಾಠಗಳಲ್ಲಿ ಜೇಡರಹುಳುವೊಂದೇ ಪ್ರಸಿದ್ಧವಾಗಿರುವದೆಂಬ ಅಭಿಪ್ರಾಯವು ಹೊರಡುತ್ತದೆ. ನಾವು ಒಪ್ಪಿರುವ ಆ॥ಗೋ॥ ಪಾಠದಲ್ಲಿ ಇಲ್ಲಿರುವ ದೃಷ್ಟಾಂತಗಳೆಲ್ಲ ಪ್ರಸಿದ್ಧವಾಗಿವೆ ಎಂಬ ಅಭಿಪ್ರಾಯವು ತೋರುತ್ತದೆ. ಇದೇ ಮೇಲು.

2. 'ಸ್ಥಾವರಾನ್ತಾನಿ' ಎಂಬ ಪಾಠಕ್ಕಿಂತ ಈ ವಾ॥ ಪಾಠವು ಉತ್ತಮವೆಂದು ತೋರುತ್ತದೆ.

3. 'ಸಂಭವನ್ತಿ' ಎಂಬ ಮೂಲದ ಮಾತು ಮುದ್ರಿತಪುಸ್ತಕಗಳಲ್ಲಿ ಬಿಟ್ಟುಹೋಗಿದೆ. 'ಪ್ರಭವನ್ತಿ' ಎಂಬುದೇ 'ಸಂಭವನ್ತಿ' ಎಂದಿರಬಹುದು ; ಅಥವಾ ಅದು ಮೂಲದ ಅರ್ಥವಾಗಿಯೂ ಇರಬಹುದು.

4. 'ಸುಖಾರ್ಥಪ್ರಬೋಧನಾರ್ಥಮ್' ಎಂಬ ಆ॥ ಪಾಠಕ್ಕೆ ಸುಲಭವಾಗಿ ವಿಷಯವನ್ನು ತಿಳಿಸುವದಕ್ಕಾಗಿ ಎಂದರ್ಥ.

5. ತಾನೇ ಪ್ರಕೃತಿಯಾಗಿ : ಸೂ.ಭಾ. ೧-೪-೨೩ ರಿಂದ ೨೭, ೨-೧-೨೫, ೨೬.

ರೂಪವನ್ನೇ ಮಾಡಿಕೊಂಡುಬಿಡುವದೋ, ಮತ್ತು ಹೇಗೆ ಭೂಮಿಯಲ್ಲಿ ಓಷಧಿಗಳು ಎಂದರೆ ಬತ್ತವೇ ಮುಂತಾದ ಸ್ಥಾವರಗಳು ಎಂದರ್ಥ. (ಅವು) ಹೇಗೆ ತನಗಿಂತ ಬೇರೆಯಾಗದೆಯೇ ಉಂಟಾಗುವವೋ ಹುಟ್ಟುವವೋ ಮತ್ತು ಹೇಗೆ ಇರುವ, ಇದ್ದುಕೊಂಡಿರುವ, ಬದುಕಿರುವ ಮನುಷ್ಯನಿಂದ ಕೇಶಲೋಮಗಳು ಎಂದರೆ ದೊಡ್ಡಕೂದಲು, ಸಣ್ಣಕೂದಲು (ಅವನ ಮೈಗಿಂತ) ಬೇರೆ ತೆರನಾದವಾಗಿ ಹುಟ್ಟುತ್ತವೆಯೋ, ಈ ದೃಷ್ಟಾಂತಗಳು (ಹೇಗೆ ಕಂಡುಬರುವವೋ) ಹಾಗೆಯೇ ಮತ್ತೊಂದು ನಿಮಿತ್ತವನ್ನು ಬಯಸದ ಹಿಂದೆ ಹೇಳಿದ ಲಕ್ಷಣವುಳ್ಳ ಅಕ್ಷರದಿಂದ (ಅದಕ್ಕಿಂತ) ವಿಲಕ್ಷಣವೂ ಅದರ ಹಾಗಿರುವ ಲಕ್ಷಣವುಳ್ಳದ್ದೂ[1] ಆದ ವಿಶ್ವವು ಎಂದರೆ ಜಗತ್ತೆಲ್ಲವೂ ಇಲ್ಲಿ ಎಂದರೆ ಸಂಸಾರಮಂಡಲದಲ್ಲಿ[2] ಉಂಟಾಗುತ್ತದೆ, ಹುಟ್ಟುತ್ತದೆ. ಅನೇಕ ದೃಷ್ಟಾಂತಗಳನ್ನು (ಉದಾಹರಣೆಗೆ) ತೆಗೆದುಕೊಂಡಿರುವ ದಾದರೋ ಸುಖವಾಗಿ (ವಿಷಯವನ್ನು) ತಿಳಿಸುವದಕ್ಕಾಗಿ.

## ಸೃಷ್ಟಿಕ್ರಮ

### (ಭಾಷ್ಯ)

೨೨. ಯದ್ ಬ್ರಹ್ಮಣ ಉತ್ಪದ್ಯಮಾನಂ ವಿಶ್ವಮ್, ತತ್ ಅನೇನ ಕ್ರಮೇಣ ಉತ್ಪದ್ಯತೇ, ನ ಯುಗಪದ್ ಬದರಮುಷ್ಟಿಪ್ರಕ್ಷೇಪವತ್ ಇತಿ ಕ್ರಮನಿಯಮ ವಿವಕ್ಷಾರ್ಥೋಽಯಂ ಮನ್ತ್ರ ಆರಭ್ಯತೇ -

### (ಭಾಷ್ಯಾರ್ಥ)

ಬ್ರಹ್ಮದಿಂದ ಹುಟ್ಟುವ, ಪ್ರಪಂಚವೆಂಬುದಿದೆಯಲ್ಲ, ಅದು ಈ ಕ್ರಮದಿಂದ[3] ಹುಟ್ಟುತ್ತದೆಯೇ ಹೊರತು ಎಗಚಿಕಾಯಿಯ ಮುಷ್ಟಿಯನ್ನು ಚೆಲ್ಲಿದರೆ ಹೇಗೋ ಹಾಗೆ ಒಟ್ಟಿಗೇ ಹುಟ್ಟುವದಿಲ್ಲ ಎಂದು (ಸೃಷ್ಟಿಗೆ) ಕ್ರಮವನ್ನು ಗೊತ್ತುಪಡಿಸಿ ತಿಳಿಸುವದಕ್ಕೆಂದು ಈ ಮಂತ್ರವನ್ನು ಆರಂಭಿಸಿದೆ :

---

1. ಬ್ರಹ್ಮವು ಜಗತ್ತಿಗೆ ಉಪಾದಾನಕಾರಣವಾದರೆ ಕಾರ್ಯಕಾರಣಗಳಿಗೆ ಸಾಲಕ್ಷಣ್ಯವಿರ ಬೇಕು ; ಆದರೆ ಚೇತನವಾದ ಶುದ್ಧವಾದ ಬ್ರಹ್ಮದಿಂದ ಅಚೇತನವಾದ ಅಶುದ್ಧವಾದ ಜಗತ್ತು ಉಂಟಾದದ್ದು ಹೇಗೆ ? - ಎಂಬ ಆಕ್ಷೇಪಕ್ಕೆ ದೃಷ್ಟಾಂತಗಳಿಂದ ಸಮಾಧಾನವನ್ನು ಹೇಳಿದೆ. ಸೂ.ಭಾ. ೨-೧-೪ ರಿಂದ ೧೧ರವರೆಗೆ ಈ ವಿಷಯವನ್ನು ಚರ್ಚಿಸಿದೆ.

2. ವ್ಯವಹಾರದೃಷ್ಟಿಯಿಂದ ಜಗತ್ತು ಹುಟ್ಟುತ್ತದೆ, ಪರಮಾರ್ಥವಾಗಿ ಅಲ್ಲ.

3. ಸೃಷ್ಟಿಯು ಮಿಥ್ಯೆ (೧-೪-೧೪)ಯಾದ್ದರಿಂದ ಇದಕ್ಕೆ ಕ್ರಮವೇನೂ ಇರ ಬೇಕಾದದ್ದಿಲ್ಲ. ಆದರೂ ವ್ಯವಹಾರದೃಷ್ಟಿಯಿಂದ ಸೃಷ್ಟಿಯನ್ನು ಈ ಕ್ರಮದಿಂದ ತಿಳಿದುಕೊಳ್ಳ ಬೇಕಾಗುವದು ಎಂಬುದನ್ನು ಇಲ್ಲಿ ಹೇಳಿದೆ. ಈ ಕ್ರಮವಿಚಾರವನ್ನು ಬ್ರ.ಸೂ. (೨-೩)ರಲ್ಲಿ ಮಾಡಿರುತ್ತದೆ ; ಇದು ಮಧ್ಯಮಾಧಿಕಾರಿಗಳಿಗೆ ಲಯಚಿಂತನೆಗೆ ಉಪಯೋಗವಾಗುತ್ತದೆ.

**ತಪಸಾ ಚೀಯತೇ ಬ್ರಹ್ಮ ತತೋಽನ್ನಮಭಿಜಾಯತೇ ।**
**ಅನ್ನಾತ್ ಪ್ರಾಣೋ ಮನಃ ಸತ್ಯಂ ಲೋಕಾಃ ಕರ್ಮಸು ಚಾಮೃತಮ್ ॥೮॥**

೮. ಬ್ರಹ್ಮವು ತಪಸ್ಸಿನಿಂದ ಉಬ್ಬುತ್ತದೆ. ಅದರಿಂದ ಅನ್ನವುಂಟಾಗುತ್ತದೆ. ಅನ್ನದಿಂದ ಪ್ರಾಣವು, ಮನಸ್ಸು, ಸತ್ಯವು, ಲೋಕಗಳು, ಕರ್ಮಗಳಲ್ಲಿ ಅಮೃತವು.

## (ಭಾಷ್ಯ)

೨೩. ತಪಸಾ ಜ್ಞಾನೇನ ಉತ್ಪತ್ತಿವಿಧಿಜ್ಞತಯಾ ಭೂತಯೋನಿರಕ್ಷರಂ ಬ್ರಹ್ಮ ಚೀಯತೇ ಉಪಚೀಯತೇ ಉತ್ಪಿಪಾದಯಿಷತ್ ಇದಂ ಜಗತ್ ಅಙ್ಕುರಮಿವ ಬೀಜಂ ಉಚ್ಛೂನತಾಂ ಗಚ್ಛತಿ ಪುತ್ರಮಿವ ಪಿತಾ ಹರ್ಷೇಣ । ಏವಂ ಸರ್ವಜ್ಞತಯಾ ಸೃಷ್ಟಿಸ್ಥಿತಿಸಂಹಾರಶಕ್ತಿವಿಜ್ಞಾನವತ್ತಯಾ ಉಪಚಿತಾತ್ ತತೋ ಬ್ರಹ್ಮಣಃ ಅನ್ನಮ್ ಅದ್ಯತೇ ಭುಜ್ಯತೇ ಇತಿ ಅನ್ನಮ್ ಅವ್ಯಾಕೃತಮ್ ಸಾಧಾರಣಂ (ಕಾರಣಂ) ಸಂಸಾರಿಣಾಂ ವ್ಯಾಚಿಕೀರ್ಷಿತಾವಸ್ಥಾರೂಪೇಣ ಅಭಿಜಾಯತೇ ಉತ್ಪದ್ಯತೇ । ತತಶ್ಚ ಅವ್ಯಾಕೃತಾತ್ ವ್ಯಾಚಿಕೀರ್ಷಿತಾವಸ್ಥಾತೋಽನ್ನಾತ್ ಪ್ರಾಣಃ ಹಿರಣ್ಯಗರ್ಭಃ ಬ್ರಹ್ಮಣೋ ಜ್ಞಾನಕ್ರಿಯಾಶಕ್ತ್ಯಧಿಷ್ಠಿತಃ ಜಗತ್ಸಾಧಾರಣಃ ಅವಿದ್ಯಾಕಾಮಕರ್ಮಭೂತಸಮುದಾಯಬೀಜಾಙ್ಕುರೋ ಜಗದಾತ್ಮಾ ಅಭಿಜಾಯತೇ ಇತಿ ಅನುಷಙ್ಗಃ । ತಸ್ಮಾಚ್ಚ ಪ್ರಾಣಾತ್ ಮನಃ ಮನಆಖ್ಯಂ ಸಙ್ಕಲ್ಪವಿಕಲ್ಪಸಂಶಯನಿರ್ಣಯಾದ್ಯಾತ್ಮಕಮ್ ಅಭಿಜಾಯತೇ । ತತೋಽಪಿ ಸಙ್ಕಲ್ಪಾದ್ಯಾತ್ಮಕಾತ್ ಮನಸಃ ಸತ್ಯಂ ಸತ್ಯಾಖ್ಯಮ್ ಆಕಾಶಾದಿ ಭೂತಪಞ್ಚಕಮ್ ಅಭಿಜಾಯತೇ । ತಸ್ಮಾತ್ ಸತ್ಯಾಖ್ಯಾತ್ ಭೂತಪಞ್ಚಕಾತ್ ಅಣ್ಡಕ್ರಮೇಣ ಸಪ್ತಲೋಕಾಃ ಭೂರಾದಯಃ । ತೇಷು ಮನುಷ್ಯಾದಿಪ್ರಾಣಿವರ್ಣಾಶ್ರಮಕ್ರಮೇಣ ಕರ್ಮಾಣಿ । ಕರ್ಮಸು ಚ ನಿಮಿತ್ತಭೂತೇಷು ಅಮೃತಂ ಕರ್ಮಜಂ ಫಲಮ್ । ಯಾವತ್ ಕರ್ಮಾಣಿ ಕಲ್ಪಕೋಟಿಶತೈರಪಿ ನ ವಿನಶ್ಯನ್ತಿ, ತಾವತ್ ಫಲಂ ನ ವಿನಶ್ಯನ್ತಿ, ಇತಿ ಅಮೃತಮ್ ॥

## (ಭಾಷ್ಯಾರ್ಥ)

ಸೃಷ್ಟಿಯ ರೀತಿಯನ್ನು ಬಲ್ಲದ್ದಾದ್ದರಿಂದ ಭೂತಯೋನಿಯಾದ ಅಕ್ಷರವಾದ ಬ್ರಹ್ಮವು ತಪಸ್ಸಿನಿಂದ, ಎಂದರೆ ಜ್ಞಾನದಿಂದ ಉಬ್ಬುತ್ತದೆ. ಈ ಜಗತ್ತನ್ನು ಇನ್ನೇನು ಉಂಟುಮಾಡಬೇಕು ಎಂಬ (ಸ್ಥಿತಿಯಲ್ಲಿ), ಅಂಕುರವನ್ನುಂಟು(ಮಾಡುವ ಸ್ಥಿತಿಯಲ್ಲಿ)ರುವ ಬೀಜದಂತೆಯೂ, ಪುತ್ರನನ್ನುಂಟುಮಾಡುವ ಹರ್ಷದಿಂದ (ಉಬ್ಬುವ) ತಂದೆಯಂತೆಯೂ ದೊಡ್ಡದಾಗುತ್ತದೆ, ದಪ್ಪನಾಗುತ್ತದೆ.[1] ಹೀಗೆ ಸರ್ವಜ್ಞವಾಗಿರು

1. ನಾಮರೂಪಗಳನ್ನುಂಟುಮಾಡುವ ಅವಸ್ಥೆಗೆ ಬರುತ್ತದೆ.

ವದರಿಂದ ಸೃಷ್ಟಿ, ಸ್ಥಿತಿ, ಸಂಹಾರ - ಇವುಗಳ ವಿಷಯದ ಶಕ್ತಿ ಮತ್ತು ಜ್ಞಾನಗಳಿಂದ ಕೂಡಿ ಬೆಳೆದುಕೊಂಡ ಆ ಬ್ರಹ್ಮದಿಂದ **ಅನ್ನವು** ತಿನ್ನಲ್ಪಡುತ್ತದೆ, ಎಂದರೆ ಅನುಭವಿಸಲ್ಪಡುತ್ತದೆಯಾದ್ದರಿಂದ ಅನ್ನವೆನಿಸಿರುವ **ಅವ್ಯಾಕೃತವು**[1] ಸಂಸಾರಿ (ಜೀವರು)ಗಳಿಗೆ ಸಮಾನವಾಗಿರುವ (ಕಾರಣವು)[2] ಬಿಡಿಯಾಗಿ ಮಾಡಲೆಳಸಿದ ಅವಸ್ಥೆಯ ರೂಪದಿಂದ ಉಂಟಾಗುತ್ತದೆ, ಹುಟ್ಟುತ್ತದೆ.[3] ಆ ಅವ್ಯಾಕೃತವೆಂಬ ಬಿಡಿಯಾಗಿ ಮಾಡಲೆಳಸಿದ ಅವಸ್ಥೆಗೆ ಬಂದಿರುವ ಅನ್ನದಿಂದ **ಪ್ರಾಣನು, ಹಿರಣ್ಯಗರ್ಭನು,** ಬ್ರಹ್ಮದ ಜ್ಞಾನಶಕ್ತಿಕ್ರಿಯಾಶಕ್ತಿಗಳಿಂದ ಆಳಲ್ಪಡುವ ಜಗತ್ತಿನ ಸಾಮಾನ್ಯಸ್ವರೂಪನು[4] ಅವಿದ್ಯಾಕಾಮಕರ್ಮಭೂತಸಮೂಹಗಳ ಬೀಜದ ಅಂಕುರ ವಾಗಿರುವ ಜಗದಾತ್ಮನು, 'ಉಂಟಾಗುತ್ತಾನೆ' ಎಂದು (ಹಿಂದಿನ ಶಬ್ದವನ್ನು) ಸೇರಿಸಿಕೊಳ್ಳಬೇಕು. ಆ ಪ್ರಾಣದಿಂದ **ಮನಸ್ಸು,** ಎಂದರೆ ಸಂಕಲ್ಪ, ವಿಕಲ್ಪ, ಸಂಶಯ, ನಿರ್ಣಯ - ಮುಂತಾದ[5] ರೂಪದ ಮನಸ್ಸೆಂಬ ಹೆಸರಿನ (ತತ್ತ್ವವು) ಹುಟ್ಟುತ್ತದೆ. ಆ ಸಂಕಲ್ಪವೇ ಮೊದಲಾದ ಸ್ವರೂಪದ[6] ಮನಸ್ಸಿನಿಂದಲೂ **ಸತ್ಯವು,** ಎಂದರೆ ಸತ್ಯವೆಂಬ ಹೆಸರಿನ ಆಕಾಶವೇ ಮುಂತಾದ **ಭೂತಪಂಚಕವು**[7] ಉಂಟಾಗುತ್ತದೆ. ಆ

1. ಅವ್ಯಾಕೃತವು ಎಂದರೆ ನಾಮರೂಪಗಳು ಹೊರತೋರುವ ಮುಂಚಿನ ಅವುಗಳ ಸೂಕ್ಷ್ಮಸ್ಥಿತಿಯು. ಇದನ್ನು ಈಶ್ವರಶಕ್ತಿ, ಮಾಯೆ, ಅವ್ಯಕ್ತ - ಎಂದೂ ಕರೆಯುವರು. ಸೂ.ಭಾ. ೧-೪-೩. ಸೂ.ಭಾ. ೨-೧-೧೪, ನೋಡಿ. ಅವ್ಯಾಕೃತವು ವಿಷಯೇಂದ್ರಿಯಶರೀರ ವಾಗಿ ಪರಿಣಮಿಸುವದರಿಂದ ಇದನ್ನೇ ಎಲ್ಲಾ ಪ್ರಾಣಿಗಳೂ ಅನುಭವಿಸುವರು ಎಂದಿದೆ.

2. 'ಕಾರಣಮ್' ಎಂಬ ಮಾತು ಆ।। ಪಾಠದಲ್ಲಿಲ್ಲ ; ಇಲ್ಲದಿದ್ದರೂ ಚಿಂತೆಯಿಲ್ಲ.

3. ವ್ಯಾಕೃತವಾಗುವದಕ್ಕೆ ಸಜ್ಜಾದ ಅವಸ್ಥೆಗೆ ಬರುವದೇ ಅವ್ಯಾಕೃತದ ಉತ್ಪತ್ತಿ. ಏಕೆಂದರೆ ಅದು ಅವಿದ್ಯೆಯಿರುವವರೆಗೆ ಇದ್ದೇ ಇರುತ್ತದೆ. ಬ್ರ.ಸೂ. ೨-೧-೩೬.

4. 'ಜ್ಞಾನಕ್ರಿಯಾಶಕ್ತ್ಯಧಿಷ್ಠಿತಃ' ಎಂಬ ವಾ।। ಕಾ।। ಪಾಠದಲ್ಲಿ ಇದು ಹಿರಣ್ಯಗರ್ಭನ ವಿಶೇಷಣವಾಗುವದು. ಹಿರಣ್ಯಗರ್ಭನಲ್ಲಿರುವ ಶಕ್ತಿಗಳೂ ಬ್ರಹ್ಮದವೇ.

5. ಹಿಂದೆ ಹಿರಣ್ಯಗರ್ಭನೆಂಬ ಹೆಸರಿನಿಂದ ಹೇಳಿದ್ದು ಮಹತ್ತತ್ತ್ವವು ; ಈಗ ಹೇಳಿರು ವದು ಅಹಂಕಾರವು. ಇವೆರಡೂ ಸಮಷ್ಟಿರೂಪವಾದವುಗಳೇ.

6. ವಿಷಯವನ್ನು ಮನಸ್ಸಿನಲ್ಲಿ ತಂದುಕೊಳ್ಳುವದು ಸಂಕಲ್ಪವು ; 'ಇಂಥದ್ದು', 'ಇಂಥದ್ದು' - ಎಂದು ಕಲ್ಪಿಸಿಕೊಳ್ಳುವದು ವಿಕಲ್ಪವು ; ಹೀಗೊ, ಹಾಗೊ ? - ಎಂದು ತೂಗಾಡು ವದು ಸಂಶಯವು ; ಹೀಗೆಯೇ ಸರಿ ಎಂದು ಗೊತ್ತುಪಡಿಸಿಕೊಳ್ಳುವದು ನಿಶ್ಚಯವು. ಇವೇ ಮುಂತಾದ ನಮ್ಮ ಅಂತಃಕರಣವೃತ್ತಿಗಳು ಈ ಸಮಷ್ಟಿರೂಪದ ಮನಸ್ಸಿನಿಂದ ಉಂಟಾಗುವವು.

7. ಭೂತಪಂಚಕಗಳಿಗೆ 'ಸತ್ಯ' ಎಂಬ ಹೆಸರು ಬಂದಿರುವ ಕಾರಣವನ್ನು ಬೃ. ೨-೩-೧, ೨, ೩ರಲ್ಲಿ ನೋಡಿರಿ.

ಸತ್ಯವೆಂಬ ಹೆಸರಿನ ಭೂತಪಂಚಕದಿಂದ **ಅಂಡಕ್ರಮದಿಂದ**[1] ಭೂಃ ಮುಂತಾದ **ಏಳು ಲೋಕಗಳು** ; ಅವುಗಳಲ್ಲಿ ಮನುಷ್ಯನೇ ಮುಂತಾದ ಪ್ರಾಣಿಗಳು, ವರ್ಣಾಶ್ರಮಗಳು, ಇವುಗಳ ಕ್ರಮದಿಂದ[2] **ಕರ್ಮಗಳು**. ಆ ಕರ್ಮಗಳನ್ನು ನಿಮಿತ್ತಮಾಡಿಕೊಂಡು **ಅಮೃತವು** ಎಂದರೆ ಕರ್ಮದಿಂದುಂಟಾಗುವ **ಫಲವು**. (ಇವು ಉಂಟಾಗುತ್ತವೆ), ನೂರುಕೋಟಿಕಲ್ಪಗಳಾದರೂ ಕರ್ಮಗಳು ಎಲ್ಲಿಯವರೆಗೂ ನಾಶವಾಗುವದಿಲ್ಲವೋ ಅಲ್ಲಿಯವರೆಗೆ ಫಲವೂ ನಾಶವಾಗುವದಿಲ್ಲ ; ಆದ್ದರಿಂದ (ಈ ಫಲವು) ಅಮೃತವೆನಿಸಿರುವದು.[3]

## ಪರವಿದ್ಯೆಯ ಉಪಸಂಹಾರ

### (ಭಾಷ್ಯ)

೨೪. ಉಕ್ತಮೇವ ಅರ್ಥಮ್ ಉಪಸಞ್ಜಿಹೀರ್ಷುರ್ಮನ್ತ್ರಃ ವಕ್ಷ್ಯಮಾಣಾರ್ಥಮಾಹ -

### (ಭಾಷ್ಯಾರ್ಥ)

ಮುಂದೆ ಹೇಳಲಿರುವ ವಿಷಯ(ವನ್ನು ಪ್ರಾರಂಭಿಸುವದಕ್ಕನು)ಕೂಲವಾಗಿ[4] ಹಿಂದೆ ಹೇಳಿದ ವಿಷಯವನ್ನೇ ಉಪಸಂಹಾರಮಾಡಬೇಕೆಂದು (ಈ) ಮಂತ್ರವು (ಹೀಗೆಂದು) ಹೇಳುತ್ತದೆ :

**ಯಃ ಸರ್ವಜ್ಞಃ ಸರ್ವವಿದ್ಯಸ್ಯ ಜ್ಞಾನಮಯಂ ತಪಃ ।**
**ತಸ್ಮಾದೇತದ್ ಬ್ರಹ್ಮ ನಾಮರೂಪಮನ್ನಂ ಚ ಜಾಯತೇ ॥೯॥**

೯. ಯಾವನು ಸರ್ವಜ್ಞನೋ ಸರ್ವವಿದನೋ, ಯಾವನ ತಪಸ್ಸು ಜ್ಞಾನಮಯವಾಗಿರುವದೋ, ಆತನಿಂದ ಈ ಬ್ರಹ್ಮವೂ ನಾಮವೂ ರೂಪವೂ ಅನ್ನವೂ ಉಂಟಾಗುತ್ತದೆ.

### (ಭಾಷ್ಯ)

೨೫. ಯಃ ಉಕ್ತಲಕ್ಷಣಃ ಅಕ್ಷರಾಖ್ಯಃ ಸರ್ವಜ್ಞಃ । ಸಾಮಾನ್ಯೇನ ಸರ್ವಂ

---

1. ಅಂಡವು ಉತ್ಪತ್ತಿಯಾದ ಬಳಿಕ. ಭೂಃ, ಭುವಃ, ಸುವಃ, ಮಹಃ, ಜನಃ, ತಪಃ, ಸತ್ಯಮ್ - ಎಂಬ ಉತ್ಪತ್ತಿಯನ್ನು ಬೃ.ಭಾ. ೧-೨-೨ ; ಛಾಂ. ೩-೧೯-೧ ರಲ್ಲಿ ನೋಡಿ.

2. ವರ್ಣಾಶ್ರಮಗಳು ಉತ್ಪತ್ತಿಯಾದ ಬಳಿಕ ಶಾಸ್ತ್ರೀಯಕರ್ಮಗಳುಂಟಾಗುವವು.

3. ಜ್ಞಾನದಿಂದ ಕರ್ಮಕ್ಕೆ ಬಾಧೆಯಾಗುವವರೆಗೆ ಕರ್ಮದ ಫಲವು ತಪ್ಪದೆ ಆಗುತ್ತದೆ. ಆದ್ದರಿಂದ ಫಲಕ್ಕೆ ಅಮೃತವೆಂದು ಹೆಸರು.

4. ಇಲ್ಲಿ ಸಂಗ್ರಹವಾಗಿ ಹೇಳಿರುವ ಪರಾಪರವಿದ್ಯೆಗಳನ್ನು ವಿಸ್ತಾರವಾಗಿ ಹೇಳುವದಕ್ಕಾಗಿ.

ಜಾನಾತಿ ಇತಿ ಸರ್ವಜ್ಞಃ । ವಿಶೇಷೇಣ ಸರ್ವಂ ವೇತ್ತಿ ಇತಿ ಸರ್ವವಿತ್ । ಯಸ್ಯ ಜ್ಞಾನಮಯಂ ಜ್ಞಾನವಿಕಾರಮೇವ ಸಾರ್ವಜ್ಞ್ಯಲಕ್ಷಣಂ ತಪಃ ನಾಯಾಸಲಕ್ಷಣಮ್ । ತಸ್ಮಾತ್ ಯಥೋಕ್ತಾತ್ ಸರ್ವಜ್ಞಾತ್ ಏತತ್ ಉಕ್ತಂ ಕಾರ್ಯಲಕ್ಷಣಂ ಬ್ರಹ್ಮ ಹಿರಣ್ಯಗರ್ಭಾಖ್ಯಂ ಜಾಯತೇ । ಕಿಂ ಚ ನಾಮ 'ಅಸೌ ದೇವದತ್ತಃ ಯಜ್ಞದತ್ತಃ' ಇತ್ಯಾದಿಲಕ್ಷಣಮ್ । ರೂಪಮ್ ಇದಂ ಶುಕ್ಲಮ್ ನೀಲಮ್ ಇತ್ಯಾದಿ । ಅನ್ನಂ ಚ ವ್ರೀಹಿಯವಾದಿಲಕ್ಷಣಂ ಜಾಯತೇ । ಪೂರ್ವಮನ್ತ್ರೋಕ್ತಕ್ರಮೇಣ ಇತಿ ಅವಿರೋಧೋ ದ್ರಷ್ಟವ್ಯಃ ॥

## (ಭಾಷ್ಯಾರ್ಥ)

ಮೇಲೆ ಹೇಳಿದ ಲಕ್ಷಣವುಳ್ಳ ಅಕ್ಷರನೆಂಬ ಹೆಸರಿನ ಯಾವ (ಪುರುಷನು) ಸರ್ವಜ್ಞನೋ ಸಾಮಾನ್ಯವಾಗಿ[1] ಎಲ್ಲವನ್ನೂ ಅರಿಯುವನಾದ್ದರಿಂದ ಸರ್ವಜ್ಞನೋ - ವಿಶೇಷರೂಪದಿಂದ[2] ಸರ್ವವನ್ನೂ ಅರಿಯುವನಾದ್ದರಿಂದ ಸರ್ವವಿದನೋ, ಯಾವನ ತಪಸ್ಸು ಜ್ಞಾನಮಯವಾಗಿರುವದೋ ಸರ್ವಜ್ಞತಾಸ್ವರೂಪವಾದ ಜ್ಞಾನವಿಕಾರವೇ[3] ಹೊರತು ಆಯಾಸರೂಪವಾದ (ತಪಸ್ಸ)ಲ್ಲವೋ[4] ಆ ಹಿಂದೆ ಹೇಳಿದ ಸರ್ವಜ್ಞನಿಂದ ಈ ಕಾರ್ಯರೂಪವಾದ **ಹಿರಣ್ಯಗರ್ಭ**ನೆಂಬ ಬ್ರಹ್ಮವು ಉಂಟಾಗುತ್ತದೆ. ಮತ್ತು 'ಇವನು ದೇವದತ್ತನು', '(ಇವನು) ಯಜ್ಞದತ್ತನು' - ಮುಂತಾದ ರೂಪದ **ನಾಮವೂ**, 'ಇದು ಬಿಳಿದು', '(ಇದು) ಕಪ್ಪು' - ಮುಂತಾದ **ರೂಪವೂ** ಬತ್ತ, ಜವೆ ಮುಂತಾದ **ಅನ್ನವೂ** ಉಂಟಾಗುತ್ತದೆ. ಹಿಂದಿನ ಮಂತ್ರದಲ್ಲಿ ಹೇಳಿದ ಕ್ರಮ ದಿಂದ (ಇದೆಲ್ಲವೂ ಉಂಟಾಗುತ್ತದೆ) ಎಂದು (ಪೂರ್ವಾಪರ)ವಿರೋಧವಿಲ್ಲದಂತೆ ಅರ್ಥಮಾಡಿಕೊಳ್ಳಬೇಕು.

1. ಆತ್ಮನು ತನ್ನ ಸ್ವರೂಪವಾದ ಚೈತನ್ಯದಿಂದ ಎಲ್ಲವನ್ನೂ ವಿಷಯೀಕರಿಸುವನು ; ಇದೇ ಸರ್ವಜ್ಞತೆಯು.

2. ವಿಜ್ಞಾನಾತ್ಮರ ರೂಪದಿಂದ ವೃತ್ತಿಜ್ಞಾನಗಳಿಂದ ಇದು ಇಂಥದ್ದು ಎಂದು ಪದಾರ್ಥಗಳನ್ನು ವಿಶೇಷರೂಪದಿಂದ ಅರಿಯುವವನೂ ಅಕ್ಷರಪುರುಷನೇ.

3. ಜ್ಞಾನವಿಕಾರವೆಂಬುದು ಉಪಚಾರಕ್ಕೆ, ಬಿಲದಿಂದ ಹೊರಕ್ಕೆ ಬಂದ ಹಾವನ್ನು ಸೂರ್ಯನು ಬೆಳಗಿದನು - ಎಂಬಂತೆ ಆತ್ಮನು ಆಲೋಚನಾರೂಪವಾದ ತಪಸ್ಸನ್ನು ಮಾಡಿದನು - ಎಂದು ವಾಕ್ಯಕ್ಕೆ ಅರ್ಥವನ್ನು ಮಾಡಬೇಕು. ಈ ಜ್ಞಾನವು ಆತ್ಮಸ್ವರೂಪವೇ. ತೈ. ಭಾ. ೨-೬, "ಸ ತಪೋಽತಪ್ಯತ" ಎಂಬುದರ ವಿವರಣೆಯನ್ನು ನೋಡಿ.

4. ಉಪವಾಸವೇ ಮುಂತಾದ ರೂಪದ್ದಲ್ಲ.

# ಒಂದನೆಯ ಮುಂಡಕ-ಎರಡನೆಯ ಖಂಡ

## ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೨೬. ಸಾಙ್ಗಾ ವೇದಾಃ ಅಪರಾ ವಿದ್ಯಾ ಉಕ್ತಾ "ಋಗ್ವೇದೋ ಯಜುರ್ವೇದಃ" (೧-೧-೫) ಇತ್ಯಾದಿನಾ । "ಯತ್ ತದದ್ರೇಶ್ಯಮ್" (೧-೧-೬) ಇತ್ಯಾದಿನಾ "ನಾಮರೂಪಮನ್ನಂ ಚ ಜಾಯತೇ" (೧-೧-೯) ಇತ್ಯನ್ತೇನ ಗ್ರನ್ಥೇನ ಉಕ್ತ ಲಕ್ಷಣಮ್ ಅಕ್ಷರಮ್ "ಯಯಾ ವಿದ್ಯಯಾ ಅಧಿಗಮ್ಯತೇ" (೧-೧-೫) ಇತಿ ಪರಾ ವಿದ್ಯಾ ಸವಿಶೇಷಣಾ ಉಕ್ತಾ । ಅತಃಪರಮ್ ಅನಯೋರ್ವಿದ್ಯಯೋರ್ವಿಷಯೌ ವಿವೇಕ್ತವ್ಯೌ ಸಂಸಾರಮೋಕ್ಷೌ ಇತಿ ಉತ್ತರೋ ಗ್ರನ್ಥಃ ಆರಭ್ಯತೇ ॥

"ಋಗ್ವೇದ, ಯಜುರ್ವೇದ" (೧-೧-೫) ಮುಂತಾದ (ವಾಕ್ಯ)ದಿಂದ ಅಂಗಗಳಿಂದ ಕೂಡಿರುವ ವೇದಗಳು ಅಪರವಿದ್ಯೆ ಎಂದು ಹೇಳಲಾಯಿತು. "ಯಾವ ಅದು ಅದೃಶ್ಯವಾದದ್ದು" (೧-೧-೬) ಎಂದು ಮೊದಲಾಗಿ "ನಾಮವೂ, ರೂಪವೂ ಅನ್ನವೂ ಉಂಟಾಗುತ್ತದೆ" (೧-೧-೯) ಎಂಬವರೆಗಿನ ಗ್ರಂಥದಿಂದ (ಈ) ಹೇಳಿದ ಲಕ್ಷಣವುಳ್ಳ ಅಕ್ಷರವು "ಯಾವ ವಿದ್ಯೆಯಿಂದ ಪ್ರಾಪ್ತವಾಗುತ್ತದೆಯೋ" (ಅದು ಪರವಿದ್ಯೆ ೧-೧-೫) ಎಂದು ಪರವಿದ್ಯೆಯನ್ನು ವಿಶೇಷಣದೊಡನೆ[1] ಹೇಳಿದ್ದಾಯಿತು. ಇನ್ನು ಮೇಲೆ ಈ ಎರಡು ವಿದ್ಯೆಗಳ ವಿಷಯವಾದ ಸಂಸಾರಮೋಕ್ಷಗಳನ್ನು ವಿಂಗಡಿಸಿ ಹೇಳಬೇಕು ಎಂದು ಮುಂದಿನ ಗ್ರಂಥವನ್ನು ಆರಂಭಿಸಿರುತ್ತದೆ.

## ಅಪರವಿದ್ಯೆಯ ವಿಷಯವನ್ನು ಮೊದಲು ಹೇಳಿರುವದೇಕೆ ?

(ಭಾಷ್ಯ)

೨೭. ತತ್ರ ಅಪರವಿದ್ಯಾವಿಷಯಃ ಕರ್ತ್ರಾದಿಸಾಧನಕ್ರಿಯಾಫಲಭೇದ ರೂಪಃ ಸಂಸಾರಃ, ಅನಾದಿಃ ಅನನ್ತಃ, ದುಃಖಸ್ವರೂಪತ್ವಾತ್ ಹಾತವ್ಯಃ ಪ್ರತ್ಯೇಕಂ ಶರೀರಿಭಿಃ ಸಾಮಸ್ತ್ಯೇನ ನದೀಸ್ರೋತೋವದವಿಚ್ಛೇದ[2]ರೂಪಸಂಬನ್ಧಃ । ತದುಪ ಶಮಲಕ್ಷಣೋ ಮೋಕ್ಷಃ ಪರವಿದ್ಯಾವಿಷಯಃ ಅನಾದ್ಯನನ್ತಃ ಅಜರೋಽಮರೋಽ ಮೃತೋಽಭಯಃ ಶುದ್ಧಃ ಪ್ರಸನ್ನಃ ಸ್ವಾತ್ಮಪ್ರತಿಷ್ಠಾಲಕ್ಷಣಃ ಪರಮಾನನ್ದೋಽದ್ವಯ

1. ಪರವಿದ್ಯೆಯ ವಿಶೇಷಣವೆಂದರೆ ಅದರಿಂದ ಅರಿತುಕೊಳ್ಳಬೇಕಾದ ಅಕ್ಷರಸ್ವರೂಪವೇ.
2. 'ಅವ್ಯವಚ್ಛೇದರೂಪ' ಎಂದು ಆ॥ ಪಾಠ.

ಇತಿ । ಪೂರ್ವಂ ತಾವತ್ ಅಪರವಿದ್ಯಾಯಾಃ ವಿಷಯಪ್ರದರ್ಶನಾರ್ಥಮ್ ಆರಮ್ಭಃ । ತದ್ದರ್ಶನೇ ಹಿ ತನ್ನಿರ್ವೇದೋಪಪತ್ತಿಃ[1] । ತಥಾ ಚ ವಕ್ಷ್ಯತಿ ''ಪರೀಕ್ಷ್ಯ ಲೋಕಾನ್ ಕರ್ಮಚಿತಾನ್'' (೧.೨.೧೨) ಇತ್ಯಾದಿನಾ । ನ ಹಿ ಅಪ್ರದರ್ಶಿತೇ ಪರೀಕ್ಷಾ ಉಪಪದ್ಯತೇ ಇತಿ ತತ್ ಪ್ರದರ್ಶಯನ್ ಆಹ -

## (ಭಾಷ್ಯಾರ್ಥ)

ಇವುಗಳಲ್ಲಿ **ಅಪರವಿದ್ಯೆಗೆ ವಿಷಯವಾದದ್ದು ಬೇರೆಬೇರೆಯ ಕರ್ತೃವೇ ಮುಂತಾದ ಸಾಧನ, ಕ್ರಿಯೆ, ಫಲ - ಎಂಬ ರೂಪದಲ್ಲಿರುವ ಸಂಸಾರವು (ಇದು)** ಮೊದಲಿಲ್ಲದ್ದು, ಕೊನೆಯಿಲ್ಲದ್ದು[2] ; ದುಃಖರೂಪವಾಗಿರುವದರಿಂದ ಶರೀರಿಗಳಾದವರು ಒಬ್ಬೊಬ್ಬರೂ[3] ನದಿಯ ಪ್ರವಾಹದಂತೆ ಕಡಿವಡೆಯದೆ ಹೊಂದಿಕೊಂಡುಬಂದಿರುವ (ಇದನ್ನು) ಸಂಪೂರ್ಣವಾಗಿ[4] ನಾಶಪಡಿಸಿಕೊಳ್ಳಬೇಕು. **ಈ (ಸಂಸಾರವು) ನಾಶವಾಗುವದೆಂಬ ಮೋಕ್ಷವು ಪರವಿದ್ಯೆಯ ವಿಷಯವು.** (ಇದು) ಮೊದಲಿಲ್ಲದ್ದು, ಕೊನೆಯಿಲ್ಲದ್ದು[5] ಮುಪ್ಪಿಲ್ಲದ್ದು, ಸಾವಿಲ್ಲದ್ದು, ನಿತ್ಯವಾದದ್ದು,[6]

1. 'ತನ್ನಿರ್ವೇದೋಪಪತ್ತೇಃ' ಎಂಬ ಆ|| ಪಾಠಕ್ಕಿಂತ ಈ|| ವಾ|| ಕಾ|| ಪಾಠವು ಉತ್ತಮ.

2. ಸಂಸಾರವು ಜ್ಞಾನದಿಂದ ಬಾಧಿತವಾಗುವವರೆಗೆ ಇದಕ್ಕೆ ತುದಿಮೊದಲುಗಳಿರುವದಿಲ್ಲ. ಸೂ.ಭಾ. ೨-೧-೩೬, ಗೀ.ಭಾ. ೧೫-೩.

3. ಈ ಭಾಷ್ಯಕ್ಕೆ ಏಕಜೀವವಾದವು ವಿರುದ್ಧವೆಂದು ವ್ಯಾಖ್ಯಾನಕಾರರು ಬರೆದಿರುತ್ತಾರೆ. ಇದು ನಿಜವಾದರೂ ಭಾಷ್ಯಕಾರರ ಕಾಲಕ್ಕೆ ಏಕಜೀವವಾದ - ನಾನಾಜೀವವಾದಗಳು ಇರಲಿಲ್ಲ. ಬಂಧವು ಸತ್ಯವಾದರೆ ಒಬ್ಬನು ಮುಕ್ತನಾದರೆ ಮತ್ತೊಬ್ಬನು ನಾಶಪಡಿಸಿಕೊಳ್ಳಬೇಕಾದ ಸಂಸಾರವೇ ಇರುವದಿಲ್ಲ. ಅದು ಮಿಥ್ಯೆಯಾದ್ದರಿಂದ ಯಾರಿಗೆ ಜ್ಞಾನವುಂಟಾಗುವದೋ ಅವರಿಗೆ ಅದರ ನಾಶವಾಗುತ್ತದೆ - ಎಂಬುದು ಭಾಷ್ಯಕಾರರ ಹೃದಯವು. ಸೂ.ಭಾ. ೩-೨-೨೧ ''ಏಕೇನ ಚಾದಿಮುಕ್ತೇನ'' ಎಂಬ ವಾಕ್ಯವನ್ನು ನೋಡಿ. ಬೃ.ಭಾ. ೫-೧-೧ ''ಪ್ರತಿಪುರುಷಂ ಪರಿಸಮಾಪ್ತಂ ಶಾಸ್ತ್ರಮ್'' ಎಂಬ ವಾಕ್ಯಕ್ಕೆ ಇದೇ ಅರ್ಥ.

4. ನಿದ್ರೆಸಮಾಧಿಗಳಲ್ಲಿ ಸಂಸಾರವು ತೋರುವದಿಲ್ಲವಾದರೂ ಸಂಪೂರ್ಣವಾಗಿ ಹೋಗಿರುವದಿಲ್ಲ.

5. ಸಂಸಾರವು ಜ್ಞಾನವುಂಟಾಗುವವರೆಗೆ ಕಾಲದಲ್ಲಿ ಪ್ರವಾಹವಾಗಿ ನಡೆದುಕೊಂಡು ಬಂದಿರುವದರಿಂದ ತುದಿಮೊದಲುಗಳಿಲ್ಲದ್ದಾಗಿರುವದು. ಆದರೆ ಮೋಕ್ಷವು ಕಾಲವನ್ನೂ ಮೀರಿದ ಆತ್ಮಸ್ವರೂಪವಾಗಿರುವದರಿಂದ ನಿಜವಾಗಿ ತುದಿಮೊದಲಿಲ್ಲದ್ದು.

6. ಅಮೃತವೆಂದರೆ ನಾಶವಾಗುವ ಸ್ವಭಾವವಿಲ್ಲದ್ದು ಎಂದರೆ ನಿತ್ಯವಾದದ್ದು.

ಭಯವಿಲ್ಲದ್ದು, ಶುದ್ಧವಾದದ್ದು, ಪ್ರಸನ್ನವಾದದ್ದು, ತನ್ನ ಆತ್ಮದಲ್ಲಿಯೇ ನೆಲೆ ನಿಲ್ಲುವದೆಂಬ[1] ರೂಪದ ತನಗೆರಡನೆಯದಿಲ್ಲದ ಪರಮಾನಂದವು.

(ಇವೆರಡರಲ್ಲಿ) ಮೊದಲು ಅಪರವಿದ್ಯೆಯ ವಿಷಯವನ್ನು ತಿಳಿಸೋಣವೆಂದು (ಈ ಮುಂದಿನ ಗ್ರಂಥವನ್ನು) ಪ್ರಾರಂಭಿಸಿರುತ್ತದೆ. ಅದನ್ನು ಅರಿತುಕೊಂಡರೇ ಅಲ್ಲವೆ, ಅದರಲ್ಲಿ ವೈರಾಗ್ಯವುಂಟಾಗುವದು ಸರಿಯಾಗುತ್ತದೆ ? ಆದ್ದರಿಂದಲೇ (ಮುಂದೆ ಶ್ರುತಿಯು) ''ಕರ್ಮದಿಂದಾಗಿರುವ ಲೋಕಗಳನ್ನು ಪರೀಕ್ಷಿಸಿ (ಬ್ರಾಹ್ಮಣನು ವೈರಾಗ್ಯವನ್ನು ಹೊಂದುವನು)'' (೧-೨-೧೨ ಎಂದು ಮುಂತಾದ ವಾಕ್ಯದಿಂದ ಹೀಗೆಂದು) ಹೇಳುವದು. (ಕರ್ಮದ ವಿಷಯವನ್ನು) ತಿಳಿಸದೆ ಇದ್ದರೆ ಅದನ್ನು ಪರೀಕ್ಷಿಸುವದೆಂಬುದು ಹೊಂದಲಾರದಷ್ಟೆ ? ಆದ್ದರಿಂದ ಅದನ್ನು ತಿಳಿಸುವದಕ್ಕಾಗಿ (ಮಂತ್ರವು ಹೀಗೆಂದು) ಹೇಳುತ್ತಿದೆ :

## ಕರ್ಮಮಾರ್ಗ

**ತದೇತತ್ ಸತ್ಯಂ ಮನ್ತ್ರೇಷು ಕರ್ಮಾಣಿ ಕವಯೋ ಯಾನ್ಯಪಶ್ಯಂ-**
**ಸ್ತಾನಿ ತ್ರೇತಾಯಾಂ ಬಹುಧಾ ಸನ್ತತಾನಿ ।**
**ತಾನ್ಯಾಚರಥ ನಿಯತಂ ಸತ್ಯಕಾಮಾ**
**ಏಷ ವಃ ಪನ್ಥಾಃ ಸುಕೃತಸ್ಯ ಲೋಕೇ** ॥೧॥

೧. ಇದು ಸತ್ಯವು. ತಿಳಿದವರು ಮಂತ್ರಗಳಲ್ಲಿ ಯಾವ ಕರ್ಮಗಳನ್ನು ಕಂಡುಕೊಂಡರೋ ಅವು ತ್ರೇತೆಯಲ್ಲಿ ಬಹುವಿಧವಾಗಿ ಹಬ್ಬಿಕೊಂಡಿರುವವು. ಸತ್ಯಕಾಮರಾಗಿ ನಿಯತವಾಗಿ ಅವುಗಳನ್ನು ಆಚರಿಸಿರಿ. ಸುಕೃತದ ಲೋಕಕ್ಕೆ ಇದೇ ನಿಮಗೆ ಹಾದಿಯು.

### (ಭಾಷ್ಯ)

೨೮. ತದೇತತ್ ಸತ್ಯಮ್ ಅವಿತಥಮ್ । ಕಿಂ ತತ್ ? ಮನ್ತ್ರೇಷು ಋಗ್ವೇದಾದ್ಯಾಖ್ಯೇಷು ಕರ್ಮಾಣಿ ಅಗ್ನಿಹೋತ್ರಾದೀನಿ ಮನ್ತ್ರೈರೇವ ಪ್ರಕಾಶಿತಾನಿ ಕವಯಃ ಮೇಧಾವಿನಃ ವಸಿಷ್ಠಾದಯಃ ಯಾನಿ ಅಪಶ್ಯನ್ ದೃಷ್ಟವನ್ತೋ ಯತ್, ತದೇತತ್ ಸತ್ಯಮ್ ಏಕಾನ್ತಪುರುಷಾರ್ಥಸಾಧನತ್ವಾತ್ । ತಾನಿ ಚ ವೇದವಿಹಿತಾನಿ ಋಷಿದೃಷ್ಟಾನಿ . ಕರ್ಮಾಣಿ ತ್ರೇತಾಯಾಂ ತ್ರಯೀಸಂಯೋಗಲಕ್ಷಣಾಯಾಂ

1. ಇದನ್ನೇ ''ಸ್ವಾತ್ಮನ್ಯವಸ್ಥಾನಮ್'' ಎಂದು ತೈ.ಭಾ. ಸಂಬಂಧಭಾಷ್ಯದಲ್ಲಿ, ''ಪ್ರತ್ಯಗಾತ್ಮಸ್ವರೂಪಾವಸ್ಥಾನಮ್'' ಎಂದು ಕ.ಭಾ.ಭಾ. ೧೧೩ರಲ್ಲಿ, ''ಸ್ವರೂಪಾವಸ್ಥಾನಮ್'' ಎಂದು ಸೂ.ಭಾ. ೪-೩-೧೪ ರಲ್ಲಿ ಗೀ.ಭಾ. ೧೮-೬೬ರಲ್ಲಿ ಕರೆದಿರುತ್ತದೆ.

ಹೌತ್ರಾಧ್ವರ್ಯವೌದ್ಗಾತ್ರಪ್ರಕಾರಾಯಾಮ್ ಅಧಿಕರಣಭೂತಾಯಾಮ್ ಬಹುಧಾ ಬಹುಪ್ರಕಾರಂ ಸಂತತಾನಿ ಸಂಪ್ರವೃತ್ತಾನಿ[1] ಕರ್ಮಿಭಿಃ ಕ್ರಿಯಮಾಣಾನಿ । ತ್ರೇತಾಯಾಂ ವಾ ಯುಗೇ ಪ್ರಾಯಶಃ ಪ್ರವೃತ್ತಾನಿ । ಅತಃ ಯೂಯಂ ತಾನಿ ಆಚರಥ ನಿರ್ವರ್ತಯತ ನಿಯತಂ ನಿತ್ಯಂ ಸತ್ಯಕಾಮಾಃ ಯಥಾಭೂತಕರ್ಮಫಲಕಾಮಾಃ ಸನ್ತಃ । ಏಷ ವಃ ಯುಷ್ಮಾಕಂ ಪನ್ಥಾಃ ಮಾರ್ಗಃ ಸುಕೃತಸ್ಯ ಸ್ವಯಂ ನಿರ್ವರ್ತಿತಸ್ಯ ಕರ್ಮಣಃ ಲೋಕೇ ಫಲನಿಮಿತ್ತಮ್ । ಲೋಕ್ಯತೇ ದೃಶ್ಯತೇ ಭುಜ್ಯತೇ ಇತಿ ಕರ್ಮಫಲಂ ಲೋಕ ಉಚ್ಯತೇ । ತದರ್ಥಂ ತತ್ಪ್ರಾಪ್ತಯೇ ಏಷ ಮಾರ್ಗಃ ಇತ್ಯರ್ಥಃ । ಯಾನಿ ಏತಾನಿ ಅಗ್ನಿಹೋತ್ರಾದೀನಿ ತ್ರಯ್ಯಾಂ ವಿಹಿತಾನಿ ಕರ್ಮಾಣಿ ತಾನಿ ಏಷ ಪನ್ಥಾಃ ಅವಶ್ಯಫಲಪ್ರಾಪ್ತಿಸಾಧನಮ್ ಇತ್ಯರ್ಥಃ ॥

## (ಭಾಷ್ಯಾರ್ಥ)

ಆ ಇದು ಸತ್ಯವು, ಹುಸಿಯಲ್ಲ. (ಇದು) ಎಂದರೆ ಯಾವದದು ? ಋಗ್ವೇದವೇ ಮುಂತಾದ ಹೆಸರಿನ ಮಂತ್ರಗಳಲ್ಲಿ[2] ಕರ್ಮಗಳನ್ನು ಎಂದರೆ ಅಗ್ನಿಹೋತ್ರಾದಿಗಳನ್ನು ಮಂತ್ರಗಳಿಂದಲೇ ತೋರಿಸಲ್ಪಟ್ಟಿರುವ ಯಾವ ಕರ್ಮಗಳನ್ನು ತಿಳಿದವರು ಎಂದರೆ ಬಲ್ಲವರಾದ **ವಸಿಷ್ಠರೇ** ಮುಂತಾದವರು ಕಂಡುಕೊಂಡರೋ ಕಂಡುಹಿಡಿದರೋ[3] ಆ ಇದು **ಸತ್ಯವು**, ಏಕೆಂದರೆ ನಿಯತವಾಗಿ (ಇದು) ಪುರುಷಾರ್ಥಕ್ಕೆ ಸಾಧನವಾಗಿರುತ್ತದೆ.[4] ಆ ವೇದವಿಹಿತವಾಗಿ ಋಷಿಗಳು ಕಂಡುಹಿಡಿದ ಕರ್ಮಗಳು **ತ್ರೇತೆಯಲ್ಲಿ** ಎಂದರೆ **ತ್ರಯೀಸಂಬಂಧವುಳ್ಳ**[5] ಹೌತ್ರ, ಆಧ್ವರ್ಯವ, ಔದ್ಗಾತ್ರ[6] ಎಂಬ (ಮೂರು) ಪ್ರಕಾರದ ಆಶ್ರಯದಲ್ಲಿ ಬಹುವಿಧವಾಗಿ ಎಂದರೆ ಅನೇಕಪ್ರಕಾರವಾಗಿ ಕರ್ಮಿಗಳಿಂದ ಮಾಡಲ್ಪಟ್ಟು ಹಬ್ಬಿರುವವು, ಮುಂದಕ್ಕೆ ತರಲ್ಪಟ್ಟಿರುವವು. ಅಥವಾ **ತ್ರೇತೆಯಲ್ಲಿ** ಎಂದರೆ (ಆ ಹೆಸರಿನ) ಯುಗದಲ್ಲಿ ಬಹಳವಾಗಿ ಹರಡಿಕೊಂಡವುಗಳಾಗಿರುವವು.[7] ಆದ್ದರಿಂದ ನೀವು ಸತ್ಯಕಾಮರಾಗಿರುವದರಿಂದ, ಎಂದರೆ ಸತ್ಯವಾಗಿ ಆಗುವ

1. ಇದು ವಾ॥ ಪಾಠ.

2. ಕರ್ಮಗಳೆಲ್ಲವೂ, ಬ್ರಾಹ್ಮಣದಲ್ಲಿ ಹೊಸದಾಗಿ ಕಾಣುವ ಕರ್ಮಗಳು ಕೂಡ, ಮಂತ್ರದಲ್ಲಿಯೇ ಹುಟ್ಟಿದವು. ಛಾಂ. ಭಾ. ೭-೪-೧.

3. ಮಂತ್ರದ್ರಷ್ಟೃಗಳಿಗೆ ಋಷಿಗಳೆಂದು ಹೆಸರು.

4. ಸತ್ಯವೆಂದರೆ ಅವಶ್ಯವಾಗಿ ಫಲವನ್ನು ಕೊಡುವದು, ಪರಮಾರ್ಥಸತ್ಯವಲ್ಲ.

5. ವೇದತ್ರಯರೂಪವಾದ ಮಂತ್ರಗಳಲ್ಲಿ.

6. ಋಗ್ಯಜುಃಸಾಮಗಳನ್ನುಪಯೋಗಿಸುವ ಋತ್ವಿಜರಿಗೆ ಕ್ರಮವಾಗಿ ಈ ಹೆಸರುಗಳು.

7. ಕೃತಯುಗದಲ್ಲಿ ಧ್ಯಾನ, ತ್ರೇತೆಯಲ್ಲಿ ಯಜ್ಞ, ದ್ವಾಪರದಲ್ಲಿ ಅರ್ಚನೆ, ಕಲಿಯಲ್ಲಿ ಕೇಶವಸಂಕೀರ್ತನೆ - ಇವು ಮುಖ್ಯವಾದವು ಎಂದು ಪುರಾಣವಚನ. (ವಿ.ಪು. ೬-೨-೧೭).

ಕರ್ಮಫಲವನ್ನು ಬಯಸುವವರಾಗಿರುವದರಿಂದ[1] ನಿಯತವಾಗಿ ನಿತ್ಯವೂ ಆ (ಕರ್ಮಗಳನ್ನು) ಆಚರಿಸಿರಿ[2] ಮಾಡಿರಿ. ಇದು ನಿಮಗೆ ನಿಮ್ಮಗಳಿಗೆ ಸುಕೃತದ ಎಂದರೆ ನೀವೇ ಮಾಡಿದ ಕರ್ಮದ ಲೋಕಕ್ಕೆ ಎಂದರೆ ಫಲನಿಮಿತ್ತವಾಗಿ ಹಾದಿಯು ದಾರಿಯು. ಲೋಕ್ಯತೇ ಎಂದರೆ ನೋಡಲ್ಪಡುತ್ತದೆ, ಅನುಭವಿಸಲ್ಪಡುತ್ತದೆ ; ಆದ್ದರಿಂದ ಕರ್ಮಫಲಕ್ಕೆ **ಲೋಕ**ವೆಂದು ಹೆಸರು. ಅದಕ್ಕಾಗಿ, ಅದನ್ನು ಪಡೆಯುವದಕ್ಕೆ ಇದು ದಾರಿಯು ಎಂದರ್ಥ. ತ್ರಯಿಯಲ್ಲಿ ಯಾವ ಈ ಅಗ್ನಿಹೋತ್ರಾದಿಕರ್ಮಗಳು ವಿಹಿತವಾಗಿರುವವೋ ಅವುಗಳೇ ಈ ಮಾರ್ಗವು, ಎಂದರೆ ಅವಶ್ಯವಾಗಿ ಫಲವನ್ನು ಪಡೆಯುವದಕ್ಕೆ ಸಾಧನವು ಎಂದರ್ಥ.

### (ಭಾಷ್ಯ)

೨೯. ತತ್ರ ಅಗ್ನಿಹೋತ್ರಮೇವ ತಾವತ್ ಪ್ರಥಮಂ ಪ್ರದರ್ಶನಾರ್ಥಮ್ ಉಚ್ಯತೇ । ಸರ್ವಕರ್ಮಣಾಂ ಪ್ರಾಥಮ್ಯಾತ್ । ತತ್ ಕಥಮ್ ?

### (ಭಾಷ್ಯಾರ್ಥ)

ಇವುಗಳಲ್ಲಿ ಅಗ್ನಿಹೋತ್ರವನ್ನೇ ಮೊದಲು ಉಪಲಕ್ಷಣಕ್ಕಾಗಿ[3] ಹೇಳಲಾಗುತ್ತದೆ ; ಏಕೆಂದರೆ (ಅದು) ಕರ್ಮಗಳಿಗೆಲ್ಲ ಮೊದಲನೆಯ ಸ್ಥಾನದ್ದಾಗಿರುತ್ತದೆ. ಅದು[4] ಹೇಗೆ ? ಎಂದರೆ :-

**ಯದಾ ಲೇಲಾಯತೇ ಹ್ಯರ್ಚಿಃ ಸಮಿದ್ಧೇ ಹವ್ಯವಾಹನೇ ।**
**ತದಾಜ್ಯಭಾಗಾವನ್ತರೇಣಾಹುತೀಃ ಪ್ರತಿಪಾದಯೇತ್ ॥೨॥**

೨. ಯಾವಾಗ ಸಮಿದ್ಧವಾದ ಅಗ್ನಿಯಲ್ಲಿ ಉರಿಯು ಆಡುತ್ತಿರುವದೋ ಆಗ ಆಜ್ಯಭಾಗಗಳ ಮಧ್ಯದಲ್ಲಿ ಆಹುತಿಗಳನ್ನು ಕೊಡಬೇಕು.

### (ಭಾಷ್ಯ)

೩೦. ಯದೈವ ಇನ್ಧನೈರಭ್ಯಾಹಿತೈಃ ಸಮ್ಯಕ್ ಇದ್ಧೇ ಸಮಿದ್ಧೇ ದೀಪ್ತೇ[5] ಹವ್ಯವಾಹನೇ ಲೇಲಾಯತೇ ಚಲತಿ ಅರ್ಚಿಃ, ತದಾ ತಸ್ಮಿನ್ ಕಾಲೇ ಲೇಲಾಯಮಾನೇ

1. ಕರ್ಮಫಲವು ಬೇಕಾದರೆ ಕರ್ಮವನ್ನು ಮಾಡಬೇಕು. ಇಂಥ ಫಲಕ್ಕೆ ಇಂಥ ಕರ್ಮವು ಉಪಾಯವು ಎಂಬುದನ್ನು ತಿಳಿಸುವದೇ ವೇದವಿಧಿಯ ಅರ್ಥವು. ಬೃ. ಭಾ. ಸಂಬಂಧಭಾಷ್ಯವನ್ನು ನೋಡಿ.

2. 'ಆಚರಥ ನಿರ್ವರ್ತಯಥ' ಎಂಬ ಆ॥ ಪಾಠಕ್ಕೆ ಆಚರಿಸುತ್ತೀರಿ, ಮಾಡುತ್ತೀರಿ ಎಂದು ಕನ್ನಡ. 'ನಿರ್ವರ್ತಯತ' ಎಂಬ ವಾ॥ ಕಾ॥ ಪಾಠದಲ್ಲಿ ವರ್ತಮಾನರೂಪಕ್ಕೆ ವಿಧಿಯ ಅರ್ಥವೆಂದು ಸೂಚಿಸಿದೆ.

3. ಅಗ್ನಿಹೋತ್ರವನ್ನು ಹೇಳಿದರೆ ಕರ್ಮಗಳನ್ನೆಲ್ಲ ತಿಳಿಸಿದಂತೆ ಎಂದು ಉದಾಹರಣೆಗಾಗಿ.

4. ಅಗ್ನಿಹೋತ್ರವು. 5. ಇದು ವಾ॥ ಪಾಠ.

ಚಲತಿ ಅರ್ಚಿಷಿ ಆಜ್ಯಭಾಗೌ ಆಜ್ಯಭಾಗಯೋಃ । ಅನ್ತರೇಣ ಮಧ್ಯೇ ಆವಾಪಸ್ಥಾನೇ ಆಹುತೀಃ ಪ್ರತಿಪಾದಯೇತ್, ಪ್ರಕ್ಷಿಪೇತ್ ದೇವತಾಮ್ ಉದ್ದಿಶ್ಯ । ಅನೇಕಾಹ ಪ್ರಯೋಗಾಪೇಕ್ಷಯಾ "ಆಹುತೀಃ" ಇತಿ ಬಹುವಚನಮ್ ॥

(ಭಾಷ್ಯಾರ್ಥ)

ಯಾವಾಗ ಸಮಿತ್ತುಗಳನ್ನು ಹಾಕಿ ಸಮಿದ್ಧವಾದ ಅಗ್ನಿಯಲ್ಲಿ ಎಂದರೆ ಚೆನ್ನಾಗಿ ಹತ್ತಿಕೊಂಡು ಉರಿಯುತ್ತಿರುವ (ಅಗ್ನಿಯಲ್ಲಿ) ಉರಿಯು ಆಡುತ್ತಿರುವದೋ ಚಲಿಸುತ್ತಿರುವದೋ ಆಗ (ಹಾಗೆ) ಆಡುತ್ತಿರುವ ಚಲಿಸುತ್ತಿರುವ ಉರಿಯಲ್ಲಿ ತುಪ್ಪದ ಎರಡು ಭಾಗಗಳ ಮಧ್ಯದಲ್ಲಿ ನಡುವೆ ಇರುವ **ಆವಾಪಸ್ಥಾನದಲ್ಲಿ**[1] ಆಹುತಿಗಳನ್ನು ಕೊಡಬೇಕು, ದೇವತೆಯನ್ನು ಉದ್ದೇಶಿಸಿ (ಆಹುತಿಗಳನ್ನು) ಹಾಕಬೇಕು. ಆಹುತೀಃ ಎಂದು ಬಹುವಚನವನ್ನು ಪ್ರಯೋಗಿಸಿರುವದು ಅನೇಕ ದಿನಗಳ[2] ಕರ್ಮಗಳ ದೃಷ್ಟಿಯಿಂದ.

## ಕರ್ಮಮಾರ್ಗದಲ್ಲಿ ಅಡಚಣೆಗಳು

(ಭಾಷ್ಯ)

೩೧. ಏಷ ಸಮ್ಯಗಾಹುತಿಪ್ರಕ್ಷೇಪಾದಿಲಕ್ಷಣಃ ಕರ್ಮಮಾರ್ಗೋ ಲೋಕಪ್ರಾಪ್ತಯೇ ಪನ್ಥಾಃ । ತಸ್ಯ ಚ ಸಮ್ಯಕ್ಕರಣಂ ದುಷ್ಕರಮ್ । ವಿಪತ್ತಯಸ್ತು ಅನೇಕಾ ಭವನ್ತಿ । ಕಥಮ್ ?

(ಭಾಷ್ಯಾರ್ಥ)

ಸರಿಯಾಗಿ ಆಹುತಿಗಳನ್ನು ಹಾಕುವದೇ ಮುಂತಾದ ರೂಪದ ಈ ಕರ್ಮಮಾರ್ಗವು ಲೋಕಪ್ರಾಪ್ತಿಗೆ ಹಾದಿ. ಇದನ್ನು ಸರಿಯಾಗಿ ಮಾಡುವದು ಕಷ್ಟ ; (ಮಾರ್ಗದಲ್ಲಿ) ತೊಂದರೆಗಳಾದರೋ ಅನೇಕವಾಗಿರುತ್ತವೆ. ಹೇಗೆಂದರೆ :-

**ಯಸ್ಯಾಗ್ನಿಹೋತ್ರಮದರ್ಶಮಪೌರ್ಣಮಾಸ-**
**ಮಚಾತುರ್ಮಾಸ್ಯಮನಾಗ್ರಯಣಮತಿಥಿವರ್ಜಿತಂ ಚ ।**

---

1. ಆಹವನೀಯವೆಂಬ ಅಗ್ನಿಗೆ ದಕ್ಷಿಣೋತ್ತರಭಾಗಗಳಲ್ಲಿ 'ಅಗ್ನಯೇ ಸ್ವಾಹಾ', 'ಸೋಮಾಯ ಸ್ವಾಹಾ' ಎಂಬ - ಎರಡು ಆಜ್ಯಭಾಗಗಳನ್ನು ದರ್ಶಪೂರ್ಣಮಾಸದಲ್ಲಿ ಕೊಡುತ್ತಾರೆ. ಇವೆರಡರ ನಡುವೆ ಮಿಕ್ಕ ಯಾಗಗಳನ್ನು ಮಾಡುತ್ತಾರೆ. ಆ ನಡುವಿನ ಭಾಗಕ್ಕೆ **'ಆವಾಪಸ್ಥಾನ'**ವೆಂದು ಹೆಸರು. (ಆ॥ ವ್ಯಾ॥).

2. ಬೆಳಗ್ಗೆ 'ಸೂರ್ಯಾಯ ಸ್ವಾಹಾ !' 'ಪ್ರಜಾಪತಯೇ ಸ್ವಾಹಾ !' ಎಂತಲೂ ಸಾಯಂಕಾಲದಲ್ಲಿ 'ಅಗ್ನಯೇ ಸ್ವಾಹಾ !' 'ಪ್ರಜಾಪತಯೇ ಸ್ವಾಹಾ !' ಎಂತಲೂ ಎರಡೆರಡೇ ಆಹುತಿಗಳನ್ನು ಕೊಡುವರು. ಅನೇಕದಿನಗಳ ಅಗ್ನಿಹೋತ್ರಗಳನ್ನು ಮನಸ್ಸಿನಲ್ಲಿಟ್ಟುಕೊಂಡು 'ಆಹುತೀಃ' ಎಂಬ ಬಹುವಚನವನ್ನುಪಯೋಗಿಸಿದೆ. (ಆ॥ ವ್ಯಾ॥).

[illegible] ಹುತ -
**ಮಾಸಪ್ತಮಾಂಸ್ತಸ್ಯ ಲೋಕಾನ್ ಹಿನಸ್ತಿ** ॥೩॥

೩. ಯಾವನ ಅಗ್ನಿಹೋತ್ರವು ಅದರ್ಶವೋ, ಅಪೌರ್ಣಮಾಸವೋ, ಅಚಾತುರ್ಮಾಸ್ಯವೋ, ಅನಾಗ್ರಯಣವೋ, ಅತಿಥಿವರ್ಜಿತವೂ ಆಗಿರುವದೋ, ಅಹುತವೋ, ಅವೈಶ್ವದೇವವೋ, ಅವಿಧಿಯಿಂದ ಹುತವೋ (ಅದು) ಅವನ ಏಳನೆಯದರವರೆಗಿನ ಲೋಕಗಳನ್ನು ನಾಶಮಾಡುವದು.

೩.೨. ಯಸ್ಯ ಅಗ್ನಿಹೋತ್ರಿಣಃ ಅಗ್ನಿಹೋತ್ರಮ್ ಅದರ್ಶಂ ದರ್ಶಾಖ್ಯೇನ ಕರ್ಮಣಾ ವರ್ಜಿತಮ್ । ಅಗ್ನಿಹೋತ್ರಿಭಿಃ[1] ಅವಶ್ಯಕರ್ತವ್ಯತ್ವಾದ್ ದರ್ಶಸ್ಯ ಅಗ್ನಿಹೋತ್ರಿಸಂಬನ್ಧ್ಯಗ್ನಿಹೋತ್ರವಿಶೇಷಣಮಿವ ಭವತಿ । ತದಕ್ರಿಯಮಾಣಮ್ ಇತ್ಯೇತತ್ । ತಥಾ ಅಪೌರ್ಣಮಾಸಮ್ ಇತ್ಯಾದಿಷ್ವಪಿ ಅಗ್ನಿಹೋತ್ರವಿಶೇಷಣತ್ವಂ ದ್ರಷ್ಟವ್ಯಮ್ । ಅಗ್ನಿಹೋತ್ರಾನಙ್ಗತ್ವಸ್ಯ[2] ಅವಿಶಿಷ್ಟತ್ವಾತ್ । ಅಪೌರ್ಣಮಾಸಂ ಪೌರ್ಣಮಾಸಕರ್ಮವರ್ಜಿತಮ್ । ಅಚಾತುರ್ಮಾಸ್ಯಂ ಚಾತುರ್ಮಾಸ್ಯಕರ್ಮವರ್ಜಿತಮ್ । ಅನಾಗ್ರಯಣಮ್ ಆಗ್ರಯಣಂ ಶರದಾದಿಷು ಕರ್ತವ್ಯಮ್ । ತಚ್ಚ ನ ಕ್ರಿಯತೇ ಯಸ್ಯ ತಥಾ ಅತಿಥಿವರ್ಜಿತಂ ಚ ಅತಿಥಿಪೂಜನಂ ಚ ಅಹನ್ಯಹನಿ ಅಕ್ರಿಯಮಾಣಂ ಯಸ್ಯ । ಸ್ವಯಂ ಸಮ್ಯಗಗ್ನಿಹೋತ್ರಕಾಲೇ ಅಹುತಮ್ । ಅದರ್ಶಾದಿವತ್ ಅವೈಶ್ವದೇವಂ ವೈಶ್ವದೇವಕರ್ಮವರ್ಜಿತಮ್ । ಹೂಯಮಾನಮಪಿ ಅವಿಧಿನಾ ಹುತಮ್ ಅಯಥಾ ಹುತಮ್ । ಏವಂ ದುಃಸಂಪಾದಿತಮ್ ಅಸಂಪಾದಿತಮ್ ಅಗ್ನಿಹೋತ್ರಾದ್ಯುಪಲಕ್ಷಿತಂ ಕರ್ಮ ಕಿಂ ಕರೋತೀತಿ ? ಉಚ್ಯತೇ - ಆಸಪ್ತಮಾನ್ ಸಪ್ತಮಸಹಿತಾನ್ ತಸ್ಯ ಕರ್ತುಃ ಲೋಕಾನ್ ಹಿನಸ್ತಿ ಹಿನಸ್ತೀವ ಆಯಾಸಮಾತ್ರಫಲತ್ವಾತ್ । ಸಮ್ಯಕ್ ಕ್ರಿಯಮಾಣೇಷು ಹಿ ಕರ್ಮಸು ಕರ್ಮಪರಿಣಾಮಾನುರೂಪೇಣ ಭೂರಾದಯಃ ಸತ್ಯಾನ್ತಾಃ ಸಪ್ತಲೋಕಾಃ ಫಲಂ ಪ್ರಾಪ್ಯನ್ತೇ । ತೇ ಲೋಕಾಃ ಏವಂಭೂತೇನ ಅಗ್ನಿಹೋತ್ರಾದಿಕರ್ಮಣಾ ತು ಅಪ್ರಾಪ್ಯತ್ವಾತ್ ಹಿಂಸ್ಯನ್ತೇ ಇವ । ಆಯಾಸಮಾತ್ರಂ ತು ಅವ್ಯಭಿಚಾರಿ ಇತ್ಯತೋ ಹಿನಸ್ತಿ ಇತ್ಯುಚ್ಯತೇ । ಪಿಣ್ಡದಾನಾದ್ಯನುಗ್ರಹೇಣ ವಾ ಸಂಬಧ್ಯಮಾನಾಃ ಪಿತೃಪಿತಾಮಹಪ್ರಪಿತಾಮಹಾಃ ಪುತ್ರಪೌತ್ರ ಪ್ರಪೌತ್ರಾಃ ಸ್ವಾತ್ಮೋಪಕಾರಾಃ ಸಪ್ತ ಲೋಕಾಃ ಉಕ್ತ ಪ್ರಕಾರೇಣ ಅಗ್ನಿಹೋತ್ರಾದಿನಾ ನ ಭವನ್ತಿ ಇತಿ ಹಿಂಸ್ಯನ್ತೇ ಇತ್ಯುಚ್ಯತೇ ॥

1. ಇದು ವಾ॥ ಪಾಠ॥ 'ಅಗ್ನಿಹೋತ್ರಿಣಃ' ಎಂದು ಆ॥ ಪಾಠ.
2. 'ಅಗ್ನಿಹೋತ್ರಾಙ್ಗತ್ವಸ್ಯ' ಎಂದು ಮುದ್ರಿತಪುಸ್ತಕಗಳಲ್ಲಿ ತಪ್ಪಾಗಿ ಬಿದ್ದಿದೆ.

## (ಭಾಷ್ಯಾರ್ಥ)

ಯಾವ ಅಗ್ನಿಹೋತ್ರಿಯ ಅಗ್ನಿಹೋತ್ರವು ಅದರ್ಶವೋ ಎಂದರೆ ದರ್ಶವೆಂಬ[1] ಕರ್ಮವಿಲ್ಲದ್ದಾಗಿರುವದೋ, ಅಗ್ನಿಹೋತ್ರಿಗಳು ದರ್ಶವನ್ನು ಅವಶ್ಯವಾಗಿ ಮಾಡಬೇಕಾಗಿರುವದರಿಂದ (ಅದು) ಅಗ್ನಿಹೋತ್ರಿಗಳಿಗೆ ಸಂಬಂಧಪಟ್ಟು[2] ಅಗ್ನಿಹೋತ್ರಕ್ಕೂ ವಿಶೇಷಣವಾದಂತೆ ಆಯಿತು. ಅದನ್ನು ಮಾಡದಿರುವ (ಅಗ್ನಿಹೋತ್ರವೋ) ಎಂದು ಅಭಿಪ್ರಾಯ. ಹೀಗೆಯೇ 'ಅಪೌರ್ಣಮಾಸಮ್' ಮುಂತಾದವುಗಳ ವಿಷಯದಲ್ಲಿಯೂ (ಅವು) ಅಗ್ನಿಹೋತ್ರಕ್ಕೆ ವಿಶೇಷಣವಾಗಿರುವವೆಂದು ತಿಳಿಯಬೇಕು ; ಏಕೆಂದರೆ ಅಗ್ನಿಹೋತ್ರಕ್ಕೆ ಅಂಗವಲ್ಲವೆಂಬುದು ಅವುಗಳಿಗೂ ಸಮಾನವಾಗಿದೆ.[3] ಅಪೌರ್ಣಮಾಸವೋ ಎಂದರೆ ಪೌರ್ಣಮಾಸವೆಂಬ[4] ಕರ್ಮವಿಲ್ಲದ್ದೋ, ಅಚಾತುರ್ಮಾಸ್ಯವೋ ಎಂದರೆ ಚಾತುರ್ಮಾಸ್ಯವೆಂಬ[5] ಕರ್ಮವಿಲ್ಲದ್ದೋ, ಅನಾಗ್ರಯಣವೋ, ಆಗ್ರಯಣವೆಂದರೆ ಶರದೃತುವಿನ ಆದಿಭಾಗಗಳಲ್ಲಿ ಮಾಡಬೇಕಾದದ್ದು.[6] ಅದು ಯಾವ (ಅಗ್ನಿಹೋತ್ರಕ್ಕೆ) ಮಾಡದೆ ಇರುವದಾಗಿರುವದೋ, (ಎಂದರ್ಥ)[7]. ಹಾಗೂ ಅತಿಥಿವರ್ಜಿತವೂ ಆಗಿರುವದೋ ದಿನದಿನವೂ ಅತಿಥಿಪೂಜೆಯನ್ನು ಮಾಡದೆ ಇರುವದಾಗಿರುವದೋ, ತಾನೂ ಅಗ್ನಿಹೋತ್ರಕಾಲದಲ್ಲಿ ಸರಿಯಾಗಿ ಹುತವಲ್ಲದೆ ಇರುವದೋ[8] 'ಅದರ್ಶವಾಗಿರುವದೋ, ಮುಂತಾದದ್ದರಂತೆ[9] ಅವೈಶ್ವದೇವವೋ

---

1. ಅಮಾವಾಸ್ಯೆಯಲ್ಲಿ ಮಾಡುವ ಕಾರ್ಯ.

2. 'ಅಗ್ನಿಹೋತ್ರಸಂಬನ್ಧಿ' ಎಂಬ ಆ।। ಪಾಠವು ಸರಿಯಲ್ಲ. 'ಅಗ್ನಿಹೋತ್ರಿ' ಎಂದೇ ಇರಬೇಕು. ಅಗ್ನಿಹೋತ್ರಿಗಳಿಗೆ ಈ ಕರ್ಮಗಳು ಸೇರಿವೆಯಾದ್ದರಿಂದ ಅಗ್ನಿಹೋತ್ರಿಯ ಮೂಲಕವಾಗಿ ಅಗ್ನಿಹೋತ್ರಕ್ಕೂ ವಿಶೇಷಣವಾದಂತೆ ಆಯಿತು ಎಂದರ್ಥ.

3. ದರ್ಶಾದಿಗಳು ಅಗ್ನಿಹೋತ್ರದ ಅಂಗಗಳಲ್ಲವಾದರೂ 'ಇವುಗಳನ್ನು ಮಾಡದೆ ಮಾಡಿದ ಬರಿಯ ಅಗ್ನಿಹೋತ್ರವೋ' ಎಂದು ವಿಶೇಷಣವಿಶೇಷ್ಯಭಾವವನ್ನು ಕಲ್ಪಿಸಿಕೊಳ್ಳಬೇಕೆಂದು ಅರ್ಥ.

4. ಹುಣ್ಣಿಮೆಯಲ್ಲಿ ಮಾಡಬೇಕಾದ ಕರ್ಮ.

5. ನಾಲ್ಕು ನಾಲ್ಕು ತಿಂಗಳಿಗೊಮ್ಮೆ ಮಾಡಬೇಕಾದ ಕರ್ಮ.

6. ಮಳೆಗಾಲವು ಕಳೆದ ಬಳಿಕ ಹೊಸ ಅನ್ನದಿಂದ ಮಾಡಬೇಕಾದ ಕರ್ಮ.

7. ಇಲ್ಲಿ 'ತತ್ ತಥಾ' ಎಂದು ಮ।। ಪಾಠ ; ತತ್ । ತಥಾ ಎಂದು ಕಾ।। ಪಾಠ. ಇವೆರಡರಲ್ಲಿಯೂ ತತ್ ಎಂದರೆ ಆ ಅಗ್ನಿಹೋತ್ರವು. ತಥಾ ಎಂಬುದು ಮುಂದಿನ ವಾಕ್ಯಕ್ಕೆ ಸೇರಿದ್ದೇ ಎಂದು ತೋರಿದ್ದರಿಂದ ಹಾಗೆಯೇ ಕನ್ನಡಿಸಿದೆ.

8. ಇತರ ಕರ್ಮಗಳನ್ನು ಮಾಡದ ಬರಿಯ ಅಗ್ನಿಹೋತ್ರದಂತೆ ಸರಿಯಾಗಿ ಹೋಮ ಮಾಡದ ಅಗ್ನಿಹೋತ್ರವೂ ನಿಷ್ಫಲ.

9. ಅದರ್ಶವೋ ಮುಂತಾದವುಗಳಂತೆ ಅವೈಶ್ವದೇವವೋ ಎಂಬುದೂ ಅಗ್ನಿಹೋತ್ರಕ್ಕೆ ಪರಂಪರೆಯ ವಿಶೇಷಣವಾಗಿರುವದೆಂದು ಅರ್ಥ.

ವೈಶ್ವದೇವವೆಂಬ ಕರ್ಮವಿಲ್ಲದ್ದಾಗಿರುವದೋ ; ಹೋಮಮಾಡಿದರೂ ಅವಿಧಿಯಿಂದ[1] ಹುತವಾಗಿರುವದೋ ಎಂದರೆ ತಪ್ಪಾಗಿ ಹೋಮಮಾಡಿರುವದಾಗಿರುವದೋ. ಹೀಗೆ ತಪ್ಪಾಗಿ ಮಾಡಿರುವ, ಸಂಪೂರ್ಣವಾಗಿ ಮಾಡದೆ ಇರುವ, ಅಗ್ನಿಹೋತ್ರವೇ ಮುಂತಾದ (ಅಗ್ನಿಹೋತ್ರದಿಂದ) ಉಪಲಕ್ಷಿತವಾದ[2] ಕರ್ಮವು ಏನು ಮಾಡುತ್ತದೆ ? ಎಂದರೆ (ಶ್ರುತಿ) ಹೇಳುತ್ತದೆ. ಏಳನೆಯದರವರೆಗಿನ, ಏಳನೆಯದನ್ನೂ ಸೇರಿಸಿಕೊಂಡು ಆ ಕರ್ತೃವಿನ ಲೋಕಗಳನ್ನು ನಾಶಮಾಡುವದು, ನಾಶಮಾಡಿದಂತೆ ಇರುವದು ; ಏಕೆಂದರೆ (ಕರ್ಮಕ್ಕೆ) ಬರಿಯ ಆಯಾಸವೇ ಫಲವಾಗಿರುತ್ತದೆ. ಕರ್ಮಗಳನ್ನು ಸರಿಯಾಗಿ ಮಾಡಿದರಲ್ಲವೆ, ಕರ್ಮದ ಪರಿಪಾಕಕ್ಕೆ ಅನುಗುಣವಾಗಿ ಭೂರಾದಿಯಾಗಿ ಸತ್ಯದವರೆಗಿನ ಏಳು ಲೋಕಗಳು ಫಲವಾಗಿ ದೊರಕುತ್ತವೆ ?[3] ಆ ಲೋಕಗಳು ಇಂಥ ಅಗ್ನಿಹೋತ್ರವೇ ಮುಂತಾದ ಕರ್ಮದಿಂದಲಾದರೋ ದೊರಕದೆ ಇರುವದರಿಂದ ನಾಶಪಡಿಸಲ್ಪಟ್ಟಂತೆ ಆಗುವವು ; ಆಯಾಸವೊಂದು ಮಾತ್ರ (ಯಾವಾಗಲೂ) ತಪ್ಪದೆ ಆಗುತ್ತದೆ. ಆದ್ದರಿಂದ 'ಹಿನಸ್ತಿ' ನಾಶಮಾಡುವದು ಎಂದು ಹೇಳಿದೆ. ಅಥವಾ ಪಿಂಡವನ್ನು ಕೊಡುವದೇ ಮುಂತಾದ ಉಪಕಾರದಿಂದ (ತನಗೆ) ಸಂಬಂಧಿಸುವ ತಂದೆ, ಅಜ್ಜ, ಮುತ್ತಜ್ಜ-ಇವರೂ ಮಗ, ಮೊಮ್ಮಗ, ಮರಿಮಗ - ಇವರೂ ತನ್ನ ಉಪಕಾರವನ್ನು ಪಡೆಯು(ವದರಿಂದ ತನ್ನನ್ನೂ ಸೇರಿಸಿಕೊಂಡರೆ) ಏಳುಲೋಕಗಳಾಗುವರು. (ಇವರು) ಮೇಲೆ ಹೇಳಿದಂತೆ ಅಗ್ನಿಹೋತ್ರವೇ ಮುಂತಾದ (ಕರ್ಮ)ದಿಂದ ಆಗುವದಿಲ್ಲ ; ಆದ್ದರಿಂದ ನಾಶಪಡಿಸಲ್ಪಡುತ್ತವೆ - ಎಂದು ಹೇಳಿದೆ.

## ಕರ್ಮಫಲ

**ಕಾಲೀ ಕರಾಲೀ ಚ ಮನೋಜವಾ ಚ**
**ಸುಲೋಹಿತಾ ಯಾ ಚ ಸುಧೂಮ್ರವರ್ಣಾ ।**
**ಸ್ಫುಲಿಙ್ಗಿನೀ ವಿಶ್ವರುಚೀ ಚ ದೇವೀ**
**ಲೇಲಾಯಮಾನಾ ಇತಿ ಸಪ್ತ ಜಿಹ್ವಾಃ ॥೪॥**

೪. (ಹೊಳೆಯುತ್ತ) ಆಡುತ್ತಿರುವ ಕಾಲಿ, ಕರಾಲಿ, ಮನೋಜವೆ, ಸುಲೋಹಿತೆ, ಸುಧೂಮ್ರವರ್ಣೆ, ಸ್ಫುಲಿಂಗಿನಿ, ದೇವಿಯಾದ ವಿಶ್ವರುಚಿ - ಹೀಗೆ ಏಳು ನಾಲಗೆಗಳು.

1. ಅವಿಧಿಯಿಂದ ಎಂದರೆ ವಿಧಿಗೆ ವಿರುದ್ಧವಾಗಿ.

2. ಅಗ್ನಿಹೋತ್ರವನ್ನು ಉಪಲಕ್ಷಣವಾಗಿ ಹೇಳಿರುವದರಿಂದ ಯಾವ ಕರ್ಮಕ್ಕಾದರೂ ಇದೇ ಅನ್ವಯಿಸುತ್ತದೆ ಎಂದು ಅರ್ಥ.

3. 'ಪ್ರಾಪ್ಯತೇ', 'ಪ್ರಾಪ್ತವ್ಯಂ' ಎಂಬ ಪಾಠಗಳಲ್ಲಿ ಫಲಂ ಎಂಬುದಕ್ಕೆ ಪ್ರಾಧಾನ್ಯವನ್ನು ಕೊಟ್ಟು ಏಕವಚನವನ್ನು ಪ್ರಯೋಗಿಸಿದೆ.

(ಭಾಷ್ಯ)

೩೩. ಕಾಲೀ ಕರಾಲೀ ಚ ಮನೋಜವಾ ಚ ಸುಲೋಹಿತಾ ಯಾ ಚ ಸುಧೂಮ್ರವರ್ಣಾ । ಸ್ಫುಲಿಙ್ಗಿನೀ ವಿಶ್ವರುಚೀ ಚ ದೇವೀ ಲೇಲಾಯಮಾನಾ ಇತಿ ಸಪ್ತ ಜಿಹ್ವಾಃ[1] । ಕಾಲ್ಯಾದ್ಯಾ ವಿಶ್ವರುಚ್ಯನ್ತಾಃ ಲೇಲಾಯಮಾನಾ ಅಗ್ನೇಃ ಹವಿರಾಹುತಿ ಗ್ರಸನಾರ್ಥಾಃ ಏತಾಃ ಸಪ್ತ[2] ಜಿಹ್ವಾಃ ॥

(ಭಾಷ್ಯಾರ್ಥ)

ಹೊಳೆಯುತ್ತಾ ಆಡುತ್ತಿರುವ ಕಾಲಿ (ಕರಿದು), ಕರಾಲಿ (ಭಯಂಕರವಾದದ್ದು), ಮನೋಜವೆ (ಮನಸ್ಸಿನ ವೇಗವುಳ್ಳದ್ದು), ಸುಲೋಹಿತೆ (ಬಲು ಕೆಂಚಗಿರುವದು), ಸುಧೂಮ್ರವರ್ಣೆ (ತೀರಹೊಗೆಯ ಬಣ್ಣದ್ದು), ಸ್ಫುಲಿಂಗಿನಿ (ಕಿಡಿಗಳುಳ್ಳದ್ದು), ವಿಶ್ವರುಚಿ (ಎಲ್ಲೆಲ್ಲಿಯೂ ಹೊಳೆಯುತ್ತಿರುವದು) - ಎಂದು ಏಳು ನಾಲಗೆಗಳು. ಕಾಲಿ ಮೊದಲು ವಿಶ್ವರುಚಿಯವರೆಗೂ (ಹೇಳಿದ) ಏಳು (ಜಿಹ್ವೆಗಳು) ಹಾಕಿದ ಹವಿಸ್ಸಿನ ಆಹುತಿಗಳನ್ನು ಹಿಡಿದುಕೊಳ್ಳುವದಕ್ಕೆ ಆಡುತ್ತಿರುವ ಅಗ್ನಿಯ ನಾಲಗೆಗಳು.

**ಏತೇಷು ಯಶ್ಚರತೇ ಭ್ರಾಜಮಾನೇಷು**
**ಯಥಾಕಾಲಂ ಚಾಹುತಯೋ ಹ್ಯಾದದಾಯನ್ ।**
**ತಂ ನಯನ್ತ್ಯೇತಾಃ ಸೂರ್ಯಸ್ಯ ರಶ್ಮಯೋ**
**ಯತ್ರ ದೇವಾನಾಂ ಪತಿರೇಕೋಽಧಿವಾಸಃ ॥೫॥**

೫. ಇವುಗಳು ಹೊಳೆಯುತ್ತಿರುವಾಗ ಯಾವನು ಕಾಲಕ್ಕೆ ಸರಿಯಾಗಿ (ಕರ್ಮವನ್ನು) ಮಾಡುತ್ತಾನೋ ಆತನನ್ನು ಈ ಆಹುತಿಗಳು ಸೂರ್ಯರಶ್ಮಿಗಳಾಗಿ ಎಲ್ಲಿ ದೇವತೆಗಳ ಏಕಾಧಿಪತಿಯು ವಾಸಮಾಡಿಕೊಂಡಿರುವನೋ (ಅಲ್ಲಿಗೆ) ಕರೆದುಕೊಂಡು ಹೋಗುವವು.

(ಭಾಷ್ಯ)

೩೪. ಏತೇಷು ಅಗ್ನಿಜಿಹ್ವಾಭೇದೇಷು ಯಃ ಅಗ್ನಿಹೋತ್ರೀ ಚರತೇ ಕರ್ಮ ಆಚರತಿ ಅಗ್ನಿಹೋತ್ರಾದಿ(ಕಂ)[3] ಭ್ರಾಜಮಾನೇಷು ದೀಪ್ಯಮಾನೇಷು ಯಥಾಕಾಲಂ ಚ

1. ಇಲ್ಲಿಯವರೆಗಿನ ಗ್ರಂಥಭಾಗವು ಭಾಷ್ಯಕ್ಕೆ ಸೇರಿರುವಂತೆ ತೋರುವದಿಲ್ಲ. ಮಂತ್ರದಂತೆಯೇ ಇದೆ. ವಾ॥ ಪಾಠದಲ್ಲಿ 'ಇತಿ ಸಪ್ತ ಜಿಹ್ವಾಃ' ಎಂಬುದರ ಬದಲು 'ದಹನಸ್ಯ ಜಿಹ್ವಾಃ' ಎಂದು ಇದೆ. 'ಕಾಲ್ಯಾದ್ಯಾ ವಿಶ್ವರುಚ್ಯನ್ತಾಃ' ಎಂಬುದು ಮೈ॥ ಪಾಠದಲ್ಲಿಲ್ಲ.

2. 'ಏತಾಃ ಕಿಲ' ವಾ॥ ಪಾಠ ; ಇವೇ ಅಲ್ಲವೆ ? ಎಂದು ಅರ್ಥ.

3. 'ಅಗ್ನಿಹೋತ್ರಾದಿ' ಎಂದಿಷ್ಟೇ ಆ॥ ಪಾಠ, 'ಹೋತ್ರಾದಿಕಂ' ಎಂಬುದು ವಾ॥ ಪಾಠ.

ಯಸ್ಯ ಕರ್ಮಣಃ ಯಃ ಕಾಲಃ ತಂ ಕಾಲಮ್ ಅನತಿಕ್ರಮ್ಯ[1] ಯಥಾಕಾಲಂ ಯಜಮಾನಂ ಆದದಾಯನ್ ಅದದಾನಾ ಆಹುತಯಃ ಯಜಮಾನೇನ ನಿರ್ವರ್ತಿತಾಃ ತಂ ನಯನ್ತಿ ಪ್ರಾಪಯನ್ತಿ ಏತಾ ಆಹುತಯಃ ಯಾ ಇಮಾ ಅನೇನ ನಿರ್ವರ್ತಿತಾಃ । ಸೂರ್ಯಸ್ಯ ರಶ್ಮಯೋ ಭೂತ್ವಾ ರಶ್ಮಿದ್ವಾರೈಃ ಇತ್ಯರ್ಥಃ । ಯತ್ರ ಯಸ್ಮಿನ್ ಸ್ವರ್ಗೇ ದೇವಾನಾಂ ಪತಿಃ ಇನ್ದ್ರಃ ಏಕಃ ಸರ್ವಾನ್ ಉಪರಿ ಅಧಿವಸತಿ ಇತಿ ಅಧಿವಾಸಃ ॥

## (ಭಾಷ್ಯಾರ್ಥ)

ಈ ಅಗ್ನಿಯ ಬೇರೆಬೇರೆಯ ನಾಲಗೆಗಳು ಹೊಳೆಯುತ್ತಿರುವಾಗ ಧಗಧಗಿಸುತ್ತಿರುವಾಗ ಯಾವ ಅಗ್ನಿಹೋತ್ರಿಯು (ಚರತೇ) ಅಗ್ನಿಹೋತ್ರವೇ ಮುಂತಾದ ಕರ್ಮಗಳನ್ನು ಮಾಡುತ್ತಾನೋ ಕಾಲಕ್ಕೆ ಸರಿಯಾಗಿ ಎಂದರೆ ಯಾವ ಕರ್ಮಕ್ಕೆ ಯಾವದು ಕಾಲವೋ ಆ ಕಾಲವನ್ನು ಮೀರದೆ ಕಾಲಕ್ಕೆ ಸರಿಯಾಗಿ ಯಾಗಮಾಡುವ ಆತನನ್ನು[2] ಆಹುತಿಗಳು (ಎಂದರೆ) ಯಜಮಾನನಿಂದ ಮಾಡಲ್ಪಟ್ಟವುಗಳು ಆದದಾಯನ್ ಎಂದರೆ ಕರೆದುಕೊಂಡು ಯಾವ ಇವುಗಳನ್ನು ಇವನು ಮಾಡಿರುತ್ತಾನೋ ಆ ಈ ಆಹುತಿಗಳು ಸೂರ್ಯನ ರಶ್ಮಿಗಳಾಗಿ ಎಂದರೆ ರಶ್ಮಿಗಳ ಮೂಲಕ ಎಂದರ್ಥ ; ಅಲ್ಲಿ ಎಂದರೆ ಯಾವ ಸ್ವರ್ಗದಲ್ಲಿ ದೇವತೆಗಳ ಪತಿಯಾದ ಇಂದ್ರನು ಒಬ್ಬನೇ ಎಲ್ಲರಿಗೂ ಮೇಲ್ಪಟ್ಟವನಾಗಿ ಅಧಿವಾಸಮಾಡುತ್ತಿರುವನೋ (ಆ ಸ್ವರ್ಗಕ್ಕೆ) ಕರೆದುಕೊಂಡು ಹೋಗುವವು ; ಒಯ್ಯುವವು.

## (ಭಾಷ್ಯ)

೩೫. ಕಥಂ ಸೂರ್ಯಸ್ಯ ರಶ್ಮಿಭಿಃ ಯಜಮಾನಂ ವಹನ್ತೀತಿ ? ಉಚ್ಯತೇ -

## (ಭಾಷ್ಯಾರ್ಥ)

ಸೂರ್ಯನ ರಶ್ಮಿಗಳ ಮೂಲಕ ಹೇಗೆ (ಆ) ಯಾಗಮಾಡುವಾತನನ್ನು (ಇವು) ಕರೆದೊಯ್ಯುತ್ತವೆ ? ಎಂದರೆ (ಶ್ರುತಿ) ಹೇಳುತ್ತದೆ :-

**ಏಹ್ಯೇಹೀತಿ ತಮಾಹುತಯಃ ಸುವರ್ಚಸಃ**
**ಸೂರ್ಯಸ್ಯ ರಶ್ಮಿಭಿರ್ಯಜಮಾನಂ ವಹನ್ತಿ ।**
**ಪ್ರಿಯಾಂ ವಾಚಮಭಿವದನ್ತ್ಯೋಽರ್ಚಯನ್ತ್ಯ**
**ಏಷ ವಃ ಪುಣ್ಯಃ ಸುಕೃತೋ ಬ್ರಹ್ಮಲೋಕಃ ॥೬॥**

೬. ಆತನನ್ನು "ಬಾ, ಬಾ !" ಎಂದು ಚೆನ್ನಾಗಿ ಹೊಳೆಯುತ್ತಿರುವ ಆಹುತಿಗಳು ಸೂರ್ಯನ ರಶ್ಮಿಗಳಿಂದ ಆ ಯಜಮಾನನನ್ನು "ಇದು ನಿಮಗೆ

---

1. 'ಯಃ ಕಾಲಸ್ತತ್ಕಾಲಮ್' ಎಂದು ಆ॥ ಪಾಠ.
2. 'ತಂ ಯಜಮಾನಮ್ ಆಹುತಯಃ' ಎಂಬ ಭಾಷ್ಯಭಾಗವು ಆ॥ ಪಾಠದಲ್ಲಿಲ್ಲ.

ಪುಣ್ಯವಾದ ಸುಕೃತವಾದ ಬ್ರಹ್ಮಲೋಕವು'' ಎಂದು ಪ್ರಿಯವಾದ ಮಾತನ್ನು ಆಡುತ್ತಾ ಅರ್ಚಿಸುತ್ತಾ ಕರೆದೊಯ್ಯುತ್ತವೆ.

(ಭಾಷ್ಯ)

೩೬. ಏಹಿ ಏಹಿ ಇತಿ ಆಹ್ವಯನ್ತ್ಯಃ ತಂ ಯಜಮಾನಮ್ ಆಹುತಯಃ ಸುವರ್ಚಸಃ ದೀಪ್ತಿಮತ್ಯಃ । ಕಿಂ ಚ ಪ್ರಿಯಾಮ್ ಇಷ್ಟಾಂ ವಾಚಂ ಸ್ತುತ್ಯಾದಿಲಕ್ಷಣಾಮ್ ಅಭಿವದನ್ತ್ಯಃ ಉಚ್ಚಾರಯನ್ತ್ಯಃ ಅರ್ಚಯನ್ತ್ಯಃ ಪೂಜಯನ್ತ್ಯಶ್ಚ ''ಏಷಃ ವಃ ಯುಷ್ಮಾಕಂ ಪುಣ್ಯಃ ಸುಕೃತಃ ಪನ್ಥಾಃ ಬ್ರಹ್ಮಲೋಕಃ ಫಲರೂಪಃ'' । ಏವಂ[1] ಪ್ರಿಯಾಂ ವಾಚಮ್ ಅಭಿವದನ್ತ್ಯಃ ವಹನ್ತಿ ಇತ್ಯರ್ಥಃ । ಬ್ರಹ್ಮಲೋಕಃ ಸ್ವರ್ಗಃ । ಪ್ರಕರಣಾತ್ ॥

(ಭಾಷ್ಯಾರ್ಥ)

''ಬಾ, ಬಾ !'' ಎಂದು ಕರೆಯುತ್ತಾ ಆ ಯಾಗಮಾಡುವವನನ್ನು ಚೆನ್ನಾಗಿ ಹೊಳೆಯುತ್ತಿರುವ ಥಳಥಳಿಸುತ್ತಿರುವ (ಈ) ಆಹುತಿಗಳು (ಕರೆದೊಯ್ಯುವವು) ಮತ್ತು ಪ್ರಿಯವಾದ (ಈತನಿಗೆ) ಮೆಚ್ಚಾದ ಮಾತನ್ನು ಎಂದರೆ ಸ್ತುತಿಯೇ ಮುಂತಾದದ್ದನ್ನು ಆಡುತ್ತಾ ಹೇಳುತ್ತಾ, ಮತ್ತು (ಇವನನ್ನು) ಅರ್ಚಿಸುತ್ತಾ ಎಂದರೆ ಗೌರವಿಸುತ್ತಾ ''ಇಗೊ, ಇದು ನಿಮ್ಮ ನಿಮ್ಮಗಳ ಪುಣ್ಯಕರ್ಮದಿಂದ ಆಗಿರುವ ಸುಕೃತವಾದ ಹಾದಿಯು, ಫಲವಾದ ಬ್ರಹ್ಮಲೋಕವು'' ಹೀಗೆಂದು ಪ್ರಿಯವಾದ ಮಾತುಗಳನ್ನು ಆಡುತ್ತಾ ಕರೆದೊಯ್ಯುತ್ತವೆ - ಎಂದರ್ಥ. ಇಲ್ಲಿ ಬ್ರಹ್ಮಲೋಕವೆಂದರೆ ಸ್ವರ್ಗವು ; ಏಕೆಂದರೆ (ಇದು ಅದರ) ಪ್ರಕರಣವಾಗಿರುತ್ತದೆ.[2]

## ಕರ್ಮದ ನಿಂದೆ

೩೭. ಏತಚ್ಚ ಜ್ಞಾನರಹಿತಂ ಕರ್ಮ ಏತಾವತ್ಫಲಮ್ ಅವಿದ್ಯಾಕಾಮ ಕರ್ಮಕಾರ್ಯಮ್, ಅತೋಽಸಾರಂ ದುಃಖಮೂಲಮ್ ಇತಿ ನಿನ್ದ್ಯತೇ ॥

(ಭಾಷ್ಯಾರ್ಥ)

ಈ ಜ್ಞಾನಸಂಬಂಧವಿಲ್ಲದ[3] ಕರ್ಮಕ್ಕೆ ಇಷ್ಟೇ ಫಲವು ; (ಇದು) ಅವಿದ್ಯೆ, ಕಾಮ, ಕರ್ಮ - ಇವುಗಳ ಕಾರ್ಯವು ; ಆದ್ದರಿಂದ ಇದರಲ್ಲಿ ತಿರುಳಿಲ್ಲ, (ಇದು) ದುಃಖಕ್ಕೆ ಬೇರು ಎಂದು (ಈಗ ಶ್ರುತಿಯು) ನಿಂದಿಸುತ್ತದೆ :-

1. 'ಇತ್ಥಂ' ಎಂದು ಪಾ॥ ಪಾಠ. ಅರ್ಥದಲ್ಲಿ ಹೆಚ್ಚುಕಡಿಮೆ ಇಲ್ಲ.

2. ಕರ್ಮಕ್ಕೆ ಅತ್ಯಂತ ಹೆಚ್ಚಿನ ಫಲವು ಸ್ವರ್ಗವು ; ಇದು ಕರ್ಮದ ಪ್ರಕರಣವಾದ್ದರಿಂದ ಬ್ರಹ್ಮಲೋಕವು, ದೊಡ್ಡಲೋಕವು, ಎಂದರೆ ಸ್ವರ್ಗಲೋಕವೆಂದೇ ಅರ್ಥಮಾಡಬೇಕು.

3. ಉಪಾಸನೆಯ ಸಂಬಂಧವಿಲ್ಲದ.

**ಪ್ಲವಾ ಹ್ಯೇತೇ ಅದೃಢಾ ಯಜ್ಞರೂಪಾ**
**ಅಷ್ಟಾದಶೋಕ್ತಮವರಂ ಯೇಷು ಕರ್ಮ ।**
**ಏತಚ್ಛ್ರೇಯೋ ಯೇಽಭಿನನ್ದನ್ತಿ ಮೂಢಾ**
**ಜರಾಮೃತ್ಯುಂ ತೇ ಪುನರೇವಾಪಿ ಯನ್ತಿ ॥೭॥**

೭. ಈ ಹದಿನೆಂಟು ಯಜ್ಞರೂಪಗಳು ಹಗುರವಾಗಿರುವವು, ಗಟ್ಟಿಯಲ್ಲ. ಯಾವ ಅವುಗಳಲ್ಲಿ ಕೀಳುಕರ್ಮವು ಉಕ್ತವಾಗಿರುತ್ತದೆ. ಇದನ್ನು ಶ್ರೇಯಸ್ಸೆಂದು ಯಾವ ಮೂಢರು ಹಿಗ್ಗುವರೋ ಅವರು ಜರಾಮೃತ್ಯುವನ್ನು ಮತ್ತೂ ಹೊಂದುವರು.

## (ಭಾಷ್ಯ)

೩೮. ಪ್ಲವಾಃ ವಿನಾಶಿನಃ ಇತ್ಯರ್ಥಃ । ಹಿ ಯಸ್ಮಾತ್ ಏತೇ ಅದೃಢಾಃ ಅಸ್ಥಿರಾಃ ಯಜ್ಞರೂಪಾಃ ಯಜ್ಞಸ್ಯ ರೂಪಾಣಿ ಯಜ್ಞರೂಪಾಃ ಯಜ್ಞನಿರ್ವರ್ತಕಾಃ । ಅಷ್ಟಾದಶ ಅಷ್ಟಾದಶಸಂಖ್ಯಾಕಾಃ ಷೋಡಶ ಋತ್ವಿಜಃ ಪತ್ನೀ ಯಜಮಾನಶ್ಚ ಇತಿ ಅಷ್ಟಾದಶ । ಏತದಾಶ್ರಯಂ ಕರ್ಮ ಉಕ್ತಂ ಕಥಿತಂ ಶಾಸ್ತ್ರೇಣ ಯೇಷು ಅಷ್ಟಾದಶಸು ಅವರಂ ಕೇವಲಂ ಜ್ಞಾನವರ್ಜಿತಂ ಕರ್ಮ । ಅತಃ ತೇಷಾಂ ಅವರಕರ್ಮಾಶ್ರಯಾಣಾಮ್ ಅಷ್ಟಾದಶಾನಾಂ ಅದೃಢತಯಾ ಪ್ಲವತ್ವಾತ್ ಪ್ಲವತೇ ಸಹ ಫಲೇನ ತತ್ಸಾಧ್ಯಂ ಕರ್ಮ । ಕುಣ್ಡವಿನಾಶಾದಿವ ಕ್ಷೀರದಧ್ಯಾದೀನಾಂ ತತ್ಸ್ಥಾನಾಂ ನಾಶಃ । ಯತ ಏವಮ್ ಏತತ್ ಕರ್ಮ ಶ್ರೇಯಃ ಶ್ರೇಯಃಕರಣಮ್[1] ಇತಿ ಯೇ ಅಭಿನನ್ದನ್ತಿ । ಅಭಿಹೃಷ್ಯನ್ತಿ ಅವಿವೇಕಿನಃ ಮೂಢಾಃ । ಅತಃ ತೇ ಜರಾಂ ಚ ಮೃತ್ಯುಂ ಚ ಜರಾಮೃತ್ಯುಂ ಕಂಚಿತ್ಕಾಲಂ[2] ಸ್ವರ್ಗೇ ಸ್ಥಿತ್ವಾ ಪುನರೇವಾಪಿ ಯನ್ತಿ ಭೂಯೋಽಪಿ ಗಚ್ಛನ್ತಿ ॥

## (ಭಾಷ್ಯಾರ್ಥ)

(ಇವು) ಹಗುರವಾಗಿರುವವು, ಎಂದರೆ ನಾಶವಾಗುವವುಗಳು, ಏಕೆಂದರೆ ಇವು ಗಟ್ಟಿಯಲ್ಲ, ಸ್ಥಿರವಲ್ಲ, ಯಜ್ಞರೂಪಗಳು, ಯಜ್ಞದ ರೂಪಗಳು ಎಂದರೆ ಯಜ್ಞವನ್ನು ಉಂಟುಮಾಡುವವುಗಳು. ಹದಿನೆಂಟು-ಹದಿನೆಂಟು ಸಂಖ್ಯೆಯ (ರೂಪಗಳು). ಹದಿನಾರು ಋತ್ವಿಜರು,[3] ಪತ್ನಿ, ಮತ್ತು ಯಜಮಾನನು - ಹೀಗೆ ಹದಿನೆಂಟು. ಈ

---

1. "ಶ್ರೇಯಃಸಾಧನಮ್" ಎಂದು ವಾ॥ ಪಾಠ ; ಅರ್ಥದಲ್ಲಿ ಹೆಚ್ಚುಕಡಿಮೆಯಿಲ್ಲ.

2. "ಕಿಂಚಿತ್ಕಾಲಂ" ಎಂದು ಆ॥ ಪಾಠ.

3. ಬ್ರಹ್ಮಾ, ಬ್ರಾಹ್ಮಣಾಚ್ಛಂಸೀ, ಆಗ್ನೀಧ್ರಃ, ಪೋತಾ, ಉದ್ಗಾತಾ, ಪ್ರಸ್ತೋತಾ, ಪ್ರತಿಹರ್ತಾ, ಸುಬ್ರಹ್ಮಣ್ಯಃ, ಹೋತಾ, ಮೈತ್ರಾವರುಣಃ, ಅಚ್ಛಾವಾಕಃ, ಗ್ರಾವಸ್ತುತ್, ಅಧ್ವರ್ಯುಃ, ಪ್ರತಿಪ್ರಸ್ಥಾತಾ, ನೇಷ್ಟಾ, ಉನ್ನೇತಾ ಎಂಬ ಹದಿನಾರು ಜನ ಋತ್ವಿಜರು.

(ಹದಿನೆಂಟನ್ನು) ಕರ್ಮವು ಆಶ್ರಯಿಸಿರುತ್ತದೆ. ಯಾವ (ಈ) (ರೂಪಗಳನ್ನು ಆಶ್ರಯಿಸಿ) ಕೀಳಾದ ಎಂದರೆ ಬರಿಯ ಜ್ಞಾನಸಂಬಂಧವಿಲ್ಲದ ಕರ್ಮವು[1] ಉಕ್ತವಾಗಿರುತ್ತದೆ, ಶಾಸ್ತ್ರದಿಂದ ಹೇಳಲ್ಪಟ್ಟಿರುತ್ತದೆ. ಆದ್ದರಿಂದ ಆ ಕೀಳುಕರ್ಮದ ಆಶ್ರಯಗಳು ಹದಿನೆಂಟೂ ಗಟ್ಟಿಯಲ್ಲದೆ ಇರುವದರಿಂದ ನಾಶವಾಗುವವಾದ್ದರಿಂದ ಅವುಗಳಿಂದ ಆಗುವ ಕರ್ಮವು (ತನ್ನ) ಫಲದೊಡನೆ ನಾಶವಾಗುತ್ತದೆ. ಕುಂಡವು ನಾಶವಾದರೆ ಅದರೊಳಗಿನ ಹಾಲು, ಮೊಸರು - ಮುಂತಾದದ್ದು ನಾಶವಾಗುವಂತೆಯೇ ಇದು.[2] ಹೀಗಿರುವದರಿಂದ ಈ ಕರ್ಮವು ಶ್ರೇಯಸ್ಸೆಂದು ಶ್ರೇಯಸ್ಸಿಗೆ ಸಾಧನವೆಂದು ಯಾವ ವಿವೇಕವಿಲ್ಲದ ಮೂಢರು ಹಿಗ್ಗುವರೋ ಉಬ್ಬುವರೋ ಅವರು ಸ್ವಲ್ಪಕಾಲದವರೆಗೆ ಸ್ವರ್ಗದಲ್ಲಿದ್ದು ಮತ್ತೂ ಇನ್ನೂ ಒಂದು ಸಲ ಜರಾಮೃತ್ಯುವನ್ನು ಎಂದರೆ ಮುಪ್ಪನ್ನೂ ಸಾವನ್ನೂ ಹೊಂದುವರು, ಪಡೆಯುತ್ತಾರೆ.

**ಅವಿದ್ಯಾಯಾಮನ್ತರೇ ವರ್ತಮಾನಾಃ**
**ಸ್ವಯಂ ಧೀರಾಃ ಪಣ್ಡಿತಂಮನ್ಯಮಾನಾಃ ।**
**ಜಙ್ಘನ್ಯಮಾನಾಃ ಪರಿಯನ್ತಿ ಮೂಢಾಃ**
**ಅನ್ಧೇನೈವ ನೀಯಮಾನಾ ಯಥಾನ್ಧಾಃ ॥೮॥**

೮. ಅವಿದ್ಯೆಯ ಒಳಗೆ ಇರುವವರಾಗಿ ತಾವೇ ಧೀರರು, ಪಂಡಿತರು - ಎಂದು ಯೋಚಿಸಿಕೊಳ್ಳುತ್ತಾ ಸಂಕಟಪಡುತ್ತಾ (ಈ) ಮೂಢರು, ಕುರುಡರು ಕರೆದುಕೊಂಡು ಹೋಗುತ್ತಿರುವ ಕುರುಡರಂತೆ, ಸುತ್ತುತ್ತಿರುವರು.

(ಭಾಷ್ಯ)

೩೯. ಕಿಂಚ ಅವಿದ್ಯಾಯಾಮ್ ಅನ್ತರೇ ಮಧ್ಯೇ ವರ್ತಮಾನಾಃ ಅವಿವೇಕಪ್ರಾಯಾಃ ಸ್ವಯಂ ವಯಮೇವ ಧೀರಾಃ ಧೀಮನ್ತಃ ಪಣ್ಡಿತಾಃ ವಿದಿತವೇದಿತವ್ಯಾಶ್ಚ ಇತಿ ಮನ್ಯಮಾನಾಃ ಆತ್ಮಾನಂ ಸಂಭಾವಯನ್ತಃ ತೇ ಚ ಜಙ್ಘನ್ಯಮಾನಾಃ ಜರಾರೋಗಾದ್ಯನೇಕಾನರ್ಥವ್ರಾತೈಃ ಹನ್ಯಮಾನಾಃ ಭೃಶಂ ಪೀಡ್ಯಮಾನಾಃ ಪರಿಯನ್ತಿ ವಿಭ್ರಮನ್ತಿ ಮೂಢಾಃ । ದರ್ಶನವಿವರ್ಜಿತತ್ವಾತ್ ಅನ್ಧೇನೈವ ಅಚಕ್ಷುಷ್ಕೇಣೈವ ನೀಯಮಾನಾಃ ಪ್ರದರ್ಶ್ಯಮಾನಮಾರ್ಗಾಃ ಯಥಾ ಲೋಕೇ ಅನ್ಧಾಃ ಅಕ್ಷಿರಹಿತಾಃ ಗರ್ತಕಣ್ಟಕಾದೌ ಪತನ್ತಿ ತದ್ವತ್ ॥

1. ಉಪಾಸನಾರಹಿತವಾದ ಕರ್ಮವು ಅವರಕರ್ಮ. ಗೀ. ೨-೪೯.

2. ಆಶ್ರಯವಾಗಿರುವ ಋತ್ವಿಜರು ಮುಂತಾದವರಲ್ಲಿ ಯಾರೊಬ್ಬರು ಇಲ್ಲದಿದ್ದರೂ ಕರ್ಮವು ಕರ್ಮವಾಗುವದಿಲ್ಲ. ಆಶ್ರಯವನ್ನನುಸರಿಸಿ ಕರ್ಮವೂ ಇರುವದು.

(ಭಾಷ್ಯಾರ್ಥ)

ಮತ್ತು ಅವಿದ್ಯೆಯ ಒಳಗೆ ನಡುವೆ ಇರುವವರಾಗಿ ಅವಿವೇಕವೇ ಹೆಚ್ಚಾದವರಾಗಿ ತಾವೇ ನಾವೇ ಧೀರರು, ಬುದ್ಧಿವಂತರು, ಪಂಡಿತರು, ತಿಳಿಯಬೇಕಾದದ್ದೆ (ಲ್ಲವನ್ನೂ) ತಿಳಿದುಕೊಂಡಿರುವವರು-ಎಂದು ಎಣಿಸಿಕೊಳ್ಳುತ್ತಾ[1] ತಮ್ಮನ್ನು ತಾವೇ ಹೊಗಳಿಕೊಳ್ಳುತ್ತಾ 'ಜಙ್ಘನ್ಯಮಾನಾಃ' ಮುಪ್ಪು, ರೋಗ ಮುಂತಾದ ಅನೇಕ ಅನರ್ಥ ಸಮೂಹಗಳಿಂದ ಹೊಡೆತವನ್ನು ತಿನ್ನುತ್ತಾ, ಬಹಳವಾಗಿ ಸಂಕಟ ಪಡುತ್ತಾ, ಆ ಮೂಢರು ಸುತ್ತುತ್ತಿರುವರು, ತೊಳಲುತ್ತಿರುವರು. ನೋಡುವ ಶಕ್ತಿಯಿಲ್ಲದ್ದರಿಂದ ಕುರುಡನೇ ಕಣ್ಣಿಲ್ಲದವನೇ ಕರೆದೊಯ್ಯುತ್ತಿರುವ - ಮಾರ್ಗವನ್ನು ತೋರುತ್ತಿರುವ - ಕಣ್ಣಿಲ್ಲದ ಕುರುಡರು ಹೇಗೆ ಲೋಕದಲ್ಲಿ ಗುಂಡಿ, ಮುಳ್ಳು ಮುಂತಾದದ್ದರಲ್ಲಿ ಬೀಳುವರೋ ಅದರಂತೆ.

**ಅವಿದ್ಯಾಯಾಂ ಬಹುಧಾ ವರ್ತಮಾನಾ**
**ವಯಂ ಕೃತಾರ್ಥಾ ಇತ್ಯಭಿಮನ್ಯನ್ತಿ ಬಾಲಾಃ ।**
**ಯತ್ ಕರ್ಮಿಣೋ ನ ಪ್ರವೇದಯನ್ತಿ ರಾಗಾತ್**
**ತೇನಾತುರಾಃ ಕ್ಷೀಣಲೋಕಾಶ್ಚ್ಯವನ್ತೇ ॥೯॥**

೯. ಅವಿದ್ಯೆಯಲ್ಲಿ ಬಹುವಿಧವಾಗಿ ಇರುವವರಾಗಿ ನಾವು ಕೃತಾರ್ಥರು ಎಂದು (ಈ) ಬಾಲರು ಅಭಿಮಾನಪಡುತ್ತಿರುವರು. ಕರ್ಮಿಗಳು ರಾಗದಿಂದ (ಹೀಗೆ) ತಿಳಿಯದೆ ಇರುವರಲ್ಲ, ಅದರಿಂದ ಆತುರರಾಗಿ ಕ್ಷೀಣಲೋಕರಾಗಿ ಜಾರಿಬೀಳುವರು.

(ಭಾಷ್ಯ)

೪೦. ಕಿಂಚ ಅವಿದ್ಯಾಯಾಂ ಬಹುಧಾ ಬಹುಪ್ರಕಾರಂ ವರ್ತಮಾನಾಃ ವಯಮೇವ ಕೃತಾರ್ಥಾ ಕೃತಪ್ರಯೋಜನಾಃ ಇತಿ ಏವಮ್ ಅಭಿಮನ್ಯನ್ತಿ ಅಭಿಮಾನಂ ಕುರ್ವನ್ತಿ ಬಾಲಾಃ ಅಜ್ಞಾನಿನಃ । ಯತ್ ಯಸ್ಮಾತ್ ಏವಂ ಕರ್ಮಿಣಃ ನ ಪ್ರವೇದಯನ್ತಿ ತತ್ತ್ವಂ ನ ಜಾನನ್ತಿ ರಾಗಾತ್ ಕರ್ಮಫಲರಾಗಾಭಿಭವನಿಮಿತ್ತಂ ತೇನ ಕಾರಣೇನ ಆತುರಾಃ ದುಃಖಾರ್ತಾಃ ಸನ್ತಃ ಕ್ಷೀಣಲೋಕಾಃ ಕ್ಷೀಣಕರ್ಮಫಲಾಃ ಸ್ವರ್ಗಲೋಕಾತ್ ಚ್ಯವನ್ತೇ ॥

(ಭಾಷ್ಯಾರ್ಥ)

1. ತಿಳಿದವರ ಉಪದೇಶವೇನೂ ಇಲ್ಲದೆ ನಿಜವನ್ನು ಅರಿತುಕೊಂಡಿರುವೆವು ಎಂದುಕೊಳ್ಳುತ್ತಾ - ಎಂದರ್ಥ. ಮುಂದಿನ ಮಂತ್ರದಲ್ಲಿ 'ನಾವೇ ಕೃತಾರ್ಥರು' ಎಂಬ ವಾಕ್ಯಕ್ಕೂ ಹೀಗೆಯೇ ಅಭಿಪ್ರಾಯವನ್ನು ಕಲ್ಪಿಸಬೇಕು.

ಮತ್ತು ಅವಿದ್ಯೆಯೊಳಗೆ ಬಹುವಿಧವಾಗಿ ಬಹುಪ್ರಕಾರದಿಂದ ಇರುವವರಾಗಿ ನಾವೇ ಕೃತಾರ್ಥರು, ಪ್ರಯೋಜನವನ್ನು ಪಡೆದವರು ಎಂದು ಹೀಗೆ (ಈ) ಬಾಲರು ಅಜ್ಞಾನಿಗಳು ಅಭಿಮಾನಪಡುತ್ತಿರುವರು, ಹೆಮ್ಮೆಯನ್ನು ಮಾಡಿಕೊಳ್ಳುತ್ತಿರುವರು. ಹೀಗೆ ಕರ್ಮಿಗಳು ರಾಗದಿಂದ ಎಂದರೆ ಕರ್ಮಫಲದ ಆಸೆಯಿಂದ ಮುಚ್ಚಲ್ಪಟ್ಟು ತಿಳಿಯದೆ ಇರುವರಲ್ಲ, ತತ್ತ್ವವನ್ನು ಅರಿತುಕೊಳ್ಳದೆ ಇರುವರಲ್ಲ, ಆ ಕಾರಣದಿಂದ ಆತುರರಾಗಿ ಎಂದರೆ ದುಃಖದಿಂದ ನರಳುತ್ತಾ ಕ್ಷೀಣಲೋಕರಾಗಿ ಕರ್ಮಫಲವು ಸವೆಯುತ್ತಲೂ ಸ್ವರ್ಗಲೋಕದಿಂದ ಜಾರಿ ಬೀಳುವರು.

**ಇಷ್ಟಾಪೂರ್ತಂ ಮನ್ಯಮಾನಾ ವರಿಷ್ಠಂ**
**ನಾನ್ಯಚ್ಛ್ರೇಯೋ ವೇದಯನ್ತೇ ಪ್ರಮೂಢಾಃ ।**
**ನಾಕಸ್ಯ ಪೃಷ್ಠೇ ತೇ ಸುಕೃತೇಽನುಭೂತ್ವಾ**
**ಇಮಂ ಲೋಕಂ ಹೀನತರಂ ವಾ ವಿಶನ್ತಿ** ॥೧೦॥

೧೦. ಇಷ್ಟಾಪೂರ್ತವನ್ನು ಅತ್ಯಂತ ಹೆಚ್ಚಿನದೆಂದು ತಿಳಿಯುತ್ತಾ (ಈ) ಪ್ರಮೂಢರು ಇನ್ನೊಂದು ಶ್ರೇಯಸ್ಸನ್ನು ತಿಳಿಯದೆ ಇರುವರು. ನಾಕದ ಮೇಲುಗಡೆಯಲ್ಲಿ ಅವರು ಸುಕೃತದಲ್ಲಿ ಅನುಭವಿಸಿ ಈ ಲೋಕವನ್ನೋ ಇನ್ನೂ ಹೀನವಾದದ್ದನ್ನೋ ಪ್ರವೇಶಿಸುವರು.

**(ಭಾಷ್ಯ)**

೪೧. ಇಷ್ಟಂ ಯಾಗಾದಿ ಶ್ರೌತಂ ಕರ್ಮ । ಪೂರ್ತಂ ವಾಪೀಕೂಪತಡಾಗಾದಿ ಸ್ಮಾರ್ತಮ್ । ಮನ್ಯಮಾನಾ ಏತದೇವ ಅತಿಶಯೇನ ಪುರುಷಾರ್ಥಸಾಧನಂ ವರಿಷ್ಠಂ ಪ್ರಧಾನಮ್ ಇತಿ ಚಿನ್ತಯನ್ತಃ ಅನ್ಯತ್ ಆತ್ಮಜ್ಞಾನಾಖ್ಯಂ ಶ್ರೇಯಃಸಾಧನಂ ನ ವೇದಯನ್ತೇ ನ ಜಾನನ್ತಿ ಪ್ರಮೂಢಾಃ ಪುತ್ರಪಶುಬನ್ಧ್ವಾದಿಷು[1] ಪ್ರಮತ್ತತಯಾ ಮೂಢಾಃ । ತೇ ಚ ನಾಕಸ್ಯ ಸ್ವರ್ಗಸ್ಯ ಪೃಷ್ಠೇ ಉಪರಿಸ್ಥಾನೇ ಸುಕೃತೇ ಭೋಗಾಯತನೇ ಅನುಭೂತ್ವಾ ಅನುಭೂಯ ಕರ್ಮಫಲಂ ಪುನಃ ಇಮಂ ಲೋಕಂ ಮಾನುಷಮ್ ಅಸ್ಮಾತ್ ಹೀನತರಂ ವಾ ತಿರ್ಯಙ್ನರಕಾದಿಲಕ್ಷಣಂ ಯಥಾ ಕರ್ಮಶೇಷಂ ವಿಶನ್ತಿ ॥

**(ಭಾಷ್ಯಾರ್ಥ)**

ಇಷ್ಟವೆಂದರೆ ಯಾಗವೇ ಮುಂತಾದ **ಶ್ರೌತಕರ್ಮ**; ಪೂರ್ತವೆಂದರೆ ಭಾವಿ, ಕೆರೆ, ಕಟ್ಟೆ - ಮುಂತಾದದ್ದನ್ನು (ಕಟ್ಟಿಸುವ) **ಸ್ಮಾರ್ತ(ಕರ್ಮ)**. ಇದನ್ನೇ ಅತ್ಯಂತ ಹೆಚ್ಚಿನ ಮುಖ್ಯವಾದ ಎಲ್ಲಕ್ಕೂ ಮಿಗಿಲಾದ ಪುರುಷಾರ್ಥಸಾಧನವು ಎಂದು ಯೋಚಿಸಿಕೊಳ್ಳುತ್ತಾ ಇನ್ನೊಂದು ಆತ್ಮಜ್ಞಾನವೆಂಬ ಶ್ರೇಯಃಸಾಧನವು (ಇದೆ ಎಂಬುದನ್ನು)

---

1. "ಬಾನ್ಧವಾದಿಷು" ಎಂದು ವಾ॥ ಕಾ॥ ಪಾಠ; 'ವಧ್ವಾದಿಷು' ಎಂದು ಮೈ॥ ಪಾಠ. ಹೆಂಡತಿ ಮೊದಲಾದವರಲ್ಲಿ ಎಂದು ಎರಡನೆಯ ಪಾಠಕ್ಕೆ ಅರ್ಥ.

ಪ್ರಮೂಢರು ಮಕ್ಕಳು, ದನ, ನೆಂಟರು-ಮುಂತಾದವರಲ್ಲಿ ಪ್ರಮತ್ತರಾಗಿರುವದರಿಂದ ಮೂಢರಾಗಿರುವ (ಈ ಜನ)ರು, ತಿಳಿಯದೆ ಇರುವರು ; ಅರಿತುಕೊಳ್ಳದೆ ಇರುವರು. ಮತ್ತು ಅವರು ನಾಕದ ಎಂದರೆ ಸ್ವರ್ಗದ ಮೇಲುಗಡೆ ಮೇಲುಭಾಗದಲ್ಲಿರುವ ಸುಕೃತದಲ್ಲಿ ಭೋಗಸ್ಥಾನದಲ್ಲಿ ಕರ್ಮಫಲವನ್ನು ಅನುಭವಿಸಿ ಮತ್ತೂ ಈ ಲೋಕವನ್ನೋ ಎಂದರೆ ಮಾನುಷ(ಲೋಕ)ವನ್ನೋ ಅಥವಾ ಇದಕ್ಕಿಂತ ಇನ್ನೂ ಹೀನವಾದ ತಿರ್ಯಗ್ಜಂತುಗಳ (ಜನ್ಮ) ಅಥವಾ ನರಕವೇ ಮುಂತಾದದ್ದನ್ನೋ[1] ಕರ್ಮದ ಶೇಷಕ್ಕೆ ತಕ್ಕಂತೆ[2] ಪ್ರವೇಶಿಸುವರು.

## ಕರ್ಮೋಪಾಸನೆಗಳ ಫಲ

**ತಪಃಶ್ರದ್ಧೇ ಯೇ ಹ್ಯುಪವಸನ್ತ್ಯರಣ್ಯೇ**
**ಶಾನ್ತಾ ವಿದ್ವಾಂಸೋ ಭೈಕ್ಷ್ಯಚರ್ಯಾಂ ಚರನ್ತಃ ।**
**ಸೂರ್ಯದ್ವಾರೇಣ ತೇ ವಿರಜಾಃ ಪ್ರಯಾನ್ತಿ**
**ಯತ್ರಾಮೃತಃ ಸ ಪುರುಷೋ ಹ್ಯವ್ಯಯಾತ್ಮಾ ॥೧೧॥**

೧೧. ಯಾರು ಅರಣ್ಯದಲ್ಲಿ ತಪಃಶ್ರದ್ಧೆಗಳನ್ನು ಆಚರಿಸುವರೋ ಶಾಂತರಾಗಿ ವಿದ್ವಾಂಸರಾಗಿ ಭೈಕ್ಷ್ಯಚರ್ಯೆಯನ್ನು ಮಾಡುತ್ತಿರುವರೋ, ಅವರು ಸೂರ್ಯದ್ವಾರದಿಂದ ವಿರಜರಾಗಿ ಎಲ್ಲಿ ಅಮೃತವಾದ ಅವ್ಯಯಾತ್ಮನಾದ ಆ ಪುರುಷನಿರುವನೋ (ಅಲ್ಲಿಗೆ) ಹೋಗುವರು.

### (ಭಾಷ್ಯ)

೪೨. ಯೇ ಪುನಃ ತದ್ವಿಪರೀತಾ[3]ಜ್ಞಾನಯುಕ್ತಾಃ ವಾನಪ್ರಸ್ಥಾಃ ಸಂನ್ಯಾಸಿನಶ್ಚ ತಪಃಶ್ರದ್ಧೇ ಹಿ ತಪಃ ಸ್ವಾಶ್ರಮವಿಹಿತಂ ಕರ್ಮ ಶ್ರದ್ಧಾ ಹಿರಣ್ಯಗರ್ಭಾದಿವಿಷಯಾ ವಿದ್ಯಾ ತೇ ತಪಃಶ್ರದ್ಧೇ ಉಪವಸನ್ತಿ ಸೇವನ್ತೇ ಅರಣ್ಯೇ ವರ್ತಮಾನಾಃ ಸನ್ತಃ । ಶಾನ್ತಾಃ ಉಪರತಕರಣಗ್ರಾಮಾಃ ವಿದ್ವಾಂಸಃ ಗೃಹಸ್ಥಾಶ್ಚ ಜ್ಞಾನಪ್ರಧಾನಾ ಇತ್ಯರ್ಥಃ । ಭೈಕ್ಷ್ಯಚರ್ಯಾಂ ಚರನ್ತಃ ಪರಿಗ್ರಹಾಭಾವಾತ್ ಉಪವಸನ್ತಿ ಅರಣ್ಯೇ ಇತಿ ಸಂಬನ್ಧಃ । ಸೂರ್ಯದ್ವಾರೇಣ ಸೂರ್ಯೋಪಲಕ್ಷಿತೇನ ಉತ್ತರಾಯಣೇನ[4] ಪಥಾ ತೇ ವಿರಜಾಃ ವಿರಜಸಃ ಕ್ಷೀಣಪುಣ್ಯಪಾಪಕರ್ಮಾಣಃ ಸನ್ತಃ ಇತ್ಯರ್ಥಃ । ಪ್ರಯಾನ್ತಿ ಪ್ರಕರ್ಷೇಣ ಯಾನ್ತಿ ಯತ್ರ ಯಸ್ಮಿನ್ ಸತ್ಯಲೋಕಾದೌ ಅಮೃತಃ ಸ ಪುರುಷಃ ಪ್ರಥಮಜಃ ಹಿರಣ್ಯಗರ್ಭಃ ಹಿ ಅವ್ಯಯಾತ್ಮಾ ಅವ್ಯಯಸ್ವಭಾವಃ ಯಾವತ್ಸಂಸಾರಸ್ಥಾಯೀ । ಏತದನ್ತಾಸ್ತು ಸಂಸಾರಗತಯೋಽಪರವಿದ್ಯಾಗಮ್ಯಾಃ ॥

1. ಸ್ಥಾವರಜನ್ಮ          2. ಛಾಂ. ೫-೧೦-೭, ಗೌ.ಧ. ೧೧-೩೧.
3. 'ತದ್ವಿಪರೀತಜ್ಞಾನಯುಕ್ತಾಃ' ಎಂಬ ವಾ॥ ಪಾಠಕ್ಕಿಂತ ಇದು ಉತ್ತಮ.
4. 'ಉತ್ತರೇಣ' ಎಂದು ವಾ॥ ಪಾಠ.

(ಭಾಷ್ಯಾರ್ಥ)

ಆದರೆ ಯಾರು ಇವರಿಗೆ ವಿರುದ್ಧವಾಗಿ ಜ್ಞಾನಯುಕ್ತರಾದ[1] ವಾನಪ್ರಸ್ಥರೂ ಸಂನ್ಯಾಸಿಗಳೂ[2] ತಪಃಶ್ರದ್ಧೆಗಳನ್ನು **ತಪಸ್ಸೆಂದರೆ** ತಮ್ಮ ಆಶ್ರಮಕ್ಕೆ ವಿಹಿತವಾಗಿರುವ ಕರ್ಮವು, **ಶ್ರದ್ಧೆಯೆಂದರೆ ಹಿರಣ್ಯಗರ್ಭನೇ** ಮೊದಲಾದವರ ವಿಷಯದ ವಿದ್ಯೆ[3] ; ಆ ತಪಃಶ್ರದ್ಧೆಗಳನ್ನು ಆಚರಿಸುವರೋ ಅರಣ್ಯದಲ್ಲಿರುವವರಾಗಿ ಸೇವಿಸುವರೋ, ಶಾಂತರಾಗಿ ಎಂದರೆ ಇಂದ್ರಿಯಸಮೂಹವನ್ನು ತಡೆದು ನಿಲ್ಲಿಸಿಕೊಂಡು, ವಿದ್ವಾಂಸರಾಗಿ ಗೃಹಸ್ಥರಾದರೂ ಜ್ಞಾನವನ್ನೇ ಮುಖ್ಯವಾಗಿ ಮಾಡಿಕೊಂಡು ಎಂದರ್ಥ.[4] ತಮ್ಮದೆಂಬುದು ಇಲ್ಲದ್ದರಿಂದ[5] ಭೈಕ್ಷಚರ್ಯೆಯನ್ನು ಮಾಡುತ್ತಾ ಅರಣ್ಯದಲ್ಲಿ (ತಪಃಶ್ರದ್ಧೆಗಳನ್ನು) 'ಆಚರಿಸುತ್ತಿರುವರೋ' ಎಂದು ಸಂಬಂಧಿಸಿಕೊಳ್ಳಬೇಕು. ಅವರು ಸೂರ್ಯದ್ವಾರದಿಂದ ಸೂರ್ಯನೆಂಬ ಉಪಲಕ್ಷಣವುಳ್ಳ **ಉತ್ತರಾಯಣಮಾರ್ಗ**[6]ದಿಂದ ವಿರಜರಾಗಿ (ವಿರಜಾಃ=ವಿರಜಸಃ) ಎಂದರೆ ಪುಣ್ಯಪಾಪಕರ್ಮಗಳನ್ನು ಸವೆಯಿಸಿಕೊಂಡು[7] ಎಂದರ್ಥ. ಪ್ರಯಾನ್ತಿ ಪ್ರಕರ್ಷದಿಂದ ಹೋಗುವರು. ಎಲ್ಲಿ ಎಂದರೆ ಯಾವ **ಸತ್ಯಲೋಕವೇ ಮುಂತಾದದ್ದರಲ್ಲಿ** ಅಮೃತನಾದ ಆ ಮೊದಲು ಹುಟ್ಟಿದ **ಹಿರಣ್ಯಗರ್ಭ**ನೆಂಬ ಪುರುಷನು, ಅವ್ಯಯಾತ್ಮನಾದ ಅವ್ಯಯಸ್ವಭಾವನಾದ ಸಂಸಾರವಿರುವವರೆಗೂ ಇರುವ[8] ಆ (ಪುರುಷ)ನು ಇರುವನೋ (ಅಲ್ಲಿಗೆ ಹೋಗುವರು). ಇಲ್ಲಿಯವರೆಗೂ **ಅಪರವಿದ್ಯೆಯಿಂದ** ಸಿಕ್ಕುವ ಸಂಸಾರಗತಿಗಳಿರುವವು.

## ಸಮುಚ್ಚಯಾನುಷ್ಠಾನದ ಫಲವು ಪರಮಾರ್ಥಮೋಕ್ಷವಲ್ಲ

(ಭಾಷ್ಯ)

೪೩. ನನು ಏತಂ ಮೋಕ್ಷಮಿಚ್ಛನ್ತಿ ಕೇಚಿತ್ । ನ । ''ಇಹೈವ ಸರ್ವೇ ಪ್ರವಿಲೀಯನ್ತಿ

1. ಉಪಾಸನೆಯಿಂದ ಕೂಡಿದ. 2. ಇದು ಸ್ಮಾರ್ತತ್ರಿದಂಡಿಸಂನ್ಯಾಸದವರ ವಿಷಯ.

3. ಛಾಂ. ೫-೧೦-೨, ಬೃ. ೬-೨-೧೫.

4. ಪಂಚಾಗ್ನಿವಿದ್ಯೆ ಮುಂತಾದವನ್ನು ಸೇವಿಸುವವರು.

5. ವಾನಪ್ರಸ್ಥರೂ - ಸಂನ್ಯಾಸಿಗಳೂ ತಮ್ಮದೆಂಬುದಿಲ್ಲದವರು.

6. ಜ್ಞಾನಕರ್ಮಸಮುಚ್ಚಯದ ಅನುಷ್ಠಾನದ ಬಲದಿಂದ ಸಿಕ್ಕುವ ಮಾರ್ಗ. ಇದನ್ನು 'ದೇವಯಾನ', 'ಅರ್ಚಿರಾದಿಮಾರ್ಗ' ಎಂದೂ ಕರೆಯುತ್ತಾರೆ. ಈ ಮಾರ್ಗದ ವಿಷಯವಾಗಿ ಸೂ.ಭಾ. ೪-೩-೧ ರಿಂದ ೬ ನೆಯ ಸೂತ್ರದವರೆಗೆ ನೋಡಿರಿ. ಗೀ. ೮-೨೪.

7. ಸೂ.ಭಾ. ೪-೧-೧೩, ೧೪. ಪ್ರಾರಬ್ಧ ಕರ್ಮವು ಮುಗಿದಮೇಲೆ ಸುಷುಮ್ನಾ ನಾಡಿಯ ಮಾರ್ಗವಾಗಿ ಹೋಗಿ ಪಡೆಯುವ ಗತಿಯಿದು.

8. ಹಿರಣ್ಯಗರ್ಭನು ಕಾರ್ಯವಾಗಿರುವದರಿಂದ ಹಿರಣ್ಯಗರ್ಭಪ್ರಾಪ್ತಿಯೂ ನಿತ್ಯವಾಗಲಾರದು. ಕಲ್ಪವು ಮುಗಿಯುವವರೆಗೂ ಇರುವದರಿಂದ ಇದನ್ನು ಅವ್ಯಯವೆಂದು ಕರೆದಿದೆ ಎಂದು ಅಭಿಪ್ರಾಯ.

ಕಾಮಾಃ'' (೩-೨-೨), ''ತೇ ಸರ್ವಗಂ ಸರ್ವತಃ ಪ್ರಾಪ್ಯ ಧೀರಾ ಯುಕ್ತಾತ್ಮಾನಃ ಸರ್ವಮೇವಾವಿಶನ್ತಿ'' (೩-೨-೫) ಇತ್ಯಾದಿಶ್ರುತಿಭ್ಯಃ । ಅಪ್ರಕರಣಾಚ್ಚ । ಅಪರವಿದ್ಯಾಪ್ರಕರಣೇ ಹಿ ಪ್ರವೃತ್ತೇ ನ ಹಿ ಅಕಸ್ಮಾತ್ ಮೋಕ್ಷಪ್ರಸಙ್ಗೋಽಸ್ತಿ । ವಿರಜಸ್ತ್ವಂ ತು ಆಪೇಕ್ಷಿಕಮ್ । ಸಮಸ್ತಮ್ ಅಪರವಿದ್ಯಾಕಾರ್ಯಂ ಸಾಧ್ಯಸಾಧನಲಕ್ಷಣಂ ಕ್ರಿಯಾಕಾರಕಫಲಭೇದಭಿನ್ನಂ ದ್ವೈತಮ್ ಏತಾವದೇವ ಯದ್ ಹಿರಣ್ಯಗರ್ಭಪ್ರಾಪ್ತ್ಯವಸಾನಮ್ । ತಥಾ ಚ ಮನುನಾ ಉಕ್ತಂ ಸ್ಥಾವರಾದ್ಯಾಂ ಸಂಸಾರಗತಿಮ್ ಅನುಕ್ರಾಮತಾ - ''ಬ್ರಹ್ಮಾ ವಿಶ್ವಸೃಜೋ ಧರ್ಮೋ ಮಹಾನವ್ಯಕ್ತಮೇವ ಚ । ಉತ್ತಮಾಂ ಸಾತ್ತ್ವಿಕೀಮೇತಾಂ ಗತಿಮಾಹುರ್ಮನೀಷಿಣಃ ॥'' (ಮನು. ೧೨-೫೦) ಇತಿ ॥

## (ಭಾಷ್ಯಾರ್ಥ)

(ಶಂಕೆ) :- ಇದನ್ನೇ ಮೋಕ್ಷವೆಂದು ಕೆಲವರು ಹೇಳುತ್ತಿದ್ದಾರಲ್ಲ ![1]

(ಪರಿಹಾರ) :- ಅದು ಸರಿಯಲ್ಲ. ''ಇಲ್ಲಿಯೇ ಕಾಮಗಳೆಲ್ಲವೂ ಅಡಗುವವು'' (೩-೨-೨), ''ಅವರು ಸರ್ವಗತವಾದ (ಬ್ರಹ್ಮವನ್ನು) ಎಲ್ಲಾ ಕಡೆಯಲ್ಲಿಯೂ ಪಡೆದು ಧೀರರಾಗಿ ಯುಕ್ತಾತ್ಮರಾಗಿ ಸರ್ವವನ್ನೇ ಸೇರಿಕೊಳ್ಳುವರು'' (೩-೨-೫) ಎಂದು ಮೊದಲಾಗಿರುವ ಶ್ರುತಿಗಳು ಹೀಗೆಂಬುದಕ್ಕೆ ಪ್ರಮಾಣವು. ಇದು (ಆ) ಪ್ರಕರಣವಲ್ಲದ್ದರಿಂದಲೂ ಹಾಗೆಂದು ತಿಳಿಯಬೇಕು. ಅಪರವಿದ್ಯೆಯ ಪ್ರಕರಣವು ಬಂದಿರುವಾಗ ಇದ್ದಕ್ಕಿದ್ದ ಹಾಗೆ ಮೋಕ್ಷದ ಮಾತು ಬರುವದಕ್ಕೆ ಪ್ರಸಕ್ತಿಯಿಲ್ಲವಷ್ಟೆ.[2] 'ವಿರಜರಾಗಿ' ಎಂದು ಹೇಳಿರುವದೋ ಎಂದರೆ ಅದು ಆಪೇಕ್ಷಿಕವಾದದ್ದು.[3] ಅಪರವಿದ್ಯೆಯ ಕಾರ್ಯವಾದ ಸಾಧ್ಯಸಾಧನರೂಪವಾದ ಬೇರೆಬೇರೆಯ ಕ್ರಿಯಾಕಾರಕಫಲಗಳೆಂಬ ಭಿನ್ನವಾಗಿರುವ ದ್ವೈತವೆಲ್ಲವೂ ಹಿರಣ್ಯಗರ್ಭನನ್ನು ಪಡೆಯುವದೆಂಬುದರಲ್ಲಿ ಕೊನೆಗಾಣುವ (ಈ ಫಲದ)ವರೆಗೇ ಇರುತ್ತದೆ. ಆದ್ದರಿಂದಲೇ ಸ್ಥಾವರವೇ ಮುಂತಾದ ಸಂಸಾರಗತಿಯನ್ನು ಒಂದೊಂದಾಗಿ ಹೇಳುತ್ತಾ ಹೊರಟಿರುವ[4] ಮನು (ಹೀಗೆಂದು)

---

1. ಸಮುಚ್ಚಯವಾದಿಗಳಾದ **ಭರ್ತೃಪ್ರಪಂಚರೇ** ಮುಂತಾದವರು. ಐ.ಭಾ. ಒಂದನೆಯ ಅಧ್ಯಾಯದ ಅವತರಣಿಕೆ ಭಾ.ಭಾ. ೨ನ್ನು ನೋಡಿ.

2. ಇದು ಪರವಿದ್ಯೆಯೆಂಬುದಕ್ಕೆ ಯಾವ ಗುರುತೂ ಇಲ್ಲ ; ಇದು ಮುಗಿದ ಮೇಲೆ ಪರವಿದ್ಯೆಯನ್ನು ಪ್ರಾರಂಭಿಸಿರುವದು ಸ್ಪಷ್ಟವಾಗಿ ಕಾಣುತ್ತಿದೆ.

3. ಸಂಪೂರ್ಣವಾಗಿ ಆತ್ಯಂತಿಕವಾಗಿ ಪುಣ್ಯಪಾಪಗಳನ್ನು ಕಳೆದುಕೊಂಡವರು ಎಂಬರ್ಥವಿಲ್ಲಿಲ್ಲ ; ಇತರ ಗತಿಗಳಿಗೆ ಹೋಲಿಸಿದರೆ ಹಿರಣ್ಯಗರ್ಭಪ್ರಾಪ್ತಿಯು ಬಲುಮಟ್ಟಿಗೆ ಧರ್ಮಾಧರ್ಮಗಳ ಬಿಗಿತವನ್ನು ಸಡಿಲಮಾಡಿಕೊಂಡಿರುವದು ಎಂಬುದೇ ಅಭಿಪ್ರಾಯ.

4. ಈ ಅಧ್ಯಾಯವು ಕರ್ಮಗಳ ಫಲವನ್ನು ಹೇಳುವದಕ್ಕೇ ಹೊರಟಿದೆ. ಶರೀರದಿಂದಾದ ಕರ್ಮದೋಷಗಳಿಂದ ಸ್ಥಾವರತ್ವವನ್ನೂ ವಾಚಿಕದೋಷಗಳಿಂದ ಪಕ್ಷಿಮೃಗತ್ವವನ್ನೂ ಮಾನಸ

ಹೇಳಿರುತ್ತಾನೆ. ''ಬ್ರಹ್ಮನು, ವಿಶ್ವಸೃಷ್ಟಿಯನ್ನು ಮಾಡುವ ಪ್ರಜಾಪತಿಗಳು, ಧರ್ಮನು, ಮಹತ್ತತ್ತ್ವ, ಅವ್ಯಕ್ತ - ಇದೇ ಉತ್ತಮವಾದ ಸಾತ್ತ್ವಿಕಗತಿಯೆಂದು ಬಲ್ಲವರು ಹೇಳುವರು.''[1] (ಮನು. ೧೨-೫೦).

## ವಿರಕ್ತನಾದವನು ಪರವಿದ್ಯೆಗಾಗಿ ಗುರುವಿನ ಬಳಿಗೇ ಹೋಗಬೇಕು

### (ಭಾಷ್ಯ)

೪೪. ಅಥ ಇದಾನೀಮ್ ಅಸ್ಮಾತ್ ಸಾಧ್ಯಸಾಧನರೂಪಾತ್ ಸರ್ವಸ್ಮಾತ್ ಸಂಸಾರಾತ್ ವಿರಕ್ತಸ್ಯ ಪರಸ್ಯಾಂ ವಿದ್ಯಾಯಾಮ್ ಅಧಿಕಾರಪ್ರದರ್ಶನಾರ್ಥಮ್ ಇದಮುಚ್ಯತೇ -

### (ಭಾಷ್ಯಾರ್ಥ)

ಇನ್ನು ಈಗ ಈ ಸಾಧ್ಯಸಾಧನರೂಪವಾಗಿರುವ ಎಲ್ಲಾ ಸಂಸಾರದಲ್ಲಿಯೂ **ವಿರಕ್ತನಾಗಿರುವವನಿಗೇ ಪರವಿದ್ಯೆಯಲ್ಲಿ ಅಧಿಕಾರವೆಂದು** ತಿಳಿಸುವದಕ್ಕಾಗಿ ಇದನ್ನು (ಶ್ರುತಿ) ಹೇಳುತ್ತದೆ :-

**ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ**
**ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ ।**
**ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್**
**ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ॥೧೨॥**

೧೨. ಕರ್ಮದಿಂದ ಆಗಿರುವ ಲೋಕಗಳನ್ನು ಪರೀಕ್ಷಿಸಿ ಬ್ರಾಹ್ಮಣನು ''ಅಕೃತವಾದದ್ದು ಕೃತದಿಂದ ಆಗುವದಿಲ್ಲ'' ಎಂದು ನಿರ್ವೇದವನ್ನು ಹೊಂದಬೇಕು. ಅದನ್ನು ಅರಿಯುವದಕ್ಕಾಗಿ ಅವನು ಸಮಿತ್ಪಾಣಿಯಾಗಿ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವನ್ನೇ ಬಳಿಸಾರಬೇಕು.

### (ಭಾಷ್ಯ)

೪೫. ಪರೀಕ್ಷ್ಯ ಯದೇತದ್ ಋಗ್ವೇದಾದ್ಯಪರವಿದ್ಯಾವಿಷಯಂ ಸ್ವಾಭಾವಿಕ ಅವಿದ್ಯಾಕಾಮಕರ್ಮದೋಷವತ್ಪುರುಷಾನುಷ್ಠೇಯಮ್, ಅವಿದ್ಯಾದಿದೋಷವನ್ತಮೇವ ಪುರುಷಂ ಪ್ರತಿ ವಿಹಿತತ್ವಾತ್ । ತದನುಷ್ಠಾನಕಾರ್ಯಭೂತಾಶ್ಚ ಲೋಕಾಃ ಯೇ

---

ದೋಷಗಳಿಂದ ಅಂತ್ಯಜಾತಿಗಳನ್ನೂ ಪಡೆಯುತ್ತಾರೆ (೧೨-೯). ಎಂದು ಮುಂತಾಗಿ ಹೇಳಿದ ಬಳಿಕ ಸಾತ್ತ್ವಿಕಗತಿಗಳಲ್ಲಿ ಒಂದನೆಯ-ಎರಡನೆಯವನ್ನು ಹೇಳಿ ಇದು ಉತ್ತಮವಾದದ್ದೆಂದು ತಿಳಿಸಿದೆ.

1. ಹಿರಣ್ಯಗರ್ಭ, ಪ್ರಜಾಪತಿಗಳು, ಧರ್ಮರಾಜ, ಮಹತ್ತತ್ತ್ವಾಭಿಮಾನಿದೇವತೆ, ಅವ್ಯಕ್ತಾಭಿಮಾನಿದೇವತೆ - ಇವುಗಳನ್ನು ಪಡೆಯುವ ಗತಿಯು ಉತ್ತಮವಾದ ಸಾತ್ತ್ವಿಕ ಗತಿಯು - ಎಂದು ಶ್ಲೋಕದ ಅರ್ಥ.

ದಕ್ಷಿಣೋತ್ತರಮಾರ್ಗಲಕ್ಷಣಾಃ ಫಲಭೂತಾಃ, ಯೇ ಚ ವಿಹಿತಾಕರಣಪ್ರತಿಷೇಧಾತಿಕ್ರಮ ದೋಷಸಾಧ್ಯಾಃ ನರಕತಿರ್ಯಕ್‌ಪ್ರೇತಲಕ್ಷಣಾಃ, ತಾನೇತಾನ್ ಪರೀಕ್ಷ್ಯ ಪ್ರತ್ಯಕ್ಷಾನು ಮಾನೋಪಮಾನಾಗಮೈಃ ಸರ್ವತೋ ಯಾಥಾತ್ಮ್ಯೇನಾವಧಾರ್ಯ ಲೋಕಾನ್ ಸಂಸಾರಗತಿಭೂತಾನ್ ಅವ್ಯಕ್ತಾದಿಸ್ಥಾವರಾನ್ತಾನ್ ವ್ಯಾಕೃತಾವ್ಯಾಕೃತಲಕ್ಷಣಾನ್ ಬೀಜಾಙ್ಕುರವದಿತರೇತರೋತ್ಪತ್ತಿನಿಮಿತ್ತಾನ್ ಅನೇಕಾನರ್ಥಶತಸಹಸ್ರಸಙ್ಕುಲಾನ್ ಕದಲೀಗರ್ಭವದಸಾರಾನ್ ಮಾಯಾಮರೀಚ್ಯುದಕಗನ್ಧರ್ವನಗರಾಕಾರಸ್ವಪ್ನಜಲ ಬುದ್ಬುದಫೇನಸಮಾನ್ ಪ್ರತಿಕ್ಷಣಪ್ರಧ್ವಂಸಾನ್ ಪೃಷ್ಠತಃ ಕೃತ್ವಾ ಅವಿದ್ಯಾಕಾಮ ದೋಷಪ್ರವರ್ತಿತಕರ್ಮಚಿತಾನ್ ಧರ್ಮಾಧರ್ಮನಿರ್ವರ್ತಿತಾನ್ ಇತ್ಯೇತತ್ । ಬ್ರಾಹ್ಮಣಃ ಬ್ರಾಹ್ಮಣಸ್ಯೈವ ವಿಶೇಷತೋಽಧಿಕಾರಃ ಸರ್ವತ್ಯಾಗೇನ ಬ್ರಹ್ಮ ವಿದ್ಯಾಯಾಮ್ ಇತಿ ಬ್ರಾಹ್ಮಣಗ್ರಹಣಮ್ ॥

## (ಭಾಷ್ಯಾರ್ಥ)

ಪರೀಕ್ಷಿಸಿ, ಎಂದರೆ ಋಗ್ವೇದವೇ ಮುಂತಾದ ಅಪರವಿದ್ಯೆಯ ವಿಷಯ ವಾಗಿ ಅವಿದ್ಯೆಯೇ ಮುಂತಾದ ದೋಷಗಳಿರುವ ಪುರುಷನನ್ನು ಕುರಿತೇ ವಿಹಿತವಾಗಿರುವದರಿಂದ[1] ಸ್ವಾಭಾವಿಕವಾದ ಅವಿದ್ಯೆ, ಕಾಮ, ಕರ್ಮ-ಎಂಬ ದೋಷಗಳುಳ್ಳ ಪುರುಷನು (ಮಾತ್ರ) ಮಾಡಬೇಕಾಗಿರುವ (ಈ ಕರ್ಮ), ಇದನ್ನು ಮಾಡುವದರಿಂದುಂಟಾಗುವ **ದಕ್ಷಿಣೋತ್ತರಮಾರ್ಗಗಳಿಂದ**[2] ಪಡೆಯಬೇಕಾಗಿರುವ ಫಲರೂಪವಾಗಿರುವ ಯಾವ ಲೋಕಗಳುಂಟೋ (ಅವು), ಮತ್ತು (ವೇದದಲ್ಲಿ) ವಿಹಿತವಾದದ್ದನ್ನು ಮಾಡದಿರುವದು, ಮಾಡಬಾರದ್ದೆಂಬುದನ್ನು ಮೀರುವದು ಎಂಬ ದೋಷಗಳಿಂದಾಗುವ ನರಕ, ತಿರ್ಯಗ್ಜಂತುಗಳು, ಪ್ರೇತಗಳು ಎಂಬ ಯಾವ (ಲೋಕಗಳುಂಟೋ ಅವು) - ಆ ಇವು(ಗಳನ್ನೆಲ್ಲ) ಪರೀಕ್ಷಿಸಿ, **ಪ್ರತ್ಯಕ್ಷ, ಅನುಮಾನ, ಉಪಮಾನ, ಆಗಮ**[3]-ಇವುಗಳಿಂದ ಎಲ್ಲಾ ಬಗೆಯಿಂದಲೂ (ಇವುಗಳ) ನಿಜವಾದ ಸ್ವರೂಪವನ್ನು ಗೊತ್ತುಮಾಡಿಕೊಂಡು ಸಂಸಾರದ ಗತಿ ಗಳಾಗಿರುವ **ಅವ್ಯಕ್ತವು ಮೊದಲಾಗಿ ಸ್ಥಾವರದವರೆಗಿರುವ**[4] ವ್ಯಾಕೃತಾವ್ಯಾಕೃತರೂಪ

---

1. ಕರ್ತೃತ್ವಬುದ್ಧಿಯುಳ್ಳವನಿಗೇ ಕರ್ಮವು ಅನುಷ್ಠೇಯವು. ಗೀ.ಭಾ. ೨-೨೧ ನ್ನು ನೋಡಿ.

2. ದಕ್ಷಿಣಮಾರ್ಗದಿಂದ (ಚಂದ್ರ, ಪಿತೃ) ಲೋಕಕ್ಕೂ, ಉತ್ತರ ಮಾರ್ಗದಿಂದ ದೇವ (ಬ್ರಹ್ಮ) ಲೋಕಕ್ಕೂ ಹೋಗುವರು. ಇವೆರಡೂ ಅನಿತ್ಯವೇ ; ಬ್ರಹ್ಮಲೋಕವು ಕಲ್ಪಾಂತ-ಸ್ಥಾಯಿಯು. ಅಷ್ಟೇ.

3. ನೈಯಾಯಿಕರು ಒಪ್ಪಿರುವ ನಾಲ್ಕು ಪ್ರಮಾಣಗಳಿವು ; ಮೀಮಾಂಸಕರು ಹೇಳುವ ಅರ್ಥಾಪತ್ತಿ, ಅನುಪಲಬ್ಧಿ - ಎಂಬ ಪ್ರಮಾಣಗಳನ್ನೂ ಇವಕ್ಕೆ ಸೇರಿಸಿಕೊಳ್ಳಬಹುದು. ಪ್ರಮಾಣಗಳು ಇಷ್ಟೇ ಎಂಬುದರಲ್ಲಿ ಆಚಾರ್ಯರಿಗೆ ಆಗ್ರಹವಿಲ್ಲ.

4. ಅವ್ಯಕ್ತವು ಅತ್ಯಂತ ಉತ್ತಮವಾದ ಗತಿ, ಸ್ಥಾವರವು ಅತ್ಯಂತನೀಚವಾದ ಗತಿ.

ವಾಗಿರುವ[1] ಬೀಜಾಂಕುರಗಳಂತೆ ಒಂದೊಂದರ ಉತ್ಪತ್ತಿಗೆ ಒಂದೊಂದು ಕಾರಣವಾಗಿರುವ[2] ಎಷ್ಟೋ ಲಕ್ಷಸಂಖ್ಯೆಯ ಅನೇಕವಾದ ಅನರ್ಥಗಳಿಂದ ತುಂಬಿರುವ ಬಾಳೆಯ ಕಂಬದಂತೆ ಸಾರವಿಲ್ಲದವಾಗಿ ಮಾಯೆ, ಬಿಸಿಲುಕುದುರೆಯ ನೀರು, ಗಂಧರ್ವ ನಗರ - ಇವುಗಳ ಆಕಾರವುಳ್ಳವಾಗಿ ಕನಸಿನಂತೆಯೂ ನೀರುಗುಳ್ಳೆ-ನೊರೆಗಳಂತೆಯೂ ಒಂದೊಂದು ಕ್ಷಣಕ್ಕೂ ನಾಶವಾಗುತ್ತಿರುವ ಲೋಕಗಳನ್ನು ಅವಿದ್ಯೆ, ಕಾಮ - ಎಂಬ ದೋಷಗಳಿಂದ ಮಾಡುವ ಕರ್ಮಗಳಿಂದಾದ ಎಂದರೆ ಧರ್ಮಾಧರ್ಮಗಳಿಂದ ಆಗಿರುವ ಎಂದರ್ಥ. (ಇಂಥ ಲೋಕಗಳನ್ನು) ಹಿಂತಳ್ಳಿ ಬ್ರಾಹ್ಮಣನಾದವನು - ಎಲ್ಲವನ್ನೂ ತ್ಯಾಗಮಾಡಿ[3] (ಇಲ್ಲಿ) ಬ್ರಹ್ಮವಿದ್ಯೆಯಲ್ಲಿ ತೊಡಗುವದಕ್ಕೆ ಬ್ರಾಹ್ಮಣನಿಗೇ ಮುಖ್ಯವಾಗಿ[4] ಅಧಿಕಾರವೆಂಬುದನ್ನು ಸೂಚಿಸುವದಕ್ಕೆ 'ಬ್ರಾಹ್ಮಣನು' ಎಂಬ ಮಾತನ್ನು ಉಪಯೋಗಿಸಿರುತ್ತದೆ.

(ಭಾಷ್ಯ)

೪೬. ಪರೀಕ್ಷ್ಯ ಲೋಕಾನ್ ಕಿಂ ಕುರ್ಯಾದಿತಿ ? ಉಚ್ಯತೇ । ನಿರ್ವೇದಂ ನಿಃಪೂರ್ವೋ ವಿದಿಃ ಅತ್ರ ವೈರಾಗ್ಯಾರ್ಥೇ । ವೈರಾಗ್ಯಮ್ ಆಯಾತ್ ಕುರ್ಯಾತ್ ಇತ್ಯೇತತ್ । ಸ ವೈರಾಗ್ಯಪ್ರಕಾರಃ ಪ್ರದರ್ಶ್ಯತೇ । ಇಹ ಸಂಸಾರೇ ನಾಸ್ತಿ ಕಶ್ಚಿದಪಿ ಅಕೃತಃ ಪದಾರ್ಥಃ । ಸರ್ವೇ ಏವ ಹಿ ಲೋಕಾಃ ಕರ್ಮಚಿತಾಃ ಕರ್ಮಕೃತತ್ವಾಚ್ಚ ಅನಿತ್ಯಾಃ । ನ ನಿತ್ಯಂ ಕಿಂಚಿದಸ್ತಿ ಇತ್ಯಭಿಪ್ರಾಯಃ । ಸರ್ವಂ ತು ಕರ್ಮ ಅನಿತ್ಯಸ್ಯೈವ ಸಾಧನಮ್ । ಯಸ್ಮಾತ್ ಚತುರ್ವಿಧಮೇವ ಹಿ ಸರ್ವಂ ಕರ್ಮ ಕಾರ್ಯಮ್ ಉತ್ಪಾದ್ಯಮ್ ಆಪ್ಯಂ ಸಂಸ್ಕಾರ್ಯಂ ವಿಕಾರ್ಯಂ ವಾ, ನಾತಃಪರಂ ಕರ್ಮಣಾಂ ವಿಷಯೋಽಸ್ತಿ[5] । ಅಹಂ ಚ ನಿತ್ಯೇನ ಅಮೃತೇನ ಅಭಯೇನ ಕೂಟಸ್ಥೇನ ಅಚಲೇನ

1. ಅವ್ಯಕ್ತವು ನಾಮರೂಪಗಳ ಬೀಜಸ್ಥಿತಿ ; ಇದೇ ಅವ್ಯಾಕೃತವು. ಬಿಡಿಬಿಡಿಯಾಗಿರುವ ನಾಮರೂಪಗಳೆಲ್ಲ ವ್ಯಾಕೃತವೇ. ಬ್ರಹ್ಮಾದಿಯಾಗಿ ಸ್ಥಾವರದವರೆಗಿನ ಜನ್ಮಗಳೆಲ್ಲ ವ್ಯಾಕೃತರೂಪವಾಗಿರುವ ಕರ್ಮಫಲಗಳು.

2. ವ್ಯಾಕೃತ, ಅವ್ಯಾಕೃತ - ಇವುಗಳು ಅಜ್ಞಾನವಿರುವವರೆಗೂ ಒಂದಕ್ಕೊಂದು ಕಾರಣವಾಗಿರುವವು ; ವ್ಯಾಕೃತಾವ್ಯಾಕೃತಪ್ರವಾಹವೇ ಸಂಸಾರವು.

3. ಏಕೆಂದರೆ ಅವನಿಗೆ ಉಳಿದವರಂತೆ ತನ್ನದೆಂಬುದು ಹೆಚ್ಚಾಗಿರುವದಿಲ್ಲ.

4. ವ್ಯಾಖ್ಯಾನಕಾರರು ಬ್ರಾಹ್ಮಣನಿಗೇ ಸಂನ್ಯಾಸದಲ್ಲಿ ಅಧಿಕಾರವೆಂದು ಅರ್ಥಮಾಡಿರುತ್ತಾರೆ ; ಆದರೆ ಇಲ್ಲಿ "ವಿಶೇಷತಃ" ಎಂಬ ಭಾಷ್ಯಕ್ಕೆ ಸ್ವಾರಸ್ಯವನ್ನು ಕಲ್ಪಿಸಿದಂತೆ ಆಗುವದಿಲ್ಲ. ಕ್ಷತ್ರಿಯ, ವೈಶ್ಯ-ಇವರೂ ರಾಜನ ಅಪ್ಪಣೆಯನ್ನು ಪಡೆದು ಮುಪ್ಪಿನಲ್ಲಿ ಸಂನ್ಯಾಸವನ್ನು ಮಾಡಬಹುದೆಂದು ಮಹಾಭಾರತ - ರಾಜಧರ್ಮದಲ್ಲಿ ಹೇಳಿದೆ.

5. "ಕರ್ಮಣೋ ವಿಶೇಷೋಽಸ್ತಿ" ಎಂಬ ಪಾಠಕ್ಕಿಂತ ಈ ವಾ।। ಪಾಠವು ಮೇಲು.

ಧ್ರುವೇಣ ಅರ್ಥೇನ ಅರ್ಥೀ ನ ತದ್ವಿಪರೀತೇನ । ಅತಃ ಕಿಂ ಕೃತೇನ ಕರ್ಮಣಾ ಆಯಾಸಬಹುಲೇನ ಅನರ್ಥಸಾಧನೇನ ಇತಿ ॥

## (ಭಾಷ್ಯಾರ್ಥ)

ಲೋಕಗಳನ್ನು (ಹೀಗೆ) ಪರೀಕ್ಷೆಮಾಡಿ ಏನು ಮಾಡಬೇಕು ? ಎಂದರೆ (ಶ್ರುತಿ) ಹೇಳುತ್ತದೆ. ನಿರ್ವೇದವನ್ನು ಹೊಂದಬೇಕು. ನಿರ್ ಎಂಬ ಉಪಸರ್ಗವನ್ನು ಸೇರಿಸಿರುವ ವಿದ್ ಧಾತುವಿಗೆ ಇಲ್ಲಿ ವೈರಾಗ್ಯವೆಂದು ಅರ್ಥ ; ಅದನ್ನು ಹೊಂದಬೇಕು. (ವೈರಾಗ್ಯವನ್ನು) ಮಾಡಿಕೊಳ್ಳಬೇಕು ಎಂದಭಿಪ್ರಾಯ. ಆ ವೈರಾಗ್ಯದ ಪ್ರಕಾರವನ್ನು (ಶ್ರುತಿಯು) ತಿಳಿಸುತ್ತದೆ : 'ಈ ಸಂಸಾರದಲ್ಲಿ ಅಕೃತವಾದ (ಕರ್ಮದಿಂದ ಮಾಡಲ್ಪಡದ) ಪದಾರ್ಥವು ಯಾವದೂ ಇರುವದಿಲ್ಲ. ಏಕೆಂದರೆ ಲೋಕಗಳೆಲ್ಲವೂ ಕರ್ಮದಿಂದ ಆಗಿರುತ್ತವೆ ; ಕರ್ಮದಿಂದಾಗಿರುವದರಿಂದ ಅನಿತ್ಯವೂ ಆಗಿರುತ್ತವೆ. ನಿತ್ಯವಾದದ್ದು ಒಂದೂ ಇರುವದಿಲ್ಲ ಎಂದು ಅಭಿಪ್ರಾಯ. ಯಾವ ಕರ್ಮವೇ ಆದರೂ ಅನಿತ್ಯವಾದದ್ದಕ್ಕೇ ಸಾಧನವಾಗಿರುತ್ತದೆ. ಹೇಗೆಂದರೆ ಕರ್ಮದ ಕಾರ್ಯವೆಲ್ಲ ನಾಲ್ಕೇ ವಿಧವಾಗಿರುತ್ತದೆ. **ಉತ್ಪಾದ್ಯ** (ಉಂಟುಮಾಡತಕ್ಕದ್ದು), **ಆಪ್ಯ** (ಪಡೆಯತಕ್ಕದ್ದು), **ಸಂಸ್ಕಾರ್ಯ** (ಸರಿಪಡಿಸತಕ್ಕದ್ದು), **ವಿಕಾರ್ಯ** (ಮಾರ್ಪಡಿಸತಕ್ಕದ್ದು) ಇವುಗಳನ್ನು ಬಿಟ್ಟರೆ ಬೇರೆ (ಯಾವದೂ) ಕರ್ಮಕ್ಕೆ ವಿಷಯವಿರುವದಿಲ್ಲ.[1] ನಾನೋ ನಿತ್ಯವಾಗಿಯೂ ನಾಶವಿಲ್ಲದ್ದಾಗಿಯೂ ಭಯವಿಲ್ಲದ್ದಾಗಿಯೂ ಕೂಟಸ್ಥವಾಗಿಯೂ ಚಲನವಿಲ್ಲದ್ದಾಗಿಯೂ ಎಂದೆಂದಿಗೂ ಇರುವದಾಗಿಯೂ ಇರುವ ಪದಾರ್ಥವನ್ನು ಬಯಸುವವನೇ ಹೊರತು ಅದಕ್ಕೆ ವಿರುದ್ಧವಾದದ್ದನ್ನು (ಬಯಸುವವ)ನಲ್ಲ. ಆದ್ದರಿಂದ ಆಯಾಸವು ಹೆಚ್ಚಾಗಿಯೂ (ಬೇಕಾದ) ಅರ್ಥವನ್ನು (ದೊರಕಿಸುವ) ಸಾಧನವಲ್ಲದೆಯೂ ಇರುವ ಕೃತದಿಂದ ಎಂದರೆ ಕರ್ಮದಿಂದ ಏನು (ಪ್ರಯೋಜನ ?) - ಎಂದು (ವೈರಾಗ್ಯವನ್ನು ಹೊಂದಬೇಕು).

## (ಭಾಷ್ಯ)

೪೭. ಏವಂ ನಿರ್ವಿಣ್ಣಃ ಅಭಯಂ ಶಿವಮ್ ಅಕೃತಂ ನಿತ್ಯಂ ಪದಂ ಯತ್ ತದ್ವಿಜ್ಞಾನಾರ್ಥಂ ವಿಶೇಷೇಣ ಅಧಿಗಮಾರ್ಥಂ ಸಃ ನಿರ್ವಿಣ್ಣಃ ಬ್ರಾಹ್ಮಣಃ ಗುರುಮೇವ ಆಚಾರ್ಯಂ ಶಮದಮದಯಾದಿಸಂಪನ್ನಮ್ ಅಭಿಗಚ್ಛೇತ್ । ಶಾಸ್ತ್ರಜ್ಞೋಽಪಿ ಸ್ವಾತನ್ತ್ರ್ಯೇಣ ಬ್ರಹ್ಮಜ್ಞಾನಾನ್ವೇಷಣಂ ನ ಕುರ್ಯಾತ್ ಇತ್ಯೇತತ್ ಗುರುಮೇವ

---

1. ಕರ್ಮದ ಕಾರ್ಯವು ನಾಲ್ಕೇ ವಿಧವೆಂಬುದನ್ನು ಭಾಷ್ಯದಲ್ಲಿ ಅಲ್ಲಲ್ಲಿ ಆಚಾರ್ಯರು ಹೇಳುತ್ತಲೇ ಬಂದಿದ್ದಾರೆ. ತೈ.ಭಾ. ಶೀಕ್ಷಾವಲ್ಲಿಯ ಉಪಸಂಹಾರ ; ಸೂ.ಭಾ. ೧-೧-೪ ; ಬೃ.ಭಾ ೩-೩-೧.

ಇತ್ಯವಧಾರಣಫಲಮ್ । ಸಮಿತ್ಪಾಣಿಃ ಸಮಿದ್ಭಾರಗೃಹೀತಹಸ್ತಃ ಶ್ರೋತ್ರಿಯಮ್ ಅಧ್ಯಯನಶ್ರುತಾರ್ಥಸಂಪನ್ನಂ ಬ್ರಹ್ಮನಿಷ್ಠಂ ಹಿತ್ವಾ ಸರ್ವಕರ್ಮಾಣಿ ಕೇವಲೇ ಅದ್ವಯೇ ಬ್ರಹ್ಮಣಿ ನಿಷ್ಠಾ ಯಸ್ಯ ಸೋಽಯಂ ಬ್ರಹ್ಮನಿಷ್ಠಃ । 'ಜಪನಿಷ್ಠಃ' 'ತಪೋನಿಷ್ಠಃ' ಇತಿ ಯದ್ವತ್ । ನ ಹಿ ಕರ್ಮಿಣೋ ಬ್ರಹ್ಮನಿಷ್ಠತಾ ಸಂಭವತಿ । ಕರ್ಮಾತ್ಮಜ್ಞಾನಯೋರ್ವಿರೋಧಾತ್ । ಸಃ ತಂ ಗುರುಂ ವಿಧಿವದುಪಸನ್ನಃ ಪ್ರಸಾದ್ಯ ಪೃಚ್ಛೇತ್ ಅಕ್ಷರಂ ಪುರುಷಂ ಸತ್ಯಮ್ ॥

### (ಭಾಷ್ಯಾರ್ಥ)

ಹೀಗೆ ವೈರಾಗ್ಯವನ್ನು ಹೊಂದಿ ಭಯವಿಲ್ಲದ್ದಾಗಿಯೂ ಮಂಗಳಸ್ವರೂಪವಾಗಿಯೂ ಕರ್ಮದಿಂದ ಉಂಟಾಗತಕ್ಕದ್ದಲ್ಲವಾಗಿಯೂ ನಿತ್ಯವಾಗಿಯೂ ಇರುವ ಪದವು ಯಾವದೋ ಅದರ ವಿಜ್ಞಾನಕ್ಕಾಗಿ[1] ಎಂದರೆ (ಅದನ್ನು) ವಿಶೇಷವಾಗಿ (ಇಂಥದ್ದೆಂದು) ಗೊತ್ತುಮಾಡಿಕೊಳ್ಳುವದಕ್ಕಾಗಿ ಆ ವೈರಾಗ್ಯವನ್ನು ಪಡೆದಿರುವ ಬ್ರಾಹ್ಮಣನು ಗುರುವನ್ನೇ ಎಂದರೆ ಶಮದಮದಯಾದಿಗಳಿಂದ ಕೂಡಿರುವ **ಆಚಾರ್ಯನನ್ನೇ** ಬಳಿಸಾರಬೇಕು. **ಶಾಸ್ತ್ರವನ್ನು ಬಲ್ಲವನಾದರೂ ಸ್ವತಂತ್ರವಾಗಿ ಬ್ರಹ್ಮಜ್ಞಾನವನ್ನು ಹುಡುಕಬಾರದು**[2] ಎಂಬಿದು ಗುರುವನ್ನೇ ಎಂದು ಅವಧಾರಣ ಮಾಡಿರುವದರ ಪ್ರಯೋಜನವು. ಸಮಿತ್ಪಾಣಿಯಾಗಿ ಸಮಿತ್ತುಗಳ ಕಟ್ಟನ್ನು ಕೈಯಲ್ಲಿ ತೆಗೆದುಕೊಂಡು **ಶ್ರೋತ್ರಿಯನಾಗಿಯೂ** ಎಂದರೆ ಅಧ್ಯಯನಮಾಡಿ ಶ್ರವಣಮಾಡಿದ ಅರ್ಥವನ್ನು ಸಂಪಾದಿಸಿಕೊಂಡಿರುವವನಾಗಿಯೂ **ಬ್ರಹ್ಮನಿಷ್ಠ**ನಾಗಿಯೂ ಎಲ್ಲಾ ಕರ್ಮಗಳನ್ನೂ ಬಿಟ್ಟು[3] ಬರಿಯ ತನಗೆರಡನೆಯದಿಲ್ಲದ ಬ್ರಹ್ಮದಲ್ಲಿಯೇ ನಿಷ್ಠೆಯಿರುವಾತನಿಗೆ ಬ್ರಹ್ಮನಿಷ್ಠನೆಂದು ಹೆಸರು ; 'ಜಪನಿಷ್ಠನು' 'ತಪೋನಿಷ್ಠನು' ಎಂಬಲ್ಲಿ ಹೇಗೆ (ಜಪದಲ್ಲಿಯೇ, ತಪಸ್ಸಿನಲ್ಲಿಯೇ ನಿಷ್ಠೆಯಿರುವವನೆಂದು ಅರ್ಥಮಾಡುವೆವೋ ಹಾಗೆಯೇ ಇಲ್ಲಿಯೂ ಅರ್ಥಮಾಡಬೇಕು.)[4] ಕರ್ಮಿಗೆ ಬ್ರಹ್ಮನಿಷ್ಠೆಯೆಂಬುದು ಹೊಂದುವದೇ ಇಲ್ಲ. ಏಕೆಂದರೆ ಕರ್ಮಕ್ಕೂ ಆತ್ಮಜ್ಞಾನಕ್ಕೂ ವಿರೋಧವಿರುತ್ತದೆ. ಆತನು ಇಂಥ (ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ) ಗುರುವಿನ ಬಳಿಗೆ ವಿಧಿವತ್ತಾಗಿ ಬಂದು (ಆತನ) ಮನಸ್ಸನ್ನು ಪ್ರಸನ್ನವಾಗಿ ಮಾಡಿಕೊಂಡು ಅಕ್ಷರವೆಂಬ ಸತ್ಯನಾದ ಪುರುಷನನ್ನು ಕುರಿತು ಕೇಳಬೇಕು.[5]

---

1. ಅನುಭವಕ್ಕೆ ತಂದುಕೊಳ್ಳುವದಕ್ಕಾಗಿ.

2. ತಾನೇ ಹುಡುಕಿದರೆ ಪಂಡಿತನಿಗೂ ತತ್ತ್ವವು ಗೋಚರಿಸಲಾರದು ; ಏಕೆಂದರೆ ಹುಡುಕುವದೆಲ್ಲಾ ಹೊರಗಡೆಯಲ್ಲಿ. ಪ್ರತ್ಯಗಾತ್ಮನಕಡೆಗೆ ತಿರುಗಿಸುವದಕ್ಕೆ ಆಚಾರ್ಯನೇ ಬೇಕು. ಛಾಂ. ೪-೯-೩. ಗೀ.ಭಾ. ೪-೩೪, ೩೫.

3. ಸರ್ವಕರ್ಮಸಂನ್ಯಾಸವನ್ನು ಮಾಡಿ.

4. ಏಕೆಂದರೆ 'ನಿಷ್ಠೆ' ಎಂಬ ಮಾತಿಗೆ ಹಾಗೆ ಅರ್ಥವಾಗುತ್ತದೆ.

5. ತಿಳಿದುಕೊಳ್ಳುವದಕ್ಕಾಗಿ ಗುರುವಿನಬಳಿಗೆ ಹೋಗಬೇಕು – ಎಂದದ್ದರಿಂದ ಕೇಳಬೇಕು ಎಂದು ಏರ್ಪಡುತ್ತದೆ. ಗೀ. ೪-೩೪.

## ಗುರುವು ಶಿಷ್ಯನಿಗೆ ತತ್ತ್ವವನ್ನು ಉಪದೇಶಿಸಬೇಕು

**ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್**
**ಪ್ರಶಾನ್ತಚಿತ್ತಾಯ ಶಮಾನ್ವಿತಾಯ ।**
**ಯೇನಾಕ್ಷರಂ ಪುರುಷಂ ವೇದ ಸತ್ಯಂ**
**ಪ್ರೋವಾಚ ತಾಂ ತತ್ತ್ವತೋ ಬ್ರಹ್ಮವಿದ್ಯಾಮ್ ॥೧೩॥**

೧೩. ಹೀಗೆ ಸರಿಯಾಗಿ ಬಳಿಸಾರಿರುವ ಪ್ರಶಾಂತವಾದ ಚಿತ್ತವುಳ್ಳ ಶಮೆಯಿಂದ ಕೂಡಿರುವ ಆತನಿಗೆ ಆ ವಿದ್ವಾಂಸನು ಯಾವುದರಿಂದ ಅಕ್ಷರವೆಂಬ ಸತ್ಯಪುರುಷನನ್ನು ತಿಳಿಯುವನೋ ಆ ಬ್ರಹ್ಮವಿದ್ಯೆಯನ್ನು ತತ್ತ್ವದಿಂದ ತಿಳಿಸಬೇಕು.

### (ಭಾಷ್ಯ)

೩೮. ತಸ್ಮೈ ಸಃ ವಿದ್ವಾನ್ ಗುರುಃ ಬ್ರಹ್ಮವಿತ್, ಉಪಸನ್ನಾಯ ಉಪಗತಾಯ ಸಮ್ಯಕ್ ಯಥಾಶಾಸ್ತ್ರಮ್ ಇತ್ಯೇತತ್ । ಪ್ರಶಾನ್ತಚಿತ್ತಾಯ ಉಪರತದರ್ಪಾದಿದೋಷಾಯ ಶಮಾನ್ವಿತಾಯ ಬಾಹ್ಯೇನ್ದ್ರಿಯೋಪರಮೇಣ ಚ ಯುಕ್ತಾಯ ಸರ್ವತೋ ವಿರಕ್ತಾಯ ಇತ್ಯೇತತ್ । ಯೇನ ವಿಜ್ಞಾನೇನ ಯಯಾ ವಿದ್ಯಯಾ[1] ಪರಯಾ ಅಕ್ಷರಮ್ ಅದ್ರೇಶ್ಯಾದಿವಿಶೇಷಣಂ ತದೇವಾಕ್ಷರಂ ಪುರುಷಶಬ್ದವಾಚ್ಯಂ ಪೂರ್ಣತ್ವಾತ್ ಪುರಿ ಶಯನಾಚ್ಚ ಸತ್ಯಂ ತದೇವ ಪರಮಾರ್ಥಸ್ವಾಭಾವ್ಯಾತ್[2] ಅಕ್ಷರಂ ಚ ಅಕ್ಷರಣಾತ್ ಅಕ್ಷತತ್ವಾತ್, ಅಕ್ಷಯತ್ವಾಚ್ಚ, ವೇದ ವಿಜಾನಾತಿ ತಾಂ ಬ್ರಹ್ಮವಿದ್ಯಾಂ ತತ್ತ್ವತಃ ಪ್ರೋವಾಚ ಪ್ರಬ್ರೂಯಾತ್ ಇತ್ಯರ್ಥಃ । ಆಚಾರ್ಯಸ್ಯಾಪಿ ಅಯಂ ನಿಯಮಃ ಯತ್ ನ್ಯಾಯಪ್ರಾಪ್ತಸಚ್ಛಿಷ್ಯನಿಸ್ತಾರಣಮ್ ಅವಿದ್ಯಾಮಹೋದಧೇಃ ॥

### (ಭಾಷ್ಯಾರ್ಥ)

ಆ ವಿದ್ವಾಂಸನು ಎಂದರೆ ಬ್ರಹ್ಮಜ್ಞಾನಿಯಾದ ಗುರುವು, ಸರಿಯಗಿ ಎಂದರೆ ಶಾಸ್ತ್ರದಲ್ಲಿ ಹೇಳಿರುವಂತೆ[3] ಎಂದರ್ಥ. ಪ್ರಶಾಂತಚಿತ್ತನಾದ ಎಂದರೆ ದರ್ಪವೇ

1. ''ವಿದ್ಯಯಾ ಚ'' ಎಂಬ ಕಾ॥ ವಾ॥ ಪಾಠಲ್ಲಿರುವ 'ಚ' ಹೆಚ್ಚು.

2. ಇಲ್ಲಿ ''ಅವ್ಯಯಮ್'' ಎಂದು ವಾ॥ ಕಾ॥ ಪಾಠದಲ್ಲಿ ಹೆಚ್ಚಾಗಿದೆ.

3. ಗುರುವಿನ ಬಳಿಗೆ ಬಂದು ತತ್ತ್ವವನ್ನು ಕೇಳಬೇಕೆಂಬ ವಿಧಿಗೆ ಅನುಸಾರವಾಗಿ ೧-೧-೩ ರಲ್ಲಿ ''ವಿಧಿವದುಪಸನ್ನಃ'' ಎಂಬುದರ ಭಾಷ್ಯವನ್ನು ನೋಡಿ.

ಮುಂತಾದ ದೋಷಗಳಿಲ್ಲದ,[1] ಶಮೆಯಿಂದ ಕೂಡಿರುವ ಎಂದರೆ ಹೊರಗಿನ[2] ಇಂದ್ರಿಯಗಳನ್ನು ಸುಮ್ಮನಿರುವಂತೆ ಮಾಡಿಕೊಂಡವನಾದ ಎಲ್ಲದರಲ್ಲಿಯೂ[3] ವಿರಕ್ತನಾಗಿರುವ ಎಂದು ಅಭಿಪ್ರಾಯ. (ಇಂಥ) ಆ (ಶಿಷ್ಯನಿಗೆ) ಯಾವ ವಿಜ್ಞಾನದಿಂದ ಎಂದರೆ ಯಾವ ಪರವಿದ್ಯೆಯಿಂದ ಅಕ್ಷರವನ್ನು ಎಂದರೆ ಅದೃಶ್ಯತ್ವವೇ ಮುಂತಾದ ವಿಶೇಷಣಗಳಿಂದ (೧-೧-೬) ಕೂಡಿರುವ (ತತ್ತ್ವವನ್ನು) ; ಅದೇ ಅಕ್ಷರವೇ **ಪುರುಷ** ಎಂಬ ಶಬ್ದಕ್ಕೆ ವಾಚ್ಯವಾಗಿರುವದು, ಏಕೆಂದರೆ (ಅದು) ಪೂರ್ಣವಾಗಿ (ತುಂಬಿ)ರುತ್ತದೆ,[4] ಮತ್ತು ಪುರದಲ್ಲಿ ಶಯನಮಾಡಿಕೊಂಡಿರುತ್ತದೆ ;[5] ಅದೇ ಪರಮಾರ್ಥಸ್ವಭಾವವುಳ್ಳದ್ದಾಗಿರುವದರಿಂದ **ಸತ್ಯವು** ; ಮತ್ತು ನಾಶವಾಗದೆ ಇರುವದರಿಂದಲೂ (ಮತ್ತೊಂದರಿಂದ) ಗಾಯಪಡೆಯದೆ ಇರುವದರಿಂದಲೂ[6] ಎಂದಿಗೂ ಸವೆಯುವದಲ್ಲವಾದ್ದರಿಂದಲೂ ಅಕ್ಷರವೆನಿಸಿಕೊಂಡಿರುವದು. (ಅದನ್ನು ಯಾವ ವಿದ್ಯೆಯಿಂದ) ತಿಳಿಯುವನೋ ಅರಿತುಕೊಳ್ಳುವನೋ ಆ **ಬ್ರಹ್ಮವಿದ್ಯೆಯನ್ನು** ತತ್ತ್ವದಿಂದ (ಇದ್ದಂತೆ) 'ಪ್ರೋವಾಚ-ಪ್ರಬ್ರೂಯಾತ್' ಹೇಳಬೇಕು ಎಂದರ್ಥ.[7] **ನ್ಯಾಯಕ್ಕೆ ಅನುಗುಣವಾಗಿ ಬಂದಿರುವ ಉತ್ತಮಶಿಷ್ಯನನ್ನು ಅವಿದ್ಯೆಯೆಂಬ ಮಹಾಸಮುದ್ರದಿಂದ ದಾಟಿಸಬೇಕು - ಎಂಬುದಿದು ಆಚಾರ್ಯನಿಗೂ ನಿಯಮವಾಗಿರುತ್ತದೆ.**[8]

1. ದರ್ಪ, ದಂಭ ಮುಂತಾದ ದೋಷಗಳುಳ್ಳವನು ಗುರುಗಳನ್ನು ಲೆಕ್ಕಿಸುವದಿಲ್ಲ ; ಆದ್ದರಿಂದ ಅವನಿಗೆ ತತ್ತ್ವವು ಗೋಚರಿಸಲಾರದು.

2. ಪ್ರಶಾಂತಚಿತ್ತ, ಶಮಾನ್ವಿತ - ಎಂದು ಶಮಶಬ್ದವು ಎರಡು ಸಲ ಬಂದಿರುವದರಿಂದ ಮೊದಲನೆಯದು ಅಂತಃಕರಣನಿಗ್ರಹರೂಪವಾದ ಶಮೆ, ಎರಡನೆಯದು ಹೊರಗಿನ ಕರಣಗಳ ಉಪಶಮರೂಪವಾದ ದಮೆ ಎಂದು ವಾಖ್ಯಾನಮಾಡಿರುತ್ತದೆ.

3. ಹೊರಗಿನ ವಿಷಯ, ಒಳಗಿನ ದರ್ಪಾದಿಗಳು ಎಲ್ಲದರಲ್ಲಿಯೂ.

4. ಎಲ್ಲೆಲ್ಲಿಯೂ ತಾನೊಂದೇ ಇರುವದು.

5. ಹೃದಯದಲ್ಲಿ ಬುದ್ಧಿಸಾಕ್ಷಿಯಾಗಿದ್ದುಕೊಂಡಿರುವದು.

6. ಕ್ಷರ ಸಂಚಲನೇ, ಕ್ಷಿ ಹಿಂಸಾಯಾಮ್, ಕ್ಷಿ ಕ್ಷಯೇ ಎಂಬ ಧಾತುಗಳಿಂದ ಈ ಶಬ್ದವನ್ನು ವ್ಯುತ್ಪಾದನಮಾಡಿ ಈ ಅರ್ಥಗಳನ್ನು ತೆಗೆದಿರುತ್ತದೆ.

7. ಪ್ರೋವಾಚ (ಹೇಳಿದನು) ಎಂಬ ಲಿಟ್ ರೂಪವನ್ನು 'ಹೇಳಬೇಕು' ಎಂದು ವಿಧಿಯ ಅರ್ಥದಲ್ಲಿ ಪ್ರಯೋಗಿಸಿದೆ ಎಂದರ್ಥ.

8. ಜ್ಞಾನಿಗಳು ಸ್ವಭಾವದಿಂದಲೇ ಶಿಷ್ಯರ ಅಜ್ಞಾನವನ್ನು ತೊಲಗಿಸುತ್ತಾರೆ. ಆದ್ದರಿಂದ ಇಲ್ಲಿ ಗುರುವಿಗೆ ನಿಯಮ ಎಂದು ಹೇಳಿರುವದೂ ಉಪಚಾರಕ್ಕೆ. ''ಅವಶ್ಯವಾಗಿ ಉಪದೇಶಿಸುತ್ತಾರೆ'' ಎಂದರ್ಥ. ಗೀ. ಭಾ. ೪-೩೪ನ್ನು ನೋಡಿ.

# ಎರಡನೆಯ ಮುಂಡಕ-ಒಂದನೆಯ ಖಂಡ

## ಮುಂದಿನ ಗ್ರಂಥದ ಸಂಬಂಧ

### (ಭಾಷ್ಯ)

೪೯. ಅಪರವಿದ್ಯಾಯಾಃ ಸರ್ವಂ ಕಾರ್ಯಮ್ ಉಕ್ತಮ್ । ಸ ಚ ಸಂಸಾರೋ ಯತ್ಸಾರಃ, ಯಸ್ಮಾನ್ಮೂಲಾತ್ ಅಕ್ಷರಾತ್ ಸಂಭವತಿ, ಯಸ್ಮಿಂಶ್ಚ ಪ್ರಲೀಯತೇ ತತ್ ಅಕ್ಷರಂ ಪುರುಷಾಖ್ಯಂ ಸತ್ಯಮ್ । ಯಸ್ಮಿನ್ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ ತತ್ ಪರಸ್ಯಾ ಬ್ರಹ್ಮವಿದ್ಯಾಯಾಃ ವಿಷಯಃ । ಸ ವಕ್ತವ್ಯಃ ಇತಿ ಉತ್ತರೋ ಗ್ರನ್ಥಃ ಆರಭ್ಯತೇ ॥

### (ಭಾಷ್ಯಾರ್ಥ)

ಅಪರವಿದ್ಯೆಯ ಕಾರ್ಯವನ್ನೆಲ್ಲ,[1] ಹೇಳಿದ್ದಾಯಿತು. ಆ ಸಂಸಾರಕ್ಕೆ ಯಾವದು ಸಾರವೋ, ಯಾವ ಅಕ್ಷರವೆಂಬ ಮೂಲದಿಂದ (ಅದು) ಹುಟ್ಟುತ್ತದೆಯೋ,[2] ಮತ್ತು ಯಾವದರಲ್ಲಿ ಅಡಗುವದೋ ಆ ಅಕ್ಷರವು ಪುರುಷನೆಂಬ ಸತ್ಯವು ; ಅದನ್ನು ತಿಳಿದರೆ ಇದೆಲ್ಲವನ್ನೂ ತಿಳಿದಂತೆ ಆಗುತ್ತದೆ. ಅದೇ ಪರ (ವಿದ್ಯೆಯಾದ) ಬ್ರಹ್ಮ ವಿದ್ಯೆಗೆ ವಿಷಯವು. ಅದನ್ನು ಹೇಳಬೇಕಾಗಿದೆಯಾದ್ದರಿಂದ ಮುಂದಿನ ಗ್ರಂಥವನ್ನು ಆರಂಭಿಸಿರುತ್ತದೆ.

## ಅಕ್ಷರದಿಂದ ಜೀವರ ಉತ್ಪತ್ತಿ

**ತದೇತತ್ ಸತ್ಯಂ ಯಥಾ ಸುದೀಪ್ತಾತ್ ಪಾವಕಾದ್ವಿಸ್ಫುಲಿಙ್ಗಾಃ**
**ಸಹಸ್ರಶಃ ಪ್ರಭವನ್ತೇ ಸರೂಪಾಃ ।**
**ತಥಾಕ್ಷರಾದ್ ವಿವಿಧಾಃ ಸೋಮ್ಯ ಭಾವಾಃ**
**ಪ್ರಜಾಯನ್ತೇ ತತ್ರ ಚೈವಾಪಿ ಯನ್ತಿ ॥೧॥**

೧. ಆ ಇದು ಸತ್ಯವು. ಹೇಗೆ ಚೆನ್ನಾಗಿ ಹೊತ್ತಿಕೊಂಡಿರುವ ಪಾವಕದಿಂದ ಕಿಡಿಗಳು ಸಾವಿರಾರು ಸಮಾನರೂಪವಾಗಿ ಹುಟ್ಟುತ್ತವೆಯೋ ಹಾಗೆ ಎಲೈ ಸೋಮ್ಯನೆ, ಅಕ್ಷರದಿಂದ ವಿವಿಧವಾದ ಭಾವಗಳು ಹುಟ್ಟುತ್ತವೆ ಮತ್ತು ಅದರಲ್ಲಿಯೇ ಸೇರಿಹೋಗುತ್ತವೆ.

---

1. ಕರ್ಮ, ಕರ್ಮದ ಫಲವಾದ ಸ್ವರ್ಗ, ಉಪಾಸನಾಸಹಿತಕರ್ಮ, ಅದರ ಫಲವಾದ ಬ್ರಹ್ಮಲೋಕ - ಇವಿಷ್ಟೂ ಅಪರವಿದ್ಯೆಯ ಕಾರ್ಯವು.

2. ಗೀ. ೧೫-೧ ನ್ನು ನೋಡಿರಿ.

(ಭಾಷ್ಯ)

೫೦. ಯದಪರವಿದ್ಯಾವಿಷಯಂ ಕರ್ಮಫಲಲಕ್ಷಣಂ ಸತ್ಯಮ್ ತದ್ ಆಪೇಕ್ಷಿಕಮ್ । ಇದಂ ತು ಪರವಿದ್ಯಾವಿಷಯಂ ಪರಮಾರ್ಥಸಲ್ಲಕ್ಷಣತ್ವಾತ್ ತದೇತತ್ ಸತ್ಯಮ್ ಯಥಾಭೂತಂ ವಿದ್ಯಾವಿಷಯಮ್ । ಅವಿದ್ಯಾವಿಷಯತ್ವಾಚ್ಚ ಅನೃತಮಿತರತ್ ॥

(ಭಾಷ್ಯಾರ್ಥ)

ಅಪರವಿದ್ಯೆಗೆ ವಿಷಯವಾಗಿರುವ ಕರ್ಮ, ಫಲ - ಎಂಬ ಸತ್ಯವಿದೆಯಲ್ಲ, ಅದು ಆಪೇಕ್ಷಿಕ(ಸತ್ಯವು).[1] ಆದರೆ ಪರವಿದ್ಯೆಗೆ ವಿಷಯವಾದ ಇದು **ಪರಮಾರ್ಥ ಸದ್ರೂಪವಾಗಿರುವದರಿಂದ**[2] ಆ ಇದು ಸತ್ಯವು, ವಿದ್ಯಾವಿಷಯ (ವಾದ್ದರಿಂದ) ಇದ್ದಂತೆ ಇರತಕ್ಕದ್ದು. **ಮಿಕ್ಕದ್ದು ಅವಿದ್ಯೆಯ ವಿಷಯವಾದ್ದರಿಂದ ಅನೃತವು.**[3]

(ಭಾಷ್ಯ)

೫೧. ಅತ್ಯನ್ತಪರೋಕ್ಷತ್ವಾತ್ ಕಥಂ ನಾಮ ಪ್ರತ್ಯಕ್ಷವತ್ ಸತ್ಯಮ್ ಅಕ್ಷರಂ ಪ್ರತಿಪದ್ಯೇರನ್ ಇತಿ ದೃಷ್ಟಾನ್ತಮಾಹ - ಯಥಾ ಸುದೀಪ್ತಾತ್ ಸುಷ್ಠು ದೀಪ್ತಾತ್ ಇದ್ಧಾತ್ ಪಾವಕಾತ್ ಅಗ್ನೇಃ ವಿಸ್ಫುಲಿಙ್ಗಾಃ ಅಗ್ನ್ಯವಯವಾಃ ಸಹಸ್ರಶಃ ಅನೇಕಶಃ ಪ್ರಭವನ್ತೇ ನಿರ್ಗಚ್ಛನ್ತಿ ಸರೂಪಾಃ ಅಗ್ನಿಸಲಕ್ಷಣಾ ಏವ, ತಥಾ ಉಕ್ತಲಕ್ಷಣಾತ್ ಅಕ್ಷರಾತ್ ವಿವಿಧಾಃ ನಾನಾದೇಹೋಪಾಧಿಭೇದಮನುವಿಧೀಯಮಾನತ್ವಾತ್ ವಿವಿಧಾಃ ಹೇ ಸೋಮ್ಯ ಭಾವಾಃ ಜೀವಾಃ ಆಕಾಶಾದಿವತ್ ಘಟಾದಿಪರಿಚ್ಛಿನ್ನಾಃ ಸುಷಿರಭೇದಾಃ ಘಟಾದ್ಯುಪಾಧಿಪ್ರಭೇದಮ್ ಅನುಭವನ್ತಿ । ಏವಂ ನಾನಾನಾಮರೂಪಕೃತದೇಹೋಪಾಧಿಪ್ರಭವಮ್ ಅನುಪ್ರಜಾಯನ್ತೇ ತತ್ರ ಚೈವ ತಸ್ಮಿನ್ನೇವ ಚ ಅಕ್ಷರೇ ಅಪಿಯನ್ತಿ ದೇಹೋಪಾಧಿವಿಲಯಮನು ಲೀಯನ್ತೇ ಘಟಾದಿವಿಲಯಮನ್ವಿವ ಸುಷಿರಭೇದಾಃ । ಯಥಾ ಆಕಾಶಸ್ಯ ಸುಷಿರಭೇದೋತ್ಪತ್ತಿಪ್ರಲಯನಿಮಿತ್ತತ್ವಂ ಘಟಾದ್ಯುಪಾಧಿಕೃತಮೇವ, ತದ್ವತ್ ಅಕ್ಷರಸ್ಯಾಪಿ ನಾಮರೂಪಕೃತದೇಹೋಪಾಧಿನಿಮಿತ್ತಮೇವ ಜೀವೋತ್ಪತ್ತಿಪ್ರಲಯನಿಮಿತ್ತತ್ವಮ್ ॥

1. ಅವಶ್ಯವಾಗಿ ಆಗತಕ್ಕದ್ದು, ಬಹುಕಾಲವಿರತಕ್ಕದ್ದು - ಎಂಬ ಕಾರಣದಿಂದ ಸತ್ಯವು. ೧-೨-೧ ರಲ್ಲಿ 'ತದೇತತ್ ಸತ್ಯಮ್' ಎಂಬುದರ ಭಾಷ್ಯವನ್ನು ನೋಡಿ.

2. ಸರಿಯಾದ ಜ್ಞಾನವು ಇರುವದನ್ನೇ ತಿಳಿಸುತ್ತದೆ.

3. ಅಪರವಿದ್ಯೆಯು ನಿಜವಾಗಿ ಅವಿದ್ಯೆಯೇ ; ಆದ್ದರಿಂದ ಅದು ತೋರಿಸಿದ್ದು ಸತ್ಯಾಭಾಸವು, ಮಿಥ್ಯೆ.

## (ಭಾಷ್ಯಾರ್ಥ)

ಅತ್ಯಂತವಾಗಿ ಪರೋಕ್ಷವಾಗಿರುವದರಿಂದ[1] (ಈ) ಸತ್ಯವಾದ ಅಕ್ಷರವನ್ನು ಪ್ರತ್ಯಕ್ಷವಾದ ವಸ್ತುವಿನಂತೆಯೇ ಹೇಗಾದರೂ (ಜಿಜ್ಞಾಸುಗಳು) ತಿಳಿದುಕೊಳ್ಳಲಿ ಎಂದು (ಶ್ರುತಿ) ದೃಷ್ಟಾಂತವನ್ನು ಹೇಳುತ್ತದೆ : ಹೇಗೆ ಸುದೀಪ್ತವಾದ ಎಂದರೆ ಚೆನ್ನಾಗಿ ದೀಪ್ತವಾಗಿರುವ ಹೊತ್ತಿಕೊಂಡಿರುವ ಪಾವಕನಿಂದ ಎಂದರೆ ಬೆಂಕಿಯಿಂದ ಕಿಡಿಗಳು ಬೆಂಕಿಯ ಕಣಗಳು ಸಾವಿರಾರು ಎಂದರೆ ಅನೇಕವಾಗಿ ಸಮಾನರೂಪವಾಗಿ ಎಂದರೆ ಬೆಂಕಿಯಂತಿರುವ ಲಕ್ಷಣದವೇ ಆಗಿ ಹುಟ್ಟುತ್ತವೆಯೋ (ಅದರಿಂದ) ಹೊರಟು ಬರುತ್ತವೆಯೋ ಹಾಗೆ ಹಿಂದೆ ಹೇಳಿದಂಥ ಅಕ್ಷರದಿಂದ ವಿವಿಧವಾದ, ಬೇರೆಬೇರೆಯ ದೇಹಗಳೆಂಬ **ಉಪಾಧಿವಿಶೇಷಗಳನ್ನು** ಅನುಸರಿಸುವದರಿಂದ ವಿವಿಧವಾಗಿರುವ **ಭಾವರುಗಳು** ಎಂದರೆ ಜೀವರುಗಳು, ಎಲೈ ಸೋಮ್ಯನೆ, ಆಕಾಶವೇ ಮುಂತಾದವು ಗಳಿಂದ ಗಡಿಗೆಯೇ ಮುಂತಾದವುಗಳ ಅಳತೆಗೆ ಕಟ್ಟುಬಿದ್ದ ಬೇರೆಬೇರೆಯ ರಂಧ್ರ ಗಳು ಗಡಿಗೆಯೇ ಮುಂತಾದ ಉಪಾಧಿವಿಶೇಷಗಳನ್ನು ಅನುಸರಿಸಿ ಹುಟ್ಟುವಂತೆ,[2] ಹುಟ್ಟುವವು. ಹೀಗೆ ಬೇರೆಬೇರೆಯಾದ ನಾಮರೂಪಗಳಿಂದಾಗಿರುವ ದೇಹಗಳೆಂಬ ಉಪಾಧಿಗಳು ಹುಟ್ಟುವದನ್ನು ಅನುಸರಿಸಿ[3] ಹುಟ್ಟುತ್ತವೆ ; ಮತ್ತು ಅದೇ ಅಕ್ಷರ ದಲ್ಲಿಯೇ ಸೇರಿಹೋಗುತ್ತವೆ ; ಗಡಿಗೆಯೇ ಮುಂತಾದವುಗಳು ನಾಶವಾದದ್ದನ್ನು ಅನುಸರಿಸಿ ಆಯಾ ರಂಧ್ರಗಳು (ಅಡಗು)ವಂತೆ, ದೇಹಗಳೆಂಬ ಉಪಾಧಿಯು (ನಾಶವಾದದ್ದನ್ನು) ಅನುಸರಿಸಿ (ಅದರಲ್ಲಿಯೇ) ಅಡಗುತ್ತವೆ. ಹೇಗೆ ಆಕಾಶವು ರಂಧ್ರವಿಶೇಷಗಳು ಹುಟ್ಟಿ ಅಡಗುವದಕ್ಕೆ ಕಾರಣವಾಗಿರುವದೆಂಬುದು ಗಡಿಗೆಯೇ ಮುಂತಾದ ಉಪಾಧಿಗಳಿಂದಲೇ ಆಗಿರುವದೋ ಅದರಂತೆ ಜೀವರುಗಳು ಹುಟ್ಟಿ ಅಡಗುವದಕ್ಕೆ ಅಕ್ಷರವು ಕಾರಣವಾಗಿರುವದೆಂಬುದೂ ನಾಮರೂಪಗಳಿಂದಾದ ದೇಹೋಪಾಧಿಗಳ ನಿಮಿತ್ತವೇ ಆಗಿರುತ್ತದೆ.[4]

---

1. ಮೂಢರಿಗೆ ತಮ್ಮ ಆತ್ಮನೇ ಅತ್ಯಂತಪರೋಕ್ಷನಾಗಿರುವನು. ಈ.ಭಾ.ಭಾ. ೧೪.

2. ಬೆಂಕಿಯ ಕಿಡಿಯ ದೃಷ್ಟಾಂತವನ್ನು ಶ್ರುತಿಯಲ್ಲಿ ಕೊಟ್ಟಿರುವದು ಜೀವರು ಪರಮಾತ್ಮನಂತೆ ಚೇತನಸ್ವರೂಪರೇ ಎಂದು ತಿಳಿಸುವದಕ್ಕೆ ; ಪರಮಾತ್ಮನ ಅಂಶರೂಪರೇ ಎಂದು ಭ್ರಮಿಸಕೂಡದು. ಇದನ್ನು ಸ್ಪಷ್ಟಗೊಳಿಸುವದಕ್ಕೆ ಭಾಷ್ಯದಲ್ಲಿ ಆಕಾಶದೃಷ್ಟಾಂತವನ್ನು ಕೊಟ್ಟಿದೆ. ಬೃ.ಭಾ. ೨-೧-೨೦ ''ಅಗ್ನೇರ್ಹಿ ವಿಸ್ಫುಲಿಙ್ಗೋಽಗ್ನಿರೇವ'' ಎಂಬ ಭಾಷ್ಯಭಾಗವನ್ನು ನೋಡಿ. ಗೌ.ಕಾ. ೩-೩ ರಿಂದ ೧೫ ವರೆಗಿನ ಕಾರಿಕೆಗಳಲ್ಲಿ ಇದನ್ನು ಸ್ಪಷ್ಟಗೊಳಿಸಿದೆ.

3. ತಾವೇ ಹುಟ್ಟುವ ಸ್ವಭಾವದವುಗಳಲ್ಲ. ಸೂ.ಭಾ. ೨-೩-೧೬ನ್ನು ನೋಡಿ.

4. ಜೀವನಿಗೆ ಸ್ವತಃ ಜನ್ಮಮರಣಗಳಿಲ್ಲ, ಉಪಾಧಿನಿಮಿತ್ತವೇ ಎಂಬುದನ್ನು ಸೂ.ಭಾ. ೨-೩-೧೭ ರಲ್ಲಿ ನಿರ್ಣಯಿಸಿದೆ.

## ಅಕ್ಷರದ ಸ್ವರೂಪ

### (ಭಾಷ್ಯ)

೫೨. ನಾಮರೂಪಬೀಜಭೂತಾತ್, ಅವ್ಯಾಕೃತಾಖ್ಯಾತ್, ಸ್ವವಿಕಾರಾಪೇಕ್ಷಯಾ ಪರಾತ್ ಅಕ್ಷರಾತ್ ಪರಂ ಯತ್ ಸರ್ವೋಪಾಧಿಭೇದವರ್ಜಿತಮ್ ಅಕ್ಷರಸ್ಯೈವ ಸ್ವರೂಪಮ್ ಆಕಾಶಸ್ಯೇವ ಸರ್ವಮೂರ್ತಿವರ್ಜಿತಮ್ 'ನೇತಿ ನೇತಿ' (ಬೃ. ೨-೩-೬) ಇತ್ಯಾದಿವಿಶೇಷಣಂ ವಿವಕ್ಷನ್ ಆಹ -

### (ಭಾಷ್ಯಾರ್ಥ)

ನಾಮರೂಪಗಳ ಬೀಜವಾಗಿರುವ '**ಅವ್ಯಾಕೃತ**'ವೆಂಬ ಹೆಸರಿನ, ತನ್ನ ಕಾರ್ಯ (ಗಳಿಗಿಂತ)ಕ್ಕಿಂತ ಹೆಚ್ಚಿನದಾದ **ಅಕ್ಷರಕ್ಕಿಂತ**[1] ಹೆಚ್ಚಿನದಾಗಿರುವ ಯಾವ ಉಪಾಧಿ ವಿಶೇಷವೂ ಇಲ್ಲದೆ ಆಕಾಶದ (ಸ್ವರೂಪದಂತೆ) ಯಾವ ಆಕಾರವೂ ಇಲ್ಲದ ''ಇದಲ್ಲ, ಇದಲ್ಲ'' (ಬೃ. ೨-೩-೬) ಎಂಬುದೇ ಮುಂತಾದ ವಿಶೇಷಣವುಳ್ಳ[2] ಅಕ್ಷರದ್ದೇ ಆದ ಸ್ವರೂಪವನ್ನು ಹೇಳಬೇಕೆಂದು (ಅಂಗಿರಸ್ಸು) ಹೇಳುತ್ತಾನೆ :-

**ದಿವ್ಯೋ ಹ್ಯಮೂರ್ತಃ ಪುರುಷಃ**
**ಸಬಾಹ್ಯಾಭ್ಯನ್ತರೋ ಹ್ಯಜಃ ।**
**ಅಪ್ರಾಣೋ ಹ್ಯಮನಾಃ ಶುಭ್ರೋ**
**ಹ್ಯಕ್ಷರಾತ್ ಪರತಃ ಪರಃ** ॥೨॥

೨. ದಿವ್ಯನಾಗಿ ಅಮೂರ್ತನಾದ ಪುರುಷನು ಹೊರಗು ಒಳಗುಗಳಿಂದ ಕೂಡಿದವನು ; ಅಜನು ; ಅಪ್ರಾಣನು ; ಅಮನನು ; ಶುಭ್ರನು ; ಪರವಾದ ಅಕ್ಷರಕ್ಕಿಂತಲೂ ಪರನು.

### (ಭಾಷ್ಯ)

೫೩. ದಿವ್ಯಃ ದ್ಯೋತನವಾನ್, ಸ್ವಯಂಜ್ಯೋತಿಷ್ಟ್ವಾತ್ । ದಿವಿ ವಾ ಸ್ವಾತ್ಮನಿ ಭವಃ । ಅಲೌಕಿಕೋ ವಾ । ಹಿ ಯಸ್ಮಾತ್ ಅಮೂರ್ತಃ ಸರ್ವಮೂರ್ತಿವರ್ಜಿತಃ । ಪುರುಷಃ ಪೂರ್ಣಃ ಪುರಿಶಯೋ ವಾ । ದಿವ್ಯೋ ಹ್ಯಮೂರ್ತಃ ಪುರುಷಃ[3] । ಸಬಾಹ್ಯಾಭ್ಯನ್ತರಃ ಸಹ ಬಾಹ್ಯಾಭ್ಯನ್ತರೇಣ ವರ್ತತೇ ಇತಿ । ಅಜಃ ನ ಜಾಯತೇ ಕುತಶ್ಚಿತ್ । ಸ್ವತೋಽನ್ಯಸ್ಯ[4] ಜನ್ಮನಿಮಿತ್ತಸ್ಯ ಚ ಅಭಾವಾತ್, ಯಥಾ ಜಲಬುದ್ಬುದಾ

1. ಅವ್ಯಾಕೃತವೂ ಸಂಸಾರವಿರುವತನಕ ನಾಶವಾಗದಿರುವದರಿಂದ ಅಕ್ಷರವು. ಗೀ. ೧೫-೧೬.
2. ನಿರ್ಧರ್ಮಕವಾದ್ದರಿಂದ ನಿಷೇಧದಿಂದಲೇ ತಿಳಿಸಬೇಕಾಗಿರುವ.
3. ''ದಿವ್ಯೋ ಹ್ಯಮೂರ್ತಃ ಪುರುಷಃ'' ಎಂಬ ವಾಕ್ಯವು ವಾ॥ ಪಾಠದಲ್ಲಿಲ್ಲ.
4. ''ಸ್ವತೋಽಜಸ್ಯ'' ಎಂದು ವಾ॥ ಪಾಠ.

ಪರ್ವಾಯ್ವಾದಿಃ । ಯಥಾ (ವಾ) ನಭಃಸುಷಿರಭೇದಾನಾಂ ಘಟಾದಿಃ[1] । ಸರ್ವ ಭಾವವಿಕಾರಾಣಾಂ ಜನಿಮೂಲತ್ವಾತ್ ತತ್ಪ್ರತಿಷೇಧೇನ ಸರ್ವೇ ಪ್ರತಿಷಿದ್ಧಾ ಭವನ್ತಿ । ಸಬಾಹ್ಯಾಭ್ಯನ್ತರೋ ಹ್ಯಜಃ । ಅತೋಽಜರೋಽಮೃತೋಽಕ್ಷರೋ ಧ್ರುವೋಽಭಯಃ ಇತ್ಯರ್ಥಃ ॥

## (ಭಾಷ್ಯಾರ್ಥ)

ದಿವ್ಯನು ಎಂದರೆ ಪ್ರಕಾಶವುಳ್ಳವನು ; ಏಕೆಂದರೆ ಸ್ವಯಂಪ್ರಕಾಶರೂಪ ನಾಗಿರುತ್ತಾನೆ.[2] ಅಥವಾ ದಿವಿ ಎಂದರೆ (ಬೆಳಗುವ) ತನ್ನ ಆತ್ಮನಲ್ಲಿಯೇ ಇರುವವನು[3] ; ಅಥವಾ ಲೌಕಿಕ(ವಸ್ತು)ಗಳ (ರೂಪ)ವನ್ನು (ಮೀರಿ)ರುವವನು[4] (ಎಂದಾದರೂ ದಿವ್ಯಃ ಎಂಬ ಶಬ್ದಕ್ಕೆ ಅರ್ಥವನ್ನು ಮಾಡಬಹುದು, ಹಿ ಏಕೆಂದರೆ ಅಮೂರ್ತನು, ಯಾವ ಆಕಾರವೂ ಇಲ್ಲದವನು.[5] ಪುರುಷನು, ಎಂದರೆ ಪೂರ್ಣನಾಗಿರುವವನು ಅಥವಾ ಪುರದಲ್ಲಿ ಮಲಗಿರುವವನು. ಹೀಗೆ ದಿವ್ಯನಾಗಿ ಅಮೂರ್ತನಾಗಿ ಪುರುಷನಾಗಿರುವನು. ಹೊರಗು, ಒಳಗು - ಇವುಗಳೊಡನೆ ಇರುವವನು[6] ; ಆದ್ದರಿಂದ ಸಬಾಹ್ಯಾಭ್ಯಂತರನು. ಅಜನು, ಏತರಿಂದಲೂ ಹುಟ್ಟುವದಿಲ್ಲ ; ಏಕೆಂದರೆ ತನಗಿಂತ ಬೇರೆಯಾಗಿ ಜನ್ಮಕ್ಕೆ ಕಾರಣವಾದದ್ದು (ಯಾವದೊಂದೂ ಇವನಿಗೆ) ಇಲ್ಲ.[7] ಹೇಗೆ ನೀರುಗುಳ್ಳೆಯೇ ಮುಂತಾದದ್ದಕ್ಕೆ ಗಾಳಿಯೇ ಮುಂತಾದದ್ದು ಜನ್ಮನಿಮಿತ್ತವಾಗಿರುವದೋ (ಅಥವಾ) ಹೇಗೆ ಆಕಾಶದ ರಂಧ್ರವಿಶೇಷಗಳಿಗೆ ಗಡಿಗೆಯೇ ಮುಂತಾದದ್ದು (ಜನ್ಮನಿಮಿತ್ತವಾಗಿರುವದೋ) ಹಾಗೆ ಬೇರೆ ಯಾವ

---

1. ಆ॥ ಕಾ॥ ಪಾಠದಲ್ಲಿ "ವಾಯ್ವಾದಿ", "ಘಟಾದಿ" ಎಂದೀಷ್ಟೇ ಇದೆ. ಇದು ವಾ॥ ಪಾಠ.

2. 'ದಿವು ಕಾನ್ತೌ' ಎಂಬ ಧಾತುವಿನ ಅರ್ಥವು ಸ್ವಪ್ರಕಾಶನಾದ ಪರಮಾತ್ಮನಿಗೆ ಚೆನ್ನಾಗಿ ಹೊಂದುತ್ತದೆ.

3. ಕಾಂತಿರೂಪವಾದ ತನ್ನನ್ನೇ ಅವಲಂಬಿಸಿರುವವನು. ಹಾವು ಹಗ್ಗವನ್ನು ಅವಲಂಬಿಸಿರುವಂತೆ ಮತ್ತೊಂದು ಆಧಾರವನ್ನು ಬಯಸುವದಿಲ್ಲ. ಛಾಂ. ೭-೨೪-೧.

4. ಅಪ್ರಾಕೃತವಾದದ್ದನ್ನು ದಿವ್ಯವೆಂದು ಕರೆಯುವದುಂಟು ; ಪ್ರಾಕೃತವಾದ ಲೌಕಿಕ ವಸ್ತುಗಳ ಸ್ವಭಾವವು ಪರಮಾತ್ಮನಲ್ಲಿಲ್ಲವಾದ್ದರಿಂದ 'ದಿವ್ಯನು' ಎನ್ನಬಹುದು.

5. ಆಕಾಶವಾಯುಗಳು ಅಮೂರ್ತವೆಂದೂ ಮಿಕ್ಕ ಮೂರು ಭೂತಗಳು ಮೂರ್ತವೆಂದೂ ವಿಂಗಡಿಸುವದುಂಟು ; ಆತ್ಮನು ಆಕಾಶಕ್ಕಿಂತಲೂ ಸೂಕ್ಷ್ಮವಾಗಿರುವದರಿಂದ ಅತ್ಯಂತವಾಗಿ ಅಮೂರ್ತನು.

6. 'ಹೊರಗು', 'ಒಳಗು' - ಎಂಬ ಪರಿಚ್ಛೇದವಿಲ್ಲದೆ ಹೊರಗೂ, ಒಳಗೂ ಎಲ್ಲೆಲ್ಲಿಯೂ ಇರುವವನು.

7. ಪರಮಾತ್ಮನಿಗೆ ಏತರಿಂದಲೂ ಉತ್ಪತ್ತಿಯಿಲ್ಲವೆಂಬುದನ್ನು ಸೂ.ಭಾ. ೨-೩-೯ ರಲ್ಲಿ ನಿರ್ಣಯಿಸಿದೆ.

ನಿಮಿತ್ತವೂ ಇರುವದಿಲ್ಲ. ಎಲ್ಲಾ ಭಾವವಿಕಾರಗಳೂ[1] ಜನ್ಮನಿಮಿತ್ತದಿಂದ (ಆಗು ವವಾ)ದ್ದರಿಂದ ಆ (ಜನ್ಮ)ವನ್ನು ಅಲ್ಲಗಳೆಯುವದರಿಂದ ಎಲ್ಲಾ (ವಿಕಾರ)ಗಳನ್ನೂ ಅಲ್ಲಗಳೆದಂತೆಯೇ ಆಯಿತು. ಹೀಗೆ ಸಬಾಹ್ಯಾಭ್ಯಂತರನೂ ಅಜನೂ ಆಗಿರುತ್ತಾನೆ. ಆದ್ದರಿಂದ ಮುಪ್ಪಿಲ್ಲದವನು, ಸಾಯುವ ಸ್ವಭಾವವಿಲ್ಲದವನು, ನಾಶವಾಗದವನು, ಶಾಶ್ವತನಾದವನು, ಹೆದರಿಕೆಯಿಲ್ಲದವನು ಎಂದರ್ಥ.

(ಭಾಷ್ಯ)

೫೪. ಯದ್ಯಪಿ ದೇಹಾದ್ಯುಪಾಧಿಭೇದದೃಷ್ಟೀನಾಮ್ ಅವಿದ್ಯಾವಶಾತ್ ದೇಹಭೇದೇಷು[2] ಸಪ್ರಾಣಃ ಸಮನಾಃ ಸೇನ್ದ್ರಿಯಃ ಸವಿಷಯ ಇವ ಪ್ರತ್ಯವಭಾಸತೇ ತಲಮಲಾದಿಮದಿವ ಆಕಾಶಮ್, ತಥಾಪಿ ತು ಸ್ವತಃ ಪರಮಾರ್ಥದೃಷ್ಟೀನಾಮ್[3] ಅಪ್ರಾಣಃ ಅವಿದ್ಯಮಾನಃ ಕ್ರಿಯಾಶಕ್ತಿಭೇದವಾನ್ ಚಲನಾತ್ಮಕೋ ವಾಯುಃ ಯಸ್ಮಿನ್ ಅಸೌ ಅಪ್ರಾಣಃ । ತಥಾ ಅಮನಾಃ, ಅನೇಕಜ್ಞಾನಶಕ್ತಿಭೇದವತ್ ಸಂಕಲ್ಪಾದ್ಯಾತ್ಮಕಂ ಮನೋಽಪಿ ಅವಿದ್ಯಮಾನಂ ಯಸ್ಮಿನ್ ಸೋಽಯಮ್ ಅಮನಾಃ । 'ಅಪ್ರಾಣೋ ಹ್ಯಮನಾಶ್ಶು' ಇತಿ ಪ್ರಾಣಾದಿವಾಯುಭೇದಾಃ ಕರ್ಮೇನ್ದ್ರಿಯಾಣಿ, ತದ್ವಿಷಯಾಶ್ಚ, ತಥಾ ಬುದ್ಧಿಮನಸೀ ಬುದ್ಧೀನ್ದ್ರಿಯಾಣಿ, ತದ್ವಿಷಯಾಶ್ಚ, ಪ್ರತಿಷಿದ್ಧಾ ವೇದಿತವ್ಯಾಃ । ತಥಾ[4] ಶ್ರುತ್ಯನ್ತರೇ "ಧ್ಯಾಯತೀವ ಲೇಲಾಯತೀವ" (ಬೃ. ೪-೩-೭) ಇತಿ । ಯಸ್ಮಾಚ್ಚ ಏವಂ ಪ್ರತಿಷಿದ್ಧೋಪಾಧಿದ್ವಯಃ ತಸ್ಮಾತ್ ಶುಭ್ರಃ ಶುದ್ಧಃ ॥

(ಭಾಷ್ಯಾರ್ಥ)

**ದೇಹವೇ ಮುಂತಾದ ಬೇರೆಬೇರೆಯ ಉಪಾಧಿಯ ದೃಷ್ಟಿಯಿಂದ ನೋಡಿ ದವರಿಗೆ ಆಕಾಶವು ತಲದಲ್ಲಿ ಕಲ್ಮಷವೇ ಮುಂತಾದದ್ದುಳ್ಳಂತೆ (ತೋರುವ ಹಾಗೆ) ಬೇರೆಬೇರೆಯ ದೇಹಗಳಲ್ಲಿ ಪ್ರಾಣವುಳ್ಳವನೆಂದೂ ಮನಸ್ಸುಳ್ಳವನೆಂದೂ ಇಂದ್ರಿಯ ಗಳಿಂದ ಕೂಡಿರುವವನೆಂದೂ ವಿಷಯಗಳಿಂದೊಡಗೂಡಿರುವವನೆಂದೂ ಅವಿದ್ಯೆಯ ವಶದಿಂದ ತೋರುತ್ತಾನಾದರೂ** ಪರಮಾರ್ಥದೃಷ್ಟಿಯಿಂದ ನೋಡುವವರಿಗೆ ತನ್ನ ರೂಪದಿಂದ ಅಪ್ರಾಣನು, ಎಂದರೆ ಬೇರೆಬೇರೆಯ ಕ್ರಿಯಾಶಕ್ತಿಗಳುಳ್ಳ ಚಲನಾತ್ಮಕ

1. ಹುಟ್ಟುವದು, ಇರುವದು, ಬೆಳೆಯುವದು, ಮಾರ್ಪಡುವದು, ಸವೆಯುವದು, ಹಾಳಾಗುವದು - ಇವು ಆರೂ ಭಾವವಿಕಾರಗಳು ; ಮೊದಲನೆಯ ವಿಕಾರವೇ ಮಿಕ್ಕವುಗಳಿಗೆ ಕಾರಣ. ಗೀ. ಭಾ. ೨-೨೦ನ್ನು ನೋಡಿ.

2. "ಯದ್ಯಪಿ ದೇಹಾದ್ಯುಪಾಧಿಭೇದದೃಷ್ಟಿಭೇದೇಷು" ಎಂದು ವಾ॥ ಪಾಠ.

3. "ಪರಮಾರ್ಥಸ್ವರೂಪದೃಷ್ಟೀನಾಮ್" ಎಂದು ವಾ॥ ಪಾಠ. *ಇಲ್ಲಿ ನಾವು ಕೊಟ್ಟಿರುವ ಆ॥ ಪಾಠವು ಹೆಚ್ಚು ಸ್ವರಸವಾಗಿರುತ್ತದೆ.

4. "ಯಥಾ" ಎಂದು ಪಾಠಾಂತರ.

ವಾದ ವಾಯುವು[1] ಇಲ್ಲದವನಾಗಿರುವದರಿಂದ ಆ ಇವನು ಅಪ್ರಾಣನು. ಇದರಂತೆ ಅಮನನು, ಎಂದರೆ ಅನೇಕಜ್ಞಾನಶಕ್ತಿವಿಶೇಷಗಳುಳ್ಳ ಸಂಕಲ್ಪವೇ ಮುಂತಾದ ರೂಪದ ಮನಸ್ಸುಕೂಡ ಇಲ್ಲದವನಾದ್ದರಿಂದ ಆ ಇವನು ಅಮನನು. 'ಅಪ್ರಾಣನು, ಅಮನನು' ಎಂದದ್ದರಿಂದ ಪ್ರಾಣವೇ ಮುಂತಾದ ಬೇರೆಬೇರೆಯ ವಾಯುಗಳು, ಕರ್ಮೇಂದ್ರಿಯಗಳು, ಮತ್ತು ಅವುಗಳ ವಿಷಯಗಳು ; ಹಾಗೆಯೇ ಬುದ್ಧಿಮನಸ್ಸುಗಳು, ಬುದ್ಧೀಂದ್ರಿಯಗಳು, ಮತ್ತು ಅವುಗಳ ವಿಷಯಗಳು - ಇವುಗಳು (ಯಾವವೂ) ಇಲ್ಲವೆಂದು ಹೇಳಿದಂತೆ ಆಯಿತೆಂದು ತಿಳಿಯಬೇಕು. ಆದ್ದರಿಂದಲೇ ಬೇರೊಂದು ಶ್ರುತಿಯಲ್ಲಿ "ಧ್ಯಾನಮಾಡುತ್ತಾನೆಂಬಂತೆ ತೋರುವನು, ಚಲಿಸುತ್ತಾನೆಂಬಂತೆ ತೋರುವನು" ಎಂದು (ಬೃ. ೪-೩-೭) ಹೇಳಿರುತ್ತದೆ. ಹೀಗೆ ಈ ಉಪಾಧಿಗಳೆರಡೂ[2] ಇಲ್ಲವಾದ್ದರಿಂದ (ಅವನು) ಶುಭ್ರನು, ಶುದ್ಧನು.

## (ಭಾಷ್ಯ)

೫೫. ಅತಃ ಅಕ್ಷರಾತ್ ನಾಮರೂಪಬೀಜೋಪಾಧಿಲಕ್ಷಿತಸ್ವರೂಪಾತ್ ಸರ್ವಕಾರ್ಯಕಾರಣ[3]ಬೀಜತ್ವೇನ ಉಪಲಕ್ಷ್ಯಮಾಣತ್ವಾತ್ ಪರಂ ತದುಪಾಧಿಲಕ್ಷಣಮ್ ಅವ್ಯಾಕೃತಾಖ್ಯಮ್ ಅಕ್ಷರಂ ಸರ್ವವಿಕಾರೇಭ್ಯಃ । ತಸ್ಮಾತ್ ಪರತಃ ಅಕ್ಷರಾತ್ ಪರಃ ನಿರುಪಾಧಿಕಃ ಪುರುಷಃ ಇತ್ಯರ್ಥಃ । ಯಸ್ಮಿನ್ ತದಾಕಾಶಾಖ್ಯಮ್ ಅಕ್ಷರಮ್ ಸಂವ್ಯವಹಾರವಿಷಯಮ್[4] ಓತಂ ಪ್ರೋತಂ ಚ ॥

## (ಭಾಷ್ಯಾರ್ಥ)

ಆದಕಾರಣ ಅಕ್ಷರಕ್ಕಿಂತಲೂ ಎಂದರೆ ನಾಮರೂಪಗಳ ಬೀಜವಾಗಿರುವ ಉಪಾಧಿಯಿಂದ ಲಕ್ಷಿತವಾದ ಸ್ವರೂಪಕ್ಕಿಂತಲೂ - ಎಲ್ಲಾ ಕಾರ್ಯಗಳಿಗೂ ಕಾರಣಗಳಿಗೂ ಬೀಜವಾಗಿ ತೋರುತ್ತಿರುವದರಿಂದ[5] ಆ ಉಪಾಧಿರೂಪವಾದ ಅವ್ಯಾಕೃತ

1. ಯಾವ ಶರೀರದಲ್ಲಿಯೂ ಯಾವ ಕ್ರಿಯಾವಿಶೇಷವೂ ಆತ್ಮನಿಗೆ ನಿಜವಾಗಿಲ್ಲವೆಂದು ಅರ್ಥ. ಜ್ಞಾನವಿಶೇಷವನ್ನೂ ಹೀಗೆಯೇ ತಿಳಿಯಬೇಕು.

2. ಪ್ರಾಣಮನಸ್ಸುಗಳೆಂಬ ಉಪಾಧಿಗಳು.

3. 'ಕಾರ್ಯಕರಣ' ಎಂಬ ವಾ॥ ಪಾಠಕ್ಕಿಂತ ಈ ಆ॥ ಪಾಠವೇ ಮೇಲು.

4. "ಸವ್ಯವಹಾರವಿಷಯಮ್" ಎಂಬ ಆ॥ ಪಾಠಕ್ಕೆ 'ವ್ಯವಹಾರಗಳು ವಿಷಯಗಳು ಇವುಗಳಿಂದ ಕೂಡಿದ' ಎಂದು ಅರ್ಥಮಾಡಬೇಕಾಗುತ್ತದೆ. ಮೈ॥ ವಾ॥ ಪಾಠಗಳಲ್ಲಿ ಈಗ ಇರುವಂತೆ ಅವ್ಯಾಕೃತವುಕೂಡ ವ್ಯಾವಹಾರಿಕವೇ ; ಕಾರ್ಯದಿಂದ ಅನುಮಾನಿಸಬೇಕಾದ ಕಾರಣವದು ಎಂಬ ಅರ್ಥವು ಹೊರಡುತ್ತದೆ. ಸೂ.ಭಾ. ೨-೧-೯ "ಮಿಥ್ಯಾಜ್ಞಾನಪ್ರತಿಬದ್ಧೈವ ವಿಭಾಗಶಕ್ತಿಃ" ಎಂಬ ವಾಕ್ಯವನ್ನು ನೋಡಿ.

5. ಆಕಾಶಾದಿಗಳು ಕಾರ್ಯಕಾರಣಭಾವದಿಂದ ತೋರಿದರೂ ನಿಜವಾಗಿ ಅವ್ಯಾಕೃತಾತ್ಮಕ ಬ್ರಹ್ಮವೇ ಕಾರಣವು. ಸೂ.ಭಾ. ೨-೩-೧೩, ಛಾಂ. ಭಾ. ೬-೨-೩.

ವೆಂಬ ಅಕ್ಷರವು ಎಲ್ಲಾ ಕಾರ್ಯಗಳಿಗಿಂತಲೂ ಪರವು, ಹೆಚ್ಚಿನದು.[1] ಆ ಹೆಚ್ಚಿನ ಅಕ್ಷರಕ್ಕಿಂತಲೂ ಹೆಚ್ಚಿನವನಾದ ನಿರುಪಾಧಿಕಪುರುಷನು ಎಂದರ್ಥ. ಯಾವ (ಈ ಅಕ್ಷರ ಪುರುಷ)ನಲ್ಲಿಯೇ ಆ **ಆಕಾಶ**ವೆಂಬ ಹೆಸರಿನ ವ್ಯವಹಾರವಿಷಯವಾದ[2] ಅಕ್ಷರವು ಹಾಸುಹೊಕ್ಕಾಗಿ ಹೆಣೆದುಕೊಂಡಿರುವದು.

## ಅಕ್ಷರದಿಂದ ಪ್ರಾಣಾದಿಗಳ ಉತ್ಪತ್ತಿ

೫೬. ಕಥಂ ಪುನರಪ್ರಾಣಾದಿಮತ್ತ್ವಂ ತಸ್ಯೇತಿ ? ಉಚ್ಯತೇ । ಯದಿ ಹಿ ಪ್ರಾಣಾದಯಃ ಪ್ರಾಗುತ್ಪತ್ತೇಃ ಪುರುಷ ಇವ ಸ್ವೇನಾತ್ಮನಾ ಸನ್ತಿ ತದಾ ಪುರುಷಸ್ಯ ಪ್ರಾಣಾದಿನಾ ವಿದ್ಯಮಾನೇನ ಪ್ರಾಣಾದಿಮತ್ತ್ವಂ ಭವೇತ್[3] । ನ ತು ತೇ ಪ್ರಾಣಾದಯಃ ಪ್ರಾಗುತ್ಪತ್ತೇಃ ಪುರುಷ ಇವ ಸ್ವೇನಾತ್ಮನಾ[4] ಸನ್ತಿ । ಅತೋಽಪ್ರಾಣಾದಿಮಾನ್ ಪರಃ ಪುರುಷಃ । ಯಥಾ ಅನುತ್ಪನ್ನೇ ಪುತ್ರೇ ಅಪುತ್ರೋ ದೇವದತ್ತಃ । ಕಥಂ ತೇ ನ ಸನ್ತಿ ಪ್ರಾಣಾದಯಃ ಇತಿ ? ಉಚ್ಯತೇ -

### (ಭಾಷ್ಯಾರ್ಥ)

(ಪ್ರಶ್ನೆ) :- ಆತನು ಅಪ್ರಾಣನು ಎಂಬುದೇ ಮುಂತಾದದ್ದು ಹೇಗೆ (ಸರಿ) ?

(ಉತ್ತರ) :- ಹೇಳುತ್ತೇವೆ. ಪ್ರಾಣವೇ ಮುಂತಾದವು ಸೃಷ್ಟಿಗೆ ಮೊದಲು ಪುರುಷನಂತೆಯೇ ತಮ್ಮ ರೂಪದಿಂದ ಇರುವದಾದರೆ[5] ಆಗ ಪ್ರಾಣವೇ ಮುಂತಾದದ್ದು (ನಿಜವಾಗಿ) ಇರುವದರಿಂದ (ಆ ಪ್ರಾಣಾದಿಯಿಂದ) ಪುರುಷನು ಪ್ರಾಣಾದಿಗಳನ್ನುಳ್ಳವನು ಎಂದಾಗಬಹುದು. ಆದರೆ ಆ ಪ್ರಾಣವೇ ಮುಂತಾದವು ಸೃಷ್ಟಿಗೆ ಪೂರ್ವದಲ್ಲಿ ಪುರುಷನಂತೆ ತಮ್ಮ ರೂಪದಿಂದ ಇರುವದಿಲ್ಲ.[6] ಆದ್ದರಿಂದ ಹೇಗೆ ಮಗನು ಹುಟ್ಟದೆ

---

1. ನಾಮರೂಪಬೀಜವನ್ನು ಅವ್ಯಾಕೃತವೆಂದು ಕರೆಯುವಂತೆ ಆ ಅವ್ಯಾಕೃತೋಪಾಧಿಯುಳ್ಳ ಬ್ರಹ್ಮವನ್ನೂ ಅವ್ಯಾಕೃತವೆಂದು ಕರೆಯುವದುಂಟು. ಬೃ.ಭಾ. ೧-೪-೭ರಲ್ಲಿ ಅವ್ಯಾಕೃತ ಶಬ್ದದ ವಿವರಣೆಯನ್ನು ನೋಡಿ. ಕಾರಣತ್ವೋಪಲಕ್ಷಿತಸ್ವರೂಪಕ್ಕಿಂತಲೂ ಶುದ್ಧಸ್ವರೂಪವಾದ ಅಕ್ಷರವು ಹೆಚ್ಚಿನದು ಎಂದರ್ಥ.

2. ಹಿಂದಿನ ಪುಟದ 4ನೆಯ ಟಿಪ್ಪಣಿಯನ್ನು ನೋಡಿ.

3. "ಸ್ಯಾತ್" ಎಂದು ವಾ।। ಪಾಠ.

4. "ಪುರುಷ ಇವ ಸ್ವೇನಾತ್ಮನಾ" ಎಂಬ ಮಾತುಗಳು ವಾ।। ಪಾಠದಲ್ಲಿಲ್ಲ.

5. ಪ್ರಾಣಾದಿಗಳೇ ಆಗಿ ಇರುವದಾಗಿದ್ದಿದ್ದರೆ.

6. ಆತ್ಮರೂಪದಿಂದಲೇ ಇರುತ್ತವೆ. ಮೊದಲು ಹಗ್ಗದ ರೂಪದಿಂದಿರುವ ಹಾವು ಮುಂತಾದವು ಹೇಗೆ ನಿಜವಾಗಿಲ್ಲವೋ ಹಾಗೆ. ಇದೇ ವೇದಾಂತಿಗಳ ಸತ್ಕಾರ್ಯವಾದವು, ವಿವರ್ತವಾದವು.

ಇರುವಾಗ ದೇವದತ್ತನು ಅಪುತ್ರನೆನಿಸುವನೋ ಹಾಗೆ (ಅಕ್ಷರನೆಂಬ) ಪರಪುರುಷನು ಅಪ್ರಾಣನು ಎಂದುಮುಂತಾಗಿ (ಹೇಳುವದು ಸರಿಯೇ). ಆ ಪ್ರಾಣಾದಿಗಳು ಇಲ್ಲ ವೆಂಬುದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ :-

**ಏತಸ್ಮಾಜ್ಜಾಯತೇ ಪ್ರಾಣೋ**
**ಮನಃ ಸರ್ವೇನ್ದ್ರಿಯಾಣಿ ಚ ।**
**ಖಂ ವಾಯುರ್ಜ್ಯೋತಿರಾಪಃ**
**ಪೃಥಿವೀ ವಿಶ್ವಸ್ಯ ಧಾರಿಣೀ** ॥೩॥

೩. ಈತನಿಂದ ಪ್ರಾಣವೂ, ಮನಸ್ಸೂ, ಸರ್ವೇಂದ್ರಿಯಗಳೂ, ಆಕಾಶವು, ವಾಯು, ಜ್ಯೋತಿ, ಅಪ್ಪು, ಎಲ್ಲವನ್ನೂ ಧರಿಸಿಕೊಂಡಿರುವ ಪೃಥ್ವಿ - ಇವುಗಳೂ ಹುಟ್ಟುತ್ತವೆ.

## (ಭಾಷ್ಯ)

೫೭. ಯಸ್ಮಾತ್ ಏತಸ್ಮಾದೇವ ಪುರುಷಾತ್ ನಾಮರೂಪಬೀಜೋಪಾಧಿ ಲಕ್ಷಿತಾತ್ ಜಾಯತೇ ಉತ್ಪದ್ಯತೇ ಅವಿದ್ಯಾವಿಷಯೋ ವಿಕಾರಭೂತೋ[1] ನಾಮ ಧೇಯೋಽನೃತಾತ್ಮಕಃ ಪ್ರಾಣಃ "ವಾಚಾರಮ್ಭಣಂ ವಿಕಾರೋ ನಾಮಧೇಯಮ್" (ಛಾಂ. ೬-೧-೪) ಅನೃತಮ್ ಇತಿ ಶ್ರುತ್ಯನ್ತರಾತ್ । ನ ಹಿ ತೇನ ಅವಿದ್ಯಾ ವಿಷಯೇಣ ಅನೃತೇನ ಪ್ರಾಣೇನ ಸಪ್ರಾಣತ್ವಂ ಪರಸ್ಯ ಸ್ಯಾತ್ । ಅಪುತ್ರಸ್ಯ ಸ್ವಪ್ನದೃಷ್ಟೇನೇವ ಪುತ್ರೇಣ ಸಪುತ್ರತ್ವಮ್ । ಏವಂ ಮನಃ ಸರ್ವಾಣಿ ಚೇನ್ದ್ರಿಯಾಣಿ ವಿಷಯಾಶ್ಚ ಏತಸ್ಮಾದೇವ ಜಾಯನ್ತೇ । ತಸ್ಮಾತ್ ಸಿದ್ಧಮ್ ಅಸ್ಯ ನಿರುಪಚರಿತಮ್ ಅಪ್ರಾಣಾದಿಮತ್ತ್ವಮ್ ಇತ್ಯರ್ಥಃ । ಯಥಾ ಚ ಪ್ರಾಗುತ್ಪತ್ತೇಃ ಪರಮಾರ್ಥತೋಽ ಸನ್ತಃ ತಥಾ ಪ್ರಲೀನಾಶ್ಚ ಇತಿ ದ್ರಷ್ಟವ್ಯಾಃ ॥

## (ಭಾಷ್ಯಾರ್ಥ)

ಹೇಗೆಂದರೆ **ನಾಮರೂಪಗಳ ಬೀಜವೆಂಬ ಉಪಾಧಿಯಿಂದ ಲಕ್ಷಿತನಾಗಿರುವ ಈ ಪುರುಷನಿಂದಲೇ**[2] ಅವಿದ್ಯಾವಿಷಯನಾಗಿಯೂ[3] ಕಾರ್ಯರೂಪನಾಗಿಯೂ

1. "ಅವಿದ್ಯಾವಿಷಯವಿಕಾರಭೂತೋ" ಎಂಬ ಆ॥ ಪಾಠಕ್ಕಿಂತ ಈ॥ ವಾ॥ ಕಾ॥ ಪಾಠವೇ ಉತ್ತಮ.

2. ಅವ್ಯಾಕೃತೋಪಾಧಿಯಿಂದಲೇ ಪುರುಷನಿಗೆ ಕಾರಣತ್ವವು.

3. ತಪ್ಪುತಿಳಿವಳಿಕೆಗೆ ತೋರುವ, ಅಧ್ಯಸ್ತನಾಗಿರುವ.

ಬರಿಯ ಹೆಸರಾಗಿರುವ ಅನೃತಸ್ವರೂಪನಾದ[1] ಪ್ರಾಣನು ಹುಟ್ಟುತ್ತಾನೆ, ಉಂಟಾಗುತ್ತಾನೆ. ''ಕಾರ್ಯವೆಂಬುದು ಬರಿಯ ಮಾತಿನಿಂದುಂಟಾದ ಹೆಸರೇ'' (ಛಾಂ. ೬-೧-೪) ಅನೃತವೇ[2] ಎಂಬ ಬೇರೊಂದು ಶ್ರುತಿಯ ಪ್ರಮಾಣದಿಂದ (ಪ್ರಾಣನು ಅನೃತಸ್ವರೂಪನೆಂದು ನಿಶ್ಚಯವಾಗುತ್ತದೆ). **ಮಕ್ಕಳಿಲ್ಲದವನು ಕನಸಿನಲ್ಲಿ ಕಂಡ ಮಗನಿಂದ ಸಪುತ್ರನೆಂದು (ಹೇಗೆ ಎಣಿಸಲಾಗದೋ) ಹಾಗೆ ಆ ಅವಿದ್ಯಾವಿಷಯನಾದ ಆ ಅನೃತನಾದ ಪ್ರಾಣನಿಂದ ಪರ(ಮಾತ್ಮನು) ಸಪ್ರಾಣನೆಂದಾಗಲಾರನಷ್ಟೆ.** ಇದರಂತೆ ಮನಸ್ಸೂ ಎಲ್ಲಾ ಇಂದ್ರಿಯಗಳೂ ವಿಷಯಗಳೂ ಇವನಿಂದಲೇ ಹುಟ್ಟುತ್ತವೆ.[3] ಆದ್ದರಿಂದ ಈತನು 'ಅಪ್ರಾಣನು' ಎಂದು ಮುಂತಾಗಿ ಹೇಳಿದ್ದು ಉಪಚಾರಕ್ಕಲ್ಲ[4] ಎಂದು ಸಿದ್ಧವಾಯಿತು ಎಂದರ್ಥ. ಹೇಗೆ ಹುಟ್ಟುವದಕ್ಕೆ ಮೊದಲು (ಇವು) ನಿಜವಾಗಿ ಇರುವದಿಲ್ಲವೋ ಹಾಗೆ ಲಯವಾದಮೇಲೂ (ಇರುವದಿಲ್ಲ) - ಎಂದು (ಸೇರಿಸಿಕೊಂಡು ತಿಳಿಯಬೇಕು.)[5]

## (ಭಾಷ್ಯ)

೫೮. ಯಥಾ ಕರಣಾನಿ ಮನಶ್ಚ ಇನ್ದ್ರಿಯಾಣಿ ಚ[6] ಶರೀರವಿಷಯಕಾರಣಾನಿ ಭೂತಾನಿ ಖಮ್ ಆಕಾಶಮ್, ವಾಯುಃ ಬಾಹ್ಯಃ[7] ಆವಹಾದಿಭೇದಃ । ಜ್ಯೋತಿಃ ಅಗ್ನಿಃ । ಆಪಃ ಉದಕಮ್ । ಪೃಥಿವೀ ಧರಿತ್ರೀ ವಿಶ್ವಸ್ಯ ಸರ್ವಸ್ಯ ಧಾರಿಣೀ । ಏತಾನಿ ಚ ಶಬ್ದಸ್ಪರ್ಶರೂಪರಸಗನ್ಧೋತ್ತರೋತ್ತರಗುಣಾನಿ ಪೂರ್ವಪೂರ್ವಗುಣಸಹಿತಾನಿ ಏತಸ್ಮಾದೇವ ಜಾಯನ್ತೇ ॥

## (ಭಾಷ್ಯಾರ್ಥ)

ಹೇಗೆ ಕರಣಗಳಾದ ಮನಸ್ಸು ಮತ್ತು ಇಂದ್ರಿಯಗಳು (ಹುಟ್ಟುತ್ತವೆಯೋ) ಹಾಗೆಯೇ ಶರೀರಕ್ಕೂ ವಿಷಯಗಳಿಗೂ ಕಾರಣವಾಗಿರುವ **ಭೂತಗಳು** ಎಂದರೆ ಖಮ್

---

1. ಹುಸಿತೋರಿಕೆಯಾಗಿರುವ, ನಿಜವಾಗಿಲ್ಲದ. ಇದನ್ನೇ ಮಿಥ್ಯೆಯೆಂದು ಕರೆಯುವದು.

2. ಅನೃತಮ್ ಎಂಬ ಮಾತು ಶ್ರುತಿಯಲ್ಲಿಲ್ಲ, ಬರಿಯ ಹೆಸರೇ ; ಆದ್ದರಿಂದ ಅನೃತವೇ ಎಂದು ಆಚಾರ್ಯರು ಹೇಳಿರುತ್ತಾರೆ.

3. ಆದ್ದರಿಂದ ಅವೂ ಅವಿದ್ಯಾವಿಷಯವೇ.

4. ಮುಖ್ಯಾರ್ಥದಲ್ಲಿಯೇ.

5. ೨-೧-೧ ರ ಆಧಾರದಿಂದ ಮತ್ತು ಪ್ರ. ೬-೫ ಮುಂತಾದ ಶ್ರುತಿಗಳ ಆಧಾರದಿಂದ ಎಲ್ಲವೂ ಅಕ್ಷರಪುರುಷನಲ್ಲಿಯೇ ಲಯವಾಗುತ್ತದೆ. ಮೊದಲೂ ಇಲ್ಲದೆ ಕೊನೆಗೂ ಇಲ್ಲದೆ ನಡುವೆ ತೋರುವದು ಅನೃತವಲ್ಲದೆ ಮತ್ತೇನು.? ಗೌ.ಕಾ. ೨-೬. ಕಾರಣನಾದ ಪುರುಷರೂಪದಿಂದ ಮಾತ್ರವೇ ಅವು ಸತ್ಯ. ಸೂ.ಭಾ. ೨-೧-೧೪ನ್ನು ನೋಡಿ.

6. ''ಇನ್ದ್ರಿಯಾಣಿ ಚ'' ಎಂಬ ಚಕಾರಯುಕ್ತವಾದ ವಾ।। ಕಾ।। ಪಾಠವೇ ಯುಕ್ತ.

7. ''ಅನ್ತರ್ಬಾಹ್ಯಃ'' ಎಂಬ ಆ।। ಕಾ।। ಪಾಠದಲ್ಲಿ ''ಅನ್ತಃ'' ಹೆಚ್ಚು.

ಆಕಾಶವು, ವಾಯು ಎಂದರೆ ಹೊರಗಿನ **ಆವಹವೇ** ಮುಂತಾದ[1] ಭೇದಗಳುಳ್ಳ (ವಾಯು), ಜ್ಯೋತಿ ಎಂದರೆ ಅಗ್ನಿಯು, ಅಪ್ಪು ಎಂದರೆ ಉದಕವು, ವಿಶ್ವವನ್ನು ಎಲ್ಲ ವನ್ನೂ ಧರಿಸಿಕೊಂಡಿರುವ ಪೃಥಿವಿಯು ಎಂದರೆ ಧರಿತ್ರಿಯು - ಇವುಗಳೂ ಶಬ್ದ, ಸ್ಪರ್ಶ, ರೂಪ, ರಸ, ಗಂಧ - ಎಂಬ ಹಿಂದುಹಿಂದಿನ ಗುಣಗಳಿಂದೊಡಗೂಡಿದ ಮುಂದು ಮುಂದಿನ ಗುಣವುಳ್ಳವಾಗಿ ಈ (ಪುರುಷನಿಂದಲೇ) ಹುಟ್ಟುತ್ತವೆ.[2]

## ಪರಮಾತ್ಮನನ್ನು ಸವಿಶೇಷರೂಪದಿಂದ ವರ್ಣಿಸುವದೇಕೆ ?

### (ಭಾಷ್ಯ)

೫೯. ಸಂಕ್ಷೇಪತಃ ಪರವಿದ್ಯಾವಿಷಯಮ್ ಅಕ್ಷರಮ್ ನಿರ್ವಿಶೇಷಂ ಪುರುಷಂ ಸತ್ಯಮ್ ''ದಿವ್ಯೋ ಹ್ಯಮೂರ್ತಃ'' ಇತ್ಯಾದಿನಾ ಮನ್ತ್ರೇಣ ಉಕ್ತ್ವಾ ಪುನಃ ತದೇವ ಸವಿಶೇಷಂ ವಿಸ್ತರೇಣ ವಕ್ತವ್ಯಮ್ ಇತಿ ಪ್ರವವೃತೇ । ಸಂಕ್ಷೇಪವಿಸ್ತರೋಕ್ತೋ ಹಿ ಪದಾರ್ಥಃ ಸುಖಾಧಿಗಮ್ಯೋ ಭವತಿ ಸೂತ್ರಭಾಷ್ಯೋಕ್ತಿವದಿತಿ ॥

### (ಭಾಷ್ಯಾರ್ಥ)

ಪರವಿದ್ಯೆಯ ವಿಷಯವಾದ ನಿರ್ವಿಶೇಷವಾದ **ಅಕ್ಷರನನ್ನು** ಪುರುಷನೆಂಬ ಸತ್ಯನನ್ನು ''ದಿವ್ಯೋ ಹ್ಯಮೂರ್ತಃ'' (೨ನೆಯ ಮಂತ್ರ) ಮುಂತಾದ ಮಂತ್ರದಿಂದ ಸಂಕ್ಷೇಪವಾಗಿ ಹೇಳಿ **ಅದನ್ನೇ ಮತ್ತೆ ಸವಿಶೇಷವಾಗಿ[3] ವಿಸ್ತಾರವಾಗಿ ಹೇಳಬೇಕು ಎಂದು (ಶ್ರುತಿಯು) ಪ್ರಾರಂಭಿಸಿರುತ್ತದೆ**. ಏಕೆಂದರೆ ಸಂಕ್ಷೇಪವಾಗಿಯೂ ವಿಸ್ತಾರವಾಗಿಯೂ ಹೇಳಿದ[4] ಪದಾರ್ಥವು ಸೂತ್ರ, ಭಾಷ್ಯೋಕ್ತಿ - ಇವುಗಳಂತೆ ಸುಲಭವಾಗಿ ತಿಳಿದು ಕೊಳ್ಳುವದಕ್ಕೆ ಆಗುವದು.

1. ಆವಹ, ಪ್ರವಹ, ಉದ್ವಹ, ಸಂವಹ, ವಿವಹ, ಪರಿವಹ, ಪರಾವಹ - ಎಂದು ಹೊರಗಿನ ವಾಯು ಏಳು ವಿಧ. ಮೋ.ಧ. ೩೨೮-೩೬ ರಿಂದ ೫೨. ಒಳಗಿನ ಪ್ರಾಣಾದಿಭೇದ ಗಳನ್ನು ಮೊದಲು ಹೇಳಿದ ''ಪ್ರಾಣಃ'' ಎಂಬ ಮಾತಿನಲ್ಲಿಯೇ ಅಡಕಮಾಡಿಕೊಳ್ಳಬೇಕು.

2. ಆಕಾಶದ ಶಬ್ದದೊಡನೆ ವಾಯು ; ವಾಯುವಿನ ಶಬ್ದ ಸ್ಪರ್ಶಗಳೆಂಬ ಗುಣಗಳೊಡನೆ ಅಗ್ನಿ ; ಹೀಗೆ ಒಂದು, ಎರಡು, ಮೂರು, ನಾಲ್ಕು, ಐದು ಗುಣಗಳುಳ್ಳವಾಗಿ. ಪ್ರ.ಭಾ. ೬-೪, ತೈ.ಭಾ. ೨-೧, (''ಆಕಾಶಃ ಸಂಭೂತಃ'') - ಇವುಗಳಲ್ಲಿ ಈ ಪ್ರಕ್ರಿಯೆ ಇದೆ.

3. ಪರಮಾರ್ಥವಾಗಿ ನಿರ್ವಿಶೇಷವಾಗಿರುವ ಬ್ರಹ್ಮವೇ ಅವಿದ್ಯಾಕಲ್ಪಿತೋಪಾಧಿ ಗಳಿಂದ ಸವಿಶೇಷವಾಗುತ್ತದೆ. ಪರ, ಅಪರ ಎಂಬ ವಿವೇಕವನ್ನು ಸೂ. ಭಾ. ೪-೩-೧೪ರಲ್ಲಿ ಮಾಡಿರುವದನ್ನು ನೋಡಿರಿ.

4. ಮೊದಲು ಸಂಕ್ಷೇಪವಾಗಿ ಹೇಳಿದ್ದನ್ನೇ ಆಮೇಲೆ ವಿಸ್ತರಿಸಿ ಹೇಳಿದೆ.

## ಅಕ್ಷರದಿಂದ ವಿರಾಟ್ಪುರುಷನ ಉತ್ಪತ್ತಿ

### (ಭಾಷ್ಯ)

೬೦. ಯೋಽಪಿ[1] ಪ್ರಥಮಜಾತ್ ಪ್ರಾಣಾತ್ ಹಿರಣ್ಯಗರ್ಭಾತ್ ಜಾಯತೇ ಅಣ್ಡಸ್ಯಾನ್ತರ್ವಿರಾಟ್ ಸ ತತ್ತ್ವಾನ್ತರಿತತ್ವೇನ ಲಕ್ಷ್ಯಮಾಣೋಽಪಿ ಏತಸ್ಮಾದೇವ ಪುರುಷಾತ್ ಜಾಯತೇ ಏತನ್ಮಯಶ್ಚ ಇತ್ಯೇತದರ್ಥಮ್ ಆಹ -

### (ಭಾಷ್ಯಾರ್ಥ)

ಮೊದಲು ಹುಟ್ಟಿದ **ಪ್ರಾಣನೆಂಬ ಹಿರಣ್ಯಗರ್ಭ**ನಿಂದ ಹುಟ್ಟುವ ಅಂಡದೊಳಗಿನ **ವಿರಾಟ್ಪುರುಷ**[2]ನಿದಾನಲ್ಲ, ಅವನು ಮತ್ತೊಂದು ತತ್ತ್ವದಿಂದ ವ್ಯವಹಿತನಾಗಿರುವಂತೆ ತೋರಿದರೂ[3] ಈ ಪುರುಷನಿಂದಲೇ ಹುಟ್ಟುತ್ತಾನೆ, ಈತನ ರೂಪವಾಗಿಯೇ[4] ಇರುತ್ತಾನೆ ಎಂಬೀ ವಿಷಯವನ್ನು (ಮಂತ್ರವು) ಹೇಳುತ್ತದೆ :-

**ಅಗ್ನಿರ್ಮೂರ್ಧಾ ಚಕ್ಷುಷೀ ಚನ್ದ್ರಸೂರ್ಯೌ**
**ದಿಶಃ ಶ್ರೋತ್ರೇ ವಾಗ್ವಿವೃತಾಶ್ಚ ವೇದಾಃ ।**
**ವಾಯುಃ ಪ್ರಾಣೋ ಹೃದಯಂ ವಿಶ್ವಮಸ್ಯ**
**ಪದ್ಭ್ಯಾಂ ಪೃಥಿವೀ ಹ್ಯೇಷ ಸರ್ವಭೂತಾನ್ತರಾತ್ಮಾ ॥೪॥**

೪. ಯಾವನಿಗೆ ಅಗ್ನಿಯು ಮೂರ್ಧವೂ ಚಂದ್ರಸೂರ್ಯರು ಕಣ್ಣುಗಳೂ ದಿಕ್ಕುಗಳು ಕಿವಿಗಳೂ ವಿವರವಾದ ವೇದಗಳು ವಾಕ್ಕೂ ವಾಯುವು ಪ್ರಾಣವೂ (ಆಗಿರುವವೋ) ವಿಶ್ವವು ಯಾವಾತನ ಹೃದಯವೋ (ಯಾವಾತನ) ಪಾದಗಳಿಂದ ಪೃಥಿವಿ(ಯಾಗಿರುವದೋ) ಈ ಸರ್ವಭೂತಾಂತರಾತ್ಮನು (ಹುಟ್ಟುತ್ತಾನೆ).

1. "ಯೋ ಹಿ" ಎಂದು ವಾ॥ ಪಾಠ.

2. ವಿರಾಟ್ಪುರುಷನ ವಿಷಯಕ್ಕೆ ಕ.ಭಾ. ೧-೧-೧೫, ತೈ.ಭಾ. ೨-೮ ("ಪ್ರಜಾಪತಿಃ" ಎಂಬುದರ ವಿವರ), ಐ.ಭಾ. ೨-೧ ('ತಮಶನಾಪಿಪಾಸಾಭ್ಯಾಮ್') ನೋಡಿ.

3. ಹಿರಣ್ಯಗರ್ಭನು ಬ್ರಹ್ಮದಿಂದ ಹುಟ್ಟಿ ವಿರಾಟ್ಪುರುಷನನ್ನು ಉತ್ಪತ್ತಿಮಾಡುವದರಿಂದ ಸೂಕ್ಷ್ಮಸಮಷ್ಟಿತತ್ತ್ವವು ಬ್ರಹ್ಮಕ್ಕೂ ವಿರಾಟ್ಪುರುಷನಿಗೂ ನಡುವೆ ಇದ್ದಂತೆ ತೋರುತ್ತದೆ.

4. ಭಾಷ್ಯದಲ್ಲಿ 'ಏತನ್ಮಯ' ಎಂದಿದ್ದರೂ 'ಮಯ' ಎಂಬುದಕ್ಕೆ ಸ್ವರೂಪಾರ್ಥವನ್ನು ಮಾಡುವದೇ ಯುಕ್ತ. ಏಕೆಂದರೆ ಪರಮಾತ್ಮನಿಗೂ ಹಿರಣ್ಯಗರ್ಭವಿರಾಟರಿಗೂ ಉಪಾಧಿ ಮಾತ್ರದಿಂದ ಭೇದವಿರುವದೇ ಹೊರತು ನಿಜವಾಗಿಲ್ಲ.

## (ಭಾಷ್ಯ)

೬೧. ತಂ ಚ ವಿಶಿನಷ್ಟಿ । ಅಗ್ನಿಃ ದ್ಯುಲೋಕಃ । ''ಅಸೌ ವಾವ ಲೋಕೋ ಗೌತಮಾಗ್ನಿಃ'' (ಛಾಂ. ೫-೪-೧) ಇತಿ ಶ್ರುತೇಃ । ಮೂರ್ಧಾ ಯಸ್ಯ ಉತ್ತಮಾಙ್ಗಂ ಶಿರಃ । ಚಕ್ಷುಷೀ ಚನ್ದ್ರಸೂರ್ಯೌ[1] । ಚನ್ದ್ರಶ್ಚ ಸೂರ್ಯಶ್ಚ ಇತಿ ಚನ್ದ್ರಸೂರ್ಯೌ । ಯಸ್ಯ ಇತಿ ಸರ್ವತ್ರಾನುಷಙ್ಗಃ ಕರ್ತವ್ಯಃ । 'ಅಸ್ಯ' ಇತ್ಯಸ್ಯ ಪದಸ್ಯ ವಕ್ಷ್ಯಮಾಣಸ್ಯ 'ಯಸ್ಯ' ಇತಿ ವಿಪರಿಣಾಮಂ ಕೃತ್ವಾ । ದಿಶಃ ಶ್ರೋತ್ರೇ ಯಸ್ಯ । ವಾಕ್ ವಿವೃತಾಶ್ಚ[2] ಉದ್ಘಾಟಿತಾಃ ಪ್ರಸಿದ್ಧಾ ವೇದಾಃ ಯಸ್ಯ । ವಾಯುಃ ಪ್ರಾಣಃ ಯಸ್ಯ । ಹೃದಯಂ ಅಂತಃಕರಣಮ್ ವಿಶ್ವಂ ಸಮಸ್ತಂ ಜಗತ್ । ಅಸ್ಯ, 'ಯಸ್ಯ' ಇತ್ಯೇತತ್ । ಸರ್ವಂ ಹಿ ಅನ್ತಃಕರಣವಿಕಾರಮೇವ ಜಗತ್ । ಮನಸ್ಯೇವ ಸುಷುಪ್ತೇ ಪ್ರಲಯದರ್ಶನಾತ್ । ಜಾಗರಿತೇಽಪಿ ತತ ಏವ ಅಗ್ನಿವಿಸ್ಫುಲಿಙ್ಗವದ್ ವಿಪ್ರತಿಷ್ಠಾನಾತ್ । ಯಸ್ಯ ಚ ಪದ್ಭ್ಯಾಂ ಜಾತಾ ಪೃಥಿವೀ । ಏಷ ದೇವೋ ವಿಷ್ಣುಃ ಅನನ್ತಃ ಪ್ರಥಮಶರೀರೀ ತ್ರೈಲೋಕ್ಯದೇಹೋಪಾಧಿಃ ಸರ್ವೇಷಾಂ ಭೂತಾನಾಮ್ ಅನ್ತರಾತ್ಮಾ । ಸ ಹಿ ಸರ್ವಭೂತೇಷು ದ್ರಷ್ಟಾ ಶ್ರೋತಾ ಮನ್ತಾ ವಿಜ್ಞಾತಾ ಸರ್ವಕರಣಾತ್ಮಾ ॥

## (ಭಾಷ್ಯಾರ್ಥ)

(ಈಗ) ಆ (ವಿರಾಟ್ಪುರುಷನ) ವಿಶೇಷಣಗಳನ್ನು (ಶ್ರುತಿಯು) ಹೇಳುತ್ತದೆ : ಅಗ್ನಿಯು ಎಂದರೆ ದ್ಯುಲೋಕವು ; ''ಎಲೈ ಗೌತಮನೆ, ಆ ಲೋಕವೇ ಅಗ್ನಿ'' (ಛಾಂ. ೫-೪-೧) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. (ಈ ಅಗ್ನಿಯು) ಯಾವನಿಗೆ ಮೂರ್ಧವೋ ಉತ್ತಮಾಂಗವಾದ ತಲೆಯೋ, ಚಂದ್ರಸೂರ್ಯರು ಕಣ್ಣುಗಳೋ-ಚಂದ್ರನೂ ಸೂರ್ಯನೂ ಚಂದ್ರಸೂರ್ಯರು (ಅವರು ಕಣ್ಣುಗಳು ಯಾವಾತನಿಗೋ). ಮುಂದೆ ಹೇಳುವ 'ಅಸ್ಯ' (ಅವನಿಗೆ) ಎಂಬ ಪದವನ್ನು 'ಯಸ್ಯ' (ಯಾವನಿಗೋ) - ಎಂದು (ರೂಪ) ವಿಪರಿಣಾಮವನ್ನು ಮಾಡಿಕೊಂಡು (ಆ ಮಾತನ್ನು) ಎಲ್ಲಾ ಕಡೆಯಲ್ಲಿಯೂ ಸೇರಿಸಿಕೊಳ್ಳಬೇಕು. ದಿಕ್ಕುಗಳು ಯಾವನಿಗೆ ಶ್ರೋತ್ರವೋ ವಿವರವಾದ ಹೊರತೆಗೆದ ಪ್ರಸಿದ್ಧವಾದ ವೇದಗಳು ಯಾವನ ವಾಕ್ಕೋ, ವಾಯುವು ಯಾವನಿಗೆ ಪ್ರಾಣವೋ ವಿಶ್ವವು ಎಂದರೆ ಇಡಿಯ ಜಗತ್ತು ಯಾವನಿಗೆ ಹೃದಯವೋ[3] ಎಂದರೆ ಅಂತಃಕರಣವೋ, (ಇಲ್ಲಿ) ಅಸ್ಯ ಎಂದರೆ ಯಸ್ಯ (ಯಾವನಿಗೆ) ಎಂದೇ ಅರ್ಥ. **ಎಲ್ಲಾ ಜಗತ್ತೂ ಅಂತಃಕರಣದ ಕಾರ್ಯವೇ**

1. ಇದು - ಕಾ।। ಪಾಠದಲ್ಲಿ ಮಾತ್ರವಿದೆ. ಇರಬೇಕಂತ ತೋರುತ್ತದೆ.
2. ಚಕಾರಯುಕ್ತ ಪಾಠವು ವಾ।। ಪಾಠದಲ್ಲಿ ಮಾತ್ರವಿದೆ ; ಇದೇ ಮೂಲಾನುಸಾರಿ.
3. ಛಾಂ. ೫-೧೮-೨ನ್ನು ನೋಡಿ.

ಆಗಿರುತ್ತದೆ ; ಏಕೆಂದರೆ ಸುಷುಪ್ತಿಯಲ್ಲಿ ಮನಸ್ಸಿನಲ್ಲಿಯೇ ಲಯವಾಗುವದು ಕಂಡುಬರುತ್ತದೆ. ಎಚ್ಚರದಲ್ಲಿಯೂ ಅದರಿಂದಲೇ ಬೆಂಕಿಯ ಕಿಡಿಗಳಂತೆ ಹೊರಟು ಬರುತ್ತದೆ.[1] ಮತ್ತು ಯಾವನ ಪಾದಗಳಿಂದ ಪೃಥಿವಿಯು ಹುಟ್ಟಿರುವದೋ[2] **ಈ ದೇವನು ಎಂದರೆ** ಅನಂತನಾದ ವಿಷ್ಣುವು, **ಪ್ರಥಮಶರೀರಿಯು,**[3] **ಮೂರುಲೋಕ ಗಳೆಂಬ ದೇಹವೇ ಉಪಾಧಿಯಾಗಿ ಉಳ್ಳಾತನು** (ಹುಟ್ಟುತ್ತಾನೆ. ಈತನು) ಎಲ್ಲಾ ಭೂತ ಗಳಿಗೂ ಅಂತರಾತ್ಮನು ; ಆತನೇ ಅಲ್ಲವೆ, ಎಲ್ಲಾ ಭೂತಗಳಲ್ಲಿಯೂ ಈ ನೋಡುವ, ಕೇಳುವ, ಯೋಚಿಸುವ, ಮತ್ತು ಅರಿಯುವ ಎಲ್ಲಾ ಕರಣಗಳ ರೂಪನು ?[4]

## ಅಕ್ಷರದಿಂದ ಪ್ರಜೆಗಳ ಉತ್ಪತ್ತಿ

### (ಭಾಷ್ಯ)

೬೨. ಪಞ್ಚಾಗ್ನಿದ್ವಾರೇಣ ಚ ಯಾಃ ಸಂಸರನ್ತಿ ಪ್ರಜಾಃ, ತಾ ಅಪಿ ತಸ್ಮಾದೇವ ಪುರುಷಾತ್ ಪ್ರಜಾಯನ್ತೇ ಇತ್ಯುಚ್ಯತೇ -

### (ಭಾಷ್ಯಾರ್ಥ)

**ಪಂಚಾಗ್ನಿಗಳ ಮೂಲಕ**[5] ಸಂಸಾರದಲ್ಲಿ ತೊಳಲುತ್ತಿರುವ ಪ್ರಜೆಗಳಿದಾರಲ್ಲ, ಅವರೂ ಆ ಪುರುಷನಿಂದಲೇ ಹುಟ್ಟುತ್ತಾರೆ ಎಂದು (ಈ ಮಂತ್ರದಲ್ಲಿ) ಹೇಳಲಾಗುತ್ತದೆ :-

**ತಸ್ಮಾದಗ್ನಿಃ ಸಮಿಧೋ ಯಸ್ಯ ಸೂರ್ಯಃ**
**ಸೋಮಾತ್ ಪರ್ಜನ್ಯ ಓಷಧಯಃ ಪೃಥಿವ್ಯಾಮ್ ।**

---

1. ನಿದ್ರೆಯಲ್ಲಿ ಅಂತಃಕರಣವಿಲ್ಲದಾಗ ಜಗತ್ತಿಲ್ಲ, ಎಚ್ಚರದಲ್ಲಿ ಅದಿರುವಾಗ ಜಗತ್ತಿದೆ ; ಆದ್ದರಿಂದ ಜಗತ್ತು ಅಂತಃಕರಣವನ್ನು ಬಿಟ್ಟಿಲ್ಲ ಎಂದು ಅರ್ಥ. ಸುಷುಪ್ತಿಯಲ್ಲಿ ಮನಸ್ಸು ಇದೆಯೆಂಬುದು ವ್ಯವಹಾರದೃಷ್ಟಿಯಿಂದ. ಸೂ.ಭಾ. ೨-೩-೩೧ನ್ನು ನೋಡಿ.

2. ಪಾದಗಳೇ ಪೃಥಿವಿಯು ; ಛಾಂ. ೫-೧೭-೨ನ್ನು ನೋಡಿ. ಹುಟ್ಟಿತು ಎಂಬುದಕ್ಕೆ ಅಕ್ಷರಾರ್ಥವನ್ನು ಮಾಡಬಾರದು.

3. ವಿರಾಟ್ಪುರುಷನು ಸಮಷ್ಟಿಸ್ಥೂಲಶರೀರವುಳ್ಳವನಾದ್ದರಿಂದ ಪ್ರಥಮಶರೀರಿ ; ಆದರೆ ಜೀವರಂತೆ ಇವನು ಬೇರೆ ಮಾಂಸಮಯಶರೀರನೆಂದು ತಿಳಿಯಬಾರದು.

4. ಕರಣಾತ್ಮನು ನಿಜವಾಗಿ ಹಿರಣ್ಯಗರ್ಭನೇ ಆದರೂ ಇಲ್ಲಿ ವಿರಾಟನಿಗೂ ಹಿರಣ್ಯಗರ್ಭನಿಗೂ ಅಭೇದವನ್ನಿಟ್ಟುಕೊಂಡು ಈ ಮಾತನ್ನು ಹೇಳಿದೆ ಎಂದು ತಿಳಿಯಬೇಕು. ಸೂ.ಭಾ. ೧-೪-೧ನ್ನು ನೋಡಿ. ''ಕಾರಣಾತ್ಮಾ'' ಎಂಬ ಪಾಠಕ್ಕಿಂತ 'ಕರಣಾತ್ಮಾ' ಎಂಬ ಪಾಠವೇ ಮೇಲು.

5. ಛಾಂ. ೫-೪-೧ ರಿಂದ ೫-೮-೨ರವರೆಗೂ ಬೃ. ೬-೨-೯ ರಿಂದ ೧೪ರವರೆಗೂ ಈ ಪಂಚಾಗ್ನಿವಿದ್ಯೆಯನ್ನು ವರ್ಣಿಸಿದೆ. ದ್ಯುಲೋಕ, ಪರ್ಜನ್ಯ, ಪೃಥಿವಿ, ಪುರುಷ, ಸ್ತ್ರೀ - ಇವನ್ನು ಅಗ್ನಿಯೆಂದು ಭಾವಿಸಬೇಕೆಂದು ಅಲ್ಲಿ ಹೇಳಿದೆ.

**ಪುಮಾನ್ ರೇತಃ ಸಿಞ್ಚತಿ ಯೋಷಿತಾಯಾಂ**
**ಬಹ್ವೀಃ ಪ್ರಜಾಃ ಪುರುಷಾತ್ ಸಂಪ್ರಸೂತಾಃ ||೫||**

೫. ಯಾವನಿಗೆ ಸೂರ್ಯನೇ ಸಮಿತ್ತೋ (ಆ) ಅಗ್ನಿಯು ಆತನಿಂದಲೇ (ಹುಟ್ಟುತ್ತದೆ). ಸೋಮನಿಂದ ಪರ್ಜನ್ಯನು, ಪೃಥಿವಿಯಲ್ಲಿ ಓಷಧಿಗಳು (ಹುಟ್ಟುತ್ತವೆ). ಗಂಡಸು ಸ್ತ್ರೀಯಲ್ಲಿ ರೇತಸ್ಸನ್ನು ಚಿಮುಕಿಸುತ್ತಾನೆ ; (ಹೀಗೆ) ಬಹುಪ್ರಜೆಗಳು ಪುರುಷನಿಂದ ಹುಟ್ಟಿರುತ್ತವೆ.

## (ಭಾಷ್ಯ)

೬೩. ತಸ್ಮಾತ್ ಪರಸ್ಮಾತ್ ಪುರುಷಾತ್ ಪ್ರಜಾವಸ್ಥಾನವಿಶೇಷರೂಪಃ ಅಗ್ನಿಃ । ಸ ವಿಶೇಷ್ಯತೇ । ಸಮಿಧೋ ಯಸ್ಯ ಸೂರ್ಯಃ । ಸಮಿಧ ಇವ ಸಮಿಧಃ । ಸೂರ್ಯೇಣ ಹಿ ದ್ಯುಲೋಕಃ ಸಮಿಧ್ಯತೇ । ತತೋ ಹಿ ದ್ಯುಲೋಕಾಗ್ನೇಃ[1] ನಿಷ್ಪನ್ನಾತ್ ಸೋಮಾತ್ ಪರ್ಜನ್ಯಃ ದ್ವಿತೀಯೋಽಗ್ನಿಃ ಸಂಭವತಿ । ತಸ್ಮಾಚ್ಚ ಪರ್ಜನ್ಯಾತ್ ಓಷಧಯಃ ಪೃಥಿವ್ಯಾಂ ಸಂಭವನ್ತಿ । ಓಷಧೀಭ್ಯಃ ಪುರುಷಾಗ್ನೌ ಹುತಾಭ್ಯಃ ಉಪಾದಾನ ಭೂತಾಭ್ಯಃ ಪುಮಾನ್ ಅಗ್ನಿಃ ರೇತಃ ಸಿಞ್ಚತಿ ಯೋಷಿತಾಯಾಂ ಯೋಷಿತಿ ಯೋಷಾಗ್ನೌ ಸ್ತ್ರಿಯಾಮ್ ಇತಿ । ಏವಂಕ್ರಮೇಣ ಬಹ್ವೀಃ ಬಹ್ವ್ಯಃ ಪ್ರಜಾಃ ಬ್ರಾಹ್ಮಣಾದ್ಯಾಃ ಪುರುಷಾತ್ ಪರಸ್ಮಾತ್ ಸಂಪ್ರಸೂತಾಃ ಸಮುತ್ಪನ್ನಾಃ ||

## (ಭಾಷ್ಯಾರ್ಥ)

ಆ ಪರಮಪುರುಷನಿಂದಲೇ ಪ್ರಜೆಗಳು ಇರುವ ಒಂದಾನೊಂದು ಸ್ಥಾನವಾದ ಅಗ್ನಿಯು - ಆ ಅಗ್ನಿಗೆ ವಿಶೇಷಣವನ್ನು (ಮಂತ್ರವು) ಹೇಳುತ್ತದೆ : ಯಾವ (ಅಗ್ನಿಗೆ) ಸೂರ್ಯನು ಸಮಿತ್ತೋ, ಸಮಿತ್ತಿನಂತೆ ಇರುವನೋ (ಎಂದರ್ಥ). ಸೂರ್ಯನಿಂದಲೇ ಅಲ್ಲವೆ, ದ್ಯುಲೋಕವು[2] ಬೆಳಗುತ್ತಿರುವದು ? ಆ **ದ್ಯುಲೋಕವೆಂಬ ಅಗ್ನಿಯಿಂದ** ಉಂಟಾದ ಸೋಮನಿಂದ - **ಪರ್ಜನ್ಯನೆಂಬ ಎರಡನೆಯ ಅಗ್ನಿಯು** ಉಂಟಾಗುತ್ತದೆ. ಮತ್ತು ಆ ಪರ್ಜನ್ಯನಿಂದ **ಪೃಥಿವಿಯಲ್ಲಿ** ಸಸ್ಯಗಳು ಉಂಟಾಗುತ್ತವೆ. **ಪುರುಷನೆಂಬ ಅಗ್ನಿಯಲ್ಲಿ** ಹುತವಾಗುವ, ಉಪಾದಾನವಾಗಿರುವ ಸಸ್ಯಗಳಿಂದ ಪುರುಷನೆಂಬ ಅಗ್ನಿಯು ಯೋಷಿತಾಯಾಂ - ಯೋಷಿತಿ, **ಯೋಷಾಗ್ನಿಯಲ್ಲಿ**,[3] ಸ್ತ್ರೀಯಲ್ಲಿ ರೇತಸ್ಸನ್ನು ಚಿಮುಕಿಸುತ್ತಾನೆ. ಈ ಕ್ರಮದಿಂದ ಬಹ್ವೀಃ=ಬಹ್ವ್ಯಃ ಬ್ರಾಹ್ಮಣರೇ ಮುಂತಾದ ಅನೇಕ ಪ್ರಜೆಗಳು (ಆ) ಪರಮಪುರುಷನಿಂದ ಹುಟ್ಟಿರುತ್ತವೆ, ಉಂಟಾಗಿರುತ್ತವೆ.

1. 'ದ್ಯುಲೋಕಾತ್' ಎಂಬ ಆ|| ಪಾಠಕ್ಕಿಂತ ಈ ಪಾ|| ಪಾಠವು ಉತ್ತಮ.
2. ಅಂತರಿಕ್ಷಲೋಕವು.
3. ಸ್ತ್ರೀ ಎಂಬ ಅಗ್ನಿಯಲ್ಲಿ.

## ಅಕ್ಷರದಿಂದ ಕರ್ಮಸಾಧನಗಳ ಮತ್ತು ಫಲಗಳ ಉತ್ಪತ್ತಿ

(ಭಾಷ್ಯ)

೬೪. ಕಿಂಚ ಕರ್ಮಸಾಧನಾನಿ ಫಲಾನಿ ಚ ತಸ್ಮಾದೇವ ಇತ್ಯಾಹ -

(ಭಾಷ್ಯಾರ್ಥ)

ಇದಲ್ಲದೆ ಕರ್ಮದ ಸಾಧನಗಳೂ ಫಲಗಳೂ ಆ (ಪುರುಷ)ನಿಂದಲೇ (ಆಗುವವು) ಎಂದು (ಈ ಮಂತ್ರವು) ಹೇಳುತ್ತಿದೆ :-

**ತಸ್ಮಾದೃಚಃ ಸಾಮ ಯಜೂಗ್ಂಷಿ ದೀಕ್ಷಾ**
**ಯಜ್ಞಾಶ್ಚ ಸರ್ವೇ ಕ್ರತವೋ ದಕ್ಷಿಣಾಶ್ಚ ।**
**ಸಂವತ್ಸರಶ್ಚ ಯಜಮಾನಶ್ಚ ಲೋಕಾಃ**
**ಸೋಮೋ ಯತ್ರ ಪವತೇ ಯತ್ರ ಸೂರ್ಯಃ ॥೬॥**

**೬. ಆತನಿಂದ(ಲೇ) ಋಕ್ಕುಗಳು, ಸಾಮವು, ಯಜುಸ್ಸುಗಳು, ದೀಕ್ಷೆಗಳು, ಎಲ್ಲಾ ಯಜ್ಞಗಳು, ಕ್ರತುಗಳು, ದಕ್ಷಿಣೆಗಳು, ಸಂವತ್ಸರವು, ಯಜಮಾನನು, ಎಲ್ಲಿ ಸೋಮನು ಪವಿತ್ರಗೊಳಿಸುವನೋ ಎಲ್ಲಿ (ಸೂರ್ಯ)ನಿರುವನೋ (ಆ) ಲೋಕಗಳೂ (ಉಂಟಾಗುತ್ತವೆ).**

(ಭಾಷ್ಯ)

೬೫. ಕಥಮ್ ? ತಸ್ಮಾತ್ ಪುರುಷಾತ್ ಋಚಃ ನಿಯತಾಕ್ಷರಪಾದಾವಸಾನಾಃ ಗಾಯತ್ರ್ಯಾದಿಚ್ಛನ್ದೋವಿಶಿಷ್ಟಾಃ ಮನ್ತ್ರಾಃ । ಸಾಮ ಪಾಞ್ಚಭಕ್ತಿಕಂ ಸಾಪ್ತಭಕ್ತಿಕಂ ಚ ಸ್ತೋಭಾದಿಗೀತವಿಶಿಷ್ಟಮ್ । ಯಜೂಂಷಿ ಅನಿಯತಾಕ್ಷರಪಾದಾವಸಾನಾನಿ ವಾಕ್ಯ ರೂಪಾಣಿ । ಏವಂ ತ್ರಿವಿಧಾಃ ಮನ್ತ್ರಾಃ । ದೀಕ್ಷಾಃ ಮೌಞ್ಜ್ಯಾದಿಲಕ್ಷಣಾಃ ಕರ್ತೃ ನಿಯಮವಿಶೇಷಾಃ[1] । ಯಜ್ಞಾಶ್ಚ ಸರ್ವೇ ಅಗ್ನಿಹೋತ್ರಾದಯಃ । ಕ್ರತವಃ ಸಯೂಪಾಃ । ದಕ್ಷಿಣಾಶ್ಚ ಏಕಗವಾದ್ಯಾ[2] ಅಪರಿಮಿತಸರ್ವಸ್ವಾನ್ತಾಃ । ಸಂವತ್ಸರಶ್ಚ ಕಾಲಃ ಕರ್ಮಾಙ್ಗಭೂತಃ । ಯಜಮಾನಶ್ಚ ಕರ್ತಾ । ಲೋಕಾಃ ತಸ್ಯ ಕರ್ಮಫಲ ಭೂತಾಃ । ತೇ ವಿಶೇಷ್ಯನ್ತೇ-ಸೋಮಃ ಯತ್ರ ಯೇಷು ಲೋಕೇಷು ಪವತೇ ಪುನಾತಿ ಲೋಕಾನ್ ಯತ್ರ ಯೇಷು ಸೂರ್ಯಸ್ತಪತಿ ಚ । ತೇ ಚ ದಕ್ಷಿಣಾಯನೋತ್ತರಾಯಣ ಮಾರ್ಗದ್ವಯ ಗಮ್ಯಾ ವಿದ್ವದವಿದ್ವತ್ಕರ್ತೃಫಲಭೂತಾಃ ॥

1. "ದೀಕ್ಷಾ ಮೌಞ್ಜ್ಯಾದಿಲಕ್ಷಣಾ ಕರ್ತೃನಿಯಮವಿಶೇಷಾ" ಎಂದು ಆ॥ ಪಾಠ.
2. "ಏಕಗವಾದ್ಯಪರಿಮಿತ" ಎಂದು ಆ॥ ಪಾಠ.

(ಭಾಷ್ಯಾರ್ಥ)

ಹೇಗೆಂದರೆ, ಆ ಪುರುಷನಿಂದ **ಋಕ್ಕುಗಳು** ಎಂದರೆ (ಇಂತಿಷ್ಟೆಂದು) ಗೊತ್ತಾಗಿರುವ ಅಕ್ಷರಗಳ ಪಾದಗಳುಳ್ಳದ್ದಾಗಿ ಮುಗಿಯುವ **ಗಾಯತ್ರಿಯೇ** ಮುಂತಾದ ಛಂದಸ್ಸುಗಳಿಂದ ಕೂಡಿರುವ **ಮಂತ್ರ**ಗಳು.[1] ಸಾಮವೆಂದರೆ ಐದು[2] ಭಕ್ತಿಗಳು, ಅಥವಾ **ಏಳು ಭಕ್ತಿಗಳು**[3] ಇರುವದಾಗಿ **ಸ್ತೋಭವೇ** ಮುಂತಾದ ಗೀತಗಳಿಂದ ಕೂಡಿರುವದು. **ಯಜುಸ್ಸುಗಳು**-ಎಂದರೆ (ಇಂತಿಷ್ಟೆಂದು) ಗೊತ್ತಾದ (ಸಂಖ್ಯೆಯ) ಅಕ್ಷರಗಳ ಪಾದದಲ್ಲಿ ಮುಗಿಯದೆ ವಾಕ್ಯರೂಪಗಳಾಗಿರುವವು. ಹೀಗೆ **ಮೂರು ಬಗೆಯಾಗಿರುವ ಮಂತ್ರಗಳು** (ಆತನಿಂದಲೇ ಉಂಟಾಗುತ್ತವೆ). ದೀಕ್ಷೆಗಳು ಎಂದರೆ ಮೌಂಜಿ(ಯನ್ನು ಕಟ್ಟಿಕೊಳ್ಳುವದೇ) ಮುಂತಾದ ಕರ್ತೃವಾದವನು (ಮಾಡಬೇಕಾದ) ಬೇರೆಬೇರೆಯ ನಿಯಮಗಳು. ಎಲ್ಲಾ **ಯಜ್ಞ**ಗಳು, ಎಂದರೆ **ಅಗ್ನಿಹೋತ್ರವೇ** ಮುಂತಾದವು. **ಕ್ರತುಗಳು** ಎಂದರೆ ಯೂಪ[4](ವನ್ನು ಉಪಯೋಗಿಸಿ) ಮಾಡುವ (ಯಾಗಗಳು). **ದಕ್ಷಿಣೆಗಳು** ಎಂದರೆ ಒಂದು ಗೋವಿನ (ದಕ್ಷಿಣೆ)ಯಿಂದ ಮೊದಲಾಗಿ ಇಷ್ಟೆಂಬ ಲೆಕ್ಕವಿಲ್ಲದೆ ಸರ್ವಸ್ವದವರೆಗೂ[5] (ಇರುವ ದಕ್ಷಿಣೆಗಳು). **ಸಂವತ್ಸರವು** ಎಂದರೆ ಕರ್ಮಕ್ಕೆ ಬೇಕಾಗುವ ಕಾಲವು. ಮತ್ತು **ಯಜಮಾನನು** ಎಂದರೆ (ಕರ್ಮವನ್ನು) ಮಾಡುವವನು. **ಲೋಕಗಳು** ಎಂದರೆ ಅವನಿಗೆ ಕರ್ಮದ ಫಲವಾಗಿರುವ (ಭೋಗಸ್ಥಾನಗಳು). ಆ (ಲೋಕಗಳಿಗೆ) ವಿಶೇಷಣವನ್ನು (ಹೇಳಲಾಗುತ್ತದೆ). ಎಲ್ಲಿ ಎಂದರೆ ಯಾವ ಲೋಕಗಳಲ್ಲಿ ಸೋಮನು 'ಪವತೇ' ಎಂದರೆ ಲೋಕಗಳನ್ನು ಪಾವನಗೊಳಿಸುತ್ತಿರುವನೋ, ಮತ್ತು ಎಲ್ಲಿ ಯಾವ (ಲೋಕಗಳಲ್ಲಿ) ಸೂರ್ಯನು

1. ವೇದದಲ್ಲಿ 'ಮಂತ್ರಗಳು' ಕರ್ಮದಲ್ಲಿ ಉಪಯೋಗಿಸುವದಕ್ಕೆ ಬರುವ ಭಾಗಗಳು ; 'ಬ್ರಾಹ್ಮಣಗಳು' ಅವುಗಳನ್ನು ವಿವರಿಸುವವು. ಮಂತ್ರಗಳಲ್ಲಿ ಋಕ್ಕು, ಸಾಮ, ಯಜುಸ್ಸು - ಎಂದು ಮೂರು ಬಗೆ ; ಅವುಗಳ ವಿವರವನ್ನು ಭಾಷ್ಯದಲ್ಲಿ ಕೊಟ್ಟಿದೆ. ಋಕ್ಕು ಪದ್ಯಾತ್ಮಕವಾಗಿರುತ್ತದೆ. ಸಾಮವು ಋಕ್ಕನ್ನೇ ಗಾನಕ್ಕೆ ವಿನಿಯೋಗಿಸುತ್ತದೆ ; ಯಜುಸ್ಸು ಗದ್ಯಾತ್ಮಕವಾಗಿರುತ್ತದೆ.

2. ಹಿಂಕಾರ, ಪ್ರಸ್ತಾವ, ಉದ್ಗೀಥ, ಪ್ರತಿಹಾರ, ನಿಧನ - ಎಂಬ ಐದು ಸಾಮಭಾಗಗಳು. ಛಾಂ. ೨-೨-೧ ನ್ನು ನೋಡಿ.

3. ಹಿಂಕಾರ, ಪ್ರಸ್ತಾವ, ಆದಿ, ಉದ್ಗೀಥ, ಪ್ರತಿಹಾರ, ಉಪದ್ರವ, ನಿಧನ - ಎಂಬ ಏಳು ಸಾಮಭಾಗಗಳು. ಛಾಂ. ೨-೮-೧ ರಿಂದ ೬ರವರೆಗೆ ನೋಡಿ. ಭಕ್ತಿಗಳ ಪರಿಚಯವನ್ನು ಸಾಮವೇದವನ್ನು ಅಧ್ಯಯನಮಾಡಿರುವವರಿಂದ ಮಾಡಿಕೊಳ್ಳಬೇಕು.

4. ಕ್ರತುಗಳಲ್ಲಿ ಪಶುವನ್ನು ಕಟ್ಟುವ ಕಂಬ.

5. 'ವಿಶ್ವಜಿತ್', 'ಸರ್ವಮೇಧ' ಎಂಬ ಯಾಗಗಳಿಗೆ ಸರ್ವಸ್ವವನ್ನೂ ದಕ್ಷಿಣೆಯಾಗಿ ಕೊಡಬೇಕು.

ತಪಿಸುತ್ತಿರುವನೋ (ಆ ಲೋಕಗಳು) ; ಅವು ದಕ್ಷಿಣಾಯನ, ಉತ್ತರಾಯಣ - ಎಂಬ ಎರಡು ಮಾರ್ಗಗಳಿಂದ ಹೋಗಿ ಪಡೆಯತಕ್ಕವುಗಳಾಗಿರುತ್ತವೆ ; ಜ್ಞಾನಿಗಳೂ ಅಜ್ಞಾನಿಗಳೂ[1] ಆದ ಕರ್ತೃಗಳಿಗೆ (ಸಿಕ್ಕುವ) ಫಲಗಳಾಗಿರುತ್ತವೆ.[2]

**ತಸ್ಮಾಚ್ಚ ದೇವಾ ಬಹುಧಾ ಸಂಪ್ರಸೂತಾಃ**
**ಸಾಧ್ಯಾ ಮನುಷ್ಯಾಃ ಪಶವೋ ವಯಾಂಸಿ ।**
**ಪ್ರಾಣಾಪಾನೌ ವ್ರೀಹಿಯವೌ ತಪಶ್ಚ**
**ಶ್ರದ್ಧಾ ಸತ್ಯಂ ಬ್ರಹ್ಮಚರ್ಯಂ ವಿಧಿಶ್ಚ ॥೭॥**

೭. ಮತ್ತು ಆತನಿಂದ ದೇವತೆಗಳು ಬಹುವಾಗಿ ಹುಟ್ಟಿರುವರು. ಸಾಧ್ಯರು, ಮನುಷ್ಯರು, ಪಶುಗಳು, ಪಕ್ಷಿಗಳು, ಪ್ರಾಣಾಪಾನಗಳು, ವ್ರೀಹಿಯವಗಳು, ತಪಸ್ಸು, ಶ್ರದ್ಧೆ, ಸತ್ಯ, ಬ್ರಹ್ಮಚರ್ಯ, ಮತ್ತು ವಿಧಿ (ಇವೂ ಹುಟ್ಟಿರುವವು).

**(ಭಾಷ್ಯ)**

೬೬. ತಸ್ಮಾಚ್ಚ ಪುರುಷಾತ್ ಕರ್ಮಾಙ್ಗಭೂತಾಃ ದೇವಾಃ ಬಹುಧಾ ವಸ್ವಾದಿ ಗಣಭೇದೇನ ಸಂಪ್ರಸೂತಾಃ ಸಮ್ಯಕ್ ಪ್ರಸೂತಾಃ । ಸಾಧ್ಯಾಃ ದೇವವಿಶೇಷಾಃ । ಮನುಷ್ಯಾಃ ಕರ್ಮಾಧಿಕೃತಾಃ । ಪಶವಃ ಗ್ರಾಮ್ಯಾರಣ್ಯಾಃ । ವಯಾಂಸಿ ಪಕ್ಷಿಣಃ । ಜೀವನಂ ಚ ಮನುಷ್ಯಾದೀನಾಂ ಪ್ರಾಣಾಪಾನೌ । ವ್ರೀಹಿಯವೌ ಹವಿರರ್ಥೌ । ತಪಶ್ಚ ಕರ್ಮಾಙ್ಗಂ ಪುರುಷಸಂಸ್ಕಾರಲಕ್ಷಣಮ್, ಸ್ವತನ್ತ್ರಂ ಚ ಫಲಸಾಧನಮ್ । ಶ್ರದ್ಧಾ ಯತ್ಪೂರ್ವಕಃ ಸರ್ವಪುರುಷಾರ್ಥ ಸಾಧನಪ್ರಯೋಗಶ್ಚಿತ್ತಪ್ರಸಾದಃ, ಆಸ್ತಿಕ್ಯಬುದ್ಧಿಃ । ತಥಾ ಸತ್ಯಮ್ ಅನೃತವರ್ಜನಮ್, ಯಥಾಭೂತಾರ್ಥವಚನಂ ಚ ಅಪೀಡಾಕರಮ್ । ಬ್ರಹ್ಮಚರ್ಯಂ ಮೈಥುನಾಸಮಾಚಾರಃ । ವಿಧಿಶ್ಚ ಇತಿಕರ್ತವ್ಯತಾ ॥

**(ಭಾಷ್ಯಾರ್ಥ)**

ಮತ್ತು ಆ ಪುರುಷನಿಂದಲೇ ಕರ್ಮಕ್ಕೆ ಬೇಕಾಗಿರುವ **ದೇವತೆಗಳು** ಬಹುವಾಗಿ ಎಂದರೆ **ವಸುಗಳು** ಮುಂತಾಗಿ[3] ಬೇರೆಬೇರೆಯ ಗುಂಪಾಗಿ 'ಸಂಪ್ರಸೂತಾಃ', ಚೆನ್ನಾಗಿ

---

1. ಜ್ಞಾನಿಗಳೆಂದರೆ ಉಪಾಸಕರು ; ಇವರಿಗೆ ಉತ್ತರಾಯಣಮಾರ್ಗದಿಂದ ಬ್ರಹ್ಮಲೋಕದ ಪ್ರಾಪ್ತಿ. ಅಜ್ಞಾನಿಗಳೆಂದರೆ ಕರ್ಮಿಗಳು ; ಇವರಿಗೆ ದಕ್ಷಿಣಾಯನಮಾರ್ಗದಿಂದ ಚಂದ್ರ (ಪಿತೃ) ಲೋಕಪ್ರಾಪ್ತಿ.

2. ಇವುಗಳೆಲ್ಲ ಆ ಪುರುಷನಿಂದಲೇ ಉಂಟಾಗುತ್ತವೆ ಎಂದು ವಾಕ್ಯಶೇಷ. ಲೌಕಿಕಕ್ರಿಯಾ ಕಾರಕಫಲಗಳೂ ಆ ಪುರುಷನಿಂದಲೇ ಆಗುತ್ತವೆಯಾದರೂ ಇಲ್ಲಿ ಪುರುಷಾರ್ಥದೃಷ್ಟಿಯಿಂದ ಶಾಸ್ತ್ರೀಯಕ್ರಿಯಾಕಾರಕಫಲಗಳನ್ನೇ ಎತ್ತಿ ಹೇಳಿರುತ್ತದೆ.

3. ವಸುಗಳು ೮, ರುದ್ರರು ೧೧, ಮರುತ್ತುಗಳು ೭, ಆದಿತ್ಯರು ೧೨-ಹೀಗೆ ಗುಂಪಾಗಿರುವ ದೇವಗಣಗಳು.

ಹುಟ್ಟಿರುವರು. **ಸಾಧ್ಯರು**, ಎಂದರೆ ಒಂದು ಬಗೆಯ ದೇವತೆಗಳು. **ಮನುಷ್ಯರು** ಎಂದರೆ ಕರ್ಮದಲ್ಲಿ ಅಧಿಕಾರಿಗಳಾಗಿರುವವರು.[1] **ಪಶುಗಳು**, ಎಂದರೆ ಊರಿನಲ್ಲಿರುವ ಮತ್ತು ಕಾಡಿನಲ್ಲಿರುವ (ಪಶುಗಳು). 'ವಯಾಂಸಿ' ಎಂದರೆ ಪಕ್ಷಿಗಳು. **ಪ್ರಾಣಾಪಾನ ಗಳು** ಎಂದರೆ ಮನುಷ್ಯರೇ ಮುಂತಾದವರ ಜೀವನವು. **ವ್ರೀಹಿಯವಗಳು**, ಹವಿಸ್ಸಿಗಾಗಿ ಬೇಕಾಗುವ (ಬತ್ತ, ಜವೆ - ಇವು) - **ತಪಸ್ಸು** ಎಂದರೆ ಕರ್ಮಕ್ಕೆ ಅಂಗವಾಗಿ ಪುರುಷಸಂಸ್ಕಾರರೂಪವಾಗಿರುವದು,[2] ಮತ್ತು ಸ್ವತಂತ್ರವಾಗಿ ಫಲವನ್ನು ಕೊಡ ತಕ್ಕದ್ದು.[3] **ಶ್ರದ್ಧೆ** ಎಂದರೆ ಯಾವದರಿಂದೊಡಗೂಡಿಯೇ ಪುರುಷಾರ್ಥಸಾಧನ ಗಳನ್ನೆಲ್ಲ ಮಾಡಬೇಕೋ, (ಆ) ಚಿತ್ತಪ್ರಸನ್ನತೆಯು, ಆಸ್ತಿಕ್ಯಬುದ್ಧಿಯು. ಹಾಗೂ **ಸತ್ಯವು** ಎಂದರೆ ಸುಳ್ಳನ್ನು ಬಿಡುವದು, ಇದ್ದದ್ದನ್ನು ಇದ್ದಂತೆ (ಒಬ್ಬರಿಗೆ) ಸಂಕಟವಾಗ ದಂತೆ ನುಡಿಯುವದು. **ಬ್ರಹ್ಮಚರ್ಯವು** ಎಂದರೆ ಮೈಥುನವನ್ನು[4] ನಡೆಯಿಸದೆ ಇರುವದು. **ವಿಧಿ** ಎಂದರೆ ಹೀಗೆ ಮಾಡಬೇಕು. (ಎಂದು ವೇದದಲ್ಲಿ ಹೇಳಿರುವದು).[5]

## ಅಕ್ಷರದಿಂದ ಅಧ್ಯಾತ್ಮಪ್ರಾಣಗಳ ಸೃಷ್ಟಿ

**ಸಪ್ತ ಪ್ರಾಣಾಃ ಪ್ರಭವನ್ತಿ ತಸ್ಮಾತ್**
**ಸಪ್ತಾರ್ಚಿಷಃ ಸಮಿಧಃ ಸಪ್ತ ಹೋಮಾಃ ।**
**ಸಪ್ತ ಇಮೇ ಲೋಕಾ ಯೇಷು ಚರನ್ತಿ ಪ್ರಾಣಾ**
**ಗುಹಾಶಯಾ ನಿಹಿತಾಃ ಸಪ್ತ ಸಪ್ತ** ॥೮॥

1. ಕರ್ಮಕ್ಕೆ ಮನುಷ್ಯರೇ ಅಧಿಕಾರಿಗಳು ; ದೇವತೆಗಳಿಗೆ ಕರ್ಮವು ಆವಶ್ಯವಿಲ್ಲ, ಪಶುಗಳಿಗೆ ಅದಕ್ಕೆ ಬೇಕಾದ ಸಾಮರ್ಥ್ಯವಿಲ್ಲ. ಇಲ್ಲಿ ಮನುಷ್ಯರೆಂದರೆ ಕರ್ಮಾಧಿಕಾರಿಗಳಾದವರೇ. ಗೀ.ಭಾ. ೪-೧೧ನ್ನು ನೋಡಿರಿ.

2. ಕೃಚ್ಛ್ರ, ಚಾಂದ್ರಾಯಣ-ಮುಂತಾದ ತಪಸ್ಸು ಕರ್ಮಾಂಗವಾಗಿರುತ್ತದೆ.

3. ಇಂದ್ರಿಯಮನಸ್ಸುಗಳನ್ನು ಬಿಗಿಹಿಡಿಯುವ ತಪಸ್ಸು ಸ್ವತಂತ್ರವಾಗಿ ಫಲವನ್ನು ಕೊಡುತ್ತದೆ.

4. ಸ್ತ್ರೀಯರನ್ನು ನೆನಪಿಗೆ ತಂದುಕೊಳ್ಳುವದು, ಅವರ ವಿಷಯವನ್ನು ಮಾತನಾಡುವದು. ಮುಂತಾಗಿ ಎಂಟು ವಿಧವಾದ ಮೈಥುನವುಂಟೆಂದು ಶಾಸ್ತ್ರಕಾರರು ಹೇಳುವರು. ಅದು ಇಲ್ಲದಿರುವದು ಬ್ರಹ್ಮಚರ್ಯವು. ವಿಷಯಗಳ ಸ್ಮರಣೆಯೇ ಮುಂತಾದದ್ದು ಇಲ್ಲದಿರುವದೂ ಇದರಲ್ಲಿ ಸೇರಿದೆ.

5. 'ಇದೆಲ್ಲವೂ ಆ ಪುರುಷನಿಂದಲೇ ಉಂಟಾಗಿರುತ್ತದೆ' ಎಂದು ವಾಕ್ಯಶೇಷವು, ಈ ಪ್ರಕರಣದಲ್ಲಿ ಅನೇಕ ಕಡೆಗಳಲ್ಲಿ ಹೀಗೆ "ಹುಟ್ಟಿರುತ್ತಾರೆ" ಎಂಬ ವಾಕ್ಯವನ್ನು ಸೇರಿಸಿಕೊಳ್ಳಬೇಕಾಗುತ್ತದೆ.

೮. ಏಳು ಪ್ರಾಣಗಳು, ಏಳು ಅರ್ಚಿಗಳು, ಏಳು ಸಮಿತ್ತುಗಳು, ಏಳು ಹೋಮಗಳು, ಯಾವವುಗಳಲ್ಲಿ ಏಳೇಳಾಗಿಟ್ಟಿರುವ ಗುಹಾಶಯಗಳಾದ ಪ್ರಾಣಗಳು ಸಂಚರಿಸುತ್ತಿರುವವೋ (ಅ) ಈ ಏಳು ಲೋಕಗಳು.

## (ಭಾಷ್ಯ)

೬೭. ಕಿಂಚ ಸಪ್ತ ಶೀರ್ಷಣ್ಯಾಃ ಪ್ರಾಣಾಃ ತಸ್ಮಾದೇವ ಪುರುಷಾತ್ ಪ್ರಭವನ್ತಿ । ತೇಷಾಂ ಚ ಸಪ್ತಾರ್ಚಿಷಃ ದೀಪ್ತಯಃ ಸ್ವವಿಷಯಾವದ್ಯೋತನಾನಿ[1] । ತಥಾ ಸಪ್ತ ಸಮಿಧಃ ಸಪ್ತ ವಿಷಯಾಃ । ವಿಷಯೈರ್ಹಿ ಸಮಿಧ್ಯನ್ತೇ ಪ್ರಾಣಾಃ । ಸಪ್ತ ಹೋಮಾಃ ತದ್ವಿಷಯವಿಜ್ಞಾನಾನಿ । ''ಯದಸ್ಯ ವಿಜ್ಞಾನಂ ತಜ್ಜುಹೋತಿ'' (ತೈ. ನಾ. ೮೦) ಇತಿ ಶ್ರುತ್ಯನ್ತರಾತ್ । ಕಿಂ ಚ ಸಪ್ತ ಇಮೇ[2] ಲೋಕಾ ಇನ್ದ್ರಿಯಸ್ಥಾನಾನಿ ಯೇಷು ಚರನ್ತಿ ಸಂಚರನ್ತಿ ಪ್ರಾಣಾಃ ಇತಿ ವಿಶೇಷಣಾತ್ । ''ಪ್ರಾಣಾ ಯೇಷು ಚರನ್ತಿ'' ಇತಿ ಪ್ರಾಣಾನಾಂ ವಿಶೇಷಣಮಿದಂ ಪ್ರಾಣಾಪಾನಾದಿನಿವೃತ್ತ್ಯರ್ಥಮ್ । ಗುಹಾಯಾಂ ಶರೀರೇ ಹೃದಯೇ ವಾ ಸ್ವಾಪಕಾಲೇ ಶೇರತೇ ಇತಿ ಗುಹಾಶಯಾಃ । ನಿಹಿತಾಃ ಸ್ಥಾಪಿತಾ ಧಾತ್ರಾ ಸಪ್ತ ಸಪ್ತ ಪ್ರತಿಪ್ರಾಣಿಭೇದಮ್ । ಯಾನಿ ಚ ಆತ್ಮಯಾಜಿನಾಂ ವಿದುಷಾಂ ಕರ್ಮಾಣಿ ತತ್ಸಾಧನಾನಿ ಕರ್ಮಫಲಾನಿ ಚ ಅವಿದುಷಾಂ ಚ ಕರ್ಮಾಣಿ ತತ್ಸಾಧನಾನಿ ಕರ್ಮಫಲಾನಿ ಚ ಸರ್ವಂ ಚೈತತ್ ಪರಸ್ಮಾದೇವ ಪುರುಷಾತ್ ಸರ್ವಜ್ಞಾತ್ ಪ್ರಸೂತಮ್ ಇತಿ ಪ್ರಕರಣಾರ್ಥಃ ॥

## (ಭಾಷ್ಯಾರ್ಥ)

ಮತ್ತು ತಲೆಯಲ್ಲಿರುವ ಏಳು ಪ್ರಾಣಗಳು,[3] ಅದೇ ಪುರುಷನಿಂದ ಉಂಟಾಗುತ್ತವೆ. ಅವುಗಳ ಏಳು ಅರ್ಚಿಗಳು ಎಂದರೆ ತಮ್ಮ ವಿಷಯಗಳನ್ನು ಬೆಳಗುವ ಬೆಳಕುಗಳು[4] ; ಮತ್ತು ಏಳು ಸಮಿತ್ತುಗಳು, ಎಂದರೆ ಏಳು ವಿಷಯಗಳು. ವಿಷಯಗಳಿಂದಲೇ ಅಲ್ಲವೆ. ಪ್ರಾಣಗಳು ಹತ್ತಿಕೊಂಡು ಉರಿಯುತ್ತವೆ[5] ? ಏಳು ಹೋಮಗಳು

1. ''ಸ್ವಸ್ವವಿಷಯಾವದ್ಯೋತನಾನಿ'' ಎಂದು ವಾ ॥ ಪಾಠ.

2. ''ಸಪ್ತ ಇಮೇ'' ಎಂದು ಮೂಲ, ''ಸಪ್ತೇಮೇ'' ಎಂದು ಭಾಷ್ಯ ಆ॥ ಪಾಠದಲ್ಲಿ. ವಾ॥ ಪಾಠದಲ್ಲಿ 'ಸಪ್ತೇಮೇ' ಎಂದೇ ಮೂಲ.

3. ಕಿವಿಗಳು, ಕಣ್ಣುಗಳು, ಮೂಗಿನ ಹೊಳ್ಳೆಗಳು, ನಾಲಗೆ - ಇವುಗಳಲ್ಲಿರುವ ಕರಣಗಳು. ತೈ. ಸಂ. (೫-೧-೭೦), ಕರಣಗಳು ಏಳೇ ಎಂದೇನೂ ತಾತ್ಪರ್ಯವಲ್ಲ, ಪ್ರಾಣಗಳು ಹನ್ನೊಂದು ಎಂದು ಸೂ.ಭಾ. ೨-೪-೬ ರಲ್ಲಿ ನಿರ್ಣಯಿಸಿದೆ.

4. ವಿಷಯವನ್ನು ಬೆಳಗುವ ಶಕ್ತಿಗಳು ; ನೋಟದ ಶಕ್ತಿ ಮುಂತಾದವು.

5. ''ಸಮಿಧ್ಯನ್ತೇ ಏಭಿರಿತಿ ಸಮಿಧಃ'' ಎಂದು ಅವಯವಾರ್ಥವೆಂದು ಭಾವ.

ಎಂದರೆ ಆ ವಿಷಯಗಳ ಅರಿವುಗಳು.[1] ''ಈತನ ಅರಿವೆಂಬುದು ಯಾವದೋ ಅವೇ ಅವನು ಮಾಡುವ ಹೋಮವು'' (ತೈ.ನಾ. ೮೦) ಎಂಬ ಬೇರೊಂದು ಶ್ರುತಿಯು ಇದಕ್ಕೆ ಪ್ರಮಾಣವು. ಮತ್ತು ಈ ಏಳು ಲೋಕಗಳು ಎಂದರೆ ಇಂದ್ರಿಯಸ್ಥಾನ ಗಳು.[2] ಯಾವ (ಇವು)ಗಳಲ್ಲಿ ಪ್ರಾಣಗಳು ನಡೆಯುತ್ತಿರುವವು, ಅಡ್ಡಾಡುತ್ತಿರುವವು ಎಂದು ವಿಶೇಷಣವಿರುವದರಿಂದ[3] (ಲೋಕಶಬ್ದಕ್ಕೆ ಈ ಅರ್ಥವನ್ನು ಮಾಡಬೇಕು). ''ಯಾವ (ಈ ಲೋಕಗಳಲ್ಲಿ) ಪ್ರಾಣಗಳು ಚರಿಸುತ್ತಿರುವವು'' ಎಂದು ಪ್ರಾಣಗಳಿಗೆ ಈ ವಿಶೇಷಣವನ್ನು ಕೊಟ್ಟಿರುವದು (ಇವು) ಪ್ರಾಣ, ಅಪಾನ - ಮುಂತಾದವು ಗಳಲ್ಲವೆಂದು ತಿಳಿಸುವದಕ್ಕೆ.[4] **ಗುಹೆಯಲ್ಲಿ** ಎಂದರೆ ಶರೀರದಲ್ಲಿ ಅಥವಾ ನಿದ್ರೆಯ ಕಾಲದಲ್ಲಿ ಹೃದಯದಲ್ಲಿ ಇರುತ್ತವೆಯಾದ್ದರಿಂದ ಇವು ಗುಹಾಶಯಗಳು. ಏಳೇಳಾಗಿ ಪ್ರತಿಯೊಂದು ಪ್ರಾಣವಿಶೇಷದಲ್ಲಿಯೂ ಇಡಲ್ಪಟ್ಟಿರುವ ಯಾವ (ಪ್ರಾಣಗಳು) ಸೃಷ್ಟಿಕರ್ತನಿಂದ ಇಡಲ್ಪಟ್ಟಿರುವವೋ (ಆ ಲೋಕಗಳು ಎಂದರ್ಥ).

**ಆತ್ಮಯಾಜಿಗಳಾದ ಜ್ಞಾನಿಗಳ**[5] ಕರ್ಮಗಳು, ಅವುಗಳ ಸಾಧನಗಳು,[6] (ಆ) ಕರ್ಮಗಳ ಫಲಗಳು ಇವೂ **ಅಜ್ಞಾನಿಗಳ**[7] ಕರ್ಮಗಳು, ಅವುಗಳ ಸಾಧನಗಳು, (ಆ) ಕರ್ಮಗಳ ಫಲಗಳೂ - ಇದೆಲ್ಲವೂ ಸರ್ವಜ್ಞನಾದ ಪರಮಪುರುಷನಿಂದಲೇ ಹುಟ್ಟಿರುತ್ತವೆ - ಎಂಬುದು ಪ್ರಕರಣಾರ್ಥವು.

## ಸಮುದ್ರಾದಿಬಾಹ್ಯವಸ್ತುಗಳೂ ಅಕ್ಷರದಿಂದಲೇ ಆಗಿವೆ

**ಅತಃ ಸಮುದ್ರಾ ಗಿರಯಶ್ಚ ಸರ್ವೇ**
**ಅಸ್ಮಾತ್ ಸ್ಯನ್ದನ್ತೇ ಸಿನ್ಧವಃ ಸರ್ವರೂಪಾಃ ।**

1. ರೂಪದ ಅರಿವು, ಶಬ್ದದ ಅರಿವು - ಮುಂತಾದವು.

2. ಇಂದ್ರಿಯಗೋಲಕಗಳಾದ ಕಿವಿ ಮುಂತಾದವು ; ಲೋಕಗಳೆಂಬ ಶಬ್ದಕ್ಕೆ ವಿಷಯ ಗಳೆಂದೂ ಅರ್ಥವನ್ನು ಮಾಡುವದಕ್ಕೆ ಬರುತ್ತದೆ.

3. ''ಇತಿ ವಿಶೇಷಣಾತ್'' ಎಂಬ ವಾ।। ಪಾಠವನ್ನನುಸರಿಸಿದೆ.

4. ಪ್ರಾಣ ಎಂಬ ಮಾತು ಇಂದ್ರಿಯಗಳಿಗೂ ಪ್ರಾಣಾಪಾನಾದಿಗಳಿಗೂ ಸಮಾನವಾಗಿರು ತ್ತದೆ. ''ಏಳು ಸ್ಥಾನಗಳಲ್ಲಿ ಸಂಚರಿಸುತ್ತವೆ'' ಎಂದು ಹೇಳಿರುವದು ಇಂದ್ರಿಯಗಳೆಂಬ ಅರ್ಥವು ಹೊರಡುವದಕ್ಕಾಗಿ.

5. ಆತ್ಮಯಾಜಿಗಳು ಎಂದರೆ ಆತ್ಮಸಂಸ್ಕಾರಕ್ಕಾಗಿ ಕರ್ಮವನ್ನು ಮಾಡುತ್ತಿರುವವರು. ಬೃ. ಭಾ. ೩-೩ ರ ಅವತರಣಿಕೆಯಲ್ಲಿ ಈ ಶಬ್ದವಿವರಣೆಯನ್ನು ನೋಡಿ.

6. ''ತತ್ಸಾಧನಾನಿ'' ಎಂಬ ಮಾತು ಕೆಲವು ಪುಸ್ತಕಗಳಲ್ಲಿಲ್ಲವಾದರೂ ಇರಬೇಕು.

7. ಬರಿಯ ಕರ್ಮವನ್ನು ಮಾಡುವವರ.

ಅತಶ್ಚ ಸರ್ವಾ ಓಷಧಯೋ ರಸಶ್ಚ
ಯೇನೈಷ ಭೂತೈಸ್ತಿಷ್ಠತೇ ಹ್ಯನ್ತರಾತ್ಮಾ ॥೯॥

೯. ಈತನಿಂದಲೇ ಎಲ್ಲಾ ಸಮುದ್ರಗಳೂ ಪರ್ವತಗಳೂ (ಆಗಿರುವವು). ಈತನಿಂದ ಎಲ್ಲಾ ರೂಪದ ಸಿಂಧುಗಳೂ ಪ್ರವಹಿಸುವವು. ಮತ್ತು ಈತನಿಂದಲೇ ಎಲ್ಲಾ ಓಷಧಿಗಳೂ ರಸವೂ (ಆಗಿರುವವು). ಯಾವ (ಈ ರಸ)ದಿಂದಲೇ ಅಲ್ಲವೆ, ಈ ಅಂತರಾತ್ಮವು ಭೂತಗಳೊಡನೆ ನಿಂತಿರುವದು ?

(ಭಾಷ್ಯ)

೭೮. ಅತಃ ಪುರುಷಾತ್ ಸಮುದ್ರಾಃ ಸರ್ವೇ ಕ್ಷಾರಾದ್ಯಾಃ । ಗಿರಯಶ್ಚ ಹಿಮವದಾದಯಃ ಅಸ್ಮಾದೇವ ಪುರುಷಾತ್ ಸರ್ವೇ । ಸ್ಯನ್ದನ್ತೇ ಸ್ರವನ್ತಿ ಗಙ್ಗಾದ್ಯಾಃ ಸಿನ್ಧವಃ ನದ್ಯಃ ಸರ್ವರೂಪಾಃ ಬಹುರೂಪಾಃ । (ಅತಶ್ಚ ?) ಅಸ್ಮಾದೇವ ಪುರುಷಾತ್ ಸರ್ವಾ ಓಷಧಯಃ ವ್ರೀಹಿಯವಾದ್ಯಾಃ । ರಸಶ್ಚ ಮಧುರಾದಿಃ ಷಡ್ವಿಧಃ ಯೇನ ರಸೇನ ಭೂತೈಃ ಪಞ್ಚಭಿಃ ಸ್ಥೂಲೈಃ ಪರಿವೇಷ್ಟಿತಃ ತಿಷ್ಠತೇ ತಿಷ್ಠತಿ ಹಿ ಅನ್ತರಾತ್ಮಾ ಲಿಙ್ಗಂ ಸೂಕ್ಷ್ಮಂ ಶರೀರಮ್ । ತದ್ ಹಿ ಅನ್ತರಾಲೇ ಶರೀರಸ್ಯ ಆತ್ಮನಶ್ಚ ಆತ್ಮವದ್ ವರ್ತತೇ ಇತಿ ಅನ್ತರಾತ್ಮಾ ॥

(ಭಾಷ್ಯಾರ್ಥ)

ಈ ಪುರುಷನಿಂದಲೇ ಉಪ್ಪಿನ **ಸಮುದ್ರವೇ** ಮುಂತಾದ[1] ಎಲ್ಲಾ ಸಮುದ್ರಗಳೂ **ಹಿಮವತ್ಪರ್ವತವೇ** ಮುಂತಾದ[2] ಎಲ್ಲಾ ಪರ್ವತಗಳೂ ಇದೇ ಪುರುಷನಿಂದಲೇ **ಗಂಗೆಯೇ** ಮುಂತಾದ ಎಲ್ಲಾರೂಪದ ಬಹುರೂಪವಾಗಿರುವ[3] ಸಿಂಧುಗಳೂ ಎಂದರೆ ನದಿಗಳೂ ಪ್ರವಹಿಸುವವು, ಹರಿದುಬರುತ್ತಿರುವವು. ಇದೇ ಪುರುಷನಿಂದ ಬತ್ತ, ಜವೆ, ಗೋಧಿ - ಮುಂತಾದ ಎಲ್ಲಾ ಸಸ್ಯಗಳೂ (ಹುಟ್ಟುತ್ತವೆ). ಸಿಹಿ ಮುಂತಾದ ಆರು ಬಗೆಯ[4] ರಸವೂ (ಆಗುವದು). ಯಾವ (ಈ) ರಸದಿಂದ ಐದು

1. ಉಪ್ಪಿನ ಸಮುದ್ರ, ಕಬ್ಬಿನರಸದ ಸಮುದ್ರ, ಸುರೆಯ ಸಮುದ್ರ, ತುಪ್ಪದ ಸಮುದ್ರ, ಮೊಸರಿನ ಸಮುದ್ರ, ಹಾಲಿನ ಸಮುದ್ರ, ಶುದ್ಧೋದಕದ ಸಮುದ್ರ - ಎಂದು ಏಳು ಸಮುದ್ರಗಳನ್ನು ಪೌರಾಣಿಕರು ವರ್ಣಿಸುತ್ತಾರೆ.

2. ಹಿಮವತ್ಪರ್ವತ, ಮಲಯ - ಮುಂತಾದ ಕುಲಾಚಲಗಳೂ ಮತ್ತು ಸಣ್ಣ ಬೆಟ್ಟಗುಡ್ಡಗಳೂ.

3. ಸಣ್ಣದೊಡ್ಡ, ಬೇರೆಬೇರೆಯ ಕಡೆಗೆ ಹರಿಯುವ.

4. ಸಿಹಿ, ಕಹಿ, ಕಾರ, ಉಪ್ಪು, ಹುಳಿ, ಒಗರು - ಎಂಬ ಸವಿಗಳು.

ಸ್ಥೂಲಭೂತಗಳಿಂದ[1] ಸುತ್ತಲ್ಪಟ್ಟಿರುವ ಅಂತರಾತ್ಮನು ಎಂದರೆ ಲಿಂಗವು ಸೂಕ್ಷ್ಮಶರೀರವು ಇದ್ದುಕೊಂಡಿರುವದು ; ಅದು ಶರೀರಕ್ಕೂ ಆತ್ಮನಿಗೂ ನಡುವೆ ಆತ್ಮನಂತೆ ಇರುವದಲ್ಲವೆ, ಆ ಕಾರಣದಿಂದ (ಅದಕ್ಕೆ) 'ಅಂತರಾತ್ಮ' ನೆಂದು ಹೆಸರು.[2]

## ಉಪಸಂಹಾರ : ಎಲ್ಲವೂ ಪುರುಷನೇ

### (ಭಾಷ್ಯ)

೬೯. ಏವಂ ಪುರುಷಾತ್ ಸರ್ವಮಿದಂ ಸಂಪ್ರಸೂತಮ್ । ಅತಃ "ವಾಚಾರಮ್ಭಣಂ ವಿಕಾರೋ ನಾಮಧೇಯಮ್" (ಛಾಂ. ೬-೧-೪) ಅನೃತಮ್, ಪುರುಷ ಇತ್ಯೇವ ಸತ್ಯಮ್ । ಅತಃ -

### (ಭಾಷ್ಯಾರ್ಥ)

ಹೀಗೆ ಪುರುಷನಿಂದ ಇದೆಲ್ಲವೂ ಹುಟ್ಟಿರುತ್ತದೆ. ಆದ್ದರಿಂದ "ವಿಕಾರವೆಂಬುದು ಮಾತಿನಿಂದಾಗಿರುವ ಹೆಸರೇ" (ಛಾಂ. ೬-೧-೪) ಹುಸಿಯಾದದ್ದು[3] ಪುರುಷನೆಂಬುದೇ ಸತ್ಯವು. ಆದ್ದರಿಂದ -

**ಪುರುಷ ಏವೇದಂ ವಿಶ್ವಂ ಕರ್ಮ**
**ತಪೋ ಬ್ರಹ್ಮ ಪರಾಮೃತಮ್ ।**
**ಏತದ್ ಯೋ ವೇದ ನಿಹಿತಂ ಗುಹಾಯಾಂ**
**ಸೋಽವಿದ್ಯಾಗ್ರನ್ಥಿಂ ವಿಕಿರತೀಹ ಸೋಮ್ಯ ॥೧೦॥**

೧೦. ಕರ್ಮ, ತಪಸ್ಸು - ಇದೆಲ್ಲವೂ ಪುರುಷನೇ, ಹೆಚ್ಚಿನ ಅಮೃತ

---

1. ಸ್ಥೂಲಭೂತಗಳಲ್ಲಿ ಎಲ್ಲಾ ಭೂತಗಳೂ ಬೆರೆತಿರುವವು. ಪೃಥಿವಿಯಲ್ಲಿ ಅಪ್ಪು, ತೇಜಸ್ಸು, ವಾಯು, ಆಕಾಶ. ಇವೆಲ್ಲ ಸೇರಿದ್ದರೂ ಪೃಥ್ವಿಯ ಭಾಗವು ಹೆಚ್ಚಾಗಿರುವದು. ಇದರಂತೆ ಅಪ್ಪು ಮುಂತಾದವನ್ನೂ ತಿಳಿಯಬೇಕು. ಆಹಾರದ ಸ್ಥೂಲಭಾಗವು ಸ್ಥೂಲ ಶರೀರಕ್ಕೂ ಸೂಕ್ಷ್ಮಭಾಗವು ಲಿಂಗಶರೀರಕ್ಕೂ ಸೇರುವವು. (ಛಾಂ. ೬-೫-೧), ಆದ್ದರಿಂದ ರಸದಿಂದಲೇ ಲಿಂಗಶರೀರವು ನಿಂತಿರುವದು ಎಂದು ಹೇಳಿದೆ.

2. ಸ್ಥೂಲಶರೀರ, ಸೂಕ್ಷ್ಮಶರೀರ, ಆತ್ಮ-ಇವುಗಳಲ್ಲಿ ಕ್ರಮಕ್ರಮವಾಗಿ ಆತ್ಮಬುದ್ಧಿ ಯುಂಟಾಗುತ್ತಾ ಹೋಗುತ್ತಿರುವದು.

3. ಭಾಷ್ಯಭಾಗ ೫೭ ರಲ್ಲಿರುವ ಈ ಶ್ರುತಿಯನ್ನೂ ಅದರ ಟಿಪ್ಪಣಿಯನ್ನೂ ನೋಡಿರಿ.

ವಾದ ಬ್ರಹ್ಮವೇ. ಸೋಮ್ಯನೆ, ಗುಹೆಯಲ್ಲಿ ಇಡಲ್ಪಟ್ಟಿರುವ ಇದನ್ನು ಯಾವನು ಅರಿತುಕೊಳ್ಳುವನೋ ಅವನು ಅವಿದ್ಯಾಗ್ರಂಥಿಯನ್ನು ಇಲ್ಲಿಯೇ

## (ಭಾಷ್ಯ)

೭೦. ಪುರುಷ ಏವೇದಂ ವಿಶ್ವಂ ಸರ್ವಮ್ । ನ ವಿಶ್ವಂ ನಾಮ ಪುರುಷಾತ್ ಅನ್ಯತ್ ಕಿಞ್ಚಿತ್ ಅಸ್ತಿ । ಅತಃ ಯದುಕ್ತಂ ತದೇತದಭಿಹಿತಮ್ । ''ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ'' (೧-೧-೩) ಇತಿ । ಏತಸ್ಮಿನ್ ಹಿ ಪರಸ್ಮಿನ್ ಆತ್ಮನಿ ಸರ್ವಕಾರಣೇ ಪುರುಷೇ ವಿಜ್ಞಾತೇ ಪುರುಷ ಏವೇದಂ ವಿಶ್ವಂ ನಾನ್ಯದಸ್ತಿ ಇತಿ ವಿಜ್ಞಾತಂ ಭವತೀತಿ । ಕಿಂ ಪುನರಿದಂ ವಿಶ್ವಮಿತಿ ? ಉಚ್ಯತೇ । ಕರ್ಮ ಅಗ್ನಿಹೋತ್ರಾದಿಲಕ್ಷಣಮ್ । ತಪಃ ಜ್ಞಾನಂ ತತ್ಕೃತಂ ಫಲಂ ಅನ್ಯತ್ । ಏತಾವದ್ ಹಿ ಇದಂ ಸರ್ವಮ್ । ತಚ್ಚ ಏತದ್ ಬ್ರಹ್ಮಣಃ ಕಾರ್ಯಮ್ । ತಸ್ಮಾತ್ ಸರ್ವಂ ಬ್ರಹ್ಮ ಪರಾಮೃತಮ್ ಪರಮ್ ಅಮೃತಮ್ ಅಹಮೇವ ಇತಿ ಯೋ ವೇದ ನಿಹಿತಂ ಸ್ಥಿತಂ ಗುಹಾಯಾಂ ಹೃದಿ ಸರ್ವಪ್ರಾಣಿನಾಮ್ ಸ ಏವಂವಿಜ್ಞಾನಾತ್ ಅವಿದ್ಯಾಗ್ರನ್ಥಿಂ ಗ್ರನ್ಥಿಮಿವ ದೃಢೀಭೂತಾಮ್ ಅವಿದ್ಯಾವಾಸನಾಮ್ ವಿಕಿರತಿ ವಿಕ್ಷಿಪತಿ ನಾಶಯತಿ ಇಹ ಜೀವನ್ನೇವ ನ ಮೃತಃ ಸನ್ ಹೇ ಸೋಮ್ಯ ಪ್ರಿಯದರ್ಶನ ॥

## (ಭಾಷ್ಯಾರ್ಥ)

''ವಿಶ್ವಂ'' ಇದೆಲ್ಲವೂ ಪುರುಷನೇ ; ಪುರುಷನಿಗಿಂತ ಬೇರೆಯಾಗಿ 'ವಿಶ್ವ' ವೆಂಬುದು ಯಾವದೂ ಇರುವದಿಲ್ಲ. ಆದ್ದರಿಂದ ''ಪೂಜ್ಯರೆ, ಯಾವದನ್ನು ಅರಿತುಕೊಂಡರೆ ಇದೆಲ್ಲವನ್ನೂ ಅರಿತುಕೊಂಡಂತಾಗುವದು ?'' (೧.೧.೩) ಎಂದು (ಹಿಂದೆ) ಕೇಳಿತ್ತಷ್ಟೆ, ಅಗೊ, ಅದನ್ನು ಹೇಳಿದಂತಾಯಿತು. ಏಕೆಂದರೆ ಈ ಎಲ್ಲಕ್ಕೂ ಕಾರಣನಾದ ಪರಮಾತ್ಮನನ್ನು ಅರಿತುಕೊಂಡರೆ, ಈ ವಿಶ್ವವು ಪುರುಷನೇ, ಮತ್ತೇನೂ ಇಲ್ಲ - ಎಂದು ಅರಿತುಕೊಂಡಂತೆ ಆಗುತ್ತದೆ. ಈ ವಿಶ್ವವು ಎಂದರೆ ಯಾವದು ? ಎಂದರೆ (ಮಂತ್ರವು) ಹೇಳುತ್ತಿದೆ : ಕರ್ಮ ಎಂದರೆ ಅಗ್ನಿಹೋತ್ರವೇ ಮುಂತಾದ ರೂಪದ (ಕರ್ಮವು ಒಂದು) ; ತಪಸ್ಸು ಎಂದರೆ ಅದರಿಂದಾಗುವ ಫಲವಾದ ಜ್ಞಾನವೆಂಬುದು ಇನ್ನೊಂದು - ಇಷ್ಟೇ ಅಲ್ಲವೆ, ಈ ಎಲ್ಲ(ವೆಂಬುದು) ? ಆ ಇದು ಬ್ರಹ್ಮನ ಕಾರ್ಯವು. ಆದ್ದರಿಂದ

ಎಲ್ಲವೂ ಪರಾಮೃತವಾದ ಎಂದರೆ ಹೆಚ್ಚಿನ ಅಮೃತವಾದ[1] ಬ್ರಹ್ಮವೇ.[2] ಯಾವನು (ಇದು) **ಗುಹೆಯಲ್ಲಿ** ಎಂದರೆ ಸರ್ವಪ್ರಾಣಿಗಳ ಹೃದಯದಲ್ಲಿ[3] ಇಡಲ್ಪಟ್ಟಿರುವದು, ಇರುವದು, ನಾನೇ - ಎಂದು ಅರಿತುಕೊಳ್ಳುವನೋ ಅವನು ಎಲೈ ಸೋಮ್ಯನೆ, ಪ್ರೀತಿಪಾತ್ರನೆ, ಹೀಗೆಯೇ ಅರಿತುಕೊಂಡದ್ದರಿಂದ **ಅವಿದ್ಯಾಗ್ರಂಥಿಯನ್ನು** ಎಂದರೆ ಗಂಟಿನಂತೆ ಬಿಗಿಯಾಗಿರುವ ಅವಿದ್ಯಾವಾಸನೆಯನ್ನು[4] **ಇಲ್ಲಿ** ಎಂದರೆ ಬದುಕಿರುವಾಗಲೇ, ಸತ್ತಮೇಲಲ್ಲ,[5] **ಕಳಚಿಕೊಳ್ಳುತ್ತಾನೆ,** ಬಿಚ್ಚಿಕೊಳ್ಳುತ್ತಾನೆ, ನಾಶಪಡಿಸಿಕೊಳ್ಳುತ್ತಾನೆ - ಎಂದರ್ಥ.

1. ಬ್ರಹ್ಮವು ಮುಖ್ಯಾರ್ಥದಲ್ಲಿ ಅಮೃತವು. ಕರ್ಮದ ಫಲವಾದ ಸ್ವರ್ಗ ಮುಂತಾದವು ಗೌಣಾರ್ಥದಲ್ಲಿ ಅಮೃತ.

2. ಬ್ರಹ್ಮದ ಕಾರ್ಯವಾದ್ದರಿಂದ ಬ್ರಹ್ಮಕ್ಕಿಂತ ಬೇರೆಯಿಲ್ಲ.

3. ಬುದ್ಧಿಗೆ ಸಾಕ್ಷಿಯಾಗಿ. ತೈ.ಭಾ.ಭಾ ೧೦೮ ನ್ನು ನೋಡಿರಿ.

4. ಅನಾದಿಯಾಗಿ ದೇಹಪ್ರಾಣಮನೋಬುದ್ಧಿಗಳೇ ನಾವೆಂಬ ತಪ್ಪುತಿಳಿವಳಿಕೆಯ ವಾಸನೆಯು ಜೀವರ ಮನಸ್ಸಿನಲ್ಲಿ ಬಲವಾಗಿ ಗಂಟುಕಟ್ಟಿಕೊಂಡುಬಿಟ್ಟಿರುತ್ತದೆ.

5. ವಿದೇಹಮುಕ್ತಿಯೇ ಮುಖ್ಯ ಎಂಬವರ ಪಕ್ಷವನ್ನು ಇಲ್ಲಿ ಖಂಡಿಸಿದೆ. ಮುಂದೆ ೩-೨-೯ರ ಭಾಷ್ಯವನ್ನೂ ಕ.ಭಾ. ೨-೨-೧, ೨-೩-೧೪, ಬೃ.ಭಾ. ೪-೪-೬ 'ಬ್ರಹ್ಮಾಪ್ಯೇತಿ' ಎಂಬುದರ ವ್ಯಾಖ್ಯಾನವನ್ನೂ ನೋಡಿ.

# ಎರಡನೆಯ ಮುಂಡಕ-ಎರಡನೆಯ ಖಂಡ

## ಅಕ್ಷರವನ್ನು ಅರಿತುಕೊಳ್ಳುವ ಬಗೆ

(ಭಾಷ್ಯ)

೭೧. ಅರೂಪಂ ಸತ್, ಅಕ್ಷರಂ ಕೇನ ಪ್ರಕಾರೇಣ ವಿಜ್ಞೇಯಮಿತಿ ? ಉಚ್ಯತೇ -

(ಭಾಷ್ಯಾರ್ಥ)

ಅಕ್ಷರವು (ಯಾವ) ರೂಪವೂ ಇಲ್ಲದ್ದಾಗಿರುವದರಿಂದ ಯಾವ ಪ್ರಕಾರದಿಂದ (ಅದನ್ನು) ಅರಿತುಕೊಳ್ಳಬೇಕು ? ಎಂದರೆ (ಇಲ್ಲಿ) ಹೇಳಲಾಗುತ್ತದೆ :

**ಆವಿಃ ಸನ್ನಿಹಿತಂ ಗುಹಾಚರಂ ನಾಮ**
**ಮಹತ್ಪದಮತ್ರೈತತ್ ಸಮರ್ಪಿತಮ್ ।**
**ಏಜತ್ ಪ್ರಾಣನ್ನಿಮಿಷಚ್ಚ ಯದೇತಜ್ಜಾನಥ ಸದ-**
**ಸದ್ವರೇಣ್ಯಂ ಪರಂ ವಿಜ್ಞಾನಾದ್ಯದ್ವರಿಷ್ಠಂ ಪ್ರಜಾನಾಮ್ ॥೧॥**

೧. ಸ್ಪಷ್ಟವಾಗಿ ಸಮೀಪದಲ್ಲಿದ್ದುಕೊಂಡು ಗುಹಾಚರ ಎನ್ನಿಸಿಕೊಂಡಿರುವದು. ದೊಡ್ಡ ಪದವಾದ ಇದರಲ್ಲಿ ಅಲುಗಾಡುವ, ಉಸಿರಾಡುವ, ಕಣ್ಣು ಮಿಟಕಿಸುವ ಇದು ಸಮರ್ಪಿತವಾಗಿರುತ್ತದೆ. ಯಾವ ಇದನ್ನು ಸದಸತ್ತೆಂದೂ, ವರೇಣ್ಯವೆಂದೂ ಪ್ರಜೆಗಳ ವಿಜ್ಞಾನಕ್ಕಿಂತ ಬೇರೆ (ಇರುವದೆಂದೂ) ವರಿಷ್ಠವಾದದ್ದೆಂದೂ ತಿಳಿಯಿರಿ.

(ಭಾಷ್ಯ)

೭೨. ಆವಿಃ ಪ್ರಕಾಶಂ ಸನ್ನಿಹಿತಂ ವಾಗಾದ್ಯುಪಾಧಿಭಿಃ ''ಜ್ವಲತಿ ಭ್ರಾಜತಿ'' (?) ಇತಿ ಶ್ರುತ್ಯನ್ತರಾತ್ ಶಬ್ದಾದೀನ್ ಉಪಲಭಮಾನವತ್ ಅವಭಾಸತೇ । ದರ್ಶನಶ್ರವಣಮನನವಿಜ್ಞಾನಾದ್ಯುಪಾಧಿಧರ್ಮೈಃ ಆವಿರ್ಭೂತಂ ಸತ್ ಲಕ್ಷ್ಯತೇ ಹೃದಿ ಸರ್ವಪ್ರಾಣಿನಾಮ್ । ಯದೇತತ್ ಆವಿರ್ಬ್ರಹ್ಮ[1] ಸನ್ನಿಹಿತಂ ಸಮ್ಯಕ್ ಸ್ಥಿತಂ ಹೃದಿ ತದ್ ಗುಹಾಚರಂ ನಾಮ ಗುಹಾಯಾಂ ಚರತಿ ಇತಿ ದರ್ಶನಶ್ರವಣಾದಿಪ್ರಕಾರೈಃ ಗುಹಾಚರಮ್ ಇತಿ ಪ್ರಖ್ಯಾತಮ್ । ಮಹತ್ ಸರ್ವಮಹತ್ತ್ವಾತ್ ಪದಂ ಪದ್ಯತೇ ಸರ್ವೇಣ ಇತಿ । ಸರ್ವಪದಾರ್ಥಾಸ್ಪದತ್ವಾತ್ । ಕಥಂ ತತ್ 'ಮಹತ್ಪದಮ್' ಇತಿ ? ಉಚ್ಯತೇ ಯತಃ ಅತ್ರ ಅಸ್ಮಿನ್ ಬ್ರಹ್ಮಣಿ ಏತತ್ ಸರ್ವಂ

1. ಶ್ರುತಿಯಲ್ಲಿರುವ ''ಆವಿಃ'' ಎಂಬುದರ ಅನುವಾದವಿದು ಆದ್ದರಿಂದ 'ಆವಿರ್ಭೂತಮ್'' ಎಂಬ ಕಾ॥ ವಾ॥ ಪಾಠವು ಅನವಶ್ಯ.

ಸಮರ್ಪಿತಂ ಸಂಪ್ರವೇಶಿತಮ್[1] ರಥನಾಭಾವಿವ ಅರಾಃ । ಏಜತ್ ಚಲತ್ ಪಕ್ಷ್ಯಾದಿ । ಪ್ರಾಣತ್ ಪ್ರಾಣಿತಿ ಇತಿ । ಪ್ರಾಣಾಪಾನಾದಿಮತ್ ಮನುಷ್ಯಪಶ್ವಾದಿ । ನಿಮಿಷಚ್ಚ ಯನ್ನಿಮೇಷಾದಿ ಕ್ರಿಯಾವತ್ । ಯಚ್ಚ ಅನಿಮಿಷತ್ । ಚಶಬ್ದಾತ್ । ಸಮಸ್ತ ಮೇತದ್ ಅತ್ರೈವ ಬ್ರಹ್ಮಣಿ ಸಮರ್ಪಿತಮ್ ।

(ಭಾಷ್ಯಾರ್ಥ)

ಸ್ಪಷ್ಟವಾಗಿ ಎಂದರೆ ಬೆಳಗಿ ತೋರುತ್ತಾ ಸನ್ನಿಹಿತವಾಗಿ ವಾಕ್ಕು ಮುಂತಾದ ಉಪಾಧಿಗಳಿಂದ "ಉರಿಯುತ್ತದೆ, ಹೊಳೆಯುತ್ತದೆ" (?) ಎಂಬ ಬೇರೊಂದು ಶ್ರುತಿಯಲ್ಲಿರುವಂತೆ ಶಬ್ದಾದಿಗಳನ್ನು ಅರಿಯುತ್ತಿರುವಂತೆ ತೋರುತ್ತದೆ.[2] ನೋಡುವದು, ಕೇಳುವದು, ಯೋಚಿಸುವದು, ಅರಿತುಕೊಳ್ಳುವದು - ಮುಂತಾದ ಉಪಾಧಿಗಳ ಧರ್ಮದಿಂದ ಚೆನ್ನಾಗಿ ತೋರಿಕೊಂಡು[3] ಎಲ್ಲಾ ಪ್ರಾಣಿಗಳ ಹೃದಯದಲ್ಲಿಯೂ ಕಂಡುಬರುತ್ತಿರುವದು. ಯಾವ ಈ ಸ್ಪಷ್ಟವಾಗಿರುವ ಬ್ರಹ್ಮವು ಸಮೀಪದಲ್ಲಿದ್ದುಕೊಂಡಿರುವದೋ ಅದು ಗುಹಾಚರವೆನಿಸುವದು ; ಗುಹೆಯಲ್ಲಿ[4] ನೋಡುವದು, ಕೇಳುವದು ಮುಂತಾದ ಪ್ರಕಾರಗಳಿಂದ ಸಂಚರಿಸುತ್ತಿದೆಯಾದ್ದರಿಂದ 'ಗುಹಾಚರ' ಎಂದು ಪ್ರಸಿದ್ಧವಾಗಿರುವದು. (ಅದು) ಎಲ್ಲಕ್ಕೂ ಹೆಚ್ಚಿನದಾದ್ದರಿಂದ ದೊಡ್ಡದು, ಎಲ್ಲರಿಂದಲೂ 'ಪದ್ಯತೇ'[5] ಪಡೆಯಲ್ಪಡುತ್ತದೆಯಾದ್ದರಿಂದ ಪದವು ; ಏಕೆಂದರೆ (ಅದು) ಎಲ್ಲಾ ಪದಗಳಿಗೂ ಅರ್ಥಗಳಿಗೂ[6] ಆಧಾರವಾಗಿರುತ್ತದೆ. ಅದು ದೊಡ್ಡ ಪದವೆಂಬುದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ : ಏಕೆಂದರೆ ಇದರಲ್ಲಿ ಎಂದರೆ ಈ ಬ್ರಹ್ಮದಲ್ಲಿ ಇದೆಲ್ಲವೂ ಸಮರ್ಪಿತವಾಗಿರುತ್ತದೆ. ಎಂದರೆ ಗಾಡಿಯ ಚಕ್ರದ ಗುಂಬದಲ್ಲಿ ಹಾರೆಕೋಲುಗಳು (ಸೇರಿಸಲ್ಪಟ್ಟಿರುವಂತೆ)[7] ಸೇರಿಸಲ್ಪಟ್ಟಿರುತ್ತದೆ.

1. ಇದು ವಾ।। ಪಾಠ ; ಮಿಕ್ಕ ಪುಸ್ತಕಗಳಲ್ಲಿ 'ಪ್ರವೇಶಿತಮ್' ಎಂದಿಷ್ಟೇ ಇದೆ.

2. ನಿಜವಾಗಿ ಅರಿಯುವದೆಂಬ ವಿಶೇಷಧರ್ಮವು ಅದರಲ್ಲಿಲ್ಲ. ಗೀ.ಭಾ. ೧೩-೧೪.

3. ಈ ಉಪಾಧಿವ್ಯಾಪಾರಗಳುಳ್ಳವನೇ ಆತ್ಮನೆಂದು ಸ್ಪಷ್ಟವಾಗಿ ತಿಳಿಯಬರುತ್ತದೆ. ಗೀ.ಭಾ.೧೫-೧೦. ಆಯಾ ಕರ್ಮಗಳಿಂದ ಬರುವ ಕರ್ಮನಾಮಗಳಾದ ದ್ರಷ್ಟಾ ಮುಂತಾದ ಹೆಸರುಗಳನ್ನು ಬಿಟ್ಟರೆ ಅವುಗಳೆಲ್ಲವನ್ನೂ ತನ್ನ ಚೈತನ್ಯದಿಂದ ವ್ಯಾಪಿಸಿಕೊಂಡಿರುವ ಆತ್ಮನೆಂದು ತಿಳಿದುಕೊಳ್ಳಬೇಕು ಎಂದಭಿಪ್ರಾಯ. ಬೃ.ಭಾ. ೧-೪-೭.

4. ಹೃದಯದಲ್ಲಿ.

5. ಮಾಂಡೂಕ್ಯ ೨೮ ಭಾಷ್ಯದಲ್ಲಿ 'ಪಾದ' ಶಬ್ದದ ನಿರ್ವಚನವನ್ನು ನೋಡಿರಿ.

6. ಪದರೂಪವಾಗಿಯೂ ಅರ್ಥರೂಪವಾಗಿಯೂ ತೋರುವದೆಲ್ಲವೂ ಈ ಪರಮಾತ್ಮ ವಸ್ತುವಿನಲ್ಲಿಯೇ ಆರೋಪಿತವಾಗಿರುವದರಿಂದ ಇದು 'ಪದವು' ಆಧಾರವು ಎನಿಸಿಕೊಂಡಿದೆ. ಮಾಂ. ೨೮ ಭಾಷ್ಯವನ್ನು ನೋಡಿರಿ.

7 ಪ್ರ. ೬-೬.

(ಎಲ್ಲವೂ ಎಂದರೆ) ಅಲುಗಾಡುವದು, ಓಡಾಡುವ ಹಕ್ಕಿ ಮುಂತಾದದ್ದು ; ಉಸಿರಾಡುವದು, ಪ್ರಾಣಾಪಾನಗಳೇ ಮುಂತಾದದ್ದಿರುವ ಮನುಷ್ಯ, ಪಶು ಮುಂತಾದದ್ದು ; ಕಣ್ಣುಮಿಟುಕಿಸುವದು, ಕಣ್ಣು ಮಿಟುಕಿಸುವದೇ ಮುಂತಾದ ವ್ಯಾಪಾರವುಳ್ಳದ್ದೂ[1] ; "ನಿಮಿಷಚ್ಚ" ಎಂಬಲ್ಲಿ ಚ (ಕೂಡ) ಎಂಬ ಶಬ್ದವಿರುವದರಿಂದ ಕಣ್ಣಾಡಿಸದೆ ಇರುವದುಕೂಡ[2] ಇವೆಲ್ಲವೂ ಇದೇ ಬ್ರಹ್ಮದಲ್ಲಿ ಸೇರಿಕೊಂಡಿರುತ್ತದೆ.

(ಭಾಷ್ಯ)

೭೩. ಏತತ್ ಯದಾಸ್ಪದಂ ಸರ್ವಂ ಜಾನಥ ಹೇ ಶಿಷ್ಯಾಃ ಅವಗಚ್ಛತ ತದಾತ್ಮಭೂತಂ ಭವತಾಂ ಸದಸತ್ಸ್ವರೂಪಮ್ ಸದಸತೋಃ ಮೂರ್ತಾಮೂರ್ತಯೋಃ ಸ್ಥೂಲಸೂಕ್ಷ್ಮಯೋಃ ತದ್ವ್ಯತಿರೇಕೇಣ ಅಭಾವಾತ್ । ವರೇಣ್ಯಂ ವರಣೀಯಮ್ । ತದೇವ ಹಿ ಸರ್ವಸ್ಯ ನಿತ್ಯತ್ವಾತ್ ಪ್ರಾರ್ಥನೀಯಮ್ । ಪರಂ ವ್ಯತಿರಿಕ್ತಂ ವಿಜ್ಞಾನಾತ್ 'ಪ್ರಜಾನಾಮ್' ಇತಿ ವ್ಯವಹಿತೇನ ಸಂಬನ್ಧಃ । ಯತ್ ಲೌಕಿಕವಿಜ್ಞಾನಾಗೋಚರಮ್ ಇತ್ಯರ್ಥಃ । ಯತ್ ವರಿಷ್ಠಂ ವರತಮಂ ಸರ್ವಪದಾರ್ಥೇಷು ವರೇಷು । ತದ್ ಹಿ ಏಕಂ ಬ್ರಹ್ಮ ಅತಿಶಯೇನ ವರಂ ಸರ್ವದೋಷರಹಿತತ್ವಾತ್ ॥

(ಭಾಷ್ಯಾರ್ಥ)

ಇದನ್ನು - ಯಾವದು ಎಲ್ಲಕ್ಕೂ ಆಧಾರವಾಗಿರುತ್ತದೆಯೋ ಎಲೈ ಶಿಷ್ಯರಿರ, ನಿಮ್ಮಗಳ ಆತ್ಮವಾಗಿರುವ ಈ (ಬ್ರಹ್ಮವನ್ನು) - ಸದಸತ್ತುಗಳ ಸ್ವರೂಪವಾಗಿರುವದೆಂದು ಅರಿತುಕೊಳ್ಳಿರಿ, ನಿಶ್ಚಯಿಸಿಕೊಳ್ಳಿರಿ. ಏಕೆಂದರೆ ಸತ್ತು, ಅಸತ್ತು, ಎಂದರೆ ಮೂರ್ತಾಮೂರ್ತಗಳು ; (ಅವುಗಳು) ಸ್ಥೂಲವಾಗಿರಲಿ ಸೂಕ್ಷ್ಮವಾಗಿರಲಿ, ಅದನ್ನು ಬಿಟ್ಟು ಬೇರೆ ಇರುವದಿಲ್ಲ.[3] (ಇದು) ವರೇಣ್ಯವು, ಬಯಸತಕ್ಕದ್ದು ; ನಿತ್ಯವಾಗಿರುವದರಿಂದ ಇದೊಂದೇ ಪ್ರತಿಯೊಬ್ಬನೂ ಬಯಸತಕ್ಕದ್ದಾಗಿರುತ್ತದೆ. (ಇದು) ವಿಜ್ಞಾನಕ್ಕಿಂತ ಪರವು, ಬೇರೆಯಾಗಿರುವದು ; ('ವಿಜ್ಞಾನಾತ್' ಎಂಬ ಮಾತನ್ನು) 'ಪ್ರಜಾನಾಮ್' (ಪ್ರಜೆಗಳ) ಎಂಬ ದೂರ ಇರುವ ಮಾತಿನೊಡನೆ ಸಂಬಂಧಮಾಡಿಕೊಳ್ಳಬೇಕು. ಇದು ಲೋಕದ ಜನರ[4] ಅರಿವಿಗೆ ವಿಷಯವಲ್ಲ ಎಂದರ್ಥ. ಇದು ವರಿಷ್ಠ

---

1. ಜಂಗಮವಾದದ್ದು.

2. ಸ್ಥಾವರವಾದದ್ದು, ಜಡವಾದದ್ದು ಸಹ. ಜಡಾಜಡವಸ್ತುಗಳೆಲ್ಲವೂ ಬ್ರಹ್ಮದಲ್ಲಿಯೇ ಆರೋಪಿತವಾಗಿರುತ್ತವೆ. ಎಲ್ಲಕ್ಕೂ ಬ್ರಹ್ಮವೇ ಆಧಾರವು.

3. ಆದ್ದರಿಂದಲೇ ಮೂರ್ತಾಮೂರ್ತಗಳನ್ನು ಅಲ್ಲಗಳೆದು ಅದರ ನಿಜವಾದ ಸ್ವರೂಪವನ್ನು ತಿಳಿದುಕೊಳ್ಳಬೇಕಾಗಿದೆ. ಬೃ.ಭಾ. ೨-೩-೧ ನ್ನು ನೋಡಿ.

4. ಶಾಸ್ತ್ರಜ್ಞಾನವಿಲ್ಲದ ಸಾಮಾನ್ಯಜನರ ಅರಿವು ಇಂದ್ರಿಯಗಳ ಮೂಲಕ

ವಾದದ್ದು, ಉತ್ತಮವಾದ ಪದಾರ್ಥಗಳಿಗೆಲ್ಲಕ್ಕಿಂತಲೂ ಹೆಚ್ಚು ಉತ್ತಮವಾದದ್ದು ; ಈ ಬ್ರಹ್ಮವೊಂದೇ ಅತಿಶಯವಾಗಿ ಉತ್ತಮವಾಗಿರುವದು, ಏಕೆಂದರೆ ಇದರಲ್ಲಿ ಯಾವ ದೋಷಗಳೂ ಇರುವದಿಲ್ಲ. (ಹೀಗೆಂದು ಬ್ರಹ್ಮವನ್ನು ತಿಳಿದುಕೊಳ್ಳಿರಿ).

**ಯದರ್ಚಿಮದ್ ಯದಣುಭ್ಯೋಽಣು ಚ**
**ಯಸ್ಮಿಂಲ್ಲೋಕಾ ನಿಹಿತಾ ಲೋಕಿನಶ್ಚ ।**
**ತದೇತದಕ್ಷರಂ ಬ್ರಹ್ಮ ಸ ಪ್ರಾಣಸ್ತದು ವಾಙ್ಮನಃ ।**
**ತದೇತತ್ ಸತ್ಯಂ ತದಮೃತಂ ತದ್ವೇದ್ಧವ್ಯಂ ಸೋಮ್ಯ ವಿದ್ಧಿ ॥೨॥**

೨. ಯಾವದು ಪ್ರಕಾಶವುಳ್ಳದ್ದೋ, ಯಾವದು ಅಣುಗಳಿಗಿಂತಲೂ ಅಣುವಾಗಿರುವದೋ, ಯಾವದರಲ್ಲಿ ಲೋಕಗಳೂ ಲೋಕಿಗಳೂ ಇಡಲ್ಪಟ್ಟಿರುವರೋ ಆ ಇದು ಅಕ್ಷರವೆಂಬ ಬ್ರಹ್ಮವು, ಅದೇ ಪ್ರಾಣವು, ಅದೇ ವಾಙ್ಮನಸ್ಸು ; ಆ ಇದು ಸತ್ಯವು, ಅದು ಅಮೃತವಾದದ್ದು, ಅದೇ ಹೊಡೆಯಲ್ಪಡತಕ್ಕದ್ದು. ಎಲೈ ಸೋಮ್ಯ, (ಅದನ್ನು ಗುರಿಯಿಟ್ಟು) ಹೊಡೆ.

(ಭಾಷ್ಯ)

೭೪. ಕಿಂಚ ಯತ್ ಅರ್ಚಿಮತ್ ದೀಪ್ತಿಮತ್ । ತದ್ದೀಪ್ತ್ಯಾ ಹಿ ಆದಿತ್ಯಾದಿ ದೀಪ್ಯತೇ ಇತಿ ದೀಪ್ತಿಮತ್ ಬ್ರಹ್ಮ । ಕಿಂಚ ಯತ್ ಅಣುಭ್ಯಃ ಶ್ಯಾಮಾಕಾದಿಭ್ಯೋಽಪಿ ಅಣು ಚ ಸೂಕ್ಷ್ಮಮ್ । ಚಶಬ್ದಾತ್ ಸ್ಥೂಲೇಭ್ಯೋಽಪಿ ಅತಿಶಯೇನ ಸ್ಥೂಲಂ ಪೃಥಿವ್ಯಾದಿಭ್ಯಃ । ಯಸ್ಮಿನ್ ಲೋಕಾಃ ಭೂರಾದಯಃ ನಿಹಿತಾಃ ಸ್ಥಿತಾಃ । ಯೇ ಚ ಲೋಕಿನಃ ಲೋಕನಿವಾಸಿನಃ ಮನುಷ್ಯಾದಯಃ । ಚೈತನ್ಯಾಶ್ರಯಾ ಹಿ ಸರ್ವೇ ಪ್ರಸಿದ್ಧಾಃ । ತದೇತತ್ ಸರ್ವಾಶ್ರಯಮ್ ಅಕ್ಷರಂ ಬ್ರಹ್ಮ । ಸ ಪ್ರಾಣಃ । ತದು ವಾಙ್ಮನಃ । ವಾಕ್ಚ ಮನಶ್ಚ । ಸರ್ವಾಣಿ ಚ ಕರಣಾನಿ ತದು ಅನ್ತಶ್ಚೈತನ್ಯಮ್ । ಚೈತನ್ಯಾಶ್ರಯೋ ಹಿ ಪ್ರಾಣೇನ್ದ್ರಿಯಾದಿಸರ್ವಸಂಘಾತಃ । "ಪ್ರಾಣಸ್ಯ ಪ್ರಾಣಮ್" (ಬೃ. ೪-೪-೧೮) ಇತಿ ಶ್ರುತ್ಯನ್ತರಾತ್ । ಯತ್ ಪ್ರಾಣಾದೀನಾಮ್ ಅನ್ತಶ್ಚೈತನ್ಯಮ್ ಅಕ್ಷರಮ್ ತದೇತತ್ ಸತ್ಯಮ್ । ಅವಿತಥಮ್ । ಅತಃ ಅಮೃತಮ್ ಅವಿನಾಶಿ । ತತ್ ವೇದ್ಧವ್ಯಂ ಮನಸಾ ತಾಡಯಿತವ್ಯಮ್ । ತಸ್ಮಿನ್ ಮನಸಃ ಸಮಾಧಾನಂ ಕರ್ತವ್ಯಮ್ ಇತ್ಯರ್ಥಃ । ಯಸ್ಮಾತ್ ಏವಮ್, ಹೇ ಸೋಮ್ಯ, ವಿದ್ಧಿ ಅಕ್ಷರೇ ಚೇತಃ ಸಮಾಧತ್ಸ್ವ ॥

---

ಹೊರಗಣಪದಾರ್ಥಗಳನ್ನು ಅರಿಯಬಲ್ಲದು ; ಆ ಅರಿವಿಗೆ ಆತ್ಮನು ಸಿಕ್ಕನು. ಏಕೆಂದರೆ ಅವನು ಹೊರಗಿಲ್ಲ, ಅರಿಯುವವರ ಸ್ವರೂಪನೇ ಆಗಿರುತ್ತಾನೆ.

## (ಭಾಷ್ಯಾರ್ಥ)

ಮತ್ತು ಯಾವದು ಪ್ರಕಾಶವುಳ್ಳದ್ದೋ ಬೆಳಕುಳ್ಳದ್ದೋ - ಇದರ ಬೆಳಕಿನಿಂದಲೇ ಅಲ್ಲವೆ, ಆದಿತ್ಯನೇ ಮುಂತಾದದ್ದು ಬೆಳಗುತ್ತದೆ ? ಆದ್ದರಿಂದ ಬ್ರಹ್ಮವು ಬೆಳಕುಳ್ಳದ್ದು - ಮತ್ತು ಯಾವದು ಸಾವೆ ಮುಂತಾದ ಅಣುಗಳಿಗಿಂತಲೂ ಅಣುವಾಗಿರುವದೋ ಎಂದರೆ (ಅಷ್ಟು) ಸೂಕ್ಷ್ಮವಾಗಿರುವದೋ "ಚ" (ಊ) ಎಂಬ ಮಾತಿರುವದರಿಂದ ಸ್ಥೂಲವಾಗಿರುವ ಪೃಥ್ವಿ ಮುಂತಾದವುಗಳಿಗಿಂತಲೂ ಸ್ಥೂಲವಾಗಿರುವದೋ (ಎಂದೂ ಸೇರಿಸಿಕೊಳ್ಳಬೇಕು[1]). ಯಾವದರಲ್ಲಿ 'ಭೂಃ' ಮುಂತಾದ ಲೋಕಗಳು ಇಡಲ್ಪಟ್ಟಿರುವವೋ ಎಂದರೆ ಇರುವವೋ ಮತ್ತು ಲೋಕಿಗಳೂ ಎಂದರೆ (ಆ) ಲೋಕಗಳಲ್ಲಿ ವಾಸಮಾಡುವ ಮನುಷ್ಯರು ಮುಂತಾದ (ಪ್ರಾಣಿಗಳೂ) ಇರುವವೋ- ಚೈತನ್ಯವನ್ನು ಆಶ್ರಯಿಸಿಕೊಂಡೇ ಅಲ್ಲವೆ, ಎಲ್ಲರೂ (ಇರುತ್ತಾರೆಂದು) ಪ್ರಸಿದ್ಧವಾಗಿದೆ ? - ಆ ಇಂಥ ಸರ್ವಾಶ್ರಯವಾಗಿರುವದೇ[2] ಅಕ್ಷರವೆಂಬ ಬ್ರಹ್ಮವು. ಅದೇ ಪ್ರಾಣವು ; ಅದೇ ವಾಙ್ಮನಸ್ಸು ಎಂದರೆ ವಾಕ್ಕೂ ಮನಸ್ಸೂ (ಅದೇ). ಎಲ್ಲಾ ಕರಣಗಳೂ (ಅವುಗಳ) ಒಳಗಿರುವ ಅದೇ ಚೈತನ್ಯವೇ.[3] ಪ್ರಾಣ, ಇಂದ್ರಿಯ ಮುಂತಾದವುಗಳಿಂದಾಗಿರುವ ಪ್ರತಿಯೊಂದು ಸಂಘಾತವೂ[4] ಚೈತನ್ಯವನ್ನೇ ಅಲ್ಲವೆ, ಆಶ್ರಯಿಸಿಕೊಂಡಿರುತ್ತದೆ ? "ಪ್ರಾಣಕ್ಕೆ ಪ್ರಾಣವು" (ಬೃ. ೪-೪-೧೮) ಎಂಬ ಬೇರೊಂದು ಶ್ರುತಿಯೂ (ಇದಕ್ಕೆ ಬೆಂಬಲವಾಗಿದೆ). ಪ್ರಾಣವೇ ಮುಂತಾದವುಗಳ ಒಳಗಿನ ಚೈತನ್ಯರೂಪವಾದ[5] ಅಕ್ಷರವೆಂಬುದಿದೆಯಲ್ಲ, ಅದು ಸತ್ಯವು, ಹುಸಿತೋರಿಕೆಯಲ್ಲ ; ಆದ್ದರಿಂದ[6] ಅದು ಅಮೃತವಾದದ್ದು ಎಂದರೆ ನಾಶವಿಲ್ಲದ (ಸ್ವಭಾವ)ದ್ದು.

1. ಅಣುವಿಗಿಂತಲೂ ಅಣುವಾಗಿ ದೊಡ್ಡದಕ್ಕಿಂತಲೂ ದೊಡ್ಡದು ಎಂದದ್ದರಿಂದ ಇದು ಅನಂತವಾದದ್ದು ಎಂದಂತೆ ಆಯಿತು. ಸಾವೆ, ಪೃಥಿವಿ ಎಂಬ ಮಾತುಗಳು ಛಾಂ. ಭಾ. ೩-೧೪-೩ನ್ನು ಸೂಚಿಸುವವು.

2. ಎಲ್ಲಕ್ಕೂ ಜನ್ಮಕ್ಕೆ ಕಾರಣವಾಗಿರುವದು ಅಕ್ಷರವೆಂದು ಹಿಂದೆ ಹೇಳಲಾಗಿತ್ತು ; ಎಲ್ಲವೂ ಇದ್ದುಕೊಂಡಿರುವದಕ್ಕೆ ಆಶ್ರಯವಾಗಿರುವದು ಅಕ್ಷರವೆಂದು ಈಗ ಹೇಳಲಾಗಿದೆ.

3. ಹೊರಗಿನ ಲೋಕಗಳೇ ಅಲ್ಲದೆ ಆಧ್ಯಾತ್ಮಿಕವಾದ ವಾಙ್ಮನಃಕರಣಗಳೂ ಚೈತನ್ಯವನ್ನೇ ಆಶ್ರಯಿಸಿರುತ್ತವೆ ಎಂದರ್ಥ. ಕೇ.ಭಾ. ೧-೨ ನೋಡಿ.

4. ಸಂಘಾತವೆಂಬ ಮಾತು ಸಂಹತವಾದದ್ದು ಪರಾರ್ಥವಾಗಿರುವದರಿಂದ ಯಾವದಕ್ಕಾಗಿ ವಾಕ್ಕು, ಮನಸ್ಸು-ಮುಂತಾದವುಗಳು ವ್ಯಾಪಾರಮಾಡುವವೋ ಅಂಥ ಚೈತನ್ಯವು ಅವಶ್ಯವಾಗಿರಬೇಕು ಎಂಬುದನ್ನು ಸೂಚಿಸುವದು. ಕೇ.ಭಾ.ಭಾ. ೧೬. ಐ.ಭಾ. ೧-೧ ನೋಡಿರಿ.

5. ಕೇ. ೧-೯.

6. ಹುಸಿತೋರಿಕೆಯಾಗಿದ್ದರೆ ನಡುವೆ ತೋರಿ ಆಮೇಲೆ ಕಾಣದೆಹೋಗುವದರಿಂದ ವಿನಾಶಿಯಾಗಿರುತ್ತಿತ್ತು. ತೈ. ೨-೧ರಲ್ಲಿ "ಸತ್ಯಮ್" ಎಂಬುದರ ಭಾಷ್ಯವನ್ನು ನೋಡಿ.

ಇದನ್ನು ಹೊಡೆಯಬೇಕು, ಮನಸ್ಸಿನಿಂದ ತಾಡನೆಮಾಡಬೇಕು ; ಅದರಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಂಡಿರುವದನ್ನು ಮಾಡಬೇಕು ಎಂದರ್ಥ.[1] ಹೀಗಿರುವದರಿಂದ ಎಲೈ ಸೋಮ್ಯನೆ,[2] (ಅದನ್ನು ಗುರಿಯಿಟ್ಟು ಹೊಡೆ) (ಈ) ಅಕ್ಷರದಲ್ಲಿಯೇ ಚಿತ್ತವನ್ನು (ಸತತವಾಗಿ)ನಿಲ್ಲಿಸಿಕೊ.[3]

## ಓಂಕಾರದ ಮೂಲಕ ಧ್ಯಾನ

**ಧನುರ್ಗೃಹೀತ್ವೌಪನಿಷದಂ ಮಹಾಸ್ತ್ರಂ**
**ಶರಂ ಹ್ಯುಪಾಸಾನಿಶಿತಂ ಸಂದಧೀತ[4] ।**
**ಆಯಮ್ಯ ತದ್ಭಾವಗತೇನ ಚೇತಸಾ**
**ಲಕ್ಷ್ಯಂ ತದೇವಾಕ್ಷರಂ ಸೋಮ್ಯ ವಿದ್ಧಿ ॥೩॥**

೩. ಔಪನಿಷದಮಹಾಸ್ತ್ರವಾದ ಧನುಸ್ಸನ್ನು ತೆಗೆದುಕೊಂಡು ಉಪಾಸನೆಯಿಂದ ಹರಿತವಾಗಿರುವ ಬಾಣವನ್ನು ಜೋಡಿಸಬೇಕು. ಎಳೆದು ಕೊಂಡು ಅದರ ಭಾವನೆಯಲ್ಲಿರುವ ಚಿತ್ತದಿಂದ ಲಕ್ಷ್ಯವಾದ ಅದೇ ಅಕ್ಷರ ವನ್ನು, ಎಲೈ ಸೋಮ್ಯನೆ, ಹೊಡೆ !

### (ಭಾಷ್ಯ)

೭೫. ಕಥಂ ವೇದ್ಧವ್ಯಮಿತಿ ? ಉಚ್ಯತೇ । ಧನುಃ ಇಷ್ವಾಸನಂ ಗೃಹೀತ್ವಾ ಆದಾಯ ಔಪನಿಷದಮ್ ಉಪನಿಷತ್ಸು ಭವಂ ಪ್ರಸಿದ್ಧಂ ಮಹಾಸ್ತ್ರಂ ಮಹಚ್ಚ ತತ್ ಅಸ್ತ್ರಂ ಚ ಮಹಾಸ್ತ್ರಂ ಧನುಃ । ತಸ್ಮಿನ್ ಶರಮ್ । ಕಿಂವಿಶಿಷ್ಟಮಿತಿ ? ಆಹ । ಉಪಾಸಾನಿಶಿತಂ ಸನ್ತತಾಭಿಧ್ಯಾನೇನ ತನೂಕೃತಂ ಸಂಸ್ಕೃತಮ್ ಇತ್ಯೇತತ್ । ಸಂದಧೀತ ಸಂಧಾನಂ ಕುರ್ಯಾತ್ । ಸಂಧಾಯ ಚ ಆಯಮ್ಯ ಆಕೃಷ್ಯ ಸೇನ್ದ್ರಿಯಮ್ ಅನ್ತಃಕರಣಂ ಸ್ವವಿಷಯಾದ್ ವಿನಿವರ್ತ್ಯ । ಲಕ್ಷ್ಯೇ ಏವ ಆವರ್ಜಿತಂ ಕೃತ್ವಾ

1. ಮನಸ್ಸು ಯಾವದನ್ನು ಮತ್ತೆ ಮತ್ತೆ ಚಿಂತಿಸುವದೋ ಅದರಲ್ಲಿ ನಿಂತುಕೊಳ್ಳುವದು. ಆದ್ದರಿಂದ ಅಭ್ಯಾಸದಿಂದ ಮನಸ್ಸನ್ನು ಅಕ್ಷರದಲ್ಲಿಯೇ ನಿಲ್ಲಿಸಿಕೊಳ್ಳಬೇಕು ಎಂಬುದನ್ನು 'ತಾಡನೆಮಾಡಬೇಕು' ಎಂಬ ಮಾತು ತಿಳಿಸುತ್ತದೆ.

2. 'ಅಪ್ಪ', 'ಮಗು' ಎಂದು ಕನ್ನಡದಲ್ಲಿ ಬಳಸುವ ಮಾತುಗಳಂತೆ ಇದು ಪ್ರೀತಿ ಸೂಚಕವಾದ ಶಬ್ದವು.

3. ಅಕ್ಷರವು ನಮ್ಮ ಆತ್ಮನೇ ಆಗಿರುವದರಿಂದ ಇದು ಪ್ರತಿಮೆಯನ್ನು ವಿಷ್ಣುವೆಂದು ಧ್ಯಾನಿಸುವ ರೀತಿಯ ಚಿಂತನೆಯಲ್ಲ ; ನಮ್ಮ ಆತ್ಮನನ್ನು ಬಿಟ್ಟು ಬೇರೆ ಚಿಂತನೆಯನ್ನು ಮಾಡದಿರುವದಕ್ಕೆ ಮಾಡುವ ಪ್ರಯತ್ನವಿದು.

4. ''ಸಂಧಯೀತ'' ಎಂದು ಆ॥ ಪಾಠ.

ಇತ್ಯರ್ಥಃ । ನ ಹಿ ಹಸ್ತೇನೇವ ಧನುಷ ಆಯಮನಮ್ ಇಹ ಸಂಭವತಿ । ತದ್ಭಾವ ಗತೇನ । ತಸ್ಮಿನ್ ಬ್ರಹ್ಮಣಿ ಅಕ್ಷರೇ ಲಕ್ಷ್ಯೇ ಭಾವನಾ ಭಾವಃ ತದ್ಗತೇನ ಚೇತಸಾ ಲಕ್ಷ್ಯಂ ತದೇವ ಯಥೋಕ್ತಲಕ್ಷಣಮ್ ಅಕ್ಷರಮ್ ಸೋಮ್ಯ ವಿದ್ಧಿ ॥

## (ಭಾಷ್ಯಾರ್ಥ)

ಹೇಗೆ ಹೊಡೆಯಬೇಕು ?[1] ಎಂದರೆ (ಈ ಮಂತ್ರವು) ಹೇಳುತ್ತದೆ ; ಧನುಸ್ಸನ್ನು ಎಂದರೆ ಬಾಣಗಳನ್ನಿಡುವ ಆಸನವನ್ನು ತೆಗೆದುಕೊಂಡು ಹಿಡಿದುಕೊಂಡು ಔಪನಿಷದ ಎಂದರೆ ಉಪನಿಷತ್ತುಗಳಲ್ಲಿ ಇರುವ, ಪ್ರಸಿದ್ಧವಾದ ಮಹಾಸ್ತ್ರವನ್ನು ದೊಡ್ಡದಾದ ಅಸ್ತ್ರವಾದ್ದರಿಂದ ಆ ಧನಸ್ಸು ಮಹಾಸ್ತ್ರವು. (ಅಂಥ ಮಹಾಸ್ತ್ರವನ್ನು ತೆಗೆದುಕೊಂಡು) ಅದರಲ್ಲಿ ಬಾಣವನ್ನು - ಎಂಥ ಬಾಣವನ್ನು ? ಎಂದರೆ ಹೇಳುತ್ತಾನೆ. ಉಪಾಸನೆಯಿಂದ ಹರಿತವಾದ, ಬಿಡದೆ ಧ್ಯಾನಮಾಡುವದರಿಂದ ಸೂಕ್ಷ್ಮವಾಗಿರುವ ಎಂದರೆ ಸಂಸ್ಕಾರ ವನ್ನು ಪಡೆದಿರುವ ಎಂದರ್ಥ. (ಇಂಥ ಬಾಣವನ್ನು) - ಜೋಡಿಸಬೇಕು. ಮತ್ತು (ಹೀಗೆ) ಜೋಡಿಸಿದ ಮೇಲೆ ಎಳೆದುಕೊಂಡು, ಸೆಳೆದುಕೊಂಡು ಇಂದ್ರಿಯಗಳೊಡನೆ ಅಂತಃಕರಣವನ್ನು ತಮ್ಮ (ತಮ್ಮ) ವಿಷಯದಿಂದ ಹಿಂತಿರುಗಿಸಿಕೊಂಡು ಗುರಿ ಯಲ್ಲಿಯೇ ಇಟ್ಟು ವಶಗೊಳಿಸಿಕೊಂಡು ಎಂದರ್ಥ ; ಏಕೆಂದರೆ ಕೈಯಿಂದ ಬಿಲ್ಲನ್ನು (ಎಳೆದುಕೊಳ್ಳುವಂತೆ) ಇಲ್ಲಿ ಎಳೆದುಕೊಳ್ಳುವದೆಂಬುದು ಆಗುವಂತಿಲ್ಲ. ಅದರ ಭಾವನೆಯಲ್ಲಿರುವ ಅದರಲ್ಲಿ ಎಂದರೆ (ಆ) ಬ್ರಹ್ಮದಲ್ಲಿ, ಅಕ್ಷರದಲ್ಲಿ, ಗುರಿಯಲ್ಲಿ, ಭಾವನೆ ಎಂದರೆ ಭಾವವು ; ಆ (ಭಾವ)ದಲ್ಲಿರುವ ಚಿತ್ತದಿಂದ ಅದೇ ಲಕ್ಷ್ಯವನ್ನು ಎಂದರೆ ಮೇಲೆ ಹೇಳಿದ ಅಕ್ಷರವನ್ನು, ಎಲೈ ಸೋಮ್ಯನೆ, ಹೊಡೆ.

**ಪ್ರಣವೋ ಧನುಃ ಶರೋ ಹ್ಯಾತ್ಮಾ**
**ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।**
**ಅಪ್ರಮತ್ತೇನ ವೇದ್ಧವ್ಯಂ**
**ಶರವತ್ ತನ್ಮಯೋ ಭವೇತ್** ॥೪॥

೪. ಪ್ರಣವವು ಧನುಸ್ಸು, ಆತ್ಮನೇ ಬಾಣ, ಆ ಬ್ರಹ್ಮವು ಲಕ್ಷ್ಯವೆನಿಸು ತ್ತದೆ. ಎಚ್ಚರತಪ್ಪದೆ ಹೊಡೆಯಬೇಕು. ಬಾಣದಂತೆ ತನ್ಮಯನಾಗಬೇಕು.

## (ಭಾಷ್ಯ)

೭೬. ಯದುಕ್ತಂ ಧನುರಾದಿ ತದುಚ್ಯತೇ । ಪ್ರಣವಃ ಓಂಕಾರಃ ಧನುಃ । ಯಥಾ

---

1. ಇಲ್ಲಿ ಹೇಳಿರುವ ಪ್ರಣವಮೂಲಕಚಿಂತನೆಯು ಕ್ರಮಮುಕ್ತಿಫಲಕವಾದ ಉಪಾಸನೆಯೆಂದು ವ್ಯಾಖ್ಯಾನಕಾರರು ಬರೆಯುತ್ತಾರೆ. ಇದೂ ಪರವಿದ್ಯೆಗೇ ಹೊಂದುತ್ತದೆ ಎಂದು ನಮಗೆ ತೋರುತ್ತದೆ. ಪೀಠಿಕೆಯನ್ನು ನೋಡಿ.

ಇಷ್ವಾಸನಂ ಲಕ್ಷ್ಯೇ ಶರಸ್ಯ ಪ್ರವೇಶಕಾರಣಂ ತಥಾ ಆತ್ಮಶರಸ್ಯ ಅಕ್ಷರೇ ಲಕ್ಷ್ಯೇ ಪ್ರವೇಶಕಾರಣಮ್ ಓಂಕಾರಃ । ಪ್ರಣವೇನ ಹಿ ಅಭ್ಯಸ್ಯಮಾನೇನ ಸಂಸ್ಕ್ರಿಯಮಾಣಃ ತದಾಲಮ್ಬನೋಽಪ್ರತಿಬನ್ಧೇನ ಅಕ್ಷರೇ ಅವತಿಷ್ಠತೇ । ಯಥಾ ಧನುಷಾ ಅಸ್ತಃ ಇಷುರ್ಲಕ್ಷ್ಯೇ । ಅತಃ ಪ್ರಣವಃ ಧನುರಿವ ಧನುಃ । ಶರೋ ಹಿ ಆತ್ಮಾ ಉಪಾಧಿಲಕ್ಷಣಃ ಪರ ಏವ ಜಲೇ ಸೂರ್ಯಾದಿವತ್ ಇಹ ಪ್ರವಿಷ್ಟಃ ದೇಹೇ ಸರ್ವಬೌದ್ಧಪ್ರತ್ಯಯ ಸಾಕ್ಷಿತಯಾ । ಸಃ ಶರ ಇವ ಸ್ವಾತ್ಮನ್ಯೇವ ಅರ್ಪಿತೋಽಕ್ಷರೇ ಬ್ರಹ್ಮಣಿ । ಅತಃ ಬ್ರಹ್ಮ ತತ್ ಲಕ್ಷ್ಯಮ್ ಉಚ್ಯತೇ । ಲಕ್ಷ್ಯ ಇವ ಮನಃಸಮಾಧಿತ್ಸುಭಿಃ ಆತ್ಮ ಭಾವೇನ ಲಕ್ಷ್ಯಮಾಣತ್ವಾತ್ । ತತ್ರ ಏವಂ ಸತಿ ಅಪ್ರಮತ್ತೇನ ಬಾಹ್ಯವಿಷಯೋಪ ಲಬ್ಧಿತೃಷ್ಣಾಪ್ರಮಾದವರ್ಜಿತೇನ ಸರ್ವತೋ ವಿರಕ್ತೇನ ಜಿತೇನ್ದ್ರಿಯೇಣ ಏಕಾಗ್ರಚಿತ್ತೇನ ವೇದ್ಧವ್ಯಂ ಬ್ರಹ್ಮ ಲಕ್ಷ್ಯಮ್ ತತಃ ತದ್ವೇಧನಾತ್ ಊರ್ಧ್ವಂ ಶರವತ್ ತನ್ಮಯೋ ಭವೇತ್ । ಯಥಾ ಶರಸ್ಯ ಲಕ್ಷ್ಯೈಕಾತ್ಮತ್ವಂ ಫಲಂ ಭವತಿ ತಥಾ ದೇಹಾದ್ಯಾತ್ಮಪ್ರತ್ಯಯ ತಿರಸ್ಕರಣೇನ ಅಕ್ಷರೈಕಾತ್ಮತ್ವಂ ಫಲಮ್ ಆಪಾದಯೇತ್ ಇತ್ಯರ್ಥಃ ॥

## (ಭಾಷ್ಯಾರ್ಥ)

ಧನುಸ್ಸು ಮುಂತಾದದ್ದನ್ನು ಹೇಳಿತ್ತಲ್ಲ, ಅದನ್ನು (ಇಲ್ಲಿ ವಿವರಿಸಿ) ಹೇಳಲಾಗುತ್ತದೆ : ಪ್ರಣವವು ಎಂದರೆ ಓಂಕಾರವು ಬಿಲ್ಲು. ಹೇಗೆ ಬಾಣಗಳನ್ನು (ತೊಡುವ) ಸ್ಥಾನವಾದ (ಬಿಲ್ಲು) ಗುರಿಯಲ್ಲಿ ಬಾಣವು ಸೇರುವದಕ್ಕೆ ಕಾರಣ ವಾಗಿರುವದೋ ಅದರಂತೆ ಆತ್ಮನೆಂಬ ಬಾಣವು ಅಕ್ಷರವೆಂಬ ಗುರಿಯಲ್ಲಿ ಸೇರುವದಕ್ಕೆ ಓಂಕಾರವು ಕಾರಣವು. ಏಕೆಂದರೆ ಪ್ರಣವವನ್ನು ಅಭ್ಯಾಸಮಾಡಿದರೆ[1] ಸಂಸ್ಕಾರವುಂಟಾಗಿ ಅದನ್ನು ಆಶ್ರಯಿಸಿಕೊಂಡು[2] ಯಾವ ಅಡ್ಡಿಯೂ ಇಲ್ಲದೆ ಬಿಲ್ಲಿನಿಂದ ಬಿಟ್ಟ ಬಾಣವು ಗುರಿಗೆ ಹೋಗಿ (ಅಲ್ಲಿ) ನಿಲ್ಲುವಂತೆ ಅಕ್ಷರದಲ್ಲಿ (ನೆಲೆ)ನಿಲ್ಲುತ್ತಾನೆ. ಆದ್ದರಿಂದ ಪ್ರಣವವು ಬಿಲ್ಲಿನಂತಿರುವದರಿಂದ ಬಿಲ್ಲು. **ಆತ್ಮನೇ ಬಾಣ** ; ಸೂರ್ಯಾದಿಗಳು ನೀರಿನಲ್ಲಿ (ಸೇರಿಕೊಂಡಿರುವಂತೆ) ಈ ದೇಹದೊಳಗೆ ಹೊಕ್ಕು **ಬುದ್ಧಿಯ ಎಲ್ಲಾ**

1. ಪ್ರಣವವನ್ನು ಅಭ್ಯಾಸಮಾಡುವದು ಎರಡು ವಿಧ. (೧) ಅದರ ಅವಯವಗಳಾದ ಅಕಾರ, ಉಕಾರ, ಮಕಾರಗಳನ್ನೂ ಅವುಗಳ ಅರ್ಥವನ್ನೂ ಕುರಿತು ವಿಚಾರಮಾಡಿ ಎಚ್ಚರ ಕನಸುನಿದ್ರೆಗಳೆಂಬ ಅವಸ್ಥೆಗಳನ್ನೂ ಮೀರಿದ ಅಕ್ಷರವನ್ನು ಸೇರುವ ಪ್ರಯತ್ನ. (೨). ಇದು ಆಗದಿದ್ದರೆ ಪ್ರಣವವನ್ನೇ ಅಕ್ಷರಬ್ರಹ್ಮವೆಂದು ಭಾವನೆಮಾಡಿ ಕ್ರಮದಿಂದ ಅಕ್ಷರವನ್ನು ಸೇರುವ ಪ್ರಯತ್ನ.

2. ಆಲಂಬನ ಎಂಬ ಮಾತು ಪ್ರತೀಕವನ್ನೇ ಹೇಳಿದರೂ ಒಂದನೆಯ ಟಿಪ್ಪಣಿಯಲ್ಲಿ ಹೇಳಿದಂತೆ ಎರಡು ರೀತಿಯಲ್ಲಿಯೂ ಪ್ರಣವವು ಆಶ್ರಯವಾಗಬಹುದಾಗಿದೆ.

ಪ್ರತ್ಯಯಗಳಿಗೂ ಸಾಕ್ಷಿಯಾಗಿರುವ, ಉಪಾಧಿಲಕ್ಷಣನಾದ[1] ಪರಮ (ಆತ್ಮನೇ ಬಾಣವು).[2] ಅವನು ಬಾಣದಂತೆ ತನ್ನ ಆತ್ಮನಾದ ಅಕ್ಷರವೆಂಬ ಬ್ರಹ್ಮದಲ್ಲಿಯೇ ಸೇರಿಕೊಂಡಿರುತ್ತಾನೆ. ಆದ್ದರಿಂದ ಆ ಬ್ರಹ್ಮವೇ ಲಕ್ಷ್ಯವೆನಿಸುತ್ತದೆ ; ಏಕೆಂದರೆ ಲಕ್ಷ್ಯದಲ್ಲಿ ಹೇಗೋ ಹಾಗೆ ಮನಸ್ಸನ್ನು ಸಮಾಧಾನಗೊಳಿಸಲಿಚ್ಛಿಸುವವರು ಅದೇ ತಾವೆಂದು ಕಂಡುಕೊಳ್ಳುತ್ತಾರೆ.[3] ಇದು ಹೀಗಿರುವದರಿಂದ **ಎಚ್ಚರತಪ್ಪದೆ,** ಎಂದರೆ **ಹೊರಗಿನ ವಿಷಯಗಳನ್ನು ಕಂಡು (ಅವುಗಳನ್ನೇ) ಹಂಬಲಿಸುವದೆಂಬ ಪ್ರಮಾದವನ್ನು ಬಿಟ್ಟು, ಎಲ್ಲದರಲ್ಲಿಯೂ ವಿರಕ್ತನಾಗಿ ಇಂದ್ರಿಯಗಳನ್ನು ಗೆದ್ದುಕೊಂಡು, ಏಕಾಗ್ರಚಿತ್ತನಾಗಿ ಬ್ರಹ್ಮವೆಂಬ ಗುರಿಯನ್ನು ಹೊಡೆಯಬೇಕು.** ಬಳಿಕ ಅದನ್ನು ಹೊಡೆದ ಮೇಲೆ ಬಾಣದಂತೆ ತನ್ಮಯನಾಗಬೇಕು. ಹೇಗೆ ಬಾಣಕ್ಕೆ (ತನ್ನ) ಗುರಿಯೊಡನೆ ಒಂದಾಗುವದೆಂಬ ಫಲವಾಗುವದೋ, ಹಾಗೆ ದೇಹವೇ ಮುಂತಾದವುಗಳು ತಾನೆಂಬ ಪ್ರತ್ಯಯವನ್ನು ತೊಲಗಿಸಿಕೊಂಡು ಅಕ್ಷರದೊಡನೆ ಒಂದಾಗುವದೆಂಬ ಫಲವನ್ನು ಉಂಟುಮಾಡಿಕೊಳ್ಳಬೇಕು ಎಂದರ್ಥ.

## ಏನೆಂದು ಧ್ಯಾನಿಸಬೇಕು ?

**ಯಸ್ಮಿನ್ ದ್ಯೌಃ ಪೃಥಿವೀ ಚಾನ್ತರಿಕ್ಷ -**
**ಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ ।**
**ತಮೇವೈಕಂ ಜಾನಥ ಆತ್ಮಾನ -**
**ಮನ್ಯಾ ವಾಚೋ ವಿಮುಞ್ಚಥಾಮೃತಸ್ಯೈಷ ಸೇತುಃ ॥೫॥**

೫. ಯಾವನಲ್ಲಿ ದ್ಯುಲೋಕವೂ ಪೃಥಿವಿಯೂ ಅಂತರಿಕ್ಷವೂ ಎಲ್ಲಾ ಪ್ರಾಣಗಳಿಂದೊಡಗೂಡಿದ ಮನಸ್ಸೂ ಹೆಣೆದುಕೊಂಡಿರುವವೋ ಆ ಆತ್ಮನೊಬ್ಬನನ್ನೇ ಅರಿತುಕೊಳ್ಳಿರಿ, ಬೇರೆಯ ಮಾತುಗಳನ್ನು ಬಿಡಿರಿ. ಅಮೃತಕ್ಕೆ ಇದೇ ಸೇತು.

## (ಭಾಷ್ಯ)

೭೭. ಅಕ್ಷರಸ್ಯೈವ ದುರ್ಲಕ್ಷ್ಯತ್ವಾತ್ ಪುನಃ ಪುನರ್ವಚನಂ ಸುಲಕ್ಷಣಾರ್ಥಮ್ । ಯಸ್ಮಿನ್ ಅಕ್ಷರೇ ಪುರುಷೇ ದ್ಯೌಃ ಪೃಥಿವೀ ಚ ಅನ್ತರಿಕ್ಷಂ ಚ ಓತಂ ಸಮರ್ಪಿತಮ್

---

1. ಉಪಾಧಿಗಳಿಂದ ದ್ರಷ್ಟೃತ್ವಾದಿಗಳನ್ನು ಪಡೆದಿರುವಂತೆ ಕಾಣುವ ಜೀವನು. ಪ್ರ.ಭಾ. ೪-೯ ; ಗೀ.ಭಾ. ೧೮-೧೪.

2. ದೇಹದಲ್ಲಿ ಪ್ರವೇಶ ಮಾಡಿರುವ ಜೀವನು ಪರಮಾತ್ಮನೇ ಎಂಬುದಕ್ಕೆ ತೈ.ಭಾ. ೨-೬ ; ಬೃ.ಭಾ. ೧-೪-೭ ; ಸೂ.ಭಾ. ೨-೩-೧೭ - ಮುಂತಾದವುಗಳನ್ನು ನೋಡಬೇಕು.

3. ಸೂ.ಭಾ. ೩-೨-೪.

ಮನಶ್ಚ ಸಹ ಪ್ರಾಣೈಃ ಕರಣೈಃ ಅನ್ಯೈಃ ಸರ್ವೈಃ ತಮೇವ ಸರ್ವಾಶ್ರಯಮ್ ಏಕಮ್ ಅದ್ವಿತೀಯಂ ಜಾನಥ ಜಾನೀಥ ಹೇ ಶಿಷ್ಯಾಃ । ಆತ್ಮಾನಂ ಪ್ರತ್ಯಕ್ಸ್ವರೂಪಂ ಯುಷ್ಮಾಕಂ ಸರ್ವಪ್ರಾಣಿನಾಂ ಚ । ಜ್ಞಾತ್ವಾ ಚ ಅನ್ಯಾಃ ವಾಚಃ ಅಪರವಿದ್ಯಾ ರೂಪಾಃ ವಿಮುಞ್ಚಥ ವಿಮುಞ್ಚತ ಪರಿತ್ಯಜತ । ತತ್ಪ್ರಕಾಶ್ಯಂ ಚ ಸರ್ವಂ ಕರ್ಮ ಸಸಾಧನಮ್ । ಯತಃ ಅಮೃತಸ್ಯ ಏಷ ಸೇತುಃ । ಏತದಾತ್ಮಜ್ಞಾನಮ್ ಅಮೃತಸ್ಯ ಅಮೃತತ್ವಸ್ಯ ಮೋಕ್ಷಸ್ಯ ಪ್ರಾಪ್ತಯೇ ಸೇತುರಿವ ಸೇತುಃ । ಸಂಸಾರಮಹೋದಧೇ ರುತ್ತರಣಹೇತುತ್ವಾತ್ । ತಥಾ ಚ ಶ್ರುತ್ಯನ್ತರಮ್ "ತಮೇವ ವಿದಿತ್ವಾಽತಿಮೃತ್ಯು ಮೇತಿ ನಾನ್ಯಃ ಪನ್ಥಾ ವಿದ್ಯತೇಽಯನಾಯ" (ಶ್ವೇ. ೩-೮, ೬-೧೫) ಇತಿ ॥

## (ಭಾಷ್ಯಾರ್ಥ)

ಅಕ್ಷರವು ತಿಳಿಯಬರುವದು ಕಷ್ಟವಾದ್ದರಿಂದ (ಅದ)ನ್ನೇ ಮತ್ತೆಮತ್ತೆ ಹೇಳಿರುವದು ಸುಲಭವಾಗಿ ತಿಳಿಯುವದಕ್ಕೋಸ್ಕರ. ಯಾವ ಅಕ್ಷರವೆಂಬ ಪುರುಷ ನಲ್ಲಿ ದ್ಯುಲೋಕವೂ ಪೃಥಿವಿಯೂ ಅಂತರಿಕ್ಷವೂ ಹೆಣೆದುಕೊಂಡಿರುವವೋ ಎಂದರೆ ಸೇರಿಕೊಂಡಿರುವವೋ.[1] ಎಲ್ಲಾ ಪ್ರಾಣಿಗಳೊಡನೆ ಎಂದರೆ ಮಿಕ್ಕ (ಎಲ್ಲಾ ಕರಣ ಗಳೊಡಗೂಡಿದ) ಮನಸ್ಸೂ[2] (ಯಾವದರಲ್ಲಿ ಹೆಣೆದುಕೊಂಡಿರುವವೋ) ಎಲ್ಲಕ್ಕೂ ಆಶ್ರಯನಾಗಿರುವ ಒಬ್ಬನೇ ಆಗಿ ತನಗೆರಡನೆಯದಿಲ್ಲದ ಆ (ಆತ್ಮನನ್ನೇ) ಜಾನಥ= ಜಾನೀಥ, ಅರಿತುಕೊಳ್ಳಿರಿ. ಆತ್ಮನನ್ನು ಎಂದರೆ ನಿಮ್ಮ ಮತ್ತು ಎಲ್ಲಾ ಪ್ರಾಣಿಗಳ ಒಳಗಿನ ಸ್ವರೂಪವನ್ನು[3] (ಅರಿತುಕೊಳ್ಳಿರಿ). ಮತ್ತು (ಹಾಗೆ) ಅರಿತುಕೊಂಡ ಬಳಿಕ ಅಪರವಿದ್ಯೆಯ ರೂಪವಾಗಿರುವ ಮಿಕ್ಕ ಮಾತುಗಳನ್ನು[4] ವಿಮುಞ್ಚಥ=ವಿಮುಞ್ಚತ ಬಿಟ್ಟುಬಿಡಿರಿ.[5] ಆ (ಮಾತುಗಳಿಂದ) ತಿಳಿಯಬರುವ ಕರ್ಮವೆಲ್ಲವನ್ನೂ ಸಾಧನ

1. ಅಂತರಿಕ್ಷಲೋಕವು ಭೂಲೋಕಕ್ಕೂ ದ್ಯುಲೋಕಕ್ಕೂ ನಡುವೆ ಇರುವದು. ಸಕಲಲೋಕಗಳಿಗೂ ಆಶ್ರಯವಾಗಿರುವದು ಈ ಅಕ್ಷರವು. ಆ ಇದು ಪ್ರಧಾನ, ಜೀವ ಮುಂತಾದದ್ದಾಗಲಾರದು ಎಂದು ಸೂ.ಭಾ ೧-೩-೧, ೨ ರಲ್ಲಿ ನಿರ್ಣಯಿಸಿದೆ.

2. ಭೂರಾದಿಲೋಕಗಳು ಹೊರಗಿನವು ; ಮನ ಆದಿಗಳು ಒಳಗಿನವು. ಎರಡಕ್ಕೂ ಆತ್ಮನೇ ಆಶ್ರಯ.

3. ಆತ್ಮನೆಂಬ ಮಾತು ನಮ್ಮೊಳಗಿನ ನಮ್ಮ ಸ್ವರೂಪಕ್ಕೇ ರೂಢವಾದ ಹೆಸರು. ಕ.ಭಾ. ೨-೧-೧ ; ಛಾಂ ೬-೮-೭. ಆದ್ದರಿಂದ ಅಂತರಿಕ್ಷಾದಿಗಳಿಗೆ ಆಧಾರನಾದ ಪರಮೇಶ್ವರನು ನಿಮ್ಮ ಆತ್ಮನೆಂದೇ ತಿಳಿಯಿರಿ-ಎಂದಂತೆ ಆಯಿತು. ಸೂ.ಭಾ. ೧-೩-೧.

4. ಅನಾತ್ಮವನ್ನು ತಿಳಿಸುವ ಕರ್ಮಕಾಂಡದ ವಾಕ್ಯಗಳನ್ನು ಆತ್ಮೈಕತ್ವವನ್ನು ತಿಳಿಸುವ ಶಬ್ದಗಳನ್ನಲ್ಲ. ಬೃ.ಭಾ. ೪-೪-೨೧.

5. ವೇದವನ್ನು ಸಂನ್ಯಾಸಮಾಡಬಾರದೆಂಬ ವಾದವು ಈ ಶ್ರುತಿಗೆ ವಿರುದ್ಧ.

ಸಮೇತವಾಗಿ[1] (ಬಿಟ್ಟುಬಿಡಿರಿ). ಏಕೆಂದರೆ ಅಮೃತಕ್ಕೆ ಇದೇ ಸೇತು ; ಈ ಆತ್ಮ ಜ್ಞಾನವೇ ಅಮೃತಕ್ಕೆ ಎಂದರೆ ಅಮೃತನಾಗುವದಕ್ಕೆ, ಮೋಕ್ಷವನ್ನು ಪಡೆದುಕೊಳ್ಳುವದಕ್ಕೆ, ಸೇತುವಿನಂತಿರುವ ಸೇತು.[2] ಹೇಗೆಂದರೆ ಸಂಸಾರವೆಂಬ ಮಹಾಸಮುದ್ರವನ್ನು ದಾಟುವದಕ್ಕೆ (ಇದೇ) ಕಾರಣವಾಗಿರುತ್ತದೆ. ಆದ್ದರಿಂದಲೇ ಮತ್ತೊಂದು ಶ್ರುತಿಯು "ಅವನನ್ನೇ ಅರಿತುಕೊಂಡರೆ ಮೃತ್ಯುವನ್ನು ದಾಟಿದ (ಸ್ಥಿತಿಯನ್ನು) ಪಡೆಯುತ್ತಾನೆ, (ಆ ಸ್ಥಿತಿಯನ್ನು) ಪಡೆಯುವದಕ್ಕೆ ಬೇರೆಯ ಹಾದಿಯಿಲ್ಲ" (ಶ್ವೇ. ೩-೮, ೬-೧೫) ಎಂದು ಹೇಳುತ್ತದೆ.

## ಎಲ್ಲಿ ಧ್ಯಾನಿಸಬೇಕು ?

**ಅರಾ ಇವ ರಥನಾಭೌ ಸಂಹತಾ ಯತ್ರ ನಾಡ್ಯಃ**
**ಸ ಏಷೋಽನ್ತಶ್ಚರತೇ ಬಹುಧಾ ಜಾಯಮಾನಃ ।**
**ಓಮಿತ್ಯೇವಂ ಧ್ಯಾಯಥ ಆತ್ಮಾನಂ**
**ಸ್ವಸ್ತಿ ವಃ ಪಾರಾಯ ತಮಸಃ ಪರಸ್ತಾತ್ ॥೬॥**

೬. ಬಂಡಿಯ (ಚಕ್ರದ) ಗುಂಬದಲ್ಲಿ ಹಾರೆಕೋಲುಗಳಂತೆ ಎಲ್ಲಿ ನಾಡಿಗಳು (ಬಂದು) ಸೇರಿಕೊಂಡಿರುವವೋ (ಅಲ್ಲಿ) ಆ ಈ (ಆತ್ಮನು) ಬಲುಬಗೆಯಲ್ಲಿ ಹುಟ್ಟುತ್ತಾ ಒಳಗೆ ಸಂಚರಿಸುತ್ತಿರುವನು. ಓಮ್ ! ಎಂದೀ ಪರಿಯಾಗಿ ಆತ್ಮನನ್ನು ಧ್ಯಾನಿಸಿರಿ. ತಮಸ್ಸಿನ ಆಚೆಯಿರುವ ದಡಕ್ಕೆ (ಹೋಗಲು ಹೊರಟಿರುವ) ನಿಮಗೆ ಸ್ವಸ್ತಿಯಾಗಲಿ !

### (ಭಾಷ್ಯ)

೭೮. ಕಿಂಚ ಅರಾ ಇವ ಯಥಾ ರಥನಾಭೌ ಸಮರ್ಪಿತಾ ಅರಾಃ ಏವಂ ಸಂಹತಾಃ ಸಂಪ್ರವಿಷ್ಟಾಃ ಯತ್ರ ಯಸ್ಮಿನ್ ಹೃದಯೇ ಸರ್ವತೋ ದೇಹವ್ಯಾಪಿನ್ಯಃ ನಾಡ್ಯಃ ತಸ್ಮಿನ್ ಹೃದಯೇ ಬುದ್ಧಿಪ್ರತ್ಯಯಸಾಕ್ಷಿಭೂತಃ ಸ ಏಷ ಪ್ರಕೃತಃ ಆತ್ಮಾ ಅನ್ತಃ ಮಧ್ಯೇ ಚರತೇ ಚರತಿ ವರ್ತತೇ । ಪಶ್ಯನ್ ಶೃಣ್ವನ್ ಮನ್ವಾನೋ ವಿಜಾನನ್ ಬಹುಧಾ ಅನೇಕಧಾ ಕ್ರೋಧಹರ್ಷಾದಿಪ್ರತ್ಯಯೈಃ ಜಾಯಮಾನ ಇವ ಜಾಯಮಾನಃ । ಅನ್ತಃಕರಣೋಪಾಧ್ಯನುವಿಧಾಯಿತ್ವಾತ್ । ವದನ್ತಿ ಹಿ ಲೌಕಿಕಾಃ 'ಹೃಷ್ಟೋ ಜಾತಃ', 'ಕ್ರುದ್ಧೋ ಜಾತಃ' ಇತಿ । ತಮ್ ಆತ್ಮಾನಮ್ ಓಮ್ ಇತ್ಯೇವಮ್ ಓಂಕಾರಾಲಮ್ಬನಾಃ

---

1. ಯಜ್ಞೋಪವೀತಾದಿಗಳೊಡನೆ.

2. "ಏಷ ಸೇತುಃ" ಎಂಬುದಕ್ಕೆ ಮತ್ತೊಂದು ಅರ್ಥವನ್ನೂ ಸೂ.ಭಾ. ೧-೩-೧ ರಲ್ಲಿ ಕೊಟ್ಟಿದೆ ; ಆದರೆ ಈ ಅರ್ಥದಲ್ಲಿ ಶಬ್ದಸ್ವಾರಸ್ಯವು ಹೆಚ್ಚಾಗಿದೆ.

ಸನ್ತಃ ಯಥೋಕ್ತಕಲ್ಪನಯಾ ಧ್ಯಾಯಥ ಚಿನ್ತಯತ । ಉಕ್ತಂ ವಕ್ತವ್ಯಂ ಚ ಶಿಷ್ಯೇಭ್ಯಃ ಆಚಾರ್ಯೇಣ ಜಾನತಾ । ಶಿಷ್ಯಾಶ್ಚ ಬ್ರಹ್ಮವಿದ್ಯಾ (?) ವಿವಿದಿಷುತ್ವಾತ್ ನಿವೃತ್ತಕರ್ಮಾಣೋ ಮೋಕ್ಷಪಥೇ ಪ್ರವೃತ್ತಾಃ । ತೇಷಾಂ ನಿರ್ವಿಘ್ನತಯಾ ಬ್ರಹ್ಮ ಪ್ರಾಪ್ತಿಮ್ ಆಶಾಸ್ತ್ಯಾಚಾರ್ಯಃ । ಸ್ವಸ್ತಿ ನಿರ್ವಿಘ್ನಮ್ ಅಸ್ತು ವಃ ಯುಷ್ಮಾಕಂ ಪಾರಾಯ[1] ಪರಕೂಲಾಯ । ಪರಸ್ತಾತ್ । ಕಸ್ಮಾತ್ ?[2] ಅವಿದ್ಯಾತಮಸಃ । ಅವಿದ್ಯಾ ರಹಿತಬ್ರಹ್ಮಾತ್ಮಸ್ವರೂಪಗಮನಾಯ ಇತ್ಯರ್ಥಃ ॥

## (ಭಾಷ್ಯಾರ್ಥ)

ಮತ್ತು ಹಾರೆಕೋಲುಗಳಂತೆ - ಹೇಗೆ ಬಂಡಿಯ (ಚಕ್ರದ) ಗುಂಬದಲ್ಲಿ ಹಾರೆಕೋಲುಗಳು ಸೇರಿಕೊಂಡಿರುವವೋ ಹಾಗೆ - ಎಲ್ಲಾ ಕಡೆಯಲ್ಲಿಯೂ ದೇಹವನ್ನು ವ್ಯಾಪಿಸಿಕೊಂಡಿರುವ ನಾಡಿಗಳು ಎಲ್ಲಿ, ಯಾವ ಹೃದಯದಲ್ಲಿ (ಬಂದು) ಸೇರಿ ಕೊಂಡಿರುವವೋ (ಅದರೊಳಗೆ) ಹೊಕ್ಕಿರುವವೋ, ಆ ಹೃದಯದಲ್ಲಿ **ಬುದ್ಧಿಯ ಪ್ರತ್ಯಯಗಳಿಗೆ ಸಾಕ್ಷಿಯಾಗಿ**[3] ಆ ಈ ಪ್ರಕೃತನಾದ[4] ಆತ್ಮನು ಒಳಗೆ ಎಂದರೆ (ಹೃದಯದ) ನಡುವೆ ಚರತೇ=ಚರತಿ ಸಂಚರಿಸುತ್ತಿರುವನು, ಇರುತ್ತಾನೆ ; ನೋಡುತ್ತಲೂ ಕೇಳುತ್ತಲೂ ಯೋಚಿಸುತ್ತಲೂ ಅರಿಯುತ್ತಲೂ ಬಲುಬಗೆಯಲ್ಲಿ ಸಿಟ್ಟು, ಹರ್ಷ-ಮುಂತಾದ ಅನೇಕ ಪ್ರತ್ಯಯಗಳಿಂದ[5] ಅನೇಕ ವಿಧವಾಗಿ ಹುಟ್ಟು ವಂತಿರುವದರಿಂದ[6] ಹುಟ್ಟುತ್ತಾನೆ (ಎಂದಿದೆ). ಏಕೆಂದರೆ ಇವನು ಅಂತಃಕರಣವೆಂಬ ಉಪಾಧಿಯನ್ನನುಸರಿಸಿಯೇ (ಹೀಗೆ ತೋರುತ್ತಿರುತ್ತಾನೆ). 'ಹೃಷ್ಟನಾದನು', 'ಸಿಟ್ಟಾ ದನು' - ಎಂದು ಲೋಕದ (ಜನರೂ) ಆಡಿಕೊಳ್ಳುತ್ತಾರಲ್ಲವೆ ?[7]

---

1. ವಾ॥ ಪಾಠ ; 'ಪರಾಯ' ಎಂಬ ಆ॥ ಪಾಠಕ್ಕಿಂತ ಉತ್ತಮ.

2. ಇಲ್ಲಿ ವಾ॥ ಪಾಠವು ಬೇರೆಯಾಗಿದೆ ; ಆ॥ ಪಾಠವೇ ಉತ್ತಮ.

3. ಈ ಆತ್ಮನನ್ನು ನಮ್ಮ ಬುದ್ಧಿಯ ಪ್ರತ್ಯಯಗಳಿಗೆ ಸಾಕ್ಷಿಯಾಗಿರುವ ಸ್ವರೂಪದಿಂದಲೇ ಅರಿತುಕೊಳ್ಳಬೇಕು.

4. ಪರಮಾತ್ಮನೇ ಪ್ರಕೃತನು, ಅವನನ್ನೇ ಇಲ್ಲಿ ಹೃದಯದಲ್ಲಿರುವವನೆಂದು ಅರಿತುಕೊಳ್ಳಬೇಕು.

5. ಸಿಟ್ಟು ಮುಂತಾದ ವೃತ್ತಿಗಳಿಂದ ತಾನೂ ಬೇರ್ಪಡುವಂತೆ ಆತ್ಮನು ತೋರುತ್ತಿರು ತ್ತಾನೆ.

6. ತಪ್ಪುತಿಳಿವಳಿಕೆಯಿಂದ ಆತ್ಮನೇ ಮಾರ್ಪಡುವಂತೆ ತೋರಿದರೂ ನಿಜವಾಗಿ ಮಾರ್ಪಡುವದಿಲ್ಲ.

7. 'ಹೃಷ್ಟೋ ಜಾತಃ' ಎಂಬ ಸಂಸ್ಕೃತವಾಕ್ಯಕ್ಕೆ ಹೃಷ್ಟನಾಗಿ ಹುಟ್ಟಿದನು ಎಂದು ಅಕ್ಷರಾರ್ಥ. 'ಆದನು' ಎಂಬ ಕನ್ನಡದ ಮಾತೂ ರೂಪಾಂತರವನ್ನು ಹೊಂದಿದನೆಂಬುದನ್ನೇ

(ಇಂಥ) ಆ ಆತ್ಮನನ್ನು ಓಂಕಾರವನ್ನು ಅವಲಂಬಿಸಿದವರಾಗಿ ಹಿಂದೆ ಹೇಳಿದ ಕಲ್ಪನೆಯಿಂದ[1] ಧ್ಯಾನಿಸಿರಿ, ಚಿಂತಿಸಿರಿ. (ಇದು ತತ್ತ್ವವನ್ನು) ಬಲ್ಲ ಗುರುವು ಶಿಷ್ಯರಿಗೆ ಹೇಳಿರುವದು, ಮತ್ತು (ಮುಂದೆಯೂ) ಹೇಳತಕ್ಕದ್ದು.[2] ಮತ್ತು ಶಿಷ್ಯರು ಬ್ರಹ್ಮವಿದ್ಯೆಯನ್ನು (?) ತಿಳಿಯಬೇಕೆಂದು ಕರ್ಮಗಳನ್ನು ಬಿಟ್ಟು ಮೋಕ್ಷದ ಹಾದಿಯಲ್ಲಿ ಹೊರಟಿರುತ್ತಾರ(ಷ್ಟೆ). ಅವರಿಗೆ ಯಾವ ಅಡ್ಡಿಗಳೂ ಇಲ್ಲದಂತೆ[3] ಬ್ರಹ್ಮಪ್ರಾಪ್ತಿಯಾಗಲಿ ! - ಎಂದು ಆಚಾರ್ಯನು ಹಾರೈಸುತ್ತಿದ್ದಾನೆ : ನಿಮಗೆ 'ವಃ' ನಿಮ್ಮಗಳಿಗೆ ಪಾರಕ್ಕೆ ಎಂದರೆ ಆಚೆಯ ದಡಕ್ಕೆ (ಹೋಗುವ ನಿಮಗೆ) ಸ್ವಸ್ತಿ, ಯಾವ ಅಡ್ಡಿಯೂ ಇಲ್ಲದಂತಾಗಲಿ ! ಆಚೆಯಿರುವ ; ಯಾವದರಿಂದ (ಆಚೆಯಿರುವ) ? ಅವಿದ್ಯೆ ಎಂಬ ಕತ್ತಲೆಯಿಂದ[4] ಅವಿದ್ಯೆಯಿಲ್ಲದ ಬ್ರಹ್ಮಾತ್ಮನ ಸ್ವರೂಪವನ್ನು ಸೇರುವದಕ್ಕೆ (ಹೊರಟಿರುವ ನಿಮಗೆ ಸ್ವಸ್ತಿಯಾಗಲಿ !) ಎಂದರ್ಥ.

## (ಭಾಷ್ಯ)

೭೯. ಯೋಽಸೌ ತಮಸಃ ಪರಸ್ತಾತ್ ಸಂಸಾರಮಹೋದಧಿಂ ತೀರ್ತ್ವಾ ಗನ್ತವ್ಯಃ ಪರವಿದ್ಯಾವಿಷಯಃ[5] ಸ ಕಸ್ಮಿನ್ ವರ್ತತ ಇತಿ ? ಆಹ -

## (ಭಾಷ್ಯಾರ್ಥ)

ಕತ್ತಲೆಗೆ ಆಚೆ ಇರುವವನಾಗಿಯೂ ಸಂಸಾರವೆಂಬ ಹೆಗ್ಗಡಲನ್ನು ದಾಟಿ ಹೋಗಿ (ಸೇರಬೇಕಾಗಿರುವ) ಯಾವ ಪರವಿದ್ಯೆಯ ವಿಷಯನಾದ[6] ಈ (ಪರಮಾತ್ಮನುಂಟಲ್ಲ), ಇವನು ಏತರಲ್ಲಿರುವನು ? ಎಂದರೆ (ಈ ಮಂತ್ರವು) ಹೇಳುತ್ತದೆ :-

**ಯಃ ಸರ್ವಜ್ಞಃ ಸರ್ವವಿದ್**
**ಯಸ್ಯೈಷ ಮಹಿಮಾ ಭುವಿ ।**

---

ತಿಳಿಸುತ್ತದೆ. ಹೀಗೆ ರೂಪಾಂತರವನ್ನು ಹೊಂದುವಂತಿರುವವನ ನಿಜವಾದ ಸ್ವರೂಪವೇ ಪ್ರಕೃತನಾದ ಪರಮಾತ್ಮನು.

1. ಪ್ರಣವವೇ ಬಿಲ್ಲು, ಆತ್ಮನೇ ಬಾಣ - ಎಂದು ಮುಂತಾಗಿ ಹಿಂದೆ ಹೇಳಿರುವ ಕಲ್ಪನೆಯಿಂದ.

2. ಗುರುವು ಹೀಗೆ ಮಾಡಬೇಕೆಂದು ಶ್ರುತಿ ಹೇಳುತ್ತಿದೆ.

3. ಸಾಮಾನ್ಯರು ಪ್ರಯತ್ನಿಸಿದರೆ ಆತ್ಮಜ್ಞಾನಕ್ಕೆ ದೇವತೆಗಳು ಅಡ್ಡಿಯನ್ನು ಮಾಡುವರೆಂದು ಶ್ರುತಿ. ಬೃ. ೧-೪-೧೦.

4. ಅವಿದ್ಯೆಯೆಂಬ ಕತ್ತಲೆಯು ಮುಸುಕಿರುವದರಿಂದ ಜೀವನು ಅಲ್ಪಜ್ಞನಾಗಿರುತ್ತಾನೆ ; ಅವಿದ್ಯೆಯಿಲ್ಲದ ಬ್ರಹ್ಮಸ್ವರೂಪವೇ ತಾನೆಂಬುದನ್ನು ಜ್ಞಾನದಿಂದ ಮುಮುಕ್ಷುಗಳು ಅರಿತುಕೊಳ್ಳುವದಕ್ಕೆ ಪ್ರಯತ್ನಿಸುತ್ತಾರೆ.

5. ಪಾ।। ಪಾಠ.

6. ಹೃದಯಪುಂಡರೀಕದಲ್ಲಿರುವದೆಂದು ಚಿಂತಿಸುವ ಬ್ರಹ್ಮವು ಪರವಿದ್ಯೆಯ ವಿಷಯವೆಂದು ಭಾಷ್ಯಕಾರರು ಸ್ಪಷ್ಟವಾಗಿ ತಿಳಿಸಿದಂತಾಗಿದೆ.

ದಿವ್ಯೇ ಬ್ರಹ್ಮಪುರೇ ಹ್ಯೇಷ
ವ್ಯೋಮನ್ಯಾತ್ಮಾ ಪ್ರತಿಷ್ಠಿತಃ ||೭||[1]

೭. ಯಾವನು ಸರ್ವಜ್ಞನೋ (ಯಾವನು) ಸರ್ವವಿತ್ತೋ ಯಾವನಿಗೆ ಭೂಮಿಯಲ್ಲಿ ಇದು ಮಹಿಮೆಯೋ ಈ ಆತ್ಮನು ದಿವ್ಯವಾದ ಬ್ರಹ್ಮಪುರದಲ್ಲಿ ವ್ಯೋಮದಲ್ಲಿ ಪ್ರತಿಷ್ಠಿತನಾಗಿರುತ್ತಾನೆ.

(ಭಾಷ್ಯ)

೮೦. 'ಯಃ ಸರ್ವಜ್ಞಃ ಸರ್ವವಿತ್' ವ್ಯಾಖ್ಯಾತಃ । ತಂ ಪುನರ್ವಿಶಿನಷ್ಟಿ । ಯಸ್ಯ ಏಷಃ ಪ್ರಸಿದ್ಧಃ ಮಹಿಮಾ ವಿಭೂತಿಃ । ಕೋಽಸೌ ಮಹಿಮಾ ? ಯಸ್ಯೇಮೇ ದ್ಯಾವಾಪೃಥಿವ್ಯೌ ಶಾಸನೇ ವಿಧೃತೇ ತಿಷ್ಠತಃ । ಸೂರ್ಯಾಚನ್ದ್ರಮಸೌ ಯಸ್ಯ ಶಾಸನೇ ಅಲಾತಚಕ್ರವತ್ ಅಜಸ್ರಂ ಭ್ರಮತಃ । ಯಸ್ಯ ಶಾಸನೇ ಸರಿತಃ ಸಾಗರಾಶ್ಚ ಸ್ವಗೋಚರಂ ನಾತಿಕ್ರಾಮನ್ತಿ । ತಥಾ ಸ್ಥಾವರಂ ಜಙ್ಗಮಂ ಚ ಯಸ್ಯ ಶಾಸನೇ ನಿಯತಮ್ । ತಥಾ[2] ಋತವೋಽಯನೇ ಅಬ್ದಾಶ್ಚ ಯಸ್ಯ ಶಾಸನಂ ನಾತಿಕ್ರಾಮನ್ತಿ । ತಥಾ ಕರ್ತಾರಃ ಕರ್ಮಾಣಿ ಫಲಂ ಚ ಯಚ್ಛಾಸನಾತ್ ಸ್ವಂ ಸ್ವಂ ಕಾಲಂ ನಾತಿವರ್ತನ್ತೇ । ಸ ಏಷ ಮಹಿಮಾ ಭುವಿ ಲೋಕೇ ಯಸ್ಯ ಸ ಏಷ ಸರ್ವಜ್ಞ ಏವಂ ಮಹಿಮಾ ದೇವಃ ದಿವ್ಯೇ ದ್ಯೋತನವತಿ ಸರ್ವಬೌದ್ಧಪ್ರತ್ಯಯಕೃತದ್ಯೋತನೇ ಬ್ರಹ್ಮಪುರೇ । ಬ್ರಹ್ಮಣೋಽತ್ರ ಚೈತನ್ಯಸ್ವರೂಪೇಣ ನಿತ್ಯಾಭಿವ್ಯಕ್ತತ್ವಾತ್ ಬ್ರಹ್ಮಣಃ ಪುರಂ ಹೃದಯಪುಣ್ಡರೀಕಮ್ । ತಸ್ಮಿನ್ ಯದ್ ವ್ಯೋಮ ತಸ್ಮಿನ್ ವ್ಯೋಮ್ನಿ ಆಕಾಶೇ ಹೃತ್ಪುಣ್ಡರೀಕಮಧ್ಯಸ್ಥೇ (ಆತ್ಮಾ ?) ಪ್ರತಿಷ್ಠಿತ ಇವ ಉಪಲಭ್ಯತೇ । ನ ಹಿ ಆಕಾಶವತ್ ಸರ್ವಗತಸ್ಯ ಗತಿಃ, ಆಗತಿಃ ಪ್ರತಿಷ್ಠಾ ವಾ ಅನ್ಯಥಾ ಸಂಭವತಿ ||

(ಭಾಷ್ಯಾರ್ಥ)

"ಯಾವನು ಸರ್ವಜ್ಞನೋ (ಯಾವನು) ಸರ್ವವಿತ್ತೋ" ಎಂಬುದರ ಅರ್ಥವನ್ನು (ಹಿಂದೆ)[3] ವಿವರಿಸಿರುತ್ತದೆ. ಅವನನ್ನು ಮತ್ತೊಂದು ವಿಶೇಷಣದಿಂದ (ತಿಳಿಸುತ್ತ)ದೆ : ಯಾವನಿಗೆ ಈ ಪ್ರಸಿದ್ಧವಾದ ಮಹಿಮೆಯು ಎಂದರೆ ವಿಭೂತಿ(ಯಿರುವದೋ). ಈ ಮಹಿಮೆ ಎಂಬುದು ಯಾವದು ? ಯಾವ (ಈ ಆತ್ಮನ) ಅಪ್ಪಣೆಯಿಂದ ಭೂಮ್ಯಂತರಿಕ್ಷಗಳು ಎರಡೂ ತಡೆದುಕೊಂಡು ನಿಂತಿರುವವು ; ಯಾವ

1. ಇಲ್ಲಿ ಕೊಟ್ಟಿರುವ ಮಂತ್ರವಿಭಾಗವು ವಾ। ಕಾ।। ಪಾಠದಂತೆ ; ಆ।। ಪಾಠದಲ್ಲಿ ೭, ೮ – ಎರಡೂ ಸೇರಿ ಒಂದೇ ಮಂತ್ರವಾಗಿದೆ.

2. ವಾ।। ಪಾಠ.

3. ೧-೧-೯ ರಲ್ಲಿ

(ಈತನ) ಅಪ್ಪಣೆಯಿಂದಲೇ ಸೂರ್ಯಚಂದ್ರರು ದುಂಡಗೆ ತಿರುಗಿಸಿದ ಕೊಳ್ಳಿಯಂತೆ (ಒಂದೇ ಸಮನೆ) ಯಾವಾಗಲೂ ಸುತ್ತುತ್ತಿರುವರು ; ಯಾವ (ಈತನ) ಅಪ್ಪಣೆಯಿಂದ ನದಿಗಳೂ ಸಮುದ್ರಗಳೂ ತಮ್ಮ ಮೇರೆಯನ್ನು ತಪ್ಪದೆ ಇರುವವು ; ಹಾಗೂ ಸ್ಥಾವರವೂ ಜಂಗಮವೂ ಯಾವ (ಈತನ) ಅಪ್ಪಣೆಗೆ ಕಟ್ಟುಬಿದ್ದಿರುವದು ; ಹಾಗೂ ಋತುಗಳೂ ಅಯನಗಳೂ ವರ್ಷಗಳೂ ಯಾವ (ಈತನ) ಅಪ್ಪಣೆಯನ್ನು ಮೀರದೆ ಇರುತ್ತಿರುವವು ; ಹಾಗೂ (ಕರ್ಮವನ್ನು) ಮಾಡುವವರು, ಕರ್ಮಗಳು, ಫಲ - (ಇವೆಲ್ಲ)ವೂ ಯಾವ (ಈತನ) ಅಪ್ಪಣೆಯಿಂದ ತಮ್ಮ (ತಮ್ಮ) ಕಾಲವನ್ನು ಮೀರದೆ ಇರುವವು. ಆ ಇಂಥ ಮಹಿಮೆಯು[1] ಭೂಮಿಯಲ್ಲಿ ಎಂದರೆ ಲೋಕದಲ್ಲಿ ಯಾವನದಾಗಿರುವದೋ ಆ ಸರ್ವಜ್ಞನಾದ ಇಂಥ ಮಹಿಮೆಯ ದೇವನು ದಿವ್ಯವಾದ ಎಂದರೆ ದ್ಯೋತನವುಳ್ಳ ಎಲ್ಲಾ ಬುದ್ಧಿಪ್ರತ್ಯಯಗಳಿಂದಾದ ಬೆಳಕುಳ್ಳ[2] ಬ್ರಹ್ಮಪುರದಲ್ಲಿ, ಬ್ರಹ್ಮವು ಇದರಲ್ಲಿ ಚೈತನ್ಯಸ್ವರೂಪದಿಂದ ಯಾವಾಗಲೂ ತೋರಿಕೊಳ್ಳುತ್ತಿರುವದರಿಂದ[3] ಹೃದಯ ಕಮಲವು ಬ್ರಹ್ಮಪುರವೆನಿಸುತ್ತದೆ.[4] ಅದರಲ್ಲಿರುವ ವ್ಯೋಮವಿದೆಯಷ್ಟೆ, ಆ ವ್ಯೋಮದಲ್ಲಿ ಹೃತ್ಕಮಲದೊಳಗಿರುವ ಆಕಾಶದಲ್ಲಿ ಪ್ರತಿಷ್ಠಿತನಾಗಿರುವಂತೆ (ಆತ್ಮನು) ತೋರುವನು (ಎಂದರ್ಥ). ಏಕೆಂದರೆ ಆಕಾಶದಂತೆ ಸರ್ವಗತನಾಗಿರುವ ಆತ್ಮನಿಗೆ ಹೋಗುವದಾಗಲಿ, ಬರುವದಾಗಲಿ, ಒಂದು ಕಡೆಯಲ್ಲಿ ಇದ್ದುಕೊಂಡಿರುವದಾಗಲಿ ಬೇರೆಯ ಬಗೆಯಿಂದ ಹೊಂದುವಹಾಗೆಯೇ ಇಲ್ಲ.

**ಮನೋಮಯಃ ಪ್ರಾಣಶರೀರನೇತಾ**
**ಪ್ರತಿಷ್ಠಿತೋಽನ್ನೇ ಹೃದಯಂ ಸನ್ನಿಧಾಯ ।**
**ತದ್ವಿಜ್ಞಾನೇನ ಪರಿಪಶ್ಯನ್ತಿ ಧೀರಾ**
**ಆನನ್ದರೂಪಮಮೃತಂ ಯದ್ವಿಭಾತಿ ॥೮॥**

೮. (ಈ ಆತ್ಮನು) ಮನೋಮಯನು, ಪ್ರಾಣಶರೀರನೇತೃ, ಹೃದಯವನ್ನು ಚೆನ್ನಾಗಿ ಇಟ್ಟು ಅನ್ನದಲ್ಲಿ ಇದ್ದುಕೊಂಡಿರುತ್ತಾನೆ. ಯಾವ ಆನಂದರೂಪವಾದ ಅಮೃತವು ಹೊಳೆಯುತ್ತಿರುವದೋ ಅದನ್ನು ಧೀರರು ವಿಜ್ಞಾನದಿಂದ ಎಲ್ಲೆಲ್ಲಿಯೂ ಕಂಡುಕೊಳ್ಳುವರು.

---

1. ಈ ಮಹಿಮೆಯು ಸಾಮಾನ್ಯರಿಗೆ ಈಶ್ವರನಿದಾನೆಂದು ತಿಳಿಯುವದಕ್ಕೆ ಸಾಧಕವೆಂದು ಶ್ರುತಿಯು ಹೇಳುತ್ತದೆ. ಬೃ. ೩-ಅನ್ನು ನೋಡಿ.

2. ಅರಸನ ಪುರಕ್ಕೆ ಬೆಳಕುಗಳನ್ನು ಹತ್ತಿಸಿರುವಂತೆ ಬ್ರಹ್ಮಪುರದಲ್ಲಿ ಪ್ರತ್ಯಯಗಳ ಬೆಳಕು ಇರುವದು.

3. ಬುದ್ಧಿಪ್ರತ್ಯಯಗಳಿಗೆ ಸಾಕ್ಷಿಯಾಗಿ ತೋರಿಕೊಳ್ಳುತ್ತಿರುವದರಿಂದ.

4. ಛಾಂ. ಭಾ ೮-೧-೧ರಲ್ಲಿರುವ ಬ್ರಹ್ಮಪುರಶಬ್ದದ ವ್ಯಾಖ್ಯಾನವನ್ನು ನೋಡಿ. ಆದರೆ ಇಲ್ಲಿ ದಹರವಿದ್ಯೆಯಂತೆ ಉಪಾಸನೆಯನ್ನು ಹೇಳಿಲ್ಲ.

(ಭಾಷ್ಯ)

೮೧. ಸ ಹಿ ಆತ್ಮಾ ತತ್ರಸ್ಥಃ ಮನೋವೃತ್ತಿಭಿರೇವ ವಿಭಾವ್ಯತೇ ಇತಿ ಮನೋಮಯಃ । ಮನ ಉಪಾಧಿತ್ವಾತ್ । ಪ್ರಾಣಶರೀರನೇತಾ ಪ್ರಾಣಶ್ಚ ತತ್ ಶರೀರಂ ಚ ಪ್ರಾಣಶರೀರಮ್ । ತಸ್ಯ ಅಯಂ ನೇತಾ ; ಸ್ಥೂಲಾತ್ ಶರೀರಾತ್ ಶರೀರಾನ್ತರಂ[1] ಪ್ರತಿ । ಪ್ರತಿಷ್ಠಿತಃ ಅವಸ್ಥಿತಃ ಅನ್ನೇ ಭುಜ್ಯಮಾನಾನ್ನವಿಪರಿಣಾಮೇ ಪ್ರತಿದಿನಮ್ ಉಪಚೀಯಮಾನೇ ಅಪಚೀಯಮಾನೇ ಚ ಪಿಣ್ಡರೂಪಾನ್ನೇ ಹೃದಯಂ ಬುದ್ಧಿಂ ಪುಣ್ಡರೀಕಚ್ಛಿದ್ರೇ ಸನ್ನಿಧಾಯ ಸಮವಸ್ಥಾಪ್ಯ ಹೃದಯಾವಸ್ಥಾನಮೇವ ಹಿ ಆತ್ಮನಃ ಸ್ಥಿತಿಃ । ನ ಹಿ ಆತ್ಮನಃ ಸ್ಥಿತಿರನ್ನೇ । ತತ್ ಆತ್ಮತತ್ತ್ವಂ ವಿಜ್ಞಾನೇನ ವಿಶಿಷ್ಟೇನ ಶಾಸ್ತ್ರಾಚಾರ್ಯೋಪದೇಶಜನಿತೇನ　ಶಮದಮಧ್ಯಾನಸರ್ವತ್ಯಾಗವೈರಾಗ್ಯೋದ್ಭೂತೇನ ಪರಿಪಶ್ಯನ್ತಿ ಸರ್ವತಃ ಪೂರ್ಣಂ ಪಶ್ಯನ್ತಿ ಉಪಲಭನ್ತೇ ಧೀರಾಃ ವಿವೇಕಿನಃ । ಆನನ್ದರೂಪಂ ಸರ್ವಾನರ್ಥದುಃಖಾಯಾಸಪ್ರಹೀಣಮ್ ಅಮೃತಂ ಯದ್ ವಿಭಾತಿ ವಿಶೇಷೇಣ ಸ್ವಾತ್ಮನ್ಯೇವ ಭಾತಿ ಸರ್ವದಾ ॥

(ಭಾಷ್ಯಾರ್ಥ)

ಆ ಆತ್ಮನು ಅಲ್ಲಿದ್ದುಕೊಂಡು[2] ಮನಸ್ಸಿನ ವೃತ್ತಿಗಳಿಂದಲೇ ತಿಳಿಯಬರುತ್ತಾನೆ ; ಆದ್ದರಿಂದ ಮನೋಮಯನು.[3] ಏಕೆಂದರೆ ಮನಸ್ಸೇ ಅವನಿಗೆ ಉಪಾಧಿಯು. ಪ್ರಾಣಶರೀರನೇತೃ, ಪ್ರಾಣವೆಂಬ ಶರೀರವು ಪ್ರಾಣಶರೀರವು[4] ; ಅದನ್ನು (ಒಂದು) ಸ್ಥೂಲಶರೀರದಿಂದ ಮತ್ತೊಂದು (ಸ್ಥೂಲ) ಶರೀರಕ್ಕೆ ಒಯ್ಯುತ್ತಾನೆ.[5] ಅನ್ನದಲ್ಲಿ ತಿನ್ನುವ ಅನ್ನದ ಪರಿಣಾಮವಾಗಿ ದಿನದಿನವೂ ಬೆಳೆಯುತ್ತಲೂ ಬಡವಾಗುತ್ತಲೂ ಇರುವ ಶರೀರವೆಂಬ ಅನ್ನ (ಕಾರ್ಯ)ದಲ್ಲಿ ಹೃದಯವನ್ನು ಎಂದರೆ ಬುದ್ಧಿಯನ್ನು (ಹೃದಯ)ಕಮಲದ ರಂಧ್ರದಲ್ಲಿ ಸಂನಿಧಾಯ, ಸಮವಸ್ಥಾಪ್ಯ=ಚೆನ್ನಾಗಿ ಇಟ್ಟು (ಎಂದರ್ಥ). ಬುದ್ಧಿಯು ನಿಲ್ಲುವದೇ ಅಲ್ಲವೆ, ಆತ್ಮನು ನಿಂತಿರುವದೆನ್ನುವದು ?

---

1. ಈ. ಪಾ॥ ಪಾಠವೇ ಸರಿ. ಛಾಂ.ಭಾ. ೩-೧೪-೨ ರಲ್ಲಿ "ಪ್ರಾಣಶರೀರಃ" ಎಂಬುದರ ವ್ಯಾಖ್ಯಾನವನ್ನು ನೋಡಿ.

2. ಹೃದಯಪುಂಡರೀಕದಲ್ಲಿದ್ದುಕೊಂಡು.

3. ಮನೋಮಯ, ಪ್ರಾಣಶರೀರ ಮುಂತಾದವು ಛಾಂ. ೩-೧೪-೨ ರಲ್ಲಿರುವ ಶಾಂಡಿಲ್ಯವಿದ್ಯೆಯಲ್ಲಿರುವ ವಿಶೇಷಣಗಳೇ ಆದರೂ ಇಲ್ಲಿ ಉಪಾಸನೆಗಾಗಿ ಇವನ್ನು ಹೇಳಿಲ್ಲ. ಇದು ಕ್ರಮಮುಕ್ತಿಗಾಗಿ ಹೇಳಿದ ಉಪಾಸನೆ ಎಂಬ ಮತವನ್ನು ಪೀಠಿಕೆಯಲ್ಲಿ ವಿಮರ್ಶಿಸಿದೆ.

4. ಸೂಕ್ಷ್ಮಶರೀರವು. ಈ ಶರೀರವನ್ನು ಜೊತೆಯಲ್ಲಿ ತೆಗೆದುಕೊಂಡೇ ಜೀವನು ಶರೀರಾಂತರಕ್ಕೆ ಹೋಗುವನು. ಸೂ.ಭಾ. ೩-೧-೧ನ್ನು ನೋಡಿ.

5. ಸೂಕ್ಷ್ಮಶರೀರದೊಡನೆ ದೇಹದಿಂದ ದೇಹಕ್ಕೆ ಹೋಗುತ್ತಾನೆಂಬ ವ್ಯವಹಾರಕ್ಕೆ ವಿಷಯನಾಗುತ್ತಾನೆ ಎಂದರ್ಥ. ಮಾಂ.ಕಾ.ಭಾ. ೩-೯.

ಆತ್ಮನು (ನಿಜವಾಗಿ) ಅನ್ನದಲ್ಲಿ (ತಾನೇ) ಇರುವನೆನ್ನುವದು (ಸರಿ)ಯಾಗಲಾರದಷ್ಟೆ ?[1] ಆ ಆತ್ಮತತ್ತ್ವವನ್ನು **ವಿಜ್ಞಾನದಿಂದ** ಎಂದರೆ ಶಾಸ್ತ್ರ, ಆಚಾರ್ಯ - ಇವರ ಉಪದೇಶದಿಂದ ಉಂಟಾಗುವದಾಗಿಯೂ, ಶಮ, ದಮ, ಧ್ಯಾನ, ಸರ್ವತ್ಯಾಗ, ವೈರಾಗ್ಯ - ಇವುಗಳಿಂದ ತೋರಿಕೊಳ್ಳುವದಾಗಿಯೂ ಇರುವ ವಿಶಿಷ್ಟವಾದ ಜ್ಞಾನದಿಂದ[2] **ಧೀರರು** ಎಂದರೆ ವಿವೇಕಿಗಳು '**ಪರಿಪಶ್ಯನ್ತಿ**' (**ಪರಿ** ಎಂದರೆ) ಎಲ್ಲೆಲ್ಲಿಯೂ ಪೂರ್ಣವಾಗಿ ಕಂಡುಕೊಳ್ಳುವರು, ಅರಿತುಕೊಳ್ಳುವರು. **ಆನಂದರೂಪವಾದ** ಎಂದರೆ ಯಾವ ಅನರ್ಥಗಳ ದುಃಖದ ಆಯಾಸವೂ ಇಲ್ಲದ[3] **ಅಮೃತವಾದ**[4] ಯಾವ (ಬ್ರಹ್ಮವು) **ವಿಭಾತಿ** ಎಂದರೆ ವಿಶೇಷವಾಗಿ ತಮ್ಮ ಆತ್ಮನಲ್ಲಿಯೇ[5] ಹೊಳೆಯುತ್ತಿರುವದೋ (ಅದನ್ನು ಧೀರರು ಕಂಡುಕೊಳ್ಳುವರು).

## ಪರಮಾತ್ಮಜ್ಞಾನದ ಫಲ

### (ಭಾಷ್ಯ)

೮೨. ಅಸ್ಯ ಪರಮಾತ್ಮಜ್ಞಾನಸ್ಯ ಫಲಮಿದಮ್ ಅಭಿಧೀಯತೇ -

### (ಭಾಷ್ಯಾರ್ಥ)

ಈ ಪರಮಾತ್ಮಜ್ಞಾನಕ್ಕೆ ಫಲವಾಗಿ ಇದನ್ನು ಹೇಳಲಾಗುತ್ತದೆ :-

**ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ ।**
**ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥೮॥**

೮. ಆ ಪರಾವರನನ್ನು ಕಂಡುಕೊಂಡರೆ ಹೃದಯಗ್ರಂಥಿಯು ಭೇದವಾಗುತ್ತದೆ. ಸರ್ವಸಂಶಯಗಳೂ ಛೇದವಾಗುವವು. ಇವನ ಕರ್ಮಗಳೂ

1. 'ಹಾಲು ಬೆಂಕಿಯ ಮೇಲಿದೆ' ಎಂದರೆ ಪಾತ್ರೆಯಲ್ಲಿ ಹಾಲೂ ಪಾತ್ರೆಯು ಬೆಂಕಿಯ ಮೇಲೂ ಇದೆ ಎಂದು ಅರ್ಥಮಾಡುವಂತೆ ಇಲ್ಲಿ ಆತ್ಮನು ಬುದ್ಧಿಯ ಮೂಲಕ ಶರೀರದಲ್ಲಿ ತೋರಿಕೊಳ್ಳುತ್ತಾನೆ ಎಂದು ತಿಳಿಯಬೇಕು.

2. ಗೀ.ಭಾ. ೨-೨೧ ನೋಡಿ.

3. ''ಸುಖರೂಪಮ್'' ಎಂಬ ಪಾ॥ ಪಾಠವು ಅವಶ್ಯವಿಲ್ಲ ; ವಿಷಯಗಳನ್ನು ಉಪಭೋಗಿಸುವ ದುಃಖವಿಲ್ಲದ ಆನಂದವು ಆತ್ಮಸ್ವರೂಪದಲ್ಲಿದೆ ಎಂಬುದು ಪ್ರಕೃತ. ಮಾಂ.ಭಾ. ೫ ರಲ್ಲಿ 'ಆನನ್ದಮಯಃ' ಎಂಬುದರ ವ್ಯಾಖ್ಯಾನವನ್ನು ನೋಡಿ.

4. ಸ್ವರೂಪವೇ ಆಗಿರುವದರಿಂದ ನಾಶವಿಲ್ಲದ ಸ್ವಭಾವದ.

5. ಅದು ತಾವೇ ಎಂದು ವಿಶೇಷರೂಪದಿಂದ.

## (ಭಾಷ್ಯ)

೬೩. 'ಭಿದ್ಯತೇ[1] ಹೃದಯಗ್ರನ್ಥಿಃ' । (ಹೃದಯಗ್ರನ್ಥಿಃ) ಅವಿದ್ಯಾವಾಸನಾ ಪ್ರಚಯಃ, ಬುದ್ಧ್ಯಾಶ್ರಯಃ ಕಾಮಃ । "ಕಾಮಾ ಯೇಽಸ್ಯ ಹೃದಿ ಶ್ರಿತಾಃ" (ಬೃ. ೪-೪-೭, ಕ. ೨-೩-೧೪) ಇತಿ ಶ್ರುತ್ಯನ್ತರಾತ್ ಹೃದಯಾಶ್ರಯೋಽಸೌ ನಾತ್ಮಾಶ್ರಯಃ । ಭಿದ್ಯತೇ ಭೇದಂ ವಿನಾಶಮ್ ಆಯಾತಿ । ಛಿದ್ಯನ್ತೇ ಸರ್ವಜ್ಞೇಯವಿಷಯಾಃ ಸಂಶಯಾಃ ಲೌಕಿಕಾನಾಮ್ ಆ ಮರಣಾತ್[2] ಗಙ್ಗಾಸ್ರೋತೋವತ್ ಪ್ರವೃತ್ತಾಃ ವಿಚ್ಛೇದಮ್ ಆಯಾನ್ತಿ । ಅಸ್ಯ ವಿಚ್ಛಿನ್ನಸಂಶಯಸ್ಯ ನಿವೃತ್ತಾವಿದ್ಯಸ್ಯ ಯಾನಿ ವಿಜ್ಞಾನೋತ್ಪತ್ತೇಃ ಪ್ರಾಕ್ತನಾನಿ ಜನ್ಮಾನ್ತರೇ ಚ ಅಪ್ರವೃತ್ತಫಲಾನಿ ಜ್ಞಾನೋತ್ಪತ್ತಿ ಸಹಭಾವೀನಿ ಚ ಕ್ಷೀಯನ್ತೇ ಕರ್ಮಾಣಿ । ನ ತು ಏತಜ್ಜನ್ಮಾರಮ್ಭಕಾಣಿ । ಪ್ರವೃತ್ತ ಫಲತ್ವಾತ್ । ತಸ್ಮಿನ್ ಸರ್ವಜ್ಞೇ ಅಸಂಸಾರಿಣಿ ಪರಾವರೇ ಪರಂ ಚ ಕಾರಣಾತ್ಮನಾ ಅವರಂ ಚ ಕಾರ್ಯಾತ್ಮನಾ ತಸ್ಮಿನ್ ಪರಾವರೇ ಸಾಕ್ಷಾತ್ "ಅಹಮಸ್ಮಿ" ಇತಿ ದೃಷ್ಟೇ ಸಂಸಾರಕಾರಣೋಚ್ಛೇದಾತ್ ಮುಚ್ಯತೇ ಇತ್ಯರ್ಥಃ ॥

## (ಭಾಷ್ಯಾರ್ಥ)

ಹೃದಯಗ್ರಂಥಿಯು ಭೇದವಾಗುತ್ತದೆ. (ಹೃದಯಗ್ರಂಥಿ ಎಂದರೆ) ಅವಿದ್ಯೆಯ[3] ವಾಸನೆಗಳಿಂದ ಬೆಳೆದುಕೊಂಡಿರುವ ಬುದ್ಧಿಯನ್ನು ಆಶ್ರಯಿಸಿಕೊಂಡಿರುವ ಕಾಮವು. "ಈತನ ಹೃದಯವನ್ನು ಆಶ್ರಯಿಸಿಕೊಂಡಿರುವ ಕಾಮಗಳು ಯಾವವುಂಟೋ (ಅವುಗಳೆಲ್ಲ ಯಾವಾಗ ತೊಲಗುವವೋ)" (ಬೃ. ೪-೪-೭, ಕ. ೨-೩-೧೪) ಎಂದು ಬೇರೊಂದು ಶ್ರುತಿಯಲ್ಲಿರುವದರಿಂದ **ಈ (ಕಾಮವು) ಹೃದಯವನ್ನು ಆಶ್ರಯಿಸಿಕೊಂಡಿರುವದೇ ಹೊರತು ಆತ್ಮನನ್ನು ಆಶ್ರಯಿಸಿರುವದಿಲ್ಲ.**[4] 'ಭಿದ್ಯತೇ' ಭೇದನವನ್ನು ಎಂದರೆ ವಿನಾಶನವನ್ನು ಹೊಂದುತ್ತದೆ. ಜ್ಞೇಯದ ವಿಷಯದಲ್ಲಿ[5] ಲೋಕದ ಜನರಿಗೆ

---

1. ವಾ॥ ಪಾಠದಲ್ಲಿ 'ಹೃದಯಗ್ರನ್ಥಿಃ' ಎಂಬ ಮಾತಿಲ್ಲ. ಆ॥ ಪಾಠದಲ್ಲಿ ಕಂಸದಲ್ಲಿ ಹಾಕಿರುವ ಮಾತು ಬೇಕೆಂದು ತೋರುತ್ತದೆ.

2. "ಆಮರಣಾತ್ತು" ಎಂಬ ಪಾಠದಲ್ಲಿ ತು ಬೇಕಿಲ್ಲ.

3. ಇಲ್ಲಿ ಅವಿದ್ಯೆಯ ವಿಷಯದಲ್ಲಿ ವ್ಯಾಖ್ಯಾನಕಾರನು ಬರೆದಿರುವ ಅಭಿಪ್ರಾಯದ ವಿಮರ್ಶೆಯು ಪೀಠಿಕೆಯಲ್ಲಿರುತ್ತದೆ.

4. ಕಾಮಗಳು ಆತ್ಮನನ್ನು ಆಶ್ರಯಿಸಿಕೊಂಡಿರುತ್ತವೆ ಎಂಬುದು ವೈಶೇಷಿಕರ ಮತ್ತು ಕೆಲವು ವೇದಾಂತಿಗಳ ಮತವು ; ಇದನ್ನು ಭಾಷ್ಯದಲ್ಲಿ ಅಲ್ಲಲ್ಲಿ ಖಂಡಿಸಿರುತ್ತದೆ. ಕ.ಭಾ. ೨-೩-೧೪ ; ಬೃ.ಭಾ. ೪-೩-೨೨, ೪-೪-೭ ; ಗೀ. ಭಾ. ೧೩-೬.

5. 'ಜ್ಞೇಯದ ವಿಷಯದಲ್ಲಿರುವ ಸಂಶಯಗಳೂ' ಎಂಬುದಕ್ಕಿಂತ ಈಗ ನಾವು ಕೊಟ್ಟಿರುವ ಅನುವಾದದಲ್ಲಿ ಒಂದು ಸ್ವಾರಸ್ಯವುಂಟು. ಇತರ ಜ್ಞೇಯಗಳು ಜ್ಞೇಯಾಭಾಸವಾಗಿರು

ಸಾಯುವವರೆಗೂ ಗಂಗಾಪ್ರವಾಹದಂತೆ ಬರುತ್ತಿರುವವಷ್ಟೆ. (ಅಂಥ) ಸಂಶಯಗಳೆಲ್ಲವೂ ಛೇದವಾಗುವವು (ಅಲ್ಲಿಗೇ) ಕಡಿವಡೆಯುವವು. (ಹೀಗೆ) ಸಂಶಯಗಳು ಕಡಿದುಹೋಗಿ ಅವಿದ್ಯೆಯು ತೊಲಗಿರುವ ಈತನಿಗೆ **ಜ್ಞಾನವುಂಟಾಗುವದಕ್ಕೆ ಮುಂಚೆ ಮಾಡಿದ್ದ, ಮತ್ತು ಹಿಂದಿನ ಜನ್ಮಗಳಲ್ಲಿ ಮಾಡಿ (ಇನ್ನೂ) ಫಲವನ್ನು ಕೊಡುವದಕ್ಕೆ ಪ್ರಾರಂಭಿಸದೆ ಇರುವ, ಮತ್ತು ಜ್ಞಾನವು ಉಂಟಾಗುವಾಗ ಜೊತೆಯಲ್ಲಿರುವ ಕರ್ಮಗಳು ಕ್ಷಯವಾಗುವವು. ಆದರೆ ಈ ಜನ್ಮವು (ಯಾವ ಕರ್ಮಗಳಿಂದ) ಉಂಟಾಗಿರುವದೋ (ಅವು) ಕ್ಷಯವಾಗುವದಿಲ್ಲ. ಏಕೆಂದರೆ ಅವುಗಳ ಫಲವು ಪ್ರಾರಂಭಿಸಿ ಆಗಿಬಿಟ್ಟಿದೆ.**[1] ಆ ಸರ್ವಜ್ಞನಾದ, ಸಂಸಾರಿಯಲ್ಲದ ಪರಾವರನನ್ನು ಕಾರಣರೂಪದಿಂದ ಪರ(ಹೆಚ್ಚಿನವ)ನೂ ಕಾರ್ಯರೂಪದಿಂದ ಅವರನೂ (ಕಡಿಮೆಯವನೂ) ಆಗಿರುವ ಆ ಪರಾವರನನ್ನು - ನೇರಾಗಿ "ನಾನೇ (ಅವನಾ)ಗಿರುವೆನು". ಎಂದು ಕಂಡುಕೊಂಡರೆ ಸಂಸಾರದ ಕಾರಣವು ನಾಶವಾಗಿಬಿಡುವದರಿಂದ ಮುಕ್ತಿಯನ್ನು ಪಡೆಯುತ್ತಾನೆ ಎಂದರ್ಥ.

೮೪. ಉಕ್ತಸ್ಯೈವಾರ್ಥಸ್ಯ ಸಂಕ್ಷೇಪಾಭಿಧಾಯಕಾ ಉತ್ತರೇ ಮನ್ತ್ರಾಸ್ತ್ರಯೋಽಪಿ ||

**(ಭಾಷ್ಯಾರ್ಥ)**

ಹಿಂದೆ ಹೇಳಿರುವ ವಿಷಯವನ್ನೇ ಮುಂದಿನ ಮೂರು ಮಂತ್ರಗಳೂ ಸಂಗ್ರಹವಾಗಿ ಹೇಳುವವು.

## ಉಪಸಂಹಾರ

**ಹಿರಣ್ಮಯೇ ಪರೇ ಕೋಶೇ ವಿರಜಂ ಬ್ರಹ್ಮ ನಿಷ್ಕಲಮ್ ।**
**ತಚ್ಛುಭ್ರಂ ಜ್ಯೋತಿಷಾಂ ಜ್ಯೋತಿಸ್ತದ್ಯದಾತ್ಮವಿದೋ ವಿದುಃ ॥೧೦॥**

೧೦. ಹಿರಣ್ಮಯವಾದ ಹೆಚ್ಚಿನ ಕೋಶದಲ್ಲಿ ರಜಸ್ಸಿಲ್ಲದ ನಿಷ್ಕಲವಾದ ಬ್ರಹ್ಮವು (ಇರುವದು). ಅದು ಶುಭ್ರವಾಗಿರುವದು, ಜ್ಯೋತಿಗಳಿಗೆಲ್ಲ ಜ್ಯೋತಿಯಾಗಿರುವದು. ಯಾವ ಅದನ್ನು ಆತ್ಮವಿದರು ಬಲ್ಲರು.

ವದರಿಂದಲೂ ಅವುಗಳ ತತ್ತ್ವವು ಆತ್ಮನೇ ಆಗಿರುವದರಿಂದಲೂ ಆತ್ಮಜ್ಞಾನವಾದ ಹೊರತು ಮಿಕ್ಕ ವಿಷಯಗಳ ಸಂಶಯಗಳು ತೊಲಗುವದಿಲ್ಲ ಎಂಬ ಅಭಿಪ್ರಾಯವು ಈಗ ಹೊರಡುತ್ತದೆ. ಆತ್ಮವಿಷಯದ ಸಂಶಯಗಳು ತೊಲಗುವವೆಂಬುದನ್ನು ಹೇಳಬೇಕಾದದ್ದೇ ಇಲ್ಲ.

1. ಪ್ರಾರಬ್ಧಕರ್ಮದ ವಿಷಯಕ್ಕೆ ಪೀಠಿಕೆಯನ್ನು ನೋಡಿರಿ.

(ಭಾಷ್ಯ)

೮೫. ಹಿರಣ್ಮಯೇ ಜ್ಯೋತಿರ್ಮಯೇ ಬುದ್ಧಿವಿಜ್ಞಾನಪ್ರಕಾಶೇ । ಪರೇ ಕೋಶೇ । ಕೋಶ ಇವ ಅಸೇಃ । ಆತ್ಮಸ್ವರೂಪೋಪಲಬ್ಧಿಸ್ಥಾನತ್ವಾತ್ । ಪರಂ ತತ್ (?) ಸರ್ವಾಭ್ಯನ್ತರತ್ವಾತ್ । ತಸ್ಮಿನ್ ವಿರಜಮ್ ಅವಿದ್ಯಾದ್ಯಶೇಷದೋಷರಜೋಮಲ ವರ್ಜಿತಂ ಬ್ರಹ್ಮ ಸರ್ವಮಹತ್ವಾತ್ ಸರ್ವಾತ್ಮತ್ವಾಚ್ಚ । ನಿಷ್ಕಲಂ ನಿರ್ಗತಾಃ ಕಲಾಃ ಯಸ್ಮಾತ್ ತತ್ ನಿಷ್ಕಲಂ ನಿರವಯವಮ್ ಇತ್ಯರ್ಥಃ । ಯಸ್ಮಾತ್ ವಿರಜಂ ನಿಷ್ಕಲಂ ಚ ಅತಃ ತಚ್ಛುಭ್ರಂ ಶುದ್ಧಂ ಜ್ಯೋತಿಷಾಂ ಸರ್ವಪ್ರಕಾಶಾತ್ಮನಾಮ್ ಅಗ್ನ್ಯಾದೀನಾಮಪಿ ತಜ್ಜ್ಯೋತಿಃ ಅವಭಾಸಕಮ್ । ಅಗ್ನ್ಯಾದೀನಾಮಪಿ ಜ್ಯೋತಿಷ್ಟ್ವಮ್ ಅನ್ತರ್ಗತ ಬ್ರಹ್ಮಾತ್ಮಚೈತನ್ಯಜ್ಯೋತಿರ್ನಿಮಿತ್ತಮ್ ಇತ್ಯರ್ಥಃ । ತದ್ ಹಿ ಪರಂ ಜ್ಯೋತಿಃ ಯದನ್ಯಾನವಭಾಸ್ಯಮ್ ಆತ್ಮಜ್ಯೋತಿಃ । ತತ್ ಯತ್ ಆತ್ಮವಿದಃ ಆತ್ಮಾನಂ ಸ್ವಂ ಶಬ್ದಾದಿವಿಷಯಬುದ್ಧಿಪ್ರತ್ಯಯಸಾಕ್ಷಿಣಂ ಯೇ ವಿವೇಕಿನೋ ವಿದುಃ ವಿಜಾನನ್ತಿ ತೇ ಆತ್ಮವಿದಃ ತತ್ ವಿದುಃ ಆತ್ಮಪ್ರತ್ಯಯಾನುಸಾರಿಣಃ । ಯಸ್ಮಾತ್ ಪರಂ ಜ್ಯೋತಿಃ ತಸ್ಮಾತ್ ತ ಏವ ತದ್ ವಿದುಃ, ನೇತರೇ ಬಾಹ್ಯಾರ್ಥಪ್ರತ್ಯಯಾನುಸಾರಿಣಃ ॥

(ಭಾಷ್ಯಾರ್ಥ)

ಹಿರಣ್ಮಯವಾದ ಎಂದರೆ ಬೆಳಕಿನಿಂದ ತುಂಬಿರುವ, ಬುದ್ಧಿಯ ವಿಜ್ಞಾನಗಳ ಬೆಳಕುಳ್ಳ[1] ಎಂದರ್ಥ. ಅಂಥ ಹೆಚ್ಚಿನ ಕೋಶದಲ್ಲಿ ಕತ್ತಿಯ ಒರೆಯಂತೆ ಆತ್ಮಸ್ವರೂಪವನ್ನು ಅರಿತುಕೊಳ್ಳುವದಕ್ಕೆ ಸ್ಥಾನವಾಗಿರುವದರಿಂದ (ಅದು 'ಕೋಶ' ಒರೆ ಎನಿಸಿಕೊಂಡಿದೆ). ಎಲ್ಲಕ್ಕೂ ಅದು ಒಳಗಡೆಯಲ್ಲಿರುವದರಿಂದ[2] ಅದು ಹೆಚ್ಚಿನ (ಕೋಶವು). ಆ (ಹೆಚ್ಚಿನ ಕೋಶದಲ್ಲಿ) ರಜಸ್ಸಿಲ್ಲದ ಎಂದರೆ ಅವಿದ್ಯೆಯೇ ಮುಂತಾದ ಯಾವ ಧೂಳಿನ ಕಶ್ಮಲವೂ ಇಲ್ಲದ[3]. ಬ್ರಹ್ಮವು ಎಲ್ಲಕ್ಕಿಂತಲೂ ದೊಡ್ಡದಾಗಿರುವದರಿಂದಲೂ ಎಲ್ಲದರ ರೂಪದಲ್ಲಿರುವದರಿಂದ (ಬ್ರಹ್ಮವೆನಿಸಿರುವ ತತ್ತ್ವವು ಇದ್ದುಕೊಂಡಿರುವದು). ನಿಷ್ಕಲವಾದದ್ದು (ಅದಕ್ಕೆ) ಯಾವ ಕಲೆಗಳೂ

---

1. ಹೃದಯದಲ್ಲಿ ಬುದ್ಧಿಯ ವಿಜ್ಞಾನಗಳೆಂಬ ಬೆಳಕುಗಳು ಇರುತ್ತವೆ. ಅಲ್ಲಿಯೇ ಆತ್ಮನನ್ನು ಅರಿತುಕೊಳ್ಳುವದಕ್ಕೆ ಸೌಕರ್ಯವಿದೆ. ತೈ.ಭಾ. ೨-೧ ರಲ್ಲಿ "ನಿಹಿತಂ ಗುಹಾಯಾಮ್" ಎಂಬುದರ ವ್ಯಾಖ್ಯಾನವನ್ನು ನೋಡಿರಿ.

2. ದೇಹ, ಇಂದ್ರಿಯಗಳು, ಪ್ರಾಣ, ಮನಸ್ಸು, ಬುದ್ಧಿ - ಇವುಗಳಲ್ಲಿ ಒಂದಕ್ಕಿಂತ ಒಂದು ಒಳಗೆ ಇವೆ ; ಬುದ್ಧಿಯು ಎಲ್ಲಕ್ಕೂ ಒಳಗೆ ಇದೆ. ಒರೆಯ ಮೇಲೆ ಒರೆಯನ್ನು ಹಾಕಿ ತೀರ ಒಳಗಿನ ಒರೆಯೊಳಗೆ ಕತ್ತಿಯನ್ನಿಟ್ಟಿರುವಂತೆ ಬ್ರಹ್ಮವು ತೀರ ಒಳಗಿನ ಬುದ್ಧಿಗೂ ಒಳಗಿದೆ ಎಂದರ್ಥ.

3. ಅವಿದ್ಯೆ, ಕಾಮ ಕರ್ಮ - ಇವು ಬುದ್ಧಿಯಲ್ಲಿರುವ ಕಶ್ಮಲಗಳು ; ಇವು ಬ್ರಹ್ಮದಲ್ಲಿಲ್ಲ.

ಇರುವದಿಲ್ಲ.[1] ಅವಯುವಗಳಿಲ್ಲದ್ದು ಎಂದರ್ಥ. (ಹೀಗೆ) ವಿರಜವೂ ನಿಷ್ಕಲವೂ ಆಗಿರುವದರಿಂದ ಅದು ಶುಭ್ರವಾಗಿರುವದು, ಎಂದರೆ ಶುದ್ಧವಾಗಿರುವದು. ಜ್ಯೋತಿಗಳಿಗೆಲ್ಲ ಬೆಳಕಿನ ಸ್ವರೂಪವಾಗಿರುವವಕ್ಕೆಲ್ಲ ಎಂದರೆ ಅಗ್ನಿಯೇ ಮುಂತಾದವುಗಳಿಗೂ ಕೂಡ ಅದು ಜ್ಯೋತಿ (ಅವುಗಳನ್ನೂ) ಬೆಳಗುವಂಥದ್ದು. ಅಗ್ನಿಯೇ ಮುಂತಾದವುಗಳು ಕೂಡ ಜ್ಯೋತಿ (ಎನಿಸಿಕೊಂಡಿ)ರುವದು ಒಳಗಿರುವ ಬ್ರಹ್ಮಾತ್ಮನ ಚೈತನ್ಯ ಜ್ಯೋತಿಯ ಕಾರಣದಿಂದ ಎಂದರ್ಥ.[2] ಇನ್ನೊಂದರಿಂದ ಬೆಳಗದೆ ಇರುವ (ಈ) ಆತ್ಮಜ್ಯೋತಿ(ಯುಂಟಲ್ಲ, ಇದೇ ಅಲ್ಲವೆ, ಹೆಚ್ಚಿನ ಜ್ಯೋತಿಯು ? ಯಾವ ಅದನ್ನು ಆತ್ಮವಿದರು - ಆತ್ಮವನ್ನು ಎಂದರೆ ಶಬ್ದವೇ ಮುಂತಾದ ವಿಷಯವಾದ ಬುದ್ಧಿಪ್ರತ್ಯಯಗಳಿಗೆ ಸಾಕ್ಷಿಯಾಗಿರುವ ತಮ್ಮ (ಸ್ವರೂಪವನ್ನು) ಯಾವ ವಿವೇಕಿಗಳು (ಬೇರ್ಪಡಿಸಿ) ತಿಳಿದುಕೊಂಡಿರುವರೋ ಅವರು ಆತ್ಮವಿದರು. **ಆತ್ಮಪ್ರತ್ಯಯವನ್ನು**[3] **ಅನುಸರಿಸುವ** (ಜ್ಞಾನಿಗಳು ಮಾತ್ರ) ಅದನ್ನು ಬಲ್ಲರು. ಅದು ಹೆಚ್ಚಿನ ಜ್ಯೋತಿಯಾದ್ದರಿಂದ ಅವರೇ ಅದನ್ನು ಬಲ್ಲರೇ ಹೊರತು ಹೊರಗಿನ ವಿಷಯಗಳ ಪ್ರತ್ಯಯಗಳನ್ನು[4] ಅನುಸರಿಸುವ ಇತರರು (ಅರಿ)ಯರು.

**(ಭಾಷ್ಯ)**

೮೬. ಕಥಂ ತತ್ ''ಜ್ಯೋತಿಷಾಂ ಜ್ಯೋತಿಃ'' ಇತಿ ? ಉಚ್ಯತೇ -

**(ಭಾಷ್ಯಾರ್ಥ)**

ಅದು ಜ್ಯೋತಿಗಳೆಲ್ಲಕ್ಕೂ ಜ್ಯೋತಿ ಎಂಬುದು ಹೇಗೆ ? - ಎಂದರೆ (ಅದನ್ನು ಮುಂದಿನ ಮಂತ್ರವು) ಹೇಳುತ್ತದೆ :-

**ನ ತತ್ರ ಸೂರ್ಯೋ ಭಾತಿ ನ ಚನ್ದ್ರತಾರಕಂ**
**ನೇಮಾ ವಿದ್ಯುತೋ ಭಾನ್ತಿ ಕುತೋಽಯಮಗ್ನಿಃ ।**
**ತಮೇವ ಭಾನ್ತಮನುಭಾತಿ ಸರ್ವಂ**
**ತಸ್ಯ ಭಾಸಾ ಸರ್ವಮಿದಂ ವಿಭಾತಿ** ॥೧೦॥

1. ಪ್ರ. ೬-೪ ರಲ್ಲಿ ಈ ಕಲೆಗಳನ್ನು ಹೇಳಿದೆ. ಇವುಗಳು ಬ್ರಹ್ಮಕ್ಕೆ ಸಂಬಂಧಪಟ್ಟವಲ್ಲ.

2. ಬೆಳಕನ್ನೂ ಚೈತನ್ಯವೇ ತೋರಿಸಬೇಕಾಗಿರುವದರಿಂದ ಎಲ್ಲಾ ಬೆಳಕಿಗೂ ಈ ಚೈತನ್ಯವು ಬೆಳಕು.

3. ದ್ರಷ್ಟೃ, ಶ್ರೋತೃ - ಮುಂತಾದ ಪ್ರತ್ಯಯಗಳನ್ನು ಬಿಟ್ಟು ನಿರುಪಹಿತವಾದ ಆತ್ಮಸ್ವರೂಪವನ್ನು ಮಾತ್ರ ತಿಳಿಯುವ ಪ್ರತ್ಯಯವನ್ನು. ಮಾಂ. ೭, ಬೃ. ೧-೪-೭.

4. ಶಬ್ದಾದಿಗಳನ್ನು ಅರಿಯುವ ಪ್ರತ್ಯಯಗಳು ; ಇವನ್ನು ಅನುಸರಿಸುವವರು ತಾವು ಶ್ರೋತ್ರಾದಿ (ಕೇಳುವವರು ಮುಂತಾದ) ರೂಪರೆಂದು ತಪ್ಪಾಗಿ ತಿಳಿದುಕೊಂಡಿರುವರು.

೧೧. ಅಲ್ಲಿ ಸೂರ್ಯನು ಬೆಳಗುವದಿಲ್ಲ. ಚಂದ್ರತಾರಕೆಗಳು ಬೆಳಗುವದಿಲ್ಲ, ಈ ಮಿಂಚುಗಳೂ ಬೆಳಗುವದಿಲ್ಲ. ಇನ್ನು ಈ ಬೆಂಕಿ (ಬೆಳಗುವ ಮಾತು) ಎಲ್ಲಿ ? ಅವನು ಬೆಳಗುವದನ್ನೇ ಅನುಸರಿಸಿ ಎಲ್ಲವೂ ಬೆಳಗುತ್ತಿರುವದು ; ಅವನ ಬೆಳಕಿನಿಂದಲೇ ಇದೆಲ್ಲವೂ ಬೆಳಗುತ್ತಿರುವದು.

## (ಭಾಷ್ಯ)

೬೭. ನ ತತ್ರ ತಸ್ಮಿನ್ ಸ್ವಾತ್ಮಭೂತೇ ಬ್ರಹ್ಮಣಿ ಸರ್ವಾವಭಾಸಕೋಽಪಿ ಸೂರ್ಯಃ ಭಾತಿ । ತದ್ ಬ್ರಹ್ಮ ನ ಪ್ರಕಾಶಯತಿ ಇತ್ಯರ್ಥಃ । ಸ ಹಿ ತಸ್ಯೈವ ಭಾಸಾ ಸರ್ವಮ್ ಅನ್ಯತ್ ಅನಾತ್ಮಜಾತಂ ಪ್ರಕಾಶಯತಿ[1] । ನ ತು ತಸ್ಯ ಸ್ವತಃ ಪ್ರಕಾಶನ ಸಾಮರ್ಥ್ಯಮ್ । ತಥಾ ನ ಚನ್ದ್ರತಾರಕಮ್ । ನ ಇಮಾ ವಿದ್ಯುತಃ ಭಾನ್ತಿ ಕುತಃ ಅಯಮಗ್ನಿಃ ಅಸ್ಮದ್ಗೋಚರಃ ? ಕಿಂ ಬಹುನಾ ? ಯತ್ ಇದಂ ಜಗತ್ ಭಾತಿ ತತ್ ತಮೇವ ಪರಮೇಶ್ವರಂ ಸ್ವತಃ ಭಾರೂಪತ್ವಾತ್ ಭಾನ್ತಂ ದೀಪ್ಯಮಾನಮ್ ಅನು ಭಾತಿ ಅನುದೀಪ್ಯತೇ । ಯಥಾ ಜಲೋಲ್ಮುಕಾದಿ ಅಗ್ನಿಸಂಯೋಗಾತ್ ಅಗ್ನಿಂ ದಹನ್ತಮ್ ಅನುದಹತಿ ನ ಸ್ವತಃ ತದ್ವತ್ । ತಸ್ಯೈವ ಭಾಸಾ ದೀಪ್ತ್ಯಾ ಸರ್ವಮಿದಂ ಸೂರ್ಯಾದಿ ಜಗತ್ ವಿಭಾತಿ । ಯತ ಏವಂ ತದೇವ ಬ್ರಹ್ಮ ಭಾತಿ ಚ ವಿಭಾತಿ ಚ ಕಾರ್ಯಗತೇನ ವಿವಿಧೇನ ಭಾಸಾ, ಅತಃ ತಸ್ಯ ಬ್ರಹ್ಮಣಃ ಭಾರೂಪತ್ವಂ ಸ್ವತಃ ಅವಗಮ್ಯತೇ । ನ ಹಿ ಸ್ವತಃ ಅವಿದ್ಯಮಾನಂ ಭಾಸನಮ್ ಅನ್ಯಸ್ಯ ಕರ್ತುಂ ಶಕ್ನೋತಿ ಘಟಾದೀನಾಮ್ ಅನ್ಯಾವಭಾಸಕತ್ವಾದರ್ಶನಾತ್ ಭಾರೂಪಾಣಾಂ ಚ ಆದಿತ್ಯಾದೀನಾಂ ತದ್ದರ್ಶನಾತ್ ॥

## (ಭಾಷ್ಯಾರ್ಥ)

ಅಲ್ಲಿ ಎಂದರೆ ಆ ತನ್ನ[2] ಆತ್ಮನಾದ ಬ್ರಹ್ಮದಲ್ಲಿ ಎಲ್ಲವನ್ನೂ ಬೆಳಗಬಲ್ಲವನಾದರೂ ಸೂರ್ಯನು ಬೆಳಗುವದಿಲ್ಲ ; ಆ ಬ್ರಹ್ಮವನ್ನು ಬೆಳಗಿ ತೋರಿಸುವದಿಲ್ಲ ಎಂದರ್ಥ. ಏಕೆಂದರೆ ಆ (ಸೂರ್ಯನು) ಆ (ಬ್ರಹ್ಮದ್ದೇ) ಆದ ಬೆಳಕಿನಿಂದ ಮಿಕ್ಕ ಎಲ್ಲಾ ಅನಾತ್ಮಸಮೂಹವನ್ನೂ ಬೆಳಗಿತೋರಿಸುತ್ತಿದ್ದಾನೆಯೇ ಹೊರತು ಅವನಿಗೆ ತಾನೇ (ವಸ್ತುಗಳನ್ನು) ಬೆಳಗುವ ಶಕ್ತಿ (ಇರುವ)ದಿಲ್ಲ. ಇದರಂತೆ ಚಂದ್ರ ತಾರಕೆಗಳೂ (ಬೆಳಗುವ)ದಿಲ್ಲ, ಈ ಮಿಂಚುಗಳೂ ಬೆಳಗುವದಿಲ್ಲ. ಇನ್ನು ನಮಗೆ ಕಾಣಿಸುವ ಈ ಬೆಂಕಿಯು (ಬೆಳಗುವ ಮಾತು) ಎಲ್ಲಿಯದು ? ಹೆಚ್ಚು (ಹೇಳಿದ್ದ)

1. ''ಇತ್ಯರ್ಥಃ'' ಎಂಬ ಆ॥ ಪಾಠವು ಇಲ್ಲಿ ಬೇಕಿಲ್ಲ.
2. ಸೂರ್ಯನ. ಗೀ. ೧೫-೧೨.

ರಿಂದೇನು ? ಈ ಜಗತ್ತು ಬೆಳಗುತ್ತಿದೆಯಷ್ಟೆ ; ಇದು ಅದೇ ಪರಮೇಶ್ವರನು ತಾನೇ ಬೆಳಕಿನ ರೂಪವಾಗಿರುವದರಿಂದ ಬೆಳಗುತ್ತಿರುವದನ್ನು, ಹೊಳೆಯುತ್ತಿರುವದನ್ನು ಅನುಸರಿಸಿಯೇ[1] ಬೆಳಗುತ್ತಿದೆ, ಹೊಳೆಯುತ್ತಿದೆ. ಹೇಗೆ ನೀರು, ಕೊಳ್ಳಿ-ಮುಂತಾದದ್ದು ಬೆಂಕಿಯ ಸಂಯೋಗದಿಂದ ಸುಡುವ ಬೆಂಕಿಯನ್ನು ಅನುಸರಿಸಿ ಸುಡುವದೇ ಹೊರತು ತಾನೇ ಸುಡುವದಿಲ್ಲವೋ ಅದರಂತೆ ಅದೇ (ಬ್ರಹ್ಮದ) ಬೆಳಕಿನಿಂದ ಹೊಳಪಿನಿಂದ ಇದೆಲ್ಲವೂ (ಈ) ಸೂರ್ಯನೇ ಮುಂತಾದ ಜಗತ್ತು ವಿವಿಧವಾಗಿ ಬೆಳಗುತ್ತಿರುವದು. ಹೀಗಿರುವದರಿಂದ ಆ ಬ್ರಹ್ಮವೇ ಬೆಳುಗುತ್ತಲೂ ಕಾರ್ಯಗಳಲ್ಲಿರುವ ಬಗೆಬಗೆಯ ಬೆಳಕಿನಿಂದ ಬಗೆಬಗೆಯಾಗಿ ಬೆಳಗುತ್ತಲೂ[2] ಇರುವದರಿಂದ ಆ ಬ್ರಹ್ಮವು ತಾನೇ ಬೆಳಕಿನ ರೂಪವಾದದ್ದೆಂದು ನಿಶ್ಚಯವಾಯಿತು. ಏಕೆಂದರೆ ತನ್ನಲ್ಲಿಲ್ಲದ ಬೆಳಕನ್ನು ಮತ್ತೊಂದಕ್ಕೆ ಉಂಟುಮಾಡುವದಕ್ಕೆ (ಅದು) ಶಕ್ತವಾಗಲಾರದು ; ಗಡಿಗೆ ಮುಂತಾದವುಗಳಿಗೆ ಮತ್ತೊಂದನ್ನು ಬೆಳಗುವ (ಶಕ್ತಿಯು) ಕಂಡುಬರುವದಿಲ್ಲವಾದ್ದರಿಂದಲೂ ಬೆಳಕಿನ ರೂಪದ ಸೂರ್ಯನೇ ಮುಂತಾದವುಗಳಲ್ಲಿ ಅದು[3] ಕಂಡು ಬರುವದರಿಂದಲೂ (ಹೀಗೆಂದು ತಿಳಿಯಬೇಕು).

## (ಭಾಷ್ಯ)

೮೮. ಯತ್, ತತ್ ಜ್ಯೋತಿಷಾಂ ಜ್ಯೋತಿರ್ಬ್ರಹ್ಮ, ತದೇವ ಸತ್ಯಮ್, ಸರ್ವಂ ತದ್ವಿಕಾರಃ 'ವಾಚಾರಮ್ಭಣಂ ವಿಕಾರೋ ನಾಮಧೇಯಮಾತ್ರಮ್ ಅನೃತಮ್' ಇತರತ್ ಇತ್ಯೇತಮ್ ಅರ್ಥಂ ವಿಸ್ತರೇಣ ಹೇತುತಃ ಪ್ರತಿಪಾದಿತಂ ನಿಗಮನಸ್ಥಾನೀಯೇನ ಮನ್ತ್ರೇಣ ಪುನರುಪಸಂಹರತಿ ||

## (ಭಾಷ್ಯಾರ್ಥ)

ಜ್ಯೋತಿಗಳಿಗೆಲ್ಲಕ್ಕೂ ಜ್ಯೋತಿಯಾಗಿರುವ ಆ ಬ್ರಹ್ಮವುಂಟಲ್ಲ, ಅದೇ ಸತ್ಯವು, ಉಳಿದದ್ದೆಲ್ಲವೂ ಅದರ ವಿಕಾರವು ; ವಿಕಾರವೆಂಬುದು ಮಾತಿನಿಂದಾಗಿರುವ ಬರಿಯ ಹೆಸರು ಮಾತ್ರವೇ (ಆಗಿರುವದರಿಂದ) ಅನೃತವು ಎಂಬೀ ವಿಷಯವನ್ನು ವಿಸ್ತಾರ

1. ಬ್ರಹ್ಮದ ಬೆಳಕೇ ಜಗತ್ತಿನ ಬೆಳಕೆಂದು ಭಾವ. ಇಲ್ಲಿ ಬೆಳಕೆಂದರೆ ಸೂರ್ಯನೇ ಮುಂತಾದವುಗಳ ಬೆಳಕಿನಂತೆ ಇರುವ ತೇಜಸ್ಸಲ್ಲ. ಈ ಮಂತ್ರದರ್ಥವನ್ನು ಸೂ.ಭಾ. ೧-೩-೨೨ರಲ್ಲಿ ವಿಚಾರಮಾಡಿದೆ.

2. ಕ.ಭಾ. ೨-೨-೧೫ನ್ನು ಈ ಭಾಷ್ಯಕ್ಕೆ ಹೋಲಿಸಿರಿ.

3. ಮಿಕ್ಕ ವಸ್ತುಗಳನ್ನು ಬೆಳಗಿ ತೋರುವದು. ಸ್ವತಃ ಬೆಳಕಿನ ರೂಪವಾಗಿರುವದೆಂದು ನಾವು ನಂಬುವ ಪದಾರ್ಥಗಳೇ ಮತ್ತೊಂದಕ್ಕೆ ಬೆಳಕನ್ನು ಕೊಡುವದು ಕಂಡಿದೆ.

ವಾಗಿ ಹೇತುವನ್ನು ಕೊಟ್ಟು[1] ; (ಅದನ್ನು ಈಗ) ನಿಗಮನದಂತೆ ಇರುವ[2] (ಈ) ಮಂತ್ರದಿಂದ ಮತ್ತೂ ಉಪಸಂಹಾರಮಾಡಲಾಗುತ್ತದೆ :-

**ಬ್ರಹ್ಮೈವೇದಮಮೃತಂ ಪುರಸ್ತಾತ್**
**ಬ್ರಹ್ಮ ಪಶ್ಚಾದ್ ಬ್ರಹ್ಮ ದಕ್ಷಿಣತಶ್ಚೋತ್ತರೇಣ ।**
**ಅಧಶ್ಚೋರ್ಧ್ವಂ ಚ ಪ್ರಸೃತಂ**
**ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಮ್ ॥೧೨॥**

೧೨. ಮುಂದೆ ಇರುವ ಇದು ಅಮೃತವಾದ ಬ್ರಹ್ಮವೇ. ಹಿಂದೆ ಬ್ರಹ್ಮವೇ, ದಕ್ಷಿಣಕ್ಕೂ ಬ್ರಹ್ಮವೇ, ಉತ್ತರಕ್ಕೂ (ಬ್ರಹ್ಮವೇ). ಕೆಳಗೂ ಮೇಲೂ ಹಬ್ಬಿರುವದು (ಬ್ರಹ್ಮವೇ). ಇದೆಲ್ಲವೂ ವರಿಷ್ಠವಾದ ಬ್ರಹ್ಮವೇ.

## (ಭಾಷ್ಯ)

೪೯. ಬ್ರಹ್ಮೈವ ಉಕ್ತಲಕ್ಷಣಮ್ (ಅಮೃತಮ್ ?) ಇದಂ ಯತ್ ಪುರಸ್ತಾತ್ ಅಗ್ರೇ ಅಬ್ರಹ್ಮೇವ[3] ಅವಿದ್ಯಾದೃಷ್ಟೀನಾಂ ಪ್ರತ್ಯವಭಾಸಮಾನಮ್ । ತಥಾ ಪಶ್ಚಾದ್ ಬ್ರಹ್ಮ । ತಥಾ ದಕ್ಷಿಣತಶ್ಚ । ತಥಾ ಉತ್ತರೇಣ । ತಥೈವ ಅಧಸ್ತಾತ್ । ಊರ್ಧ್ವಂ ಚ ಸರ್ವತೋಽನ್ಯದಿವ ಕಾರ್ಯಾಕಾರೇಣ ಪ್ರಸೃತಂ ಪ್ರಗತಂ ನಾಮರೂಪವತ್ ಅವಭಾಸಮಾನಮ್ । ಕಿಂ ಬಹುನಾ ? ಬ್ರಹ್ಮೈವೇದಂ ವಿಶ್ವಂ ಸಮಸ್ತಮ್ ಇದಂ ಜಗತ್ ವರಿಷ್ಠಂ ವರತಮಮ್ । ಅಬ್ರಹ್ಮಪ್ರತ್ಯಯಃ ಸರ್ವಃ ಅವಿದ್ಯಾಮಾತ್ರಃ ರಜ್ಜ್ವಾಮಿವ ಸರ್ಪಪ್ರತ್ಯಯಃ । ಬ್ರಹ್ಮೈವ ಏಕಂ ಪರಮಾರ್ಥಸತ್ಯಮ್ ಇತಿ ವೇದಾನುಶಾಸನಮ್ ॥

## (ಭಾಷ್ಯಾರ್ಥ)

ಮುಂದೆ ಎದುರಿಗೆ **ಅಬ್ರಹ್ಮವೆಂಬಂತೆ ಅವಿದ್ಯೆಯ ದೃಷ್ಟಿಯುಳ್ಳವ**

---

1. ಬ್ರಹ್ಮದ ಕಾರ್ಯವಾಗಿ ಬ್ರಹ್ಮದಲ್ಲಿಯೇ ಸರ್ವವೂ ತೋರಿಕೊಂಡಿರುವದೆಂಬ ಹೇತುವಿನಿಂದ ಇದೆಲ್ಲವೂ ಬ್ರಹ್ಮವೇ ಎಂದು ಪ್ರತಿಪಾದಿಸಿದ್ದಾಗಿದೆ.

2. ಯುಕ್ತಿಯಿಂದ ಸಿದ್ಧಪಡಿಸಿದ್ದನ್ನು ಕೊನೆಗೆ ಇಷ್ಟು ಸಿದ್ಧವಾಯಿತು ಎಂದು ಹೇಳುವ ವಾಕ್ಯಕ್ಕೆ ನಿಗಮನವೆಂದು ನ್ಯಾಯಶಾಸ್ತ್ರದಲ್ಲಿ ಹೆಸರು. (ನ್ಯಾ. ಸೂ. ೧-೧-೩೯) ಇದು ಸತ್ಯವು ಎಂದು ಪ್ರತಿಜ್ಞೆಯಲ್ಲಿ ಹೇಳಿದ್ದನ್ನು ಹೇತುದೃಷ್ಟಾಂತಗಳಿಂದ ವಿವರಿಸಿ ಹೇಳಿದ ಬಳಿಕ ಈಗ ಬ್ರಹ್ಮವೊಂದೇ ಸತ್ಯವು ಎಂದು ಉಪಸಂಹಾರಮಾಡಿರುತ್ತದೆ.

3. ''ಬ್ರಹ್ಮೈವ'' ಎಂಬ ಅ॥ ಪಾಠಕ್ಕಿಂತ ಇದು ಉತ್ತಮ.

ರಿಗೆ[1] ತೋರುತ್ತಿರುವ ಇದು ಹಿಂದೆ ಹೇಳಿದಂಥ ಸ್ವರೂಪದ[2] (ಅಮೃತವಾದ)[3] ಬ್ರಹ್ಮವೇ. ಇದರಂತೆ ಹಿಂದೆಯೂ ಬ್ರಹ್ಮವೇ, ಇದರಂತೆ ಬಲಕ್ಕೂ ಬ್ರಹ್ಮವೇ, ಇದರಂತೆ ಎಡಕ್ಕೂ ಬ್ರಹ್ಮವೇ, ಇದರಂತೆಯೇ ಕೆಳಕ್ಕೂ ಮೇಲಕ್ಕೂ ಎಲ್ಲೆಲ್ಲಿಯೂ ಮತ್ತೊಂದು (ವಸ್ತು)ವೆಂಬಂತೆ ಕಾರ್ಯದ ರೂಪದಿಂದ ಹಬ್ಬಿರುವದು (ಎಲ್ಲೆಲ್ಲಿಯೂ) ಹರಡಿಕೊಂಡಿರುವದು, ನಾಮರೂಪಗಳಂತೆ ತೋರುತ್ತಿರುವದು (ಬ್ರಹ್ಮವೇ).[4] ಹೆಚ್ಚು (ಹೇಳುವದ)ರಿಂದೇನು ? ಇದೆಲ್ಲವೂ ಎಂದರೆ ಈ ಜಗತ್ತೆಲ್ಲವೂ ವರಿಷ್ಠವಾದ ಅತಿಶ್ರೇಷ್ಠವಾದ ಬ್ರಹ್ಮವೇ. **ಅಬ್ರಹ್ಮದ ಪ್ರತ್ಯಯವೆಂಬುದೆಲ್ಲವೂ ಹಗ್ಗದಲ್ಲಿ (ಆಗುವ) ಹಾವಿನ ಪ್ರತ್ಯಯದಂತೆ ಬರಿಯ ತಪ್ಪು ತಿಳಿವಳಿಕೆ ; ಬ್ರಹ್ಮವೊಂದೇ ನಿಜವಾಗಿ ಸತ್ಯವಾಗಿರುವದು ಎಂಬಿದು ವೇದದ ಅನುಶಾಸನವು.**[5]

1. ಅನಾತ್ಮವನ್ನೂ ಆತ್ಮನನ್ನೂ ಬಿಡಿಸಿ ತಿಳಿದುಕೊಳ್ಳದೆ ದೇಹಾದಿಗಳಲ್ಲಿ ಆತ್ಮಬುದ್ಧಿಯುಳ್ಳವರಿಗೆ.

2. ಅದೃಶ್ಯವೇ ಮುಂತಾದ ಧರ್ಮಗಳುಳ್ಳದ್ದೆಂದು ೧-೧-೬ ರಲ್ಲಿ ಹೇಳಿರುವ ಅಕ್ಷರವೆಂಬ ಹೆಸರಿನ ಬ್ರಹ್ಮವೇ.

3. ಅಮೃತಮ್ ಎಂಬ ಮಾತು ಭಾಷ್ಯದಲ್ಲಿ ಬರೆದವರ ತಪ್ಪಿನಿಂದ ಬಿಟ್ಟುಹೋಗಿರುತ್ತದೆ.

4. ನಾಮರೂಪಗಳೆಂಬ ಕಾರ್ಯವು ಕಾರಣವಾದ ಬ್ರಹ್ಮಕ್ಕಿಂತ ಬೇರೆಯಲ್ಲ ಎಂಬುದನ್ನು ಸೂ.ಭಾ. ೨-೧-೧೪ರಲ್ಲಿ ವಿಸ್ತಾರವಾಗಿ ಪ್ರತಿಪಾದಿಸಿದೆ. ಇದೇ ವೇದಾಂತಿಗಳ ಸತ್ಕಾರ್ಯವಾದವು.

5. ಎಲ್ಲಾ ಪ್ರತ್ಯಯಗಳಿಂದಲೂ ಬೇರೆಬೇರೆಯ ರೂಪದಿಂದ ಬ್ರಹ್ಮವೇ ತೋರಿಬರುತ್ತಿರುವದು ; ಆದರೂ ಬ್ರಹ್ಮವು ನಿಷ್ಪ್ರಪಂಚವೆಂಬುದನ್ನು ಶಾಸ್ತ್ರವೇ ತಿಳಿಸಿಕೊಡುವದರಿಂದ ಬ್ರಹ್ಮವು ಶಾಸ್ತ್ರೈಕಗಮ್ಯವೆನಿಸುತ್ತದೆ - ಎಂದು ಬ್ರಹ್ಮಸಿದ್ಧಿಯಲ್ಲಿ ಮಂಡನಮಿಶ್ರರು ಹೇಳಿರುವದಕ್ಕೆ ಇದೇ ಅಭಿಪ್ರಾಯ. ನಾವು ಬ್ರಹ್ಮವೊಂದನ್ನೇ ತಪ್ಪುತಿಳಿವಳಿಕೆಯಿಂದ ಬೇರೆಬೇರೆಯ ಪದಾರ್ಥವೆಂದು ವ್ಯವಹರಿಸುತ್ತಿರುವದರಿಂದ ಬ್ರಹ್ಮವೊಂದನ್ನು ಸರಿಯಾಗಿ ಅರಿತುಕೊಂಡರೆ ಎಲ್ಲವನ್ನೂ ಅರಿತುಕೊಂಡಂತಾಯಿತು ಎಂದು ಅಂಗಿರಸ್ಸು ಶೌನಕನಿಗೆ ಹೇಳಿದಂತಾಯಿತು.

# ಮೂರನೆಯ ಮುಂಡಕ - ಒಂದನೆಯ ಖಂಡ

## ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೯೦. ಪರಾ ವಿದ್ಯಾ ಉಕ್ತಾ ಯಯಾ ತದಕ್ಷರಂ ಪುರುಷಾಖ್ಯಂ ಸತ್ಯಮ್ ಅಧಿಗಮ್ಯತೇ । ಯದಧಿಗಮೇ ಹೃದಯಗ್ರನ್ಥ್ಯಾದಿಸಂಸಾರಕಾರಣಸ್ಯ ಆತ್ಯನ್ತಿಕೋ ವಿನಾಶಃ ಸ್ಯಾತ್ । ತದ್ದರ್ಶನೋಪಾಯಶ್ಚ ಯೋಗಃ ಧನುರಾದ್ಯುಪಾದಾನಕಲ್ಪನಯಾ ಉಕ್ತಃ । ಅಥ ಇದಾನೀಂ ತತ್ಸಹಕಾರೀಣಿ ಸತ್ಯಾದಿಸಾಧನಾನಿ ವಕ್ತವ್ಯಾನಿ ಇತಿ ತದರ್ಥಃ ಉತ್ತರಗ್ರನ್ಥಾರಮ್ಭಃ । ಪ್ರಾಧಾನ್ಯೇನ ತತ್ತ್ವನಿರ್ಧಾರಣಂ ಚ ಪ್ರಕಾರಾನ್ತರೇಣ ಕ್ರಿಯತೇ । ಅತ್ಯನ್ತದುರವಗಾಹತ್ವಾತ್ ಕೃತಮಪಿ । ತತ್ರ ಸೂತ್ರಭೂತೋ ಮನ್ತ್ರಃ ಪರಮಾರ್ಥವಸ್ತ್ವವಧಾರಣಾರ್ಥಮ್ ಉಪನ್ಯಸ್ಯತೇ -

(ಭಾಷ್ಯಾರ್ಥ)

ಯಾವದರಿಂದ ಆ ಅಕ್ಷರವೆಂಬ ಪುರುಷನೆಂಬ ಹೆಸರಿನ ಸತ್ಯವನ್ನು ಅರಿತುಕೊಳ್ಳಬಹುದೋ (ಆ) ಪರವಿದ್ಯೆಯನ್ನು ಹೇಳಿದ್ದಾಯಿತು. ಆ (ಅಕ್ಷರವನ್ನು) ಅರಿತುಕೊಂಡರೆ ಹೃದಯಗ್ರಂಥಿಯೇ ಮುಂತಾದ ಸಂಸಾರಕಾರಣವು ಅತ್ಯಂತವಾಗಿ[1] ನಾಶವಾಗಬಹುದು. ಆ (ಪುರುಷನನ್ನು) ಕಂಡುಕೊಳ್ಳುವದಕ್ಕೆ ಸಾಧನವಾಗಿ ಧನುಸ್ಸನ್ನು ತೆಗೆದುಕೊಳ್ಳುವದು ಮುಂತಾದ[2] ಕಲ್ಪನೆಯಾದ **ಯೋಗವನ್ನೂ**[3] ಹೇಳಿದ್ದಾಯಿತು. ಇನ್ನು ಈಗ ಅದಕ್ಕೆ **ಸಹಕಾರಿಗಳಾದ** ಸತ್ಯವೇ ಮುಂತಾದ ಸಾಧನಗಳನ್ನು ಹೇಳಬೇಕು ಎಂದು ಅದಕ್ಕಾಗಿ ಮುಂದಿನ ಗ್ರಂಥವನ್ನು **ಆರಂಭಿಸಿರುತ್ತದೆ**. ಮುಖ್ಯವಾಗಿ ತತ್ತ್ವನಿರ್ಧಾರವನ್ನು ಹಿಂದೆಯೇ ಮಾಡಿದೆಯಾದರೂ (ಅದು) ತಿಳಿಯುವದಕ್ಕೆ ಬಹಳ ಕಷ್ಟವಾಗಿರುವದರಿಂದ (ಇದನ್ನೇ) ಬೇರೆ ಬಗೆಯಿಂದಲೂ ಮಾಡಲಾಗುತ್ತದೆ. ಇಲ್ಲಿ ಪರಮಾರ್ಥವಸ್ತುವನ್ನು ಗೊತ್ತುಪಡಿಸುವದಕ್ಕಾಗಿ ಸೂತ್ರವಾಗಿರುವ (ಒಂದು) ಮಂತ್ರ[4]ವನ್ನು (ಮೊದಲು) ಹೇಳಲಾಗುತ್ತದೆ :-

---

1. ನಿದ್ರಾದಿಗಳಲ್ಲಿ ಇವು ಕಾಣುವದಿಲ್ಲವಾದರೂ ಮಿಥ್ಯಾಜ್ಞಾನವೂ ಹೋಗಿರುವದಿಲ್ಲವಾದ್ದರಿಂದ, ತೀರ ಹೋಗಿರುವದಿಲ್ಲ. ಅಕ್ಷರಪುರುಷನ ಜ್ಞಾನದಿಂದಲೇ ಇವು ತೀರ ಹೋಗಿಬಿಡುತ್ತವೆ.

2. "ಧನುರಾದ್ಯುಪಾದಾನ" ಎಂಬುದಕ್ಕೆ "ಧನುರುಪಾದಾನಾದಿ" ಎಂದರ್ಥ. ಆದಿ ಎಂದರೆ ಶರಸಂಧಾನ ಮುಂತಾದದ್ದು. ೨-೨-೩ನ್ನು ನೋಡಿ.

3. ವಸ್ತುವನ್ನೇ ಏಕಾಗ್ರವಾಗಿ ಪರಿಶೀಲಿಸುವ ಪ್ರಣಿಧಾನವನ್ನೇ ಇಲ್ಲಿ ಯೋಗವೆಂದು ಕರೆದಿದೆ.

4. ಈ ಮಂತ್ರವು ಅಥರ್ವವೇದ ೯-೫೮-೨೦, ಋಗ್ವೇದ ೧-೧೬೪-೨೦ರಲ್ಲಿದೆ.

## ಜೀವನಿಗೂ ಪರಮಾತ್ಮನಿಗೂ ಇರುವ ಸ್ವಭಾವವೈಲಕ್ಷಣ್ಯ

**ದ್ವಾ ಸುಪರ್ಣಾ ಸಯುಜಾ ಸಖಾಯಾ**
**ಸಮಾನಂ ವೃಕ್ಷಂ ಪರಿಷಸ್ವಜಾತೇ ।**
**ತಯೋರನ್ಯಃ ಪಿಪ್ಪಲಂ ಸ್ವಾದ್ವ -**
**ತ್ತ್ಯನಶ್ನನ್ನನ್ಯೋಽಭಿಚಾಕಶೀತಿ ॥೧॥**

೧. ಜೊತೆಯಲ್ಲಿಯೇ ಇರುವ ಸಖರಾಗಿರುವ ಎರಡು ಸುಪರ್ಣಗಳು ಒಂದೇ ವೃಕ್ಷವನ್ನು ಆಲಂಗಿಸಿಕೊಂಡಿವೆ. ಇವುಗಳಲ್ಲಿ ಒಂದು ಸವಿಯ ಪಿಪ್ಪಲವನ್ನು ತಿನ್ನುತ್ತಿದೆ. ಇನ್ನೊಂದು ತಿನ್ನದೆ ನೋಡುತ್ತಿದೆ.

(ಭಾಷ್ಯ)

೯೧. ದ್ವಾ ದ್ವೌ ಸುಪರ್ಣಾ ಸುಪರ್ಣೌ । ಶೋಭನಪತನೌ ಸುಪರ್ಣೌ, ಪಕ್ಷಿಸಾಮಾನ್ಯಾದ್ವಾ ಸುಪರ್ಣೌ । ಸಯುಜಾ ಸಯುಜೌ ಸಹೈವ ಸರ್ವದಾ ಯುಕ್ತಾ ಸಖಾಯಾ ಸಖಾಯೌ ಸಮಾನಾಖ್ಯಾನೌ ಸಮಾನಾಭಿವ್ಯಕ್ತಿಕಾರಣೌ । ಏವಂಭೂತಾ ಸನ್ತೌ ಸಮಾನಮ್ ಅವಿಶೇಷಮ್ ಉಪಲಬ್ಧ್ಯಧಿಷ್ಠಾನತಯಾ ಏಕಂ ವೃಕ್ಷಂ ವೃಕ್ಷಮಿವ ಉಚ್ಛೇದನಸಾಮಾನ್ಯಾತ್ ಶರೀರಂ ವೃಕ್ಷಂ ಪರಿಷಸ್ವಜಾತೇ ಪರಿಷ್ವಕ್ತವನ್ತೌ ಸುಪರ್ಣಾವಿವ ಏಕಂ ವೃಕ್ಷಂ ಫಲೋಪಭೋಗಾರ್ಥಮ್ । ಅಯಂ ಹಿ ವೃಕ್ಷಃ ಊರ್ಧ್ವಮೂಲಃ ಅವಾಕ್ಶಾಖಃ ಅಶ್ವತ್ಥಃ ಅವ್ಯಕ್ತಮೂಲಪ್ರಭವಃ ಕ್ಷೇತ್ರಸಂಜ್ಞಕಃ ಸರ್ವಪ್ರಾಣಿಕರ್ಮಫಲಾಶ್ರಯಃ । ತಂ ಪರಿಷ್ವಕ್ತವನ್ತೌ ಸುಪರ್ಣಾವಿವ ಅವಿದ್ಯಾಕಾಮಕರ್ಮವಾಸನಾಶ್ರಯಲಿಙ್ಗೋಪಾಧ್ಯಾತ್ಮೇಶ್ವರೌ । ತಯೋಃ ಪರಿಷ್ವಕ್ತಯೋಃ ಅನ್ಯಃ ಏಕಃ ಕ್ಷೇತ್ರಜ್ಞಃ ಲಿಙ್ಗೋಪಾಧಿಃ[1] ವೃಕ್ಷಮಾಶ್ರಿತಃ ಪಿಪ್ಪಲಂ ಕರ್ಮನಿಷ್ಪನ್ನಂ ಸುಖದುಃಖಲಕ್ಷಣಂ ಫಲಂ ಸ್ವಾದು ಅನೇಕವಿಚಿತ್ರವೇದನಾಸ್ವಾದರೂಪಂ ಸ್ವಾದು ಅತ್ತಿ ಭಕ್ಷಯತಿ ಉಪಭುಙ್ಕ್ತೇ ಅವಿವೇಕತಃ । ಅನಶ್ನನ್ ಅನ್ಯಃ ಇತರಃ ನಿತ್ಯಶುದ್ಧಬುದ್ಧಮುಕ್ತಸ್ವಭಾವಃ ಸರ್ವಜ್ಞಃ ಸರ್ವಸತ್ತ್ವೋಪಾಧಿಃ[2] ಈಶ್ವರಃ ನಾಶ್ನಾತಿ । ಪ್ರೇರಯಿತಾ ಹ್ಯಸೌ ಉಭಯೋಃ ಭೋಜ್ಯಭೋಕ್ತ್ರೋಃ ನಿತ್ಯಸಾಕ್ಷಿತ್ವಸತ್ತಾಮಾತ್ರೇಣ । ಸ ತು ಅನಶ್ನನ್ ಅನ್ಯಃ ಅಭಿಚಾಕಶೀತಿ ಪಶ್ಯತ್ಯೇವ ಕೇವಲಮ್ । ದರ್ಶನಮಾತ್ರಂ ಹಿ ತಸ್ಯ ಪ್ರೇರಯಿತೃತ್ವಂ ರಾಜವತ್ ॥

1. "ಲಿಙ್ಗೋಪಾಧಿವೃಕ್ಷಃ" ಎಂಬ ಮುದ್ರಿತಪಾಠಕ್ಕಿಂತ ಇದು ಉತ್ತಮ.
2. ಆ॥ ಪಾಠವನ್ನು ಬಿಟ್ಟು ಮಿಕ್ಕ ಕಡೆಯಲ್ಲೆಲ್ಲ 'ಸತ್ತ್ವೋಪಾಧಿಃ' ಎಂದಿಷ್ಟೇ ಇದೆ.

(ಭಾಷ್ಯಾರ್ಥ)

ದ್ವಾ=ದ್ವೌ ಸುಪರ್ಣಾ=ಸುಪರ್ಣೌ, ಎರಡು ಸುಪರ್ಣಗಳು. ಚೆನ್ನಾಗಿ ಹಾರಾಡುವದರಿಂದ[1] (ಇವು) ಸುಪರ್ಣಗಳು ; ಅಥವಾ (ಇಲ್ಲಿ) ಪಕ್ಷಿಗಳ ಹೋಲಿಕೆಯನ್ನು ಕೊಟ್ಟಿರುವದರಿಂದ[2] (ಇವು) ಸುಪರ್ಣಗಳು. ಸಯುಜಾ=ಸಯುಜೌ, ಯಾವಾಗಲೂ ಜೊತೆಯಲ್ಲಿಯೇ ಕೂಡಿಕೊಂಡಿರುವವುಗಳು.[3]

ಸಖಾಯಾ=ಸಖಾಯೌ ಸಮಾನವಾದ ಖ್ಯಾತಿಯುಳ್ಳವುಗಳು. ತಮ್ಮನ್ನು (ಬೆಳಗಿ) ತೋರಿಸುವ ಒಂದೇ ಕಾರಣವುಳ್ಳವುಗಳು ಎಂದರ್ಥ. ಹೀಗೆ ಇರುವವುಗಳಾಗಿ (ಈ ಎರಡು ಹಕ್ಕಿಗಳು) ಸಮಾನವಾದ ಅಂದರೆ ಯಾವ ವಿಶೇಷವೂ ಇಲ್ಲದ ಅರಿಯುವದಕ್ಕೆ ಆಶ್ರಯವಾಗಿ ಒಂದೇ ಆಗಿರುವ ವೃಕ್ಷವನ್ನು ವೃಕ್ಷದಂತೆ ನಾಶವಾಗುವದೆಂಬ ಹೋಲಿಕೆಯಿರುವದರಿಂದ[4] ಶರೀರವೆಂಬ ವೃಕ್ಷವನ್ನು ಆಲಂಗಿಸಿಕೊಂಡಿವೆ - ಹಣ್ಣು ತಿನ್ನುವದಕ್ಕೆ ಒಂದೇ ಮರವನ್ನು (ಆಶ್ರಯಿಸಿಕೊಂಡಿರುವ) ಎರಡು ಹಕ್ಕಿಗಳಂತೆ ಆಶ್ರಯಿಸಿಕೊಂಡಿವೆ. ಈ ವೃಕ್ಷವೇ ಅಲ್ಲವೆ,[5] ಮೇಲೆ ಬೇರೂ ಕೆಳಗೆ ಕೊಂಬೆಗಳೂ ಇರುವ ಅಶ್ವತ್ಥವು. (ಇದು) ಅವ್ಯಕ್ತವೆಂಬ[6] ಮೂಲದಿಂದ ಹುಟ್ಟಿ ಕ್ಷೇತ್ರವೆನಿಸಿಕೊಂಡು[7] ಎಲ್ಲ ಪ್ರಾಣಿಗಳ ಕರ್ಮದ ಫಲಕ್ಕೂ ಆಶ್ರಯವಾಗಿರುವದು. ಇದನ್ನು ಅವಿದ್ಯೆ, ಕಾಮ, ಕರ್ಮವಾಸನೆ - ಇವುಗಳಿಗೆ ಆಶ್ರಯವಾಗಿರುವ **ಲಿಂಗಶರೀರವೆಂಬ**[8] ಉಪಾಧಿಯುಳ್ಳ

---

1. ಸುಪರ್ಣ ಎಂಬುದರ ಅವಯವಾರ್ಥದಿಂದ ಈ ಅಭಿಪ್ರಾಯವನ್ನು ತೆಗೆದಿದೆ. ಜೀವನಿಗೆ ಸಂಸಾರಗಮನ, ಈಶ್ವರನಿಗೆ ಶುದ್ಧವಾಗಿರುವ ಗಮನ. ಇವೇ ಹಾರಾಟಗಳು.

2. ಸುಪರ್ಣ ಎಂಬುದರ ರೂಢಿಯ ಅರ್ಥವನ್ನು ತೆಗೆದುಕೊಂಡರೂ ಆಗಬಹುದು ಎಂದರ್ಥ.

3. ಜೀವನ ನಿಜವಾದ ಸ್ವರೂಪವು ಈಶ್ವರನಾದ್ದರಿಂದ ಜೀವನು ಈಶ್ವರನನ್ನು ಬಿಟ್ಟಿರಲೇ ಆರನು.

4. ವೃಕ್ಷವೆಂಬ ಮಾತಿಗೆ ವ್ಯುತ್ಪತ್ತಿಯಿಂದ ನಾಶವಾಗುವುದು ಎಂದರ್ಥವಾಗುತ್ತದೆ. ಕ. ಭಾ. ೨-೩-೧.

5. ಶರೀರವೇ ವೃಕ್ಷವೆಂದು ಹೇಳಿರುವದು ವ್ಯಕ್ತಾವ್ಯಕ್ತರೂಪವಾದ ಸಂಸಾರವನ್ನು ತಿಳಿಸುವ ಉಪಲಕ್ಷಣ. ಕ.ಭಾ. ೨-೩-೧ರಲ್ಲಿ ವರ್ಣಿಸಿರುವ ವೃಕ್ಷವೇ ಇದೆಂದು ಸೂಚಿಸುವದಕ್ಕಾಗಿ 'ಮೇಲೆ ಬೇರೂ ಕೆಳಗೆ ಕೊಂಬೆಗಳೂ ಇರುವ' ಎಂಬ ವಿಶೇಷಣವನ್ನು ಕೊಟ್ಟಿದೆ.

6. ಅವ್ಯಾಕೃತವೆಂಬ ಮಾಯೆ. ಗೀ.ಭಾ. ೧೫-೧ ರಲ್ಲಿ ಉದಾಹರಿಸಿರುವ ಪುರಾಣ ವಚನವನ್ನೂ ಸೂ.ಭಾ. ೧-೪-೨, ೩ನ್ನೂ ನೋಡಿರಿ.

7. ಗೀ. ೧೩-೧.

8. ಸ್ಥೂಲಶರೀರವು ಬಿದ್ದುಹೋದಮೇಲೂ ಲಿಂಗಶರೀರವು ಇದ್ದುಕೊಂಡಿರುವದರಿಂದಲೂ ಲಿಂಗಶರೀರವಿರುವವರೆಗೂ ಅವಿದ್ಯಾಕಾಮಕರ್ಮಗಳು ಜೀವನಿಗೆ ಅಂಟಿಕೊಂಡೇ ಇರುವದರಿಂದಲೂ ಲಿಂಗಶರೀರವೇ ಜೀವನಿಗೆ ಉಪಾಧಿಯೆಂದು ಹೇಳಿದೆ.

**ಜೀವಾತ್ಮನೂ ಈಶ್ವರನೂ** ಎರಡು ಹಕ್ಕಿಗಳಂತೆ ಆಶ್ರಯಿಸಿಕೊಂಡಿರುವರು. (ಹೀಗೆ) ಆಶ್ರಯಿಸಿಕೊಂಡಿರುವ ಈ ಇಬ್ಬರಲ್ಲಿ ಒಬ್ಬನು ಎಂದರೆ **ಲಿಂಗೋಪಾಧಿಯುಳ್ಳ ಕ್ಷೇತ್ರಜ್ಞನು** ವೃಕ್ಷವನ್ನು ಆಶ್ರಯಿಸಿಕೊಂಡು ಸವಿಯಾದ ಅಂದರೆ ಬಲುಬಗೆಯಾಗಿರುವ ಅನೇಕ ಅನುಭವಗಳನ್ನು ಸವಿಯುವದೆಂಬ ಪಿಪ್ಪಲವನ್ನು ಎಂದರೆ ಸುಖದುಃಖರೂಪವಾದ ತನ್ನ ಕರ್ಮದಿಂದಾಗಿರುವ ಫಲವನ್ನು ತಿನ್ನುತ್ತಾನೆ, ಭಕ್ಷಿಸುತ್ತಿರುತ್ತಾನೆ, ಅವಿವೇಕದಿಂದ[1] ಉಪಭೋಗಿಸುತ್ತಿರುವನು. ಇನ್ನೊಬ್ಬನು ತಿನ್ನದೆ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾಗಿ ಸರ್ವಜ್ಞನಾಗಿ ಸರ್ವಸತ್ತ್ವೋಪಾಧಿಯಾಗಿ[2] ಈಶ್ವರನಾಗಿರುವದರಿಂದ ತಿನ್ನದೆ ಇರುತ್ತಾನೆ. **ಇವನು ಭೋಜ್ಯ, ಭೋಕ್ತೃ – ಈ ಇಬ್ಬರನ್ನೂ ಯಾವಾಗಲೂ ಸಾಕ್ಷಿಯಾಗಿ ಬರಿಯ ತನ್ನ ಇರವಿನಿಂದಲೇ ಪ್ರೇರಿಸುತ್ತಿರುವನಲ್ಲವೆ ?** (ಆದ್ದರಿಂದ) ಇನ್ನೊಬ್ಬನಾದ ಅವನಾದರೆ ತಿನ್ನದೆ 'ಅಭಿಚಾಕಶೀತಿ' ಸುಮ್ಮನೆ ನೋಡುತ್ತಲೇ ಇರುವನು. ಅವನು ಪ್ರೇರಣೆಮಾಡುವನೆಂಬುದು ಸುಮ್ಮನೆ ಅರಸನಂತೆ[3] ನೋಡುತ್ತಿರುವದೇ (ಹೊರತು ಮತ್ತೇನೂ ಅಲ್ಲ).

**ಸಮಾನೇ ವೃಕ್ಷೇ ಪುರುಷೋ ನಿಮಗ್ನೋ-**
**ಽನೀಶಯಾ ಶೋಚತಿ ಮುಹ್ಯಮಾನಃ ।**
**ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ**
**ಮಹಿಮಾನಮಿತಿ ವೀತಶೋಕಃ ॥೨॥**

೨. (ಈ) ಒಂದೇ ವೃಕ್ಷದಲ್ಲಿ ಪುರುಷನು ನಿಮಗ್ನನಾಗಿ ಅನೀಶೆಯಿಂದ ಮೋಹಗೊಂಡು ಶೋಕಿಸುತ್ತಿರುವನು. ಭಜಿಸಲ್ಪಟ್ಟ (ತನಗಿಂತ) ಬೇರೆಯ ಈಶ್ವರನನ್ನೂ ಇವನ ಮಹಿಮೆಯನ್ನೂ ಹೀಗೆಂದು ಯಾವಾಗ ಕಂಡುಕೊಳ್ಳುವನೋ (ಆಗ) ಶೋಕವಿಲ್ಲದವನಾಗುವನು.

1. ಆತ್ಮಾನಾತ್ಮಗಳ ವಿವೇಕವಿಲ್ಲದ್ದರಿಂದ.

2. ಸಾಕ್ಷಿಸ್ವರೂಪವು ನಿರ್ಮಲವಾದ ಸತ್ತ್ವವಿರುವವರಿಗೆ ತಿಳಿಯಬರುತ್ತದೆಯಾದ್ದರಿಂದ ಸತ್ತ್ವವು ಉಪಾಧಿಯೆಂದು ಹೇಳಿದೆ. ಮಾಯೆಯೇ ಇಲ್ಲಿ ಹೇಳಿರುವ ಸತ್ತ್ವವೆಂದು ವ್ಯಾಖ್ಯಾನದಲ್ಲಿದೆ. ಆದರೆ ಅದರಲ್ಲಿ ಮೂರು ಗುಣಗಳು ಇರುವದರಿಂದ ನಾವುಕೊಟ್ಟಿರುವ ವ್ಯಾಖ್ಯಾನವನ್ನಿಟ್ಟುಕೊಳ್ಳುವದೇ ಮೇಲು. ಈಶ್ವರನಿಗೆ ಮಾಯೆಯ ಉಪಾಧಿಯೆನ್ನುವಾಗಲೂ ಇದೇ ಅರ್ಥವನ್ನು ಮಾಡಿಕೊಳ್ಳಬೇಕು.

3. ಅರಸನಂತೆ ನೋಡುತ್ತಿರುವನು ಎಂಬುದಿಷ್ಟೇ ಇಲ್ಲಿ ತೆಗೆದುಕೊಳ್ಳಬೇಕಾದದ್ದು. ಅರಸನು ಭೃತ್ಯರಿಗೆ ಧನಧಾನ್ಯಾದಿಗಳನ್ನು ಕೊಟ್ಟು ಕೆಲಸಮಾಡಿಸುವಂತೆ ಸಾಕ್ಷಿಯು ಮಾಡಿಸುತ್ತಾನೆಂದು ಅರ್ಥಮಾಡಬಾರದು.

## (ಭಾಷ್ಯ)

೯೨. ತತ್ರ ಏವಂ ಸತಿ ಸಮಾನೇ ವೃಕ್ಷೇ ಯಥೋಕ್ತೇ ಶರೀರೇ ಪುರುಷಃ ಭೋಕ್ತಾ ಜೀವಃ ಅವಿದ್ಯಾಕಾಮಕರ್ಮಫಲರಾಗಾದಿಗುರುಭಾರಾಕ್ರಾನ್ತಃ ಅಲಾಬುರಿವ ಸಾಮುದ್ರೇ ಜಲೇ ನಿಮಗ್ನಃ ನಿಶ್ಚಯೇನ (ಮಗ್ನಃ) ದೇಹಾತ್ಮಭಾವಮಾಪನ್ನಃ ''ಅಯಮೇವಾಹಮ್ ಅಮುಷ್ಯ ಪುತ್ರಃ, ಅಸ್ಯ ನಪ್ತಾ, ಕೃಶಃ, ಸ್ಥೂಲಃ, ಗುಣವಾನ್, ನಿರ್ಗುಣಃ, ಸುಖೀ, ದುಃಖೀ'' ಇತ್ಯೇವಂಪ್ರತ್ಯಯಃ ನಾಸ್ತ್ಯನ್ಯೋಽಸ್ಮಾತ್ ಇತಿ ಜಾಯತೇ ಮ್ರಿಯತೇ ಸಂಯುಜ್ಯತೇ ವಿಯುಜ್ಯತೇ ಚ ಸಂಬನ್ಧಿಬಾನ್ಧವೈಃ । ಅತಃ ಅನೀಶಯಾ ''ನ ಕಸ್ಯಚಿತ್ ಸಮರ್ಥೋಽಹಮ್ ಪುತ್ರೋ ಮಮ ವಿನಷ್ಟಃ, ಮೃತಾ ಮೇ ಭಾರ್ಯಾ, ಕಿಂ ಮೇ ಜೀವಿತೇನ ?'' ಇತ್ಯೇವಂ ದೀನಭಾವಃ ಅನೀಶಾ । ತಯಾ ಶೋಚತಿ ಸಂತಪ್ಯತೇ । ಮುಹ್ಯಮಾನಃ ಅನೇಕೈಃ ಅನರ್ಥಪ್ರಕಾರೈಃ ಅವಿವೇಕಿತಯಾ[1] ಚಿನ್ತಾಮ್[2] ಆಪದ್ಯಮಾನಃ । ಸ ಏವಂ ಪ್ರೇತತಿರ್ಯಙ್ಮನುಷ್ಯಾದಿಯೋನಿಷು ಆಜವಂ ಜವೀಭಾವಮ್ ಆಪನ್ನಃ ಕದಾಚಿತ್ ಅನೇಕಜನ್ಮಸು ಶುದ್ಧಧರ್ಮಸಞ್ಚಿತನಿಮಿತ್ತತಃ ಕೇನಚಿತ್ ಕಾರುಣಿಕೇನ ದರ್ಶಿತಯೋಗಮಾರ್ಗಃ ಅಹಿಂಸಾಸತ್ಯಬ್ರಹ್ಮಚರ್ಯ ಸರ್ವತ್ಯಾಗಶಮದಮಾದಿಸಂಪನ್ನಃ ಸಮಾಹಿತಾತ್ಮಾ ಸನ್ ಜುಷ್ಟಂ ಸೇವಿತಂ ಅನೇಕೈರ್ಯೋಗಮಾರ್ಗೈಃ ಕರ್ಮಭಿಶ್ಚ ಯದಾ ಯಸ್ಮಿನ್ ಕಾಲೇ ಪಶ್ಯತಿ ಧ್ಯಾಯಮಾನಃ ಅನ್ಯಂ ವೃಕ್ಷೋಪಾಧಿಲಕ್ಷಣಾತ್ ವಿಲಕ್ಷಣಂ ಈಶಮ್ ಅಸಂಸಾರಿಣಂ ಅಶನಾಯಾಪಿಪಾಸಾಶೋಕಮೋಹಜರಾಮೃತ್ಯ್ವತೀತಮ್ ಈಶಂ ಸರ್ವಸ್ಯ ಜಗತಃ ''ಅಯಮಹಮಸ್ಮಿ ಆತ್ಮಾ ಸರ್ವಸ್ಯ ಸಮಃ ಸರ್ವಭೂತಸ್ಥಃ, ನೇತರೋಽವಿದ್ಯಾಜನಿತೋಪಾಧಿಪರಿಚ್ಛಿನ್ನೋ ಮಾಯಾತ್ಮಾ'' ಇತಿ ಮಹಿಮಾನಂ ವಿಭೂತಿಂ ಚ ಜಗದ್ರೂಪಮ್ ''ಅಸ್ಯೈವ ಮಮ ಪರಮೇಶ್ವರಸ್ಯ'' ಇತಿ ಯದಾ ಏವಂ ದ್ರಷ್ಟಾ ತದಾ ವೀತಶೋಕಃ ಭವತಿ ಸರ್ವಸ್ಮಾತ್ ಶೋಕಸಾಗರಾತ್ ವಿಪ್ರಮುಚ್ಯತೇ । ಕೃತಕೃತ್ಯೋ ಭವತಿ ಇತ್ಯರ್ಥಃ ॥

## (ಭಾಷ್ಯಾರ್ಥ)

ಇಲ್ಲಿ (ಇದು) ಹೀಗಿರುವಲ್ಲಿ : (ಈ) ಒಂದೇ ವೃಕ್ಷದಲ್ಲಿ ಎಂದರೆ ಮೇಲೆ ಹೇಳಿದಂಥ ಶರೀರದಲ್ಲಿ, ಪುರುಷನು ಎಂದರೆ ಭೋಕ್ತೃವಾಗಿರುವ ಜೀವನು ಅವಿದ್ಯೆ, ಕಾಮ, ಕರ್ಮ, ಫಲದ ಆಸೆ - ಮುಂತಾದ ತೂಕದ ಹೊರೆಯನ್ನು ಹೊತ್ತುಕೊಂಡು ಕಡಲಿನ ನೀರಿನಲ್ಲಿ ಸೋರೆಬುರುಡೆಯಂತೆ ನಿಮಗ್ನನಾಗಿ ನಿಶ್ಚಯದಿಂದ (ಮುಳುಗಿ), ದೇಹವೇ ತಾನೆಂಬ ಭಾವವನ್ನು ಹೊಂದಿದವನಾಗಿ ''ನಾನು ಇಂಥವನೇ, ಇಂಥವನ

1. ''ಅವಿವೇಕತಯಾ'' ಎಂಬ ಆ।। ಪಾಠಕ್ಕಿಂತ ಈ ವಾ। ಪಾಠವು ಮೇಲು.

2. 'ಅನ್ತಶ್ಚಿನ್ತಾಮ್' ಎಂದು ವಾ। ಪಾಠ.

ಮಗನು, ಇವನ ಮುಮ್ಮಗನು, ಬಡವಾದೆನು, ದಪ್ಪನಾದೆನು, ಗುಣವುಳ್ಳವನು, ಗುಣವಿಲ್ಲದವನು, ಸುಖಿಯು, ದುಃಖಿಯು'' ಎಂದೀ ಪರಿಯಲ್ಲಿ ಭಾವಿಸಿಕೊಳ್ಳುತ್ತಾ ''ಇದಕ್ಕಿಂತ ಬೇರೆಯಿಲ್ಲ''[1] ಎಂದುಕೊಂಡು ಹುಟ್ಟುತ್ತಲೂ ಸಾಯುತ್ತಲೂ ಇರುವನು. ನೆಂಟರಿಷ್ಟರನ್ನು ಸೇರುತ್ತಲೂ ಅಗಲುತ್ತಲೂ ಇರುವನು. ಆದ್ದರಿಂದ ಅನೀಶೆಯಿಂದ - ''ನಾನು ಯಾವದ(ನ್ನು ಮಾಡುವದ)ಕ್ಕೂ ಶಕ್ತನಲ್ಲ. ನನ್ನ ಮಗನು ಹೋದನು, ನನ್ನ ಹೆಂಡತಿ ಸತ್ತಳು, ನಾನು ಬದುಕಿದ್ದರಿಂದಾಗಬೇಕಾದದ್ದೇನು ?''ಎಂದೀ ಪರಿಯಲ್ಲಿ ಕಳವಳಿಸುವದೇ **ಅನೀಶೆ.** ಅದರಿಂದ ಮೋಹಗೊಂಡು[2] ಎಂದರೆ ಬಹುವಿಧವಾದ ಅನರ್ಥಗಳಿಂದ ಅವಿವೇಕಿಯಾಗಿ ಚಿಂತೆಯನ್ನು ಹೊಂದಿ **ಶೋಕಿಸುತ್ತಿರುವನು,** ಒಳಗೇ ಕುದಿಯುತ್ತಿರುವನು. ಅವನು ಹೀಗೆ ಪ್ರೇತಗಳು, ಮೂಗಜಂತುಗಳು, ಮನುಷ್ಯರು. ಇವೇ ಮುಂತಾದ (ಪ್ರಾಣಿಗಳ) ಜನ್ಮಗಳಲ್ಲಿ ಗರಗರನೆ ಸುತ್ತುತ್ತಾ[3] (ಇದ್ದು) ಯಾವಾಗಲೋ ಒಂದು ಕಾಲದಲ್ಲಿ **ಅನೇಕ ಜನ್ಮಗಳಲ್ಲಿ ಒಳ್ಳೆಯ ಧರ್ಮವನ್ನು ಕೂಡಿ ಹಾಕಿಕೊಂಡಿದ್ದ ಕಾರಣದಿಂದ**[4] **ಯಾವನೋ ಒಬ್ಬ ಪರಮಕಾರುಣಿಕನಾದ**[5] **(ಗುರುವು) ತೋರಿಸಿಕೊಟ್ಟ ಯೋಗಮಾರ್ಗವನ್ನು**[6] **(ತಿಳಿದುಕೊಂಡು) ಅಹಿಂಸೆ, ಸತ್ಯ, ಬ್ರಹ್ಮಚರ್ಯೆ, ಎಲ್ಲವನ್ನೂ ತ್ಯಾಗಮಾಡುವದು, ಶಮ, ದಮ - ಇವೇ ಮುಂತಾದವುಗಳಿಂದ**[7]

1. ಒಬ್ಬನೇ ಆತ್ಮನು ಅಜ್ಞಾನಿಗಳಿಗೆ ಸಂಸಾರಿಯಾಗಿಯೂ ಜ್ಞಾನಿಗಳಿಗೆ ಪರಮಾತ್ಮನಾಗಿಯೂ ಕಾಣುವನು. ಅಜ್ಞನು ತನ್ನ ಸಂಸಾರಿರೂಪವೇ ನಿಜವಾದದ್ದು - ಇದಕ್ಕಿಂತ ಬೇರೆಯಾದ ತನ್ನ ಸ್ವರೂಪವು ಯಾವದೂ ಇಲ್ಲ ಎಂದುಕೊಂಡಿರುತ್ತಾನೆ.

2. ಇಲ್ಲಿ ಅನೀಶಾ ಎಂಬುದು ಆವರಣವು, ಶೋಕವೆಂಬುದು ವಿಕ್ಷೇಪವು, ಮೋಹವೆಂದರೆ ಇವೆರಡಕ್ಕೂ ಕಾರಣವಾಗಿರುವ ಅನಿರ್ವಾಚ್ಯವಾದ ಅಜ್ಞಾನವು-ಎಂದು ವ್ಯಾಖ್ಯಾನದಲ್ಲಿದೆ. ಈ ವ್ಯಾಖ್ಯಾನಕ್ಕೆ ಭಾಷ್ಯದ ಬೆಂಬಲವೇನೂ ಕಾಣುವದಿಲ್ಲ.

3. ''ಆಜವಂ ಜವೀಭಾವಂ'' ಎಂಬ ಮಾತು ಭಾಷ್ಯದಲ್ಲಿ ಮತ್ತೆಲ್ಲಿಯೂ ಕಾಣುವದಿಲ್ಲ.

4. ಪುಣ್ಯಪಾಪಗಳೆರಡೂ ಸಮವಾದಾಗ ಮನುಷ್ಯಜನ್ಮವು ಬರುವದು. ಈ ಮನುಷ್ಯಜನ್ಮದಲ್ಲಿ ಎಷ್ಟೋ ಸಲ ಹುಟ್ಟಿ ಸತ್ತು ಆಗಾಗ ಮಾಡಿದ ಪುಣ್ಯಕರ್ಮಗಳ ಫಲವಾಗಿ ಗುರುವನ್ನು ಸೇರುವನು. ಎಂದು ಗುರುಪ್ರಾಪ್ತಿಯ ದೌರ್ಲಭ್ಯವನ್ನು ಹೇಳಿದೆ.

5. ಜ್ಞಾನವನ್ನು ಉಪದೇಶಿಸುವ ಗುರುವಿಗಿಂತ ದಯಾವಂತರು ಮತ್ತೆ ಯಾರೂ ಇಲ್ಲ. ಗುರುವು ಮರುಕದಿಂದ ಜ್ಞಾನವನ್ನು ಉಪದೇಶಿಸುವನು ಎಂಬುದನ್ನು ''ಪರಮ ಕಾರುಣಿಕ'' ಎಂಬ ವಿಶೇಷಣವು ಸೂಚಿಸುವದು. ಮಾಂ.ಕಾ.ಭಾ. ೧-೧೬ 'ಐ.ಭಾ. ೧-೩ ಬ್ರಹ್ಮ ತತಮಮಪಶ್ಯತ್' ಎಂಬುದರ ಭಾಷ್ಯ, ಬೃ.ಭಾ. ೪-೪-೧೫, ೨-೧-೨೦ (ರಾಜಪುತ್ರಾಖ್ಯಾಯಿಕಾ), ಛಾಂ.ಭಾ. ೬-೧೪-೨ (ಆಚಾರ್ಯವಾನ್ ಪುರುಷೋ ವೇದ) ಈ ಭಾಷ್ಯಗಳನ್ನು ನೋಡಿ.

6. ಆತ್ಮಚಿಂತನೆಯ ಉಪಾಯವನ್ನು ೨-೨-೪, ೬ನ್ನು ನೋಡಿ.

7. ಈ ಸಹಕಾರಿಸಾಧನಗಳನ್ನು ಮುಂದೆ ಈ ಖಂಡದಲ್ಲಿ ವಿವರಿಸಲಾಗುವದು.

ಕೂಡಿದವನಾಗಿ ಮನಸ್ಸನ್ನು ಸಮಾಧಾನಪಡಿಸಿಕೊಂಡು[1] ಅನೇಕವಾದ ಯೋಗಮಾರ್ಗಗಳಿಂದಲೂ ಕರ್ಮಗಳಿಂದಲೂ[2] (ನನ್ನಿಂದ) ಭಜಿಸಲ್ಪಟ್ಟ, ಎಂದರೆ ಸೇವಿಸಲ್ಪಟ್ಟಿರುವ ಬೇರೆಯವನಾದ ಎಂದರೆ ವೃಕ್ಷವೆಂಬ ಉಪಾಧಿಯುಳ್ಳ (ತನ್ನ ಜೀವ) ಸ್ವರೂಪಕ್ಕಿಂತಲೂ ಬೇರೆಯ ಲಕ್ಷಣವುಳ್ಳ[3] ಈಶ್ವರನನ್ನು ಎಂದರೆ ಸಂಸಾರವಿಲ್ಲದವನಾಗಿಯೂ ಹಸಿವು, ಬಾಯಾರಿಕೆ, ಶೋಕ, ಮೋಹ, ಮುಪ್ಪು ಸಾವು[4] - ಇವುಗಳನ್ನು ಮೀರಿರುವನಾಗಿಯೂ ಸಮಸ್ತಜಗತ್ತಿಗೂ ಒಡೆಯನಾಗಿರುವ (ಈಶ್ವರನನ್ನು) ''ಇಗೊ, ಈ ನಾನೇ ಪ್ರತಿಯೊಬ್ಬ (ಜೀವನಿಗೂ) ಆತ್ಮನಾಗಿರುವೆನು, ಸಮನಾಗಿ ಎಲ್ಲಾ ಪ್ರಾಣಿಗಳಲ್ಲಿಯೂ ಇರುವವನು[5] ; ಅವಿದ್ಯೆಯಿಂದಾಗಿರುವ ಉಪಾಧಿಯ ಅಳತೆಗೆ ಕಟ್ಟುಬಿದ್ದಿರುವ ಮಾಯಾತ್ಮನಾದ ಇನ್ನೊಬ್ಬನಾದ (ಜೀವನಲ್ಲ)[6]'' ಎಂದೂ ಮತ್ತು ಜಗದ್ರೂಪವಾದ ಮಹಿಮೆಯನ್ನೂ ಎಂದರೆ ವಿಭೂತಿಯನ್ನೂ ''ಈ ಪರಮೇಶ್ವರನಾದ ನನ್ನದೇ'' ಎಂದೂ ಯಾವಾಗ ಯಾವ ಕಾಲದಲ್ಲಿ ಆಲೋಚಿಸಿ ಕಂಡುಕೊಳ್ಳುವನೋ, ಯಾವಾಗ ಹೀಗೆಂದು ಕಾಣುವನೋ, ಆಗ ವೀತಶೋಕನಾಗುವನು. ಇಡಿಯ ಶೋಕಸಾಗರದಿಂದಲೇ ಬಿಡುಗಡೆ ಹೊಂದುವನು, ಕೃತಕೃತ್ಯನಾಗುವನು - ಎಂದರ್ಥ.

## ಪರಮಾತ್ಮಜ್ಞಾನದ ಫಲ

### (ಭಾಷ್ಯ)

೯೩. ಅನ್ಯೋಽಪಿ ಮನ್ತ್ರಃ ಇಮಮೇವ ಅರ್ಥಮ್ ಆಹ ಸವಿಸ್ತರಮ್ -

---

1. ಸತ್ಯವೇ ಮುಂತಾದವುಗಳ ಅಭ್ಯಾಸದಿಂದ ಮನಸ್ಸು ನಿಲುಗಡೆಗೆ ಬಂದು ಧ್ಯಾನಕ್ಕೆ ತಕ್ಕದ್ದಾಗುವದು.

2. ಫಲಾಸಕ್ತಿಯಿಲ್ಲದೆ ಮಾಡಿದ ಕರ್ಮಗಳು ಚಿತ್ತಶುದ್ಧಿಯನ್ನು ಕೊಟ್ಟು ಯೋಗಕ್ಕೆ ಸಹಾಯವಾಗುತ್ತವೆ. ಗೀ.ಭಾ. ೬-೩. ಯೋಗಮಾರ್ಗವು ಓಂಕಾರದ ಮೂಲಕವೇ ಎಂದು ಹಿಂದೆ ಹೇಳಿದ್ದರೂ ಸಹಕಾರಿಗಳು ಅನೇಕವಾಗಿರುವದರಿಂದ ಅನೇಕ ಯೋಗಮಾರ್ಗಗಳು ಎಂದಿದೆ.

3. ಜೀವಸ್ವರೂಪಕ್ಕಿಂತ ಪರಮಾತ್ಮಸ್ವರೂಪವು ವಿಲಕ್ಷಣವೆಂದು ತಿಳಿಸುವದೇ ಶಾಸ್ತ್ರದ ಉದ್ದೇಶ.

4. ಇಲ್ಲಿ ಹೇಳಿರುವ ಆರಕ್ಕೂ ಊರ್ಮಿಗಳೆಂದು ಹೆಸರು, ಒಬ್ಬನೇ ಆತ್ಮನಿಗೆ ಹಸಿವು ಮುಂತಾದವುಗಳು ಇರುವದು, ಇಲ್ಲದಿರುವದು - ಎಂಬ ಎರಡು ಧರ್ಮಗಳಿರುವದು ವಿರುದ್ಧವಲ್ಲವೆ ? ಎಂಬ ಶಂಕೆಗೆ ಬೃ. ಭಾ. ೩-೫-೧ ರಲ್ಲಿ ಪರಿಹಾರವನ್ನು ಹೇಳಿದೆ.

5. ಗೀ. ೧೩-೨೭ರ ಅಭಿಪ್ರಾಯ.

6. ಬೇರೆಯವನೆಂದರೆ ಬೇರೆಯ ಸ್ವರೂಪದವನೆಂದು ಅರ್ಥವೇ ಹೊರತು ಜೀವನು ಬೇರೆ, ಈಶ್ವರನು ಬೇರೆ - ಹೀಗೆ ಎರಡನೆಯವನಾದ ಎಂದೇನೂ ಅರ್ಥವಲ್ಲ. ಎಲ್ಲರಿಗೂ ಪ್ರಸಿದ್ಧವಾಗಿರುವ ಜೀವನ ಸ್ವರೂಪವನ್ನು ಅನುವಾದಮಾಡಿಕೊಂಡು, ಅದು ಮಾಯಾಕಲ್ಪಿತವಾದದ್ದು, ಈಶ್ವರಸ್ವರೂಪವೇ ಪರಮಾರ್ಥವು ಎಂದು ಪ್ರತಿಪಾದನೆ ಮಾಡಿದೆ. ಪೀಠಿಕೆಯನ್ನು ನೋಡಿ.

(ಭಾಷ್ಯಾರ್ಥ)

ಮತ್ತೊಂದು ಮಂತ್ರವೂ ಇದೇ ಅರ್ಥವನ್ನು ವಿಸ್ತಾರವಾಗಿ[1] ಹೇಳುತ್ತದೆ :

**ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ**
**ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮ್ ||**
**ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ**
**ನಿರಞ್ಜನಃ ಪರಮಂ ಸಾಮ್ಯಮುಪೈತಿ ||೩||**

೩. ಯಾವಾಗ ಪಶ್ಯನು ಬಂಗಾರದ ವರ್ಣದ, ಕರ್ತೃವಾದ, ಈಶನನ್ನೂ ಬ್ರಹ್ಮಯೋನಿಯಾದ ಪುರುಷನನ್ನೂ ಕಂಡುಕೊಳ್ಳುವನೋ, ಆಗ (ಆ) ವಿದ್ವಾಂಸನು ಪುಣ್ಯಪಾಪಗಳನ್ನು ಕೊಡವಿ ಹಾಕಿ ನಿರಂಜನನಾಗಿ ಪರಮ ಸಾಮ್ಯವನ್ನು ಹೊಂದುವನು.

(ಭಾಷ್ಯ)

೯೪. ಯದಾ ಯಸ್ಮಿನ್ ಕಾಲೇ ಪಶ್ಯಃ ಪಶ್ಯತೀತಿ । ವಿದ್ವಾನ್ ಸಾಧಕಃ ಇತ್ಯರ್ಥಃ । ಪಶ್ಯತೇ ಪಶ್ಯತಿ ಪೂರ್ವವತ್ । ರುಕ್ಮವರ್ಣಂ ಸ್ವಯಂಜ್ಯೋತಿಃಸ್ವಭಾವಮ್ ರುಕ್ಮಸ್ಯೇವ ವಾ ಜ್ಯೋತಿರಸ್ಯ ಅವಿನಾಶಿ । ಕರ್ತಾರಂ ಸರ್ವಸ್ಯ ಜಗತಃ ಈಶಂ ಪುರುಷಂ ಬ್ರಹ್ಮಯೋನಿಂ ಬ್ರಹ್ಮ ಚ ತದ್ ಯೋನಿಶ್ಚ ಅಸೌ ಬ್ರಹ್ಮಯೋನಿಃ । ತಂ ಬ್ರಹ್ಮಯೋನಿಮ್ । ಬ್ರಹ್ಮಣೋ ವಾ ಅಪರಸ್ಯ ಯೋನಿಮ್ । ಸ ಯದಾ ಚ ಏವಂ ಪಶ್ಯತಿ ತದಾ ಸ ವಿದ್ವಾನ್ ಪಶ್ಯಃ ಪುಣ್ಯಪಾಪೇ ಬನ್ಧನಭೂತೇ ಕರ್ಮಣೀ ಸಮೂಲೇ ವಿಧೂಯ ನಿರಸ್ಯ ದಗ್ಧ್ವಾ ನಿರಞ್ಜನಃ ನಿರ್ಲೇಪಃ ವಿಗತಕ್ಲೇಶಃ ಪರಮಂ ಪ್ರಕೃಷ್ಟಂ ನಿರತಿಶಯಂ ಸಾಮ್ಯಂ ಸಮತಾಮ್ ಅದ್ವಯಲಕ್ಷಣಾಮ್ । ದ್ವೈತ ವಿಷಯಾಣಿ ಸಾಮ್ಯಾನಿ ಅತೋಽರ್ವಾಞ್ಚ್ಯೇವ । ಅತಃ ಅದ್ವಯಲಕ್ಷಣಂ ಏತತ್ ಪರಮಂ ಸಾಮ್ಯಮ್ ಉಪೈತಿ ಪ್ರತಿಪದ್ಯತೇ ||

(ಭಾಷ್ಯಾರ್ಥ)

ಯಾವಾಗ ಎಂದರೆ ಯಾವ ಕಾಲದಲ್ಲಿ ಪಶ್ಯನು ನೋಡುತ್ತಾನಾದ್ದರಿಂದ (ಇವನು ಪಶ್ಯನು) ; ಅರಿಯುವ[2] ಸಾಧಕನು ಎಂದರ್ಥ. ಪಶ್ಯತೇ=ಪಶ್ಯತಿ ಹಿಂದೆ ಹೇಳಿದಂತೆ ಕಂಡುಕೊಳ್ಳುತ್ತಾನೋ (ಎಂದರ್ಥ). ಬಂಗಾರದ ವರ್ಣದವನಾದ ಎಂದರೆ ತಾನೇ

1. ಬ್ರಹ್ಮದ ಸ್ವರೂಪವನ್ನು ಅರಿತುಕೊಂಡರೆ ಸಂಸಾರದುಃಖವು ತೊಲಗುವದೆಂಬುದನ್ನು.

2. ನೋಡುವದೆಂದರೆ ಅರಿಯುವದೇ, ಕಣ್ಣಿನಿಂದ ನೋಡುವದಲ್ಲ.

(ಬೆಳಗುವ) ಬೆಳಕಿನ ಸ್ವಭಾವವುಳ್ಳವನಾದ ಅಥವಾ ಬಂಗಾರದಂತೆ ನಾಶವಾಗ ದಿರುವ[1] ಬೆಳಕುಳ್ಳವನಾದ (ಎಂದರ್ಥ). ಕರ್ತೃವಾದ ಜಗತ್ತನ್ನೆಲ್ಲ (ಮಾಡಿರುವ) ಈಶ್ವರನನ್ನು[2], ಪುರುಷನನ್ನು, ಬ್ರಹ್ಮಯೋನಿಯನ್ನು, ಬ್ರಹ್ಮವೆಂಬ ಕಾರಣವೇ[3] ಬ್ರಹ್ಮಯೋನಿಯು ; ಆ ಬ್ರಹ್ಮಯೋನಿಯನ್ನು ಅಥವಾ ಕಡಿಮೆಯ ಬ್ರಹ್ಮದ ಕಾರಣ ವನ್ನು[4]. ಅವನು ಯಾವಾಗ ಹೀಗೆಂದು ಕಂಡುಕೊಳ್ಳುವನೋ ಆಗ ಹಾಗೆ ಕಂಡುಕೊಂಡ ಆ ಜ್ಞಾನಿಯಾದ ಪಶ್ಯನು ಬಂಧನವಾಗಿರುವ ಪುಣ್ಯಪಾಪಗಳೆಂಬ ಕರ್ಮಗಳನ್ನು ಬೇರುಸಹಿತವಾಗಿ[5] ಕೊಡವಿಹಾಕಿ ಎಂದರೆ ತಳ್ಳಿಹಾಕಿ, ಸುಟ್ಟುಹಾಕಿ[6] ನಿರಂಜನನಾಗಿ ಅಂದರೆ ಯಾವ ಅಂಟೂ ಇಲ್ಲದೆ ಕ್ಲೇಶಗಳನ್ನು[7] ಹೋಗಲಾಡಿಸಿಕೊಂಡು **ಪರಮವಾದ ಉತ್ಕೃಷ್ಟವಾದ ಇನ್ನಿಲ್ಲವೆನಿಸುವಂಥ ಸಾಮ್ಯವನ್ನು ಎಂದರೆ ಎರಡನೆಯದಿಲ್ಲದ್ದೆಂಬ ಸಮತ್ವವನ್ನು** – ದ್ವೈತವಿಷಯವಾಗಿರುವ ಸಮತ್ವಗಳು[8] ಇದಕ್ಕಿಂತ ಈಚಿನವೇ[9] ಆಗಿರು ತ್ತವೆ ; ಆದ್ದರಿಂದ ಎರಡನೆಯದಿಲ್ಲದ್ದೆಂಬ ಈ ಹೆಚ್ಚಿನ ಸಾಮ್ಯವನ್ನು – ಹೊಂದುವನು ಎಂದರೆ ಅರಿತುಕೊಳ್ಳುವನು.[10]

**ಪ್ರಾಣೋ ಹ್ಯೇಷ ಯಃ ಸರ್ವಭೂತೈರ್ವಿಭಾತಿ**
**ವಿಜಾನನ್ ವಿದ್ವಾನ್ ಭವತೇ ನಾತಿವಾದೀ ।**
**ಆತ್ಮಕ್ರೀಡ ಆತ್ಮರತಿಃ ಕ್ರಿಯಾವಾನ್**
**ಏಷ ಬ್ರಹ್ಮವಿದಾಂ ವರಿಷ್ಠಃ** ॥೪॥

೪. ಯಾವ ಈ ಪ್ರಾಣನೇ ಸರ್ವಭೂತಗಳಾಗಿ ತೋರಿಕೊಳ್ಳುತ್ತಿರುವನು.

---

1. ಸ್ವರೂಪವಾದದ್ದರಿಂದ ನಾಶವಾಗದ.

2. ಜಗತ್ಕಾರಣವೆಂದು ಹಿಂದೆ ಹೇಳಿರುವ ಅಕ್ಷರವೇ ಈಶ್ವರನು.

3. ಭೂತಯೋನಿಯೆಂದು ಹಿಂದೆ ಹೇಳಿದ್ದರ ಅಭಿಪ್ರಾಯವಿದು.

4. ಹಿರಣ್ಯಗರ್ಭನೆಂಬ ಕಡಿಮೆಯ ಬ್ರಹ್ಮವು ಈ ಬ್ರಹ್ಮದಿಂದ ಉಂಟಾಗುತ್ತದೆ.

5. ಕರ್ಮಗಳಿಗೆ ಅವಿದ್ಯಾಕಾಮಗಳೇ ಬೇರು.

6. ಕರ್ಮಗಳು ಫಲವನ್ನು ಕೊಟ್ಟು ನಾಶವಾದರೆ ತಮ್ಮ ವಾಸನೆಯನ್ನು ಇಟ್ಟೇ ಹೋಗುವವಾದ್ದರಿಂದ ಮತ್ತೆ ಕರ್ಮವು ತಲೆದೋರಿಕೊಳ್ಳುವದು. ಜ್ಞಾನದಿಂದ ಅವು ಬಾಧಿತವಾಗುವಾಗ ವಾಸನೆಯು ಸುಟ್ಟ ಬೀಜದಂತೆ ಮತ್ತೆ ಮೊಳೆತುಕೊಳ್ಳದೆ ಇರುತ್ತದೆ.

7. ಅವಿದ್ಯೆ, ರಾಗ, ದ್ವೇಷ, ಭಯ, ಮೋಹ – ಮುಂತಾದುವು ಸೂ. ಭಾ. ೧-೩-೨.

8. ಸಗುಣಬ್ರಹ್ಮೋಪಾಸಕರಿಗೆ ಸಿಕ್ಕುವ ಸಾಮ್ಯಗಳು ಪರಮವಲ್ಲ. ಸೂ.ಭಾ. ೪-೪-೧೭.

9. ಎಲ್ಲಾ ಬಗೆಯಿಂದ ಬ್ರಹ್ಮವೇ ಆಗುವದಿಲ್ಲವಾದ್ದರಿಂದ ಅವು ಕಡಿಮೆಯ ಸಾಮ್ಯಗಳು.

10. ಅಸಾಮ್ಯವು ಅಜ್ಞಾನದಿಂದ ಆಗಿರುವದರಿಂದ ತತ್ತ್ವವನ್ನು ಅರಿತಮಾತ್ರದಿಂದ ಸಾಮ್ಯವು ಬರುತ್ತದೆ. ಸಾಮ್ಯವು ಪ್ರಾಪ್ಯವಲ್ಲ, ನಿತ್ಯಪ್ರಾಪ್ತ.

(ಇವನನ್ನು) ಅರಿತ ವಿದ್ವಾಂಸನು ಅತಿವಾದಿಯಾಗುವದಿಲ್ಲ. ಆತ್ಮಕ್ರೀಡನಾಗಿ ಆತ್ಮರತಿಯಾಗಿ ಕ್ರಿಯಾವಂತನಾಗಿರುವ ಈತನು ಬ್ರಹ್ಮವೇತ್ತರಲ್ಲಿ ಅತ್ಯಂತ ಉತ್ತಮನಾಗಿರುವನು.

## (ಭಾಷ್ಯ)

೯೫. ಕಿಂಚ ಯೋಽಯಂ ಪ್ರಾಣಸ್ಯ ಪ್ರಾಣಃ ಪರ ಈಶ್ವರಃ ಹಿ ಏಷಃ ಪ್ರಕೃತಃ ಸರ್ವಭೂತೈಃ ಸರ್ವೈಃ ಭೂತೈಃ ಬ್ರಹ್ಮಾದಿಸ್ತಮ್ಬಪರ್ಯನ್ತೈಃ । ಇತ್ಥಂಭೂತಲಕ್ಷಣೇ ತೃತೀಯಾ । ಸರ್ವಭೂತಸ್ಥಃ ಸರ್ವಾತ್ಮಾ ಸನ್ ಇತ್ಯರ್ಥಃ । ವಿಭಾತಿ ವಿವಿಧಂ ದೀಪ್ಯತೇ । ಏವಂ ಸರ್ವಭೂತಸ್ಥಂ ಯಃ ಸಾಕ್ಷಾತ್ ಆತ್ಮಭಾವೇನ ಅಯಮಹಮಸ್ಮೀತಿ ವಿಜಾನನ್ ವಿದ್ವಾನ್ ವಾಕ್ಯಾರ್ಥಜ್ಞಾನಮಾತ್ರೇಣ ಸ ಭವತೇ[1] ಭವತಿ ನ ಭವತಿ ಇತ್ಯೇತತ್ । ಕಿಮ್ ? ಅತಿವಾದೀ ಅತೀತ್ಯ ಸರ್ವಾನ್ ಅನ್ಯಾನ್ ವದಿತುಂ ಶೀಲಮ್ ಅಸ್ಯ ಇತಿ ಅತಿವಾದೀ । ಯಸ್ತು ಏವಂ ಸಾಕ್ಷಾತ್ ಆತ್ಮಾನಂ ಪ್ರಾಣಸ್ಯ ಪ್ರಾಣಂ ವಿದ್ವಾನ್ ಅತಿವಾದೀ ಸ ನ ಭವತಿ ಇತ್ಯರ್ಥಃ । ಸರ್ವಂ ಯದಾ ಆತ್ಮೈವ ನಾನ್ಯತ್ ಅಸ್ತಿ ಇತಿ ದೃಷ್ಟಮ್ ತದಾ ಕಿಂ ಹಿ ಅಸೌ ಅತೀತ್ಯ ವದೇತ್ ? ಯಸ್ಯ ತು ಅಪರಮ್ ಅನ್ಯತ್ ದೃಷ್ಟಮ್ ಅಸ್ತಿ ಸ ತದತೀತ್ಯ ವದತಿ । ಅಯಂ ತು ವಿದ್ವಾನ್ ನಾತ್ಮನೋಽನ್ಯತ್ ಪಶ್ಯತಿ, ನಾನ್ಯತ್ ಶೃಣೋತಿ, ನಾನ್ಯತ್ ವಿಜಾನಾತಿ । ಅತಃ ನಾತಿವದತಿ ॥

## (ಭಾಷ್ಯಾರ್ಥ)

ಮತ್ತು ಪ್ರಾಣಕ್ಕೂ ಪ್ರಾಣನಾಗಿರುವ ಯಾವ ಈ ಪರಮೇಶ್ವರನಿದಾನಲ್ಲ, ಪ್ರಕೃತನಾದ[2] ಈತನೇ ಸರ್ವಭೂತಗಳಾಗಿ ಎಂದರೆ ಬ್ರಹ್ಮನಿಂದ ಮೊದಲಾಗಿ ಸ್ತಂಬದವರೆಗಿನ ಎಲ್ಲಾ ಪ್ರಾಣಿಗಳಾಗಿ - (ಇಲ್ಲಿ ಸರ್ವಭೂತೈಃ ಎಂದು) ಹೀಗಿರುವನೆಂದು ತಿಳಿಸುವದಕ್ಕೆ ತೃತೀಯಾ[3] ವಿಭಕ್ತಿ ಬಂದಿದೆ - ಎಲ್ಲಾ ಭೂತಗಳಲ್ಲಿಯೂ ಇರುವ

---

1. ನ ಭವತೇ ಎಂಬ ವಾ ॥ ಪಾಠಕ್ಕಿಂತ ಈ ಆ॥ ಪಾಠವೇ ಮೇಲು.

2. ಶ್ರುತಿಯಲ್ಲಿ ಪ್ರಾಣನೆಂದಿರುವಾಗ ಪ್ರಾಣಕ್ಕೂ ಪ್ರಾಣನಾಗಿರುವ ಪರಮೇಶ್ವರನೆಂದು ಅರ್ಥಮಾಡಿದ್ದು ಹೇಗೆ ? ಎಂದರೆ ಏಷಃ (ಈತನು) ಎಂಬ ಪ್ರಕೃತಪರಾಮರ್ಶಿಯಾದ ಮಾತಿನಿಂದ ಪ್ರಕೃತನಾದ ಪರಮೇಶ್ವರನನ್ನು ತಿಳಿಸಿದೆ. ಆದ್ದರಿಂದ 'ಪ್ರಾಣಸ್ಯ ಪ್ರಾಣಃ' (ಕೇ - ೧-೨) ಎಂಬ ಶ್ರುತಿಯನ್ನನುಸರಿಸಿ ಈಶ್ವರನನ್ನು ಪ್ರಾಣನೆಂದು ಕರೆಯುವದು ಶ್ರುತಿವಿರುದ್ಧವಲ್ಲವೆಂದು ಭಾಷ್ಯದಲ್ಲಿ ಸೂಚಿಸಿದೆ.

3. ಸರ್ವಭೂತಗಳಾಗಿ ತೋರುವನು ಎಂಬರ್ಥದಲ್ಲಿ, ಸರ್ವಭೂತಗಳಿಂದ ತೋರುವನು ಎಂದು ಕರಣಾರ್ಥದಲ್ಲಲ್ಲ. ಏಕೆಂದರೆ ಆತ್ಮನು ಮತ್ತೇತರಿಂದಲೂ ತೋರುವವನಲ್ಲವೆಂದು ೨-೩-೧೧ ರಲ್ಲಿ ಹೇಳಿದ್ದಾಗಿದೆ.

**ಸರ್ವಾತ್ಮನಾಗಿ** ಎಂದರ್ಥ - 'ವಿಭಾತಿ' ವಿವಿಧವಾಗಿ ತೋರಿಕೊಳ್ಳುತ್ತಿರುವನು. ಹೀಗೆ ಎಲ್ಲಾ ಭೂತಗಳಲ್ಲಿಯೂ ಇರುವ (ಪರಮೇಶ್ವರನನ್ನು) ಯಾವನು ನೇರಾಗಿ ತಾನೆಂಬ ಬುದ್ಧಿಯಿಂದ ''ಇವನೇ ನಾನಾಗಿರುವೆನು'' ಎಂದು ಅರಿತುಕೊಂಡವನಾಗಿ **ವಾಕ್ಯಾರ್ಥ ಜ್ಞಾನಮಾತ್ರದಿಂದ**[1] **ಅರಿತವನಾಗಿರುವನೋ** ಅವನು ಭವತೇ=ಭವತಿ ನ ಆಗುವದಿಲ್ಲ ಎಂದಭಿಪ್ರಾಯ.

ಏನು (ಆಗುವದಿಲ್ಲ) ? ಎಂದರೆ ಅತಿವಾದಿಯಾಗುವದಿಲ್ಲ.[2] ಮಿಕ್ಕದ್ದೆಲ್ಲವನ್ನೂ ಮೀರಿ ನುಡಿಯುವ ಸ್ವಭಾವವುಳ್ಳವನು **ಅತಿವಾದಿಯು** ; ಆದರೆ ಯಾವನು ಹೀಗೆ ಸಾಕ್ಷಾತ್ತಾಗಿ (ತನ್ನ) ಆತ್ಮನು ಪ್ರಾಣದ ಪ್ರಾಣನೆಂದು ಅರಿತುಕೊಂಡಿರುವನೋ ಅವನು ಅತಿವಾದಿಯಾಗುವದಿಲ್ಲ ಎಂದರ್ಥ. (ಇರುವ)ದೆಲ್ಲವೂ ''ಆತ್ಮನೇ ಮತ್ತೊಂದಲ್ಲ'' ಎಂದು ಯಾವಾಗ ಕಂಡುಬಂದಿತೋ ಆಗ ಅವನು ಯಾವದನ್ನು ಮೀರಿ ನುಡಿದಾನು ? ಯಾವನಿಗಾದರೆ ಕಡಿಮೆಯಾದದ್ದು ಮತ್ತೊಂದು ಕಂಡುಬಂದಿರುವದೋ ಅವನು ಅದನ್ನು ಮೀರಿ ನುಡಿಯುತ್ತಾನೆ. ಆದರೆ ಈ ಜ್ಞಾನಿಯು ಆತ್ಮನಿಗಿಂತ ಬೇರೆ ಯಾಗಿ (ಯಾವದನ್ನೂ) ಕಾಣುವದಿಲ್ಲ, ಬೇರೆ (ಯಾವದನ್ನೂ) ಕೇಳುವದಿಲ್ಲ, ಬೇರೆ ಯಾವದನ್ನೂ ಅರಿಯುವದಿಲ್ಲ.[3] ಆದ್ದರಿಂದ (ಯಾವದನ್ನೂ ಇವನು) ಮೀರಿ ನುಡಿಯುವದಿಲ್ಲ.

## (ಭಾಷ್ಯ)

೯೬. ಕಿಂ ಚ ಆತ್ಮಕ್ರೀಡಃ ಆತ್ಮನ್ಯೇವ ಕ್ರೀಡಾ ಕ್ರೀಡನಂ ಯಸ್ಯ ನಾನ್ಯತ್ರ

1. ''ವಾಕ್ಯಾರ್ಥಜ್ಞಾನಮಾತ್ರೇಣ ಸ ಭವತೇ'' ಎಂಬ ಆ || ಪಾಠದ ಬದಲು ''ವಾಕ್ಯಾರ್ಥಜ್ಞಾನಮಾತ್ರೇಣ ನ ಭವತೇ'' ಎಂದಿರುವ ಮ|| ಕಾ|| ಮುಂತಾದ ಪುಸ್ತಕಗಳ ಪಾಠವು ಸರಿಯಲ್ಲ. ವಾಕ್ಯಾರ್ಥಜ್ಞಾನಮಾತ್ರದಿಂದ ಅರಿತುಕೊಂಡಿರುವನು ಎಂಬರ್ಥವು ಸ್ವರಸವಾಗಿದೆ. ಭಾ.ಭಾ. ೧ಲನ್ನು ನೋಡಿರಿ.

2. ಛಾಂದೋಗ್ಯ ೭-೧೬-೧ರಲ್ಲಿ ಪರಮಾರ್ಥವನ್ನು ಅರಿತವನು ನಿಜವಾದ ಅತಿವಾದಿ ಎಂದಿದೆ ; ಇಲ್ಲಿ ಅವನು ಅತಿವಾದಿಯಾಗುವದಿಲ್ಲ ಎಂದಿದೆ. ಇವೆರಡು ಅಭಿಪ್ರಾಯಗಳೂ ಒಂದಕ್ಕೊಂದು ವಿರುದ್ಧವಾಗಿರುವಂತೆ ತೋರಿದರೂ ನಿಜವಾಗಿ ಇಲ್ಲಿ ಯಾವ ವಿರೋಧವೂ ಇಲ್ಲ. ಏಕೆಂದರೆ ಛಾಂದೋಗ್ಯದಲ್ಲಿ ಬ್ರಹ್ಮವು ಎಲ್ಲವನ್ನೂ ಮೀರಿರುವ ಪರಮಾರ್ಥವು. ಆದ್ದರಿಂದ ಪರಮಾರ್ಥಸತ್ಯವನ್ನು ಅರಿತು ಮಾತನಾಡುವವನು ಮಿಥ್ಯೆಯಾದದ್ದನ್ನೆಲ್ಲ ಅತಿಕ್ರಮಿಸಿ ನುಡಿದ ಅತಿವಾದಿಯಾಗುತ್ತಾನೆ ಎಂದಿದೆ. ಇಲ್ಲಿ ಬ್ರಹ್ಮವನ್ನು ಅರಿತವನು ಯಾವದನ್ನೂ ಅತಿಕ್ರಮಿಸಿ ನುಡಿಯುವದಿಲ್ಲ. ಏಕೆಂದರೆ ಪರಮಾರ್ಥವಾಗಿ ಬ್ರಹ್ಮಕ್ಕಿಂತ ಬೇರೆ ಯಾವದೂ ಇಲ್ಲವೇ ಇಲ್ಲ ಎಂದಿದೆ. ಬ್ರಹ್ಮವೊಂದೇ ಸತ್ಯವು ಎಂಬುದು ಎರಡಕ್ಕೂ ಸಮಾನವಾದ ಉಪದೇಶವಾಗಿದೆ.

3. ಛಾಂ. ೭-೨೪-೧ ನೋಡಿರಿ.

ಪುತ್ರದಾರಾದಿಷು ಸ ಆತ್ಮಕ್ರೀಡಃ । ತಥಾ ಆತ್ಮರತಿಃ ಆತ್ಮನ್ಯೇವ[1] ರತಿಃ ರಮಣಂ ಪ್ರೀತಿಃ ಯಸ್ಯ ಸಃ ಆತ್ಮರತಿಃ । ಕ್ರೀಡಾ ಬಾಹ್ಯಸಾಧನಾಪೇಕ್ಷಾ, ರತಿಸ್ತು ಸಾಧನನಿರಪೇಕ್ಷಾ ಬಾಹ್ಯವಿಷಯಪ್ರೀತಿಮಾತ್ರಮ್ ಇತಿ ವಿಶೇಷಃ । ತಥಾ ಕ್ರಿಯಾವಾನ್ ಜ್ಞಾನಧ್ಯಾನ ವೈರಾಗ್ಯಾದಿಕ್ರಿಯಾ ಯಸ್ಯ ಸೋಽಯಂ ಕ್ರಿಯಾವಾನ್ । ಸಮಾಸಪಾಠೇ ಆತ್ಮರತಿರೇವ ಕ್ರಿಯಾ ಅಸ್ಯ ವಿದ್ಯತೇ ಇತಿ ಬಹುವ್ರೀಹಿಮತುಬರ್ಥಯೋಃ ಅನ್ಯತರೋಽತಿರಿಚ್ಯತೇ ॥

(ಭಾಷ್ಯಾರ್ಥ)

ಇದಲ್ಲದೆ (ಇವನು) ಆತ್ಮಕ್ರೀಡನಾಗಿರುವನು. ಆತ್ಮನಲ್ಲಿಯೇ ಕ್ರೀಡೆಯೇ ಹೊರತು ಹೆಂಡಿರುಮಕ್ಕಳು ಮೊದಲಾದವರಲ್ಲಿ ಕ್ರೀಡೆಯಿಲ್ಲದಾತನು ಆತ್ಮಕ್ರೀಡನು. ಹಾಗೂ (ಇವನು) ಆತ್ಮರತಿಯಾಗಿರುವನು. ಆತ್ಮನಲ್ಲಿಯೇ ರತಿಯು, ರಮಣಮಾಡುತ್ತಿರುವದು ಪ್ರೀತಿಯಿರುವದು ಯಾವನಿಗೋ ಅವನು ಆತ್ಮರತಿಯು. ಕ್ರೀಡೆ ಎಂದರೆ ಹೊರಗಿನ ಸಾಧನಗಳನ್ನು ಬಯಸುವ (ಪ್ರೀತಿಯು) ; ಆದರೆ ರತಿ ಎಂದರೆ ಸಾಧನವನ್ನು ಬಯಸದೆ ಹೊರಗಿನ ವಿಷಯಗಳಲ್ಲಿರುವ[2] ಬರಿಯ ಪ್ರೀತಿಯು. ಹೀಗೆ (ಕ್ರೀಡೆಗೂ ರತಿಗೂ) ವಿಶೇಷವಿರುತ್ತದೆ. ಇದರಂತೆ (ಇವನು) ಕ್ರಿಯಾವಂತನಾಗಿರುವನು. ಜ್ಞಾನ, ಧ್ಯಾನ, ವೈರಾಗ್ಯ - ಮುಂತಾದ ಕ್ರಿಯೆಯುಳ್ಳವನಾದ್ದರಿಂದ ಆ ಇವನು ಕ್ರಿಯಾವಂತನೆನಿಸುವನು. ('ಆತ್ಮರತಿಕ್ರಿಯಾವಾನ್' ಎಂಬ) ಸಮಾಸಪಾಠದಲ್ಲಿ ಆತ್ಮರತಿ ಎಂಬ ಕ್ರಿಯೆಯು ಈತನಿಗೆ ಇರುತ್ತದೆ - ಎಂದು (ಅರ್ಥಮಾಡಬೇಕಾಗುವದರಿಂದ) ಬಹುವ್ರೀಹಿ, ಮತುಬರ್ಥ - ಇವೆರಡರಲ್ಲಿ ಒಂದು ಹೆಚ್ಚಾಗುವದು.[3]

(ಭಾಷ್ಯ)

೯೭. ಕೇಚಿತ್ತು ಅಗ್ನಿಹೋತ್ರಾದಿಕರ್ಮಬ್ರಹ್ಮವಿದ್ಯಯೋಃ ಸಮುಚ್ಚಯಾರ್ಥಮ್ ಇಚ್ಛನ್ತಿ । ತಚ್ಚ "ಏಷ ಬ್ರಹ್ಮವಿದಾಂ ವರಿಷ್ಠಃ" ಇತ್ಯನೇನ ಮುಖ್ಯಾರ್ಥವಚನೇನ ವಿರುಧ್ಯತೇ । ನ ಹಿ ಬಾಹ್ಯಕ್ರಿಯಾವಾನ್ ಆತ್ಮಕ್ರೀಡ ಆತ್ಮರತಿಶ್ಚ ಭವಿತುಂ ಶಕ್ತಃ ಕಶ್ಚಿತ್[4] । ಬಾಹ್ಯಕ್ರಿಯಾವಿನಿವೃತ್ತೋ ಹಿ ಆತ್ಮಕ್ರೀಡೋ ಭವತಿ । ಬಾಹ್ಯಕ್ರಿಯಾತ್ಮ

1. 'ಆತ್ಮನ್ಯೇವ ಚ' ಎಂಬ ಆ॥ ಪಾಠದಲ್ಲಿ ಚ ಹೆಚ್ಚು.

2. ಛಾಂ. ಭಾ. ೭-೨೫-೧ರಲ್ಲಿ ಈ ಎರಡರ ವಿವರಣೆಯನ್ನು ನೋಡಿ.

3. 'ಆತ್ಮರತಿಃ' ಎಂಬುದು ಬಹುವ್ರೀಹಿ ; ಕ್ರಿಯಾವಾನ್ ಎಂಬಲ್ಲಿ ವಾನ್ ಎಂಬುದು (ಉಳ್ಳ ಎಂಬರ್ಥದ) ಮತುಬರ್ಥಪ್ರತ್ಯಯ. ಆತ್ಮರತಿಕ್ರಿಯಾವಾನ್ ಎಂಬ ಸಮಾಸದಲ್ಲಿ 'ಆತ್ಮರತಿಕ್ರಿಯಃ' ಎಂದು ಬಹುವ್ರೀಹಿಯಿಂದಲೇ ಅರ್ಥವು ಹೊಂದುವದರಿಂದ ವಾನ್ ಎಂಬ ಮತುಬರ್ಥಪ್ರತ್ಯಯವು ವ್ಯರ್ಥವಾಗುತ್ತದೆ. ಆದ್ದರಿಂದ ಸಮಾಸಪಾಠಕ್ಕಿಂತ ಬಿಡಿಸಿದ ಪಾಠವೇ ಉತ್ತಮ ಎಂದು ಭಾವ. ಗೀ.ಭಾ. ೧೩-೧೨ರಲ್ಲಿ ಅನಾದಿಮತ್ ಎಂಬುದರ ವ್ಯಾಖ್ಯಾನದ ಪೂರ್ವಪಕ್ಷವನ್ನು ನೋಡಿರಿ.

4. 'ಕ್ವಚಿತ್' ಎಂಬ ಮಾತು ವಾ । ಪಾಠದಲ್ಲಿ ಹೆಚ್ಚಾಗಿದೆ.

ಕ್ರೀಡಯೋರ್ವಿರೋಧಾತ್ । ನ ಹಿ ತಮಃಪ್ರಕಾಶಯೋರ್ಯುಗಪದೇಕತ್ರ ಸ್ಥಿತಿಃ ಸಂಭವತಿ । ತಸ್ಮಾತ್ ಅಸತ್ಪ್ರಲಪಿತಮೇವೈತತ್ ಅನೇನ ಜ್ಞಾನಕರ್ಮಸಮುಚ್ಚಯ ಪ್ರತಿಪಾದನಮ್ । ''ಅನ್ಯಾ ವಾಚೋ ವಿಮುಞ್ಚಥ'' (೨-೨-೫), ''ಸಂನ್ಯಾಸ ಯೋಗಾತ್'' - (೩-೨-೬) ಇತ್ಯಾದಿಶ್ರುತಿಭ್ಯಶ್ಚ । ತಸ್ಮಾತ್ ಅಯಮೇವೇಹ ಕ್ರಿಯಾ ವಾನ್ ಯೋ ಜ್ಞಾನಧ್ಯಾನಾದಿಕ್ರಿಯಾವಾನ್ ಅಭಿನ್ನಾರ್ಥಮರ್ಯಾದಃ[1] ಸಂನ್ಯಾಸೀ । ಯ ಏವಂಲಕ್ಷಣೋ ನಾತಿವಾದೀ ಆತ್ಮಕ್ರೀಡಃ ಆತ್ಮರತಿಃ ಕ್ರಿಯಾವಾನ್ ಬ್ರಹ್ಮನಿಷ್ಠಃ ಸ ಬ್ರಹ್ಮವಿದಾಂ ಸರ್ವೇಷಾಂ ವರಿಷ್ಠಃ ಪ್ರಧಾನಃ ॥

## (ಭಾಷ್ಯಾರ್ಥ)

ಆದರೆ ಕೆಲವರು (ಆತ್ಮರತಿಃ ಕ್ರಿಯಾವಾನ್ ಎಂಬಲ್ಲಿ) ಅಗ್ನಿಹೋತ್ರವೇ ಮುಂತಾದ ಕರ್ಮಗಳಿಗೂ ಬ್ರಹ್ಮವಿದ್ಯೆಗೂ ಸಮುಚ್ಚಯವೆಂಬ ಅರ್ಥ ಎಂದು ಅಭಿಪ್ರಾಯಪಡುತ್ತಾರೆ. ಆ (ಅಭಿಪ್ರಾಯವು) ''ಇವನು, ಬ್ರಹ್ಮವೇತ್ತರಲ್ಲಿ ಅತ್ಯಂತ ಉತ್ತಮನಾಗಿರುವವನು'' ಎಂದು ಪ್ರಧಾನವಾದ ವಿಷಯವನ್ನು ಹೇಳುವ[2] ವಚನಕ್ಕೆ ವಿರುದ್ಧವಾಗಿರುತ್ತದೆ. ಏಕೆಂದರೆ ಹೊರಗಿನ ಕ್ರಿಯೆಯನ್ನು ಮಾಡುತ್ತಿರುವವನು ಯಾವನೂ ಆತ್ಮಕ್ರೀಡನೂ ಆತ್ಮರತಿಯೂ ಆಗಿರಲೇ ಆರನು. ಹೊರಗಿನ ಕ್ರಿಯೆಗಳನ್ನು ಬಿಟ್ಟವನೇ ಆತ್ಮಕ್ರೀಡನಾಗುತ್ತಾನೆ[3] ; ಏಕೆಂದರೆ ಹೊರಗಿನ ಕ್ರಿಯೆ, ಆತ್ಮಕ್ರೀಡೆ - ಇವುಗಳಿಗೆ (ಒಂದಕ್ಕೊಂದಕ್ಕೆ) ವಿರೋಧವಿರುತ್ತದೆ. ಕತ್ತಲೆ, ಬೆಳಕು - ಇವುಗಳೆರಡೂ ಒಂದೇ ಕಡೆಯಲ್ಲಿರುವದೆಂಬುದು ಆಗುವಹಾಗಿಲ್ಲವಷ್ಟೆ. ಆದ್ದರಿಂದ ಈ (ವಚನ ದಿಂದ) ಜ್ಞಾನಕರ್ಮಗಳ ಸಮುಚ್ಚಯವನ್ನು ಹೇಳಿದೆ ಎಂಬುದು ಬರಿಯ ಸುಳ್ಳು ಮಾತು. ''ಮಿಕ್ಕ ಮಾತುಗಳನ್ನು ಬಿಟ್ಟುಬಿಡಿ''[4] (೨-೨-೫), ಸಂನ್ಯಾಸಯೋಗದಿಂದ ''(ಶುದ್ಧಸತ್ತ್ವರಾಗಿ)''[5] (೩-೨-೬) ಮುಂತಾದ ಶ್ರುತಿಗಳಿಂದಲೂ (ಹೀಗೆಂದು ಸಿದ್ಧ ವಾಗುತ್ತದೆ). ಆದ್ದರಿಂದ ಯಾವನು ಜ್ಞಾನ, ಧ್ಯಾನ - ಮುಂತಾದ ಕ್ರಿಯೆಗಳುಳ್ಳವನೋ,

1. ''ಅಸಂಭಿನ್ನಾರ್ಯಮರ್ಯಾದಃ'' ಎಂದು ವಾ॥ ಗೋ॥ ಪಾಠ.

2. ಇಲ್ಲಿ ಸಗುಣಬ್ರಹ್ಮಜ್ಞಾನಿಗಳಿಗೂ ಅಕ್ಷರವೇತ್ತರಾದ ನಿರ್ಗುಣಬ್ರಹ್ಮಜ್ಞಾನಿಗಳಿಗೂ ತಾರತಮ್ಯವನ್ನು ಹೇಳಿದೆ ; ಬ್ರಹ್ಮಜ್ಞಾನಿಗಳಲ್ಲಿ ಬ್ರಹ್ಮವಿದ್, ಬ್ರಹ್ಮವಿದ್ವರ, ಬ್ರಹ್ಮವಿದ್ವರಿಷ್ಠ - ಎಂದು ಈಚಿನ ವೇದಾಂತಿಗಳು ಕಲ್ಪಿಸಿರುವ ಭೂಮಿಕೆಗಳನ್ನಲ್ಲ.

3. ಗೀ.ಭಾ. ೬-೩.

4. ಅಪರವಿದ್ಯೆಯ ಮಾತುಗಳನ್ನು ಬಿಡಿ ಎಂದದ್ದರಿಂದ ವೇದವನ್ನೂ ವೇದೋಕ್ತ ಕರ್ಮಗಳನ್ನೂ ಸಂನ್ಯಾಸಮಾಡಿರಿ ಎಂದಂತೆ ಆಯಿತು.

5. ಇಲ್ಲಿ ಪ್ರತ್ಯಕ್ಷವಾಗಿಯೇ ಕರ್ಮತ್ಯಾಗವನ್ನು ಹೇಳಿದೆ.

ಅರ್ಥ (ವ್ಯವಸ್ಥೆಯ) ಎಲ್ಲೆಯನ್ನು ಒಡೆಯದೆ ಇರುವ[1] ಸಂನ್ಯಾಸಿಯೋ'' ಅವನೇ ಇಲ್ಲಿ ಕ್ರಿಯಾವಂತನು (ಎಂದು ಹೇಳಲ್ಪಟ್ಟಿರುತ್ತಾನೆ.)

ಯಾವನು ಈ ಸ್ವರೂಪದವನಾದ ಅತಿವಾದಿಯಲ್ಲದ ಆತ್ಮಕ್ರೀಡನಾದ ಆತ್ಮ ರತಿಯಾದ ಕ್ರಿಯಾವಂತನಾದ ಬ್ರಹ್ಮನಿಷ್ಠನೋ ಅವನು ಬ್ರಹ್ಮವೇತ್ತರಲ್ಲೆಲ್ಲ ಅತ್ಯಂತ ಉತ್ತಮನು ; ಮುಖ್ಯನು.

## ಆತ್ಮದರ್ಶನಕ್ಕೆ ಸಾಧನಗಳು

### (ಭಾಷ್ಯ)

೯೮. ಅಧುನಾ ಸತ್ಯಾದೀನಿ ಭಿಕ್ಷೋಃ ಸಮ್ಯಗ್ಜ್ಞಾನಸಹಕಾರೀಣಿ ಸಾಧನಾನಿ ವಿಧೀಯನ್ತೇ ನಿವೃತ್ತಿಪ್ರಧಾನಾನಿ -

### (ಭಾಷ್ಯಾರ್ಥ)

ಈಗ ಸರಿಯಾದ ಜ್ಞಾನಕ್ಕೆ ಸಹಕಾರಿಗಳಾದ ಸತ್ಯವೇ ಮುಂತಾದ ನಿವೃತ್ತಿ ಪ್ರಧಾನವಾದ ಸಾಧನಗಳನ್ನು[2] ಸಂನ್ಯಾಸಿಗೆ ವಿಧಿಸಲಾಗುತ್ತದೆ :-

**ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ**
**ಸಮ್ಯಗ್ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಮ್ ।**
**ಅನ್ತಃಶರೀರೇ ಜ್ಯೋತಿರ್ಮಯೋ ಹಿ ಶುಭ್ರೋ**
**ಯಂ ಪಶ್ಯನ್ತಿ ಯತಯಃ ಕ್ಷೀಣದೋಷಾಃ ॥೫॥**

೫. ಈ ಆತ್ಮನು ನಿತ್ಯವಾಗಿ ಸತ್ಯದಿಂದಲೂ ತಪಸ್ಸಿನಿಂದಲೂ ಸರಿಯಾದ ಜ್ಞಾನದಿಂದಲೂ ಬ್ರಹ್ಮಚರ್ಯೆಯಿಂದಲೂ ಲಭ್ಯನಾಗಿರುವನು. ಅಂತಃಶರೀರ ದಲ್ಲಿ (ಇವನು) ಜ್ಯೋತಿರ್ಮಯನಾಗಿ ಶುಭ್ರನಾಗಿ (ಇರುವನು). ಯಾವ (ಇವನನ್ನು) ಕ್ಷೀಣದೋಷರಾದ ಯತಿಗಳು ಕಂಡುಕೊಳ್ಳುವರು.

---

1. ಕರ್ಮವನ್ನು ತ್ಯಾಗಮಾಡಿದವನು ಸ್ವೇಚ್ಛಾಚಾರಿಯಾದವನೆ ? ಎಂಬ ಶಂಕೆಗೆ ಉತ್ತರ ವಿದು. ಅತ್ಯಂತ ಮೂಢರಾದ ಶರೀರಾಭಿಮಾನಿಗಳು ಯಥೇಚ್ಛವಾಗಿ ನಡೆಯುವರು ; ಅಭಿಮಾನ ವಿಲ್ಲದ ಜ್ಞಾನಿಯು ಹಾಗೆ ನಡೆಯಲಾರನು. ಐ.ಭಾ. ಸಂಬಂಧ ಭಾ ; ಸೂ.ಭಾ. ೨-೩-೪೮ ನ್ನು ನೋಡಿ.

2. ನಿವೃತ್ತಿಪರವಾಗಿರುವದರಿಂದ ಇವು ಸಂನ್ಯಾಸಿಯಲ್ಲಿ ಪೂರ್ಣವಾಗಿರುತ್ತವೆ. ಇಲ್ಲಿ ಸರಿಯಾದ ಜ್ಞಾನವೆಂದರೆ ವಾಕ್ಯಾರ್ಥಜ್ಞಾನವು ; ಇದು ಪಕ್ವವಾಗುವದಕ್ಕೆ ಸಹಕಾರಿಗಳು ಬೇಕು ಎಂದು ವ್ಯಾಖ್ಯಾನದಲ್ಲಿದೆ. ಇದಕ್ಕೆ ಭಾಷ್ಯದ ಬೆಂಬಲವಿಲ್ಲ. ಜ್ಞಾನವುಂಟಾಗುವದಕ್ಕೆ ಸಹಾಯ ವಾದವು ಸತ್ಯಾದಿಗಳು. ಅಷ್ಟು ಮಾತ್ರದಿಂದಲೇ ಇವನ್ನು ಸಹಕಾರಿಗಳು ಎಂದು ಹೇಳಿದೆ. ಸೂ.ಭಾ. ೩-೪-೩೩ನ್ನು ನೋಡಿರಿ.

## (ಭಾಷ್ಯ)

೯. ಸತ್ಯೇನ ಅನೃತತ್ಯಾಗೇನ ಮೃಷಾವದನತ್ಯಾಗೇನ ಲಭ್ಯಃ ಪ್ರಾಪ್ತವ್ಯಃ। ಕಿಂಚ ತಪಸಾ ಹಿ ಇನ್ದ್ರಿಯಮನಏಕಾಗ್ರತಯಾ "ಮನಸಶ್ಚೇನ್ದ್ರಿಯಾಣಾಂ ಚ ಹ್ಯೈಕಾಗ್ರ್ಯಂ ಪರಮಂ ತಪಃ" ।। (ಮೋ. ಧ. ೨೫೦-೪) ಇತಿ ಸ್ಮರಣಾತ್ । ತದ್ ಹಿ ಅನುಕೂಲಮ್ ಆತ್ಮದರ್ಶನಾಭಿಮುಖೀಭಾವಾತ್ ಪರಮಂ ಸಾಧನಂ ತಪಃ ನೇತರತ್ ಚಾನ್ದ್ರಾಯಣಾದಿ । "ಏಷ ಆತ್ಮಾ ಲಭ್ಯಃ" ಇತ್ಯನುಷಙ್ಗಃ ಸರ್ವತ್ರ । ಸಮ್ಯಗ್ಜ್ಞಾನೇನ ಯಥಾಭೂತಾತ್ಮದರ್ಶನೇನ । ಬ್ರಹ್ಮಚರ್ಯೇಣ ಮೈಥುನಾಸಮಾಚಾರೇಣ । ನಿತ್ಯಂ ಸರ್ವದಾ । ನಿತ್ಯಂ ಸತ್ಯೇನ ನಿತ್ಯಂ ತಪಸಾ ನಿತ್ಯಂ ಸಮ್ಯಗ್‌ಜ್ಞಾನೇನ ಇತಿ ಸರ್ವತ್ರ ನಿತ್ಯಶಬ್ದಃ ಅನ್ತರ್ದೀಪಿಕಾನ್ಯಾಯೇನ ಅನುಷಕ್ತವ್ಯಃ । ವಕ್ಷ್ಯತಿ ಚ "ನ ಯೇಷು ಜಿಹ್ಮಮನೃತಂ ನ ಮಾಯ ಚ" (ಪ್ರ. ೧-೧೬) ಇತಿ । ಕ್ವಾಸೌ ಆತ್ಮಾಯ ಏತೈಃ ಸಾಧನೈರ್ಲಭ್ಯಃ ಇತಿ ? ಉಚ್ಯತೇ । ಅನ್ತಃಶರೀರೇ ಅನ್ತಃ ಮಧ್ಯೇ ಶರೀರಸ್ಯ ಪುಣ್ಡರೀಕಾಕಾಶೇ ಜ್ಯೋತಿರ್ಮಯೋ ಹಿ ರುಕ್ಮವರ್ಣಃ ಶುಭ್ರಃ ಶುದ್ಧಃ ಯಮ್ ಆತ್ಮಾನಂ ಪಶ್ಯನ್ತಿ ಉಪಲಭನ್ತೇ ಯತಯಃ ಯತನಶೀಲಾಃ ಸಂನ್ಯಾಸಿನಃ ಕ್ಷೀಣದೋಷಾಃ ಕ್ಷೀಣಕ್ರೋಧಾದಿಚಿತ್ತಮಲಾಃ, ಸ ಆತ್ಮಾ ನಿತ್ಯಂ ಸತ್ಯಾದಿಸಾಧನೈಃ ಸಂನ್ಯಾಸಿಭಿಃ ಲಭ್ಯತೇ ಇತ್ಯರ್ಥಃ । ನ ಕಾದಾಚಿತ್ಕೈಃ ಸತ್ಯಾದಿಭಿರ್ಲಭ್ಯತೇ ।।

## (ಭಾಷ್ಯಾರ್ಥ)

ಸತ್ಯದಿಂದ ಎಂದರೆ ಸುಳ್ಳನ್ನು ಬಿಡುವದರಿಂದ ಸುಳ್ಳುಹೇಳುವದನ್ನು ಬಿಡುವದರಿಂದ ಲಭ್ಯನು, ಪಡೆಯತಕ್ಕವನು. ಮತ್ತು ತಪಸ್ಸಿನಿಂದ ಎಂದರೆ ಇಂದ್ರಿಯಗಳನ್ನೂ ಮನಸ್ಸನ್ನೂ ಏಕಾಗ್ರವಾಗಿ ಮಾಡಿಕೊಳ್ಳುವದರಿಂದ "ಮನಸ್ಸಿನ ಮತ್ತು ಇಂದ್ರಿಯಗಳ ಏಕಾಗ್ರತೆಯು ಹೆಚ್ಚಿನ ತಪಸ್ಸು" (ಮೋ. ಧ. ೨೫೦-೪) ಎಂದು (ಹೇಳುವ) ಸ್ಮೃತಿಯು (ಇದಕ್ಕೆ ಆಧಾರವು). ಆತ್ಮನನ್ನು ಕಾಣುವದಕ್ಕೆ ಆ ಕಡೆಗೇ (ಮನಸ್ಸನ್ನು) ತಿರುಗಿ ಸುವದರಿಂದ ಇದೇ ಅನುಕೂಲವಾದ ಹೆಚ್ಚಿನ ತಪಸ್ಸೆ(ನಿಸುವದೇ ಹೊರತು) ಚಾಂದ್ರಾಯಣವೇ ಮುಂತಾದ ಮಿಕ್ಕ (ತಪಸ್ಸು ಇಲ್ಲಿ ಹೇಳಿರುವ ತಪಸ್ಸಾ)ಗಲಾರದು.[1] (ಈ ತಪಸ್ಸಿನಿಂದ) "ಈ ಆತ್ಮನು ಲಭ್ಯನಾಗಿರುವನು" ಎಂಬ (ಮಾತುಗಳನ್ನು) ಎಲ್ಲಾ ಕಡೆಯಲ್ಲಿಯೂ ಸೇರಿಸಿಕೊಳ್ಳಬೇಕು. **ಸರಿಯಾದ ಜ್ಞಾನದಿಂದ** ಎಂದರೆ ಆತ್ಮನನ್ನು ಇದ್ದವನನ್ನು ಇದ್ದಂತೆಯೇ ಕಂಡುಕೊಳ್ಳುವದರಿಂದ ; **ಬ್ರಹ್ಮಚರ್ಯದಿಂದ** ಮೈಥುನ

1. ಚಾಂದ್ರಾಯಣವೇ ಮುಂತಾದದ್ದು ಶರೀರವನ್ನು ಕೃಶಗೊಳಿಸಿ ಮನಸ್ಸು ಹೊರಮುಖವಾಗುವಂತೆ ಮಾಡುತ್ತದೆ.

ವನ್ನು ಮಾಡದೆ ಇರುವದರಿಂದ[1] "ನಿತ್ಯಮ್" ಎಂಬ ಮಾತನ್ನು 'ನಿತ್ಯವೂ ಸತ್ಯ(ವನ್ನು ನುಡಿಯುವದರಿಂದ), ನಿತ್ಯವೂ ತಪಸ್ಸು (ಮಾಡುವದ)ರಿಂದ, ನಿತ್ಯವೂ ಸರಿಯಾದ ಜ್ಞಾನವನ್ನು (ಅನುಸಂಧಾನಮಾಡುತ್ತಿರುವದರಿಂದ)' ಎಂದು ಅಂತರ್ದೀಪಿಕಾನ್ಯಾಯ ದಿಂದ[2] ಎಲ್ಲಾ ಕಡೆಗೂ ಸೇರಿಸಿಕೊಳ್ಳಬೇಕು. "ಯಾರಲ್ಲಿ ಕಪಟವೂ ಸುಳ್ಳೂ ಇರುವ ದಿಲ್ಲವೋ ಮಾಯೆಯೂ ಇರುವದಿಲ್ಲವೋ (ಅವರಿಗೆ ಈ ಬ್ರಹ್ಮಲೋಕವು)" (ಪ್ರ. ೬-೧೬) ಎಂದು ಮುಂದೆ (ಶ್ರುತಿಯು) ಹೇಳಿಯೂ[3] ಇರುತ್ತದೆ.

ಈ ಸಾಧನೆಗಳಿಂದ ಸಿಕ್ಕುವನಲ್ಲ, ಆ ಆತ್ಮನು ಎಲ್ಲಿರುತ್ತಾನೆ[4] ? ಎಂದರೆ (ಶ್ರುತಿ) ಹೇಳುತ್ತದೆ. ಅಂತಃಶರೀರದಲ್ಲಿ ಎಂದರೆ ಶರೀರದ ನಡುವೆ ಇರುವ (ಹೃದಯ) ಪುಂಡರೀಕದ ಆಕಾಶದಲ್ಲಿ (ಇವನು) ಜ್ಯೋತಿರ್ಮಯನಾಗಿ ಬಂಗಾರದ ಬಣ್ಣವುಳ್ಳವ ನಾಗಿ ಶುಭ್ರನಾಗಿ ಶುದ್ಧನಾಗಿ(ರುವನು). ಯಾವ (ಈ) ಆತ್ಮನನ್ನು ಕ್ಷೀಣದೋಷರಾದ ಎಂದರೆ ಸಿಟ್ಟು ಮುಂತಾದ ಚಿತ್ತದ ಮಲಗಳನ್ನು ಕಳೆದುಕೊಂಡಿರುವ ಯತಿಗಳು ಎಂದರೆ ಯತ್ನವನ್ನು ಮಾಡುವ ಸ್ವಭಾವವುಳ್ಳ ಸಂನ್ಯಾಸಿಗಳು (ಅಲ್ಲಿ) ಕಂಡುಕೊಳ್ಳು ವರು, ಗೊತ್ತುಪಡಿಸಿಕೊಳ್ಳುವರು. ಆ ಆತ್ಮನು ಯಾವಾಗಲೂ ಸತ್ಯವೇ ಮುಂತಾದ ಸಾಧನಗಳನ್ನು (ಮಾಡುತ್ತಿರುವ) ಸಂನ್ಯಾಸಿಗಳಿಗೆ ದೊರಕುವನೇ ಹೊರತು ಆಗಾಗ್ಗೆ ಮಾಡುವ ಸತ್ಯಾದಿಸಾಧನಗಳಿಂದ ದೊರೆಯನೆಂದು ಅರ್ಥ[5].

---

1. ಸ್ಮರಿಸುವದು, ಅದರ ಮಾತನಾಡುವದು, ಆಡುವದು, ನೋಡುವದು, ಗುಟ್ಟಿನಲ್ಲಿ ಮಾತನಾಡುವದು, ಸಂಕಲ್ಪಿಸುವದು, ನಿಶ್ಚಯಿಸುವದು, ಕೆಲಸವನ್ನು ಮಾಡಿಬಿಡುವದು. ('ಸ್ಮರಣಂ ಕೀರ್ತನಂ ಕೇಳಿಃ ಪ್ರೇಕ್ಷಣಂ ಗುಹ್ಯಭಾಷಣಮ್ । ಸಙ್ಕಲ್ಪೋಽಧ್ಯವಸಾಯಶ್ಚ ಕ್ರಿಯಾನಿರ್ವೃತಿರೇವ ಚ') ಎಂದು ಮೈಥುನವು ಎಂಟು ಬಗೆ, ಅದಿಲ್ಲದಿರುವದು ಬ್ರಹ್ಮ ಚರ್ಯೆಯು.

2. ನಡುವೆ ಇಟ್ಟ ದೀಪವು ಎರಡು ಕಡೆಗೂ ಬೆಳಕು ಬೀರುವಂತೆ.

3. ಪ್ರಶ್ನೋಪನಿಷತ್ತು ಈ ಉಪನಿಷತ್ತನ್ನು ವಿವರಿಸುವ ಬ್ರಾಹ್ಮಣವು. ಅದರಲ್ಲಿ ಹೇಳಿರುವದು ಕರ್ಮೋಪಾಸನಾಸಮುಚ್ಚಯವನ್ನು ಮಾಡುವವರ ವಿಷಯವಾದರೂ ಉಪಾಸನೆ ಗಿಂತ ಹೆಚ್ಚಿನದಾದ ಜ್ಞಾನಕ್ಕೆ ಈ ಸಾಧನಗಳು ಬೇಕೆಂಬುದಕ್ಕೆ ಇನ್ನೂ ಬಲವಾದ ಕಾರಣವಿದೆ ಎಂದು ಭಾಷ್ಯಕಾರರ ಆಶಯ.

4. "ಕೋಽಸೌ" ಎಂಬ ಆ।। ಪಾಠಕ್ಕೆ ಅವನು ಯಾರು ? ಎಂದು ಅರ್ಥ. ಆದರೆ ಈಗ ಆ ಪ್ರಶ್ನೆಗಿಂತ ಆತನನ್ನು ಎಲ್ಲಿ ತಿಳಿಯಬೇಕು ? - ಎಂಬುದೇ ಹೊಂದುತ್ತದೆ. ಪ್ರ. ೬-೨ ನೋಡಿ.

5. ಗೃಹಸ್ಥರಲ್ಲಿಯೂ ಸತ್ಯಾದಿಸಾಧನಗಳು ಇರುವವು ; ಆದರೆ ನಿತ್ಯವಾದ ಸತ್ಯಾದಿಗಳು ಸಂನ್ಯಾಸಿಗಳಲ್ಲಿ ಮಟ್ಟಿಗೆ ಇರುವದು ಸಾಧ್ಯ. ಸತ್ಯಾದಿಗಳು ಜ್ಞಾನಿಗಳಿಗೆ ಸಹಜವಾಗಿಯೇ ಇದ್ದುಕೊಂಡಿರುತ್ತವೆ ; ಇವುಗಳನ್ನು ಸಾಧಕರು ಅಭ್ಯಾಸಮಾಡಿದರೆ ಜ್ಞಾನವುಂಟಾಗುತ್ತದೆ. ಛಾಂ. ಭಾ. ೮-೧-೧ ಸಂಬಂಧ ; ಗೀ. ಭಾ. ೨-೫೫ರಲ್ಲಿ ಸ್ಥಿತಪ್ರಜ್ಞನ ಲಕ್ಷಣಕ್ಕೆ ಇರುವ ಸಂಬಂಧ ಭಾಷ್ಯ - ಇವುಗಳನ್ನು ನೋಡಿ.

(ಭಾಷ್ಯ)

೧೦೦. ಸತ್ಯಾದಿಸಾಧನಸ್ತುತ್ಯರ್ಥೋಽಯಮ್ ಅರ್ಥವಾದಃ ।

(ಭಾಷ್ಯಾರ್ಥ)

ಇದು ಸತ್ಯವೇ ಮುಂತಾದ ಸಾಧನಗಳನ್ನು ಹೊಗಳುವದಕ್ಕಾಗಿ[1] (ಬಂದಿರುವ) ಅರ್ಥವಾದವು :-

**ಸತ್ಯಮೇವ ಜಯತೇ ನಾನೃತಂ**
**ಸತ್ಯೇನ ಪನ್ಥಾ ವಿತತೋ ದೇವಯಾನಃ ।**
**ಯೇನಾಕ್ರಮನ್ತ್ಯೃಷಯೋ ಹ್ಯಾಪ್ತಕಾಮಾಃ**
**ಯತ್ರ ತತ್ಸತ್ಯಸ್ಯ ಪರಮಂ ನಿಧಾನಮ್** ॥೬॥

೬. ಸತ್ಯವೇ ಗೆಲ್ಲುವದೇ ಹೊರತು ಅನೃತವಲ್ಲ. ಆಪ್ತಕಾಮರಾದ ಋಷಿಗಳು ಆ ಸತ್ಯದ ಪರಮನಿಧಾನವು ಇರುವಲ್ಲಿಗೆ ಯಾವ (ಮಾರ್ಗ) ದಿಂದ ಹೋಗುತ್ತಾರೋ (ಅಂಥ) ದೇವಯಾನಮಾರ್ಗವು ಸತ್ಯದಿಂದಲೇ ಹಬ್ಬಿರುತ್ತದೆ.

(ಭಾಷ್ಯ)

೧೦೧. ಸತ್ಯಮೇವ ಸತ್ಯವಾನೇವ ಜಯತೇ ಜಯತಿ[2] ನಾನೃತಂ ನಾನೃತವಾದೀ ಇತ್ಯರ್ಥಃ । ನ ಹಿ ಸತ್ಯಾನೃತಯೋಃ ಕೇವಲಯೋಃ ಪುರುಷಾನಾಶ್ರಿತಯೋಃ ಜಯಃ ಪರಾಜಯೋ ವಾ ಸಂಭವತಿ । ಪ್ರಸಿದ್ಧಂ ಲೋಕೇ ಸತ್ಯವಾದಿನಾ ಅನೃತವಾದೀ ಅಭಿಭೂಯತೇ ನ ವಿಪರ್ಯಯಃ ಅತಃ ಸಿದ್ಧಂ ಸತ್ಯಸ್ಯ ಬಲವತ್ಸಾಧನತ್ವಮ್ । ಕಿಂಚ ಶಾಸ್ತ್ರತೋಽಪಿ ಅವಗಮ್ಯತೇ ಸತ್ಯಸ್ಯ ಸಾಧನಾತಿಶಯತ್ವಮ್ । ಕಥಮ್ ? ಸತ್ಯೇನ ಯಥಾಭೂತವಾದವ್ಯವಸ್ಥಯಾ ಪನ್ಥಾಃ ದೇವಯಾನಾಖ್ಯಃ ವಿತತಃ ವಿಸ್ತೀರ್ಣಃ ಸಾತತ್ಯೇನ ಪ್ರವೃತ್ತಃ । ಯೇನ ಪಥಾ ಹಿ ಆಕ್ರಮನ್ತಿ ಆಕ್ರಮನ್ತೇ[3] ಋಷಯಃ ದರ್ಶನವನ್ತಃ

1. ಮುದ್ರಿತಪುಸ್ತಕಗಳಲ್ಲಿ ಹಿಂದಿನ ಮಂತ್ರದ ಭಾಷ್ಯದ ಕೊನೆಯಲ್ಲಿರುವ ಈ ವಾಕ್ಯವು ಈ ಮಂತ್ರಕ್ಕೇ ಸೇರಿದ್ದೆಂಬುದು ಸ್ಪಷ್ಟ. ''ಸತ್ಯಾದಿ'' ಎಂದು ಭಾಷ್ಯದಲ್ಲಿದ್ದರೂ ಮಂತ್ರದಲ್ಲಿ ಸತ್ಯವನ್ನು ಮಾತ್ರ ಹೊಗಳಿರುವದರಿಂದ ತಪಸ್ಸು ಮುಂತಾದವುಗಳಿಗೂ ಇದು ಉಪಲಕ್ಷಣವೆಂದು ಭಾಷ್ಯಾಭಿಪ್ರಾಯವನ್ನು ಕಲ್ಪಿಸಬೇಕು.

2. ಇದು ವಾ॥ ಪಾಠ. ಆ॥ ಪಾಠದಲ್ಲಿ ಉಪನಿಷತ್ತಿನಲ್ಲಿಯೂ ಭಾಷ್ಯದಲ್ಲಿಯೂ ಜಯತಿ ಎಂದಿಷ್ಟೇ ಇದೆ.

3. 'ಕ್ರಮನ್ತೇ' ಎಂದಿಷ್ಟೇ ಆ॥ ಪಾಠ.

ಕುಹಕಮಾಯಾಶಾಠ್ಯಾಹಂಕಾರದಮ್ಭಾನೃತವರ್ಜಿತಾಃ ಹಿ ಆಪ್ತಕಾಮಾಃ ವಿಗತತೃಷ್ಣಾಃ ಸರ್ವತಃ । ಯತ್ರ ಯಸ್ಮಿನ್ ತತ್ ಪರಮಾರ್ಥತತ್ತ್ವಂ ಸತ್ಯಸ್ಯ ಉತ್ತಮಸಾಧನಸ್ಯ ಸಂಬನ್ಧಿ । ಸಾಧ್ಯಂ ಪರಮಂ ಪ್ರಕೃಷ್ಟಂ ನಿಧಾನಂ ಪುರುಷಾರ್ಥರೂಪೇಣ ನಿಧೀಯತೇ ಇತಿ ನಿಧಾನಂ ವರ್ತತೇ । ತತ್ರ ಚ ಯೇನ ಪಥಾ ಆಕ್ರಮನ್ತಿ ಸ ಸತ್ಯೇನ ವಿತತಃ ಇತಿ ಪೂರ್ವೇಣ ಸಂಬನ್ಧಃ ॥

## (ಭಾಷ್ಯಾರ್ಥ)

ಸತ್ಯವೇ ಎಂದರೆ ಸತ್ಯವಂತನೇ ಜಯತೇ - ಜಯತಿ ಗೆಲ್ಲುವನು ಅನೃತವು ಗೆಲ್ಲುವದಿಲ್ಲ. ಸುಳ್ಳನ್ನು ಹೇಳುವವನು (ಗೆಲ್ಲುವ)ದಿಲ್ಲ ಎಂದರ್ಥ, ಏಕೆಂದರೆ ಜನರನ್ನು ಆಶ್ರಯಿಸದೆ ಇರುವ ಬರಿಯ ಸತ್ಯ, ಅನೃತ - ಇವುಗಳಿಗೆ ಗೆಲವಾಗಲಿ ಸೋಲಾಗಲಿ ಆಗುವಹಾಗೆಯೇ ಇಲ್ಲ. ನಿಜವನ್ನು ಹೇಳುವಾತನಿಂದ ಸುಳ್ಳನ್ನು ಹೇಳುವಾತನು ಸೋಲಿಸಲ್ಪಡುತ್ತಾನೆ ಎಂಬುದು ಪ್ರಸಿದ್ಧವಾಗಿದೆ ; ಇದಕ್ಕೆ ವಿರುದ್ಧವಾಗಿ ಪ್ರಸಿದ್ಧವಾಗಿಲ್ಲ.[1] ಆದ್ದರಿಂದ ಸತ್ಯವು ಬಲವಾದ ಸಾಧನವೆಂಬುದು ಪ್ರಸಿದ್ಧ ವಾಗಿರುತ್ತದೆ. ಇದಲ್ಲದೆ ಸತ್ಯವು ಬಲವಾದ ಸಾಧನವೆಂಬುದು ಶಾಸ್ತ್ರದಿಂದಲೂ ಗೊತ್ತಾಗುತ್ತದೆ. ಹೇಗೆಂದರೆ ಸತ್ಯದಿಂದ ಎಂದರೆ ಇದ್ದದ್ದನ್ನು ಇದ್ದಂತೆ ಹೇಳುವ ನಿಯಮದಿಂದ **ದೇವಯಾನ**ವೆಂಬ ಮಾರ್ಗವು ಹಬ್ಬಿರುತ್ತದೆ, ಹರಡಿಕೊಂಡಿರುತ್ತದೆ, (ಬಿಡುವಿಲ್ಲದೆ) ಒಂದೇ ಸಮನೆ ಮುನ್ನಡೆದಿರುತ್ತದೆ. ಯಾವ ಮಾರ್ಗದಿಂದ ಋಷಿಗಳು-ಮೋಸ, ಮಾಯೆ, ಠಕ್ಕು, ಅಹಂಕಾರ, ದಂಭ, ಸುಳ್ಳು - ಇವುಗಳನ್ನು ಬಿಟ್ಟುಬಿಟ್ಟಿರುವ ಆಪ್ತಕಾಮರಾದ ಎಂದರೆ ಆಸೆಗಳನ್ನೆಲ್ಲ ತೊರೆದಿರುವ - ಜ್ಞಾನಿಗಳು[2] ಆಕ್ರಮನ್ತಿ - ಆಕ್ರಮನ್ತೇ ಹೋಗುವರೋ ಎಲ್ಲಿ ಯಾವೆಡೆಯಲ್ಲಿ ಉತ್ತಮಸಾಧನವಾದ (ಈ) ಸತ್ಯದ ಸಂಬಂಧವಾದ (ಇದರಿಂದ) ಪಡೆಯತಕ್ಕದ್ದಾದ,[3] ಪರಮವಾದ ಎಂದರೆ ಹೆಚ್ಚುಗಾರಿಕೆಯ ನಿಧಾನವು, ಪುರುಷಾರ್ಥರೂಪದಿಂದ ಇಡಲ್ಪಟ್ಟಿರುತ್ತದೆ (ಇರುತ್ತದೆ), ಆದ್ದರಿಂದ ಇದಕ್ಕೆ **ನಿಧಾನ**ವೆಂದು[4] ಹೆಸರು. ಆ ನಿಧಾನವು ಯಾರೆಡೆಯಲ್ಲಿರು

1. ಜನರಿಗೆ ನಿಜವೇ ಬೇಕು. ಯಾವನು ನಿಜವನ್ನು ಹೇಳುವನೆಂದು ತಮಗೆ ತೋರುವದೋ ಅವನನ್ನೇ ನಂಬುತ್ತಾರೆ, ಸುಳ್ಳನನ್ನು ನಂಬುವದಿಲ್ಲ.

2. ಉಪಾಸಕರು. ಇಲ್ಲಿ ಋಷಿಗಳು ಎಂದರೆ ಉಪಾಸನೆಯಿಂದ ಸಾಕ್ಷಾತ್ಕಾರವನ್ನು ಮಾಡಿಕೊಂಡವರು ಎಂದರ್ಥ.

3. ಬ್ರಹ್ಮಕ್ಕೂ ಸತ್ಯವೆಂದೇ ಹೆಸರು. ಅದನ್ನು ಸತ್ಯವೆಂಬ ಉತ್ತಮಸಾಧನದಿಂದಲೇ ಪಡೆಯಬೇಕು.

4. ಬ್ಯಾಂಕಿನಲ್ಲಿ ಹಣವನ್ನು ಆಪತ್ಕಾಲಕ್ಕೆಂದು ನ್ಯಾಸವಾಗಿಟ್ಟುಕೊಳ್ಳುವಂತೆ ಉಪಾಸಕನ

ವದೋ ಅಲ್ಲಿಗೆ ಯಾವ ಮಾರ್ಗದಿಂದ (ಋಷಿಗಳು) ಹೋಗುವರೋ ಆ (ಮಾರ್ಗವು) ಸತ್ಯದಿಂದ ಹಬ್ಬಿಕೊಂಡಿರುತ್ತದೆ - ಎಂದು[1] (ಮಂತ್ರದಲ್ಲಿರುವ) ಹಿಂದಿನ (ವಾಕ್ಯಕ್ಕೆ) ಸಂಬಂಧವನ್ನು ಮಾಡಿಕೊಳ್ಳಬೇಕು.

(ಭಾಷ್ಯ)

೧೦೨. ಕಿಂ ತತ್, ಕಿಂಧರ್ಮಕಂ ಚ ತತ್ ಇತಿ ? ಉಚ್ಯತೇ -

(ಭಾಷ್ಯಾರ್ಥ)

ಅದು ಯಾವದು[2] ? ಅದರ ಧರ್ಮಗಳೇನು ? - ಎಂದರೆ (ಈ ಮಂತ್ರವು) ಹೇಳುತ್ತದೆ :-

**ಬೃಹಚ್ಚ ತದ್ದಿವ್ಯಮಚಿನ್ತ್ಯರೂಪಂ**
**ಸೂಕ್ಷ್ಮಾಚ್ಚ ತತ್ ಸೂಕ್ಷ್ಮತರಂ ವಿಭಾತಿ ।**
**ದೂರಾತ್ ಸುದೂರೇ ತದಿಹಾನ್ತಿಕೇ ಚ**
**ಪಶ್ಯತ್ಸ್ವಿಹೈವ ನಿಹಿತಂ ಗುಹಾಯಾಮ್　　॥೭॥**

೭. ಅದು ದೊಡ್ಡದಾಗಿಯೂ ದಿವ್ಯವಾಗಿಯೂ ಅಚಿಂತ್ಯವಾದ ರೂಪವುಳ್ಳದ್ದಾಗಿಯೂ ಇದ್ದು ಅದು ಸೂಕ್ಷ್ಮವಾದದ್ದಕ್ಕಿಂತಲೂ ಸೂಕ್ಷ್ಮತರವಾಗಿ ಹೊಳೆಯುತ್ತಿರುವದು. ಅದು ದೂರವಾಗಿರುವದಕ್ಕಿಂತಲೂ ಅತಿ ದೂರದಲ್ಲಿಯೂ ಇಲ್ಲಿಯೇ ಸಮೀಪದಲ್ಲಿಯೂ ಇರುವದು. ನೋಡುತ್ತಿರುವವರಲ್ಲಿ ಇಲ್ಲಿಯೇ ಗುಹೆಯಲ್ಲಿ ಇಡಲ್ಪಟ್ಟಿರುವದು.

(ಭಾಷ್ಯ)

೧೦೩. ಬೃಹತ್ ಮಹತ್ ಚ ತತ್ ಪ್ರಕೃತಂ ಬ್ರಹ್ಮ ಸತ್ಯಾದಿಸಾಧನಮ್[3] ಸರ್ವತೋ ವ್ಯಾಪ್ತತ್ವಾತ್ । ದಿವ್ಯಂ ಸ್ವಯಂಪ್ರಭಮ್ ಅನಿನ್ದ್ರಿಯಗೋಚರಮ್ । ಅತ

---

ಸಾಧನಬಲದಿಂದ ಪುರುಷಾರ್ಥರೂಪವಾದ ಬ್ರಹ್ಮವು ಬ್ರಹ್ಮಲೋಕದಲ್ಲಿ ಅವನಿಗಾಗಿ ಇದ್ದುಕೊಂಡಿರುತ್ತದೆ.

1. ಆ ಬ್ರಹ್ಮಲೋಕದಲ್ಲಿರುವ ಬ್ರಹ್ಮವನ್ನು ಪಡೆಯುವದಕ್ಕೆ ಹೋಗುವ ಮಾರ್ಗವು ಸತ್ಯದಿಂದಲೇ ಹರಡಿಕೊಂಡಿರುತ್ತದೆ ; ಅನೃತವಾದಿಗಳು ಆ ಮಾರ್ಗದಲ್ಲಿ ಹೋಗಲಾರರು.

2. ಆ ಅಪರಬ್ರಹ್ಮವು ಯಾವದು ? ಪ್ರಕೃತವಾದ ಅಕ್ಷರಕ್ಕಿಂತ ಬೇರೆಯಾದದ್ದೆ ? ಎಂದು ಪ್ರಶ್ನೆ. ಪರಾಪರಬ್ರಹ್ಮಗಳು ಎರಡೂ ಒಂದೇ ಎಂಬುದು ತತ್ತ್ವವು. ಸೂ.ಭಾ. ೪-೩-೯, ೪-೩-೧೪.

3. ''ಸತ್ಯಾದಿಸಾಧನೇನ'' ಎಂಬ ವಾ॥ ಪಾಠಕ್ಕಿಂತ ಈ ಆ॥ ಪಾಠವೇ ಮೇಲು.

ಏವ ನ ಚಿನ್ತಯಿತುಂ ಶಕ್ಯತೇ ಅಸ್ಯ ರೂಪಮ್ ಇತಿ ಅಚಿನ್ತ್ಯರೂಪಮ್ । ಸೂಕ್ಷ್ಮಾತ್ ಆಕಾಶಾದೇರಪಿ ತತ್ ಸೂಕ್ಷ್ಮತರಮ್ । ನಿರತಿಶಯಂ ಹಿ ಸೌಕ್ಷ್ಮ್ಯಮ್ ಅಸ್ಯ ಸರ್ವಕಾರಣತ್ವಾತ್ । ವಿಭಾತಿ ವಿವಿಧಮ್ ಆದಿತ್ಯಚನ್ದ್ರಾದ್ಯಾಕಾರೇಣ ಭಾತಿ ದೀಪ್ಯತೇ । ಕಿಂಚ ದೂರಾತ್ ವಿಪ್ರಕೃಷ್ಟದೇಶಾತ್ ಸುದೂರೇ ವಿಪ್ರಕೃಷ್ಟತರೇ ದೇಶೇ ವರ್ತತೇ ಅವಿದುಷಾಮ್ ಅತ್ಯನ್ತಾಗಮ್ಯತ್ವಾತ್ ತದ್ ಬ್ರಹ್ಮ । ಇಹ ದೇಹೇ ಅನ್ತಿಕೇ ಸಮೀಪೇ ಚ ವಿದುಷಾಮ್ ಆತ್ಮತ್ವಾತ್, ಸರ್ವಾನ್ತರತ್ವಾಚ್ಚ ಆಕಾಶಸ್ಯಾಪಿ ಅನ್ತರಶ್ರುತೇಃ । ಇಹ ಪಶ್ಯತ್ಸು ಚೇತನಾವತ್ಸು ಇತ್ಯೇತತ್ । ನಿಹಿತಂ ಸ್ಥಿತಂ ದರ್ಶನಾದಿಕ್ರಿಯಾವತ್ತ್ವೇನ ಯೋಗಿಭಿಃ ಲಕ್ಷ್ಯಮಾಣಮ್ । ಕ್ವ ? ಗುಹಾಯಾಂ ಬುದ್ಧಿಲಕ್ಷಣಾಯಾಮ್ । ತತ್ರ ಹಿ ನಿಗೂಢಂ ಲಕ್ಷ್ಯತೇ ವಿದ್ವದ್ಭಿಃ । ತಥಾಪಿ ಅವಿದ್ಯಯಾ ಸಂವೃತಂ ಸತ್ ನ ಲಕ್ಷ್ಯತೇ ತತ್ರಸ್ಥಮೇವ ಅವಿದ್ವದ್ಭಿಃ ॥

## (ಭಾಷ್ಯಾರ್ಥ)

ಅದು ಎಂದರೆ ಸತ್ಯಾದಿಸಾಧನಗಳಿಂದ (ದೊರಕುವ ಆ) ಪ್ರಕೃತವಾದ ಬ್ರಹ್ಮವು ಬೃಹದ್ - ದೊಡ್ಡದಾಗಿಯೂ (ಇದೆ) ; ಏಕೆಂದರೆ (ಅದು) ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತದೆ. ದಿವ್ಯವೂ ಎಂದರೆ ತಾನೇ ಬೆಳಗುವದಾಗಿಯೂ ಇಂದ್ರಿಯಗಳಿಗೆ ವಿಷಯವಲ್ಲದ್ದಾಗಿಯೂ ಇದೆ. ಆದ್ದರಿಂದಲೇ ಅಚಿಂತ್ಯವಾದ ರೂಪವುಳ್ಳದ್ದಾಗಿಯೂ (ಇದೆ), ಏಕೆಂದರೆ ಇದರ ರೂಪವನ್ನು ಚಿಂತಿಸುವದಕ್ಕೆ ಆಗುವದಿಲ್ಲ.[1] ಸೂಕ್ಷ್ಮವಾದದ್ದಕ್ಕಿಂತಲೂ ಎಂದರೆ ಆಕಾಶವೇ ಮುಂತಾದವುಗಳಿಗಿಂತಲೂ ಇದು ಸೂಕ್ಷ್ಮತರವಾಗಿರುವದು. ಏಕೆಂದರೆ ಇದು ಎಲ್ಲಕ್ಕೂ ಕಾರಣವಾಗಿರುವದರಿಂದ ಇದರ ಸೂಕ್ಷ್ಮತ್ವವು ಮಿಗಿಲಿಲ್ಲದಷ್ಟಾಗಿರುತ್ತದೆ.[2] ಹೊಳೆಹೊಳೆಯುತ್ತಿರುವದು ಎಂದರೆ ಸೂರ್ಯ, ಚಂದ್ರ - ಮುಂತಾದ ರೂಪದಿಂದ ಬಗೆಬಗೆಯಾಗಿ ಹೊಳೆಯುತ್ತಿರುವದು, ಬೆಳಗುತ್ತಿರುವದು. ಮತ್ತು ಈ ಬ್ರಹ್ಮವು ದೂರವಾಗಿರುವದಕ್ಕಿಂತಲೂ ಎಂದರೆ ಬಹಳ ಆಚೆ ಇರುವ ಕಡೆಯಲ್ಲಿ(ರುವ ವಸ್ತುವಿ)ಗಿಂತಲೂ ಅತಿ ದೂರದಲ್ಲಿಯೂ ಎಂದರೆ ಇನ್ನೂ ಆಚೆ ಇರುವ ಕಡೆಯಲ್ಲಿಯೂ ಇರುತ್ತದೆ. ಏಕೆಂದರೆ ಅಜ್ಞಾನಿಗಳಿಗೆ ಇದು ಸ್ವಲ್ಪವೂ ಸಿಕ್ಕುವಂತಿಲ್ಲ. ಜ್ಞಾನಿಗಳಿಗೆ ಇಲ್ಲಿಯೇ ದೇಹದಲ್ಲಿಯೇ ಸಮೀಪದಲ್ಲಿಯೂ ಇರುವದು, ಏಕೆಂದರೆ (ಇದು ಅವರ) ಆತ್ಮನೇ ಆಗಿರುತ್ತದೆ.[3] ಎಲ್ಲಕ್ಕೂ ಒಳಗಿರುವದರಿಂದಲೂ (ಇದು ಹತ್ತಿರದಲ್ಲಿರುವದು). ಏಕೆಂದರೆ ಆಕಾಶಕ್ಕೆ ಕೂಡ ಇದು ಒಳಗೆ ಇರುವದೆಂದು ಶ್ರುತಿ[4] ಇರುತ್ತದೆ. ಇಲ್ಲಿ

1. ಇದು ಮನಸ್ಸಿಗೆ ವಿಷಯವಲ್ಲ. ತೈ. ೨-೯. 2. ಕ.ಭಾ. ೧-೩-೧೫.
3. ಈ.ಭಾ. ೫ ; ಗೀ.ಭಾ. ೧೩-೧೫. 4. ಬೃ. ೩-೭-೧೨.

ನೋಡುತ್ತಿರುವವರಲ್ಲಿ ಎಂದರೆ ಚೇತನವಂತರಲ್ಲಿ ಎಂದರ್ಥ. ನೋಡುವದೇ ಮುಂತಾದ ಕ್ರಿಯೆಗಳುಳ್ಳದ್ದಾಗಿ ಯೋಗಿಗಳಿಗೆ[1] ಕಾಣಬರುತ್ತಾ ಇಡಲ್ಪಟ್ಟಿರುವದು ಇದ್ದುಕೊಂಡಿರುತ್ತದೆ. ಎಲ್ಲಿ ? ಎಂದರೆ ಬುದ್ಧಿಯೆಂಬ ಗುಹೆಯಲ್ಲಿ[2]. ಜ್ಞಾನಿಗಳಿಗೆ ಅಲ್ಲಿಯೇ ಅಲ್ಲವೆ, (ಅದು) ಅಡಗಿ ಕೊಂಡಿರುವದು[3] ಕಂಡುಬರುತ್ತದೆ ? ಆದರೆ ಅಲ್ಲಿಯೇ ಇದ್ದರೂ ಅಜ್ಞಾನದಿಂದ ಮರೆಯಾಗಿರುವದರಿಂದ[4] ಅಜ್ಞರಿಗೆ ಕಾಣದೆ ಇರುತ್ತದೆ.

## ಆತ್ಮನನ್ನು ಕಾಣುವದಕ್ಕೆ ಅಸಾಧಾರಣಸಾಧನ

### (ಭಾಷ್ಯ)

೧೦೪. ಪುನರಪಿ ಅಸಾಧಾರಣಂ ತದುಪಲಬ್ಧಿಸಾಧನಮ್ ಉಚ್ಯತೇ ।

### (ಭಾಷ್ಯಾರ್ಥ)

ಮತ್ತೂ ಅದನ್ನು ಕಂಡುಕೊಳ್ಳುವದಕ್ಕೆ (ಬೇಕಾದ) ಅಸಾಧಾರಣವಾದ[5] ಸಾಧನವನ್ನು ಹೇಳಲಾಗುತ್ತದೆ :-

**ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ**
**ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ ।**
**ಜ್ಞಾನಪ್ರಸಾದೇನ ವಿಶುದ್ಧಸತ್ತ್ವ -**
**ಸ್ತತಸ್ತು ತಂ ಪಶ್ಯತೇ ನಿಷ್ಕಲಂ ಧ್ಯಾಯಮಾನಃ ॥೮॥**

೮. ಕಣ್ಣಿನಿಂದ ಗ್ರಹಿಸುವದಕ್ಕಾಗುವದಿಲ್ಲ. ಮಾತಿನಿಂದಲೂ ಆಗುವದಿಲ್ಲ. ಉಳಿದ ದೇವತೆಗಳಿಂದಲೂ ಆಗುವದಿಲ್ಲ. ತಪಸ್ಸಿನಿಂದಾಗಲಿ ಕರ್ಮದಿಂದಾಗಲಿ (ಆಗುವದಿಲ್ಲ). ಆದರೆ ಜ್ಞಾನಪ್ರಸಾದದಿಂದ ಸತ್ತ್ವಶುದ್ಧಿಯನ್ನು

---

1. ಚೆನ್ನಾಗಿ ಲಕ್ಷ್ಯವಿಟ್ಟು ನೋಡುವವರಿಗೆ, ವಿಷಯಗಳನ್ನು ನೋಡುವ ಇಂದ್ರಿಯ ಪ್ರಧಾನರಲ್ಲದೆ ಅಂತರ್ಮುಖರಾಗಿ ಆತ್ಮನನ್ನು ನೋಡುವವರಿಗೆ. ಕಾ. ೧-೩-೧೨.

2. ೨-೨-೧, ೨-೨-೬, ೨-೨-೯ – ಈ ಭಾಷ್ಯಗಳನ್ನು ನೋಡಿ.

3. "ಗೂಢಮಸ್ಯಾಂ ಬ್ರಹ್ಮ ಸಾಕ್ಷಿರೂಪೇಣೇತಿ ಗುಹಾ" (ಇಲ್ಲಿ ಬ್ರಹ್ಮವು ಸಾಕ್ಷಿಯಾಗಿ ಅಡಗಿಕೊಂಡಿರುವದರಿಂದ ಇದಕ್ಕೆ ಗುಹೆಯೆಂದು ಹೆಸರು) ಎಂಬ ವ್ಯುತ್ಪತ್ತಿಯನ್ನು ಸೂಚಿಸಿದೆ.

4. ಅಜ್ಞಾನವು ಮೋಡದಂತೆ ಆತ್ಮನನ್ನು ಕವಿದುಕೊಂಡಿರುವದೆಂದು ಅಭಿಪ್ರಾಯವಲ್ಲ. ವಿಷಯಗಳನ್ನು ಕಾಮಿಸುವ ದೇಹಾದ್ಯಾತ್ಮಬುದ್ಧಿಯು ಆತ್ಮಜ್ಞಾನಕ್ಕೆ ಅಡ್ಡಿಯಾಗಿರುತ್ತದೆ. ಇದನ್ನೇ ಮರೆಯೆಂದು ಕರೆದಿದೆ.

5. ಆತ್ಮಜ್ಞಾನಕ್ಕೂ ಅನಾತ್ಮಜ್ಞಾನಕ್ಕೂ ಸಮಾನವಲ್ಲದ, ಅಥವಾ ಇತರ ಫಲಗಳಿಗೂ ಜ್ಞಾನಕ್ಕೂ ಸಮಾನವಲ್ಲದ ವಿಶೇಷಸಾಧನವನ್ನು. ಸತ್ಯವೇ ಮುಂತಾದವುಗಳಿಂದ ಚಿತ್ತಶುದ್ಧಿಯನ್ನು ಪಡೆದುಕೊಳ್ಳುವದೇ ಈ ಅಸಾಧಾರಣಸಾಧನವು.

ಮಾಡಿಕೊಂಡು ಧ್ಯಾನಮಾಡುವಾತನು ಅದರಿಂದ ನಿಷ್ಕಲನಾದ ಆತನನ್ನು ಕಂಡುಕೊಳ್ಳುತ್ತಾನೆ.

## (ಭಾಷ್ಯ)

೧೦೫. ಯಸ್ಮಾತ್ ನ ಚಕ್ಷುಷಾ ಗೃಹ್ಯತೇ ಕೇನಚಿದಪಿ । ಅರೂಪತ್ವಾತ್ । ನಾಪಿ ಗೃಹ್ಯತೇ ವಾಚಾ ಅನಭಿಧೇಯತ್ವಾತ್ । ನ ಚ ಅನ್ಯೈಃ ದೇವೈಃ ಇತರೇನ್ದ್ರಿಯೈಃ । ತಪಸಃ ಸರ್ವಪ್ರಾಪ್ತಿಸಾಧನತ್ವೇಽಪಿ ನ ತಪಸಾ ಗೃಹ್ಯತೇ । ತಥಾ ವೈದಿಕೇನ ಅಗ್ನಿಹೋತ್ರಾದಿ ಕರ್ಮಣಾ ಪ್ರಸಿದ್ಧ ಮಹತ್ತ್ವೇನಾಪಿ ನ ಗೃಹ್ಯತೇ । ಕಿಂ ಪುನಸ್ತಸ್ಯ ಗ್ರಹಣೇ ಸಾಧನಮ್ ಇತಿ ? ಆಹ - ಜ್ಞಾನಪ್ರಸಾದೇನ ಆತ್ಮಾವಬೋಧನ ಸಮರ್ಥಮಪಿ ಸ್ವಭಾವೇನ ಸರ್ವಪ್ರಾಣಿನಾಂ ಜ್ಞಾನಂ ಬಾಹ್ಯವಿಷಯರಾಗಾದಿ ದೋಷಕಲುಷಿತಮ್ ಅಪ್ರಸನ್ನಮ್ ಅಶುದ್ಧಂ ಸತ್ ನಾವಬೋಧಯತಿ ನಿತ್ಯಂ ಸನ್ನಿಹಿತಮಪಿ ಆತ್ಮತತ್ತ್ವಂ ಮಲಾವನದ್ಧ ಮಿವ ಆದರ್ಶಮ್ ವಿಲುಲಿತಮಿವ ಸಲಿಲಮ್ । ತದ್ ಯದಾ ಇನ್ದ್ರಿಯ ವಿಷಯಸಂಸರ್ಗಜನಿತರಾಗಾದಿಮಲಕಾಲುಷ್ಯಾಪನಯನಾತ್ ಆದರ್ಶಸಲಿಲಾದಿವತ್ ಪ್ರಸಾದಿತಂ ಸ್ವಚ್ಛಂ ಶಾನ್ತಮ್ ಅವತಿಷ್ಠತೇ, ತದಾ ಜ್ಞಾನಸ್ಯ ಪ್ರಸಾದಃ ಸ್ಯಾತ್ । ತೇನ ಜ್ಞಾನಪ್ರಸಾದೇನ ವಿಶುದ್ಧಸತ್ತ್ವಃ ವಿಶುದ್ಧಾನ್ತಃಕರಣಃ ಯೋಗ್ಯೋ ಬ್ರಹ್ಮ ದ್ರಷ್ಟುಂ ಯಸ್ಮಾತ್ ತತಃ ತಸ್ಮಾತ್ ತು ತಮಾತ್ಮಾನಂ ಪಶ್ಯತೇ ಪಶ್ಯತಿ ಉಪಲಭತೇ ನಿಷ್ಕಲಂ ಸರ್ವಾವಯವಭೇದವರ್ಜಿತಂ ಧ್ಯಾಯಮಾನಃ ಸತ್ಯಾದಿಸಾಧನವಾನ್ ಉಪ ಸಂಹೃತಕರಣಃ ಏಕಾಗ್ರೇಣ ಮನಸಾ ಧ್ಯಾಯಮಾನಃ ಚಿನ್ತಯನ್ ॥

## (ಭಾಷ್ಯಾರ್ಥ)

ಏಕೆಂದರೆ, (ಈ ಆತ್ಮನನ್ನು) ಕಣ್ಣಿನಿಂದ ಯಾರೂ ಗ್ರಹಿಸುವದಕ್ಕೆ ಆಗುವ ದಿಲ್ಲ ; ಏಕೆಂದರೆ (ಆತ್ಮನಿಗೆ) ರೂಪವಿರುವದಿಲ್ಲ. ಮಾತಿನಿಂದಲೂ ಗ್ರಹಿಸುವದಕ್ಕೆ ಆಗುವದಿಲ್ಲ ; ಏಕೆಂದರೆ (ಆತ್ಮನು) ವಾಚ್ಯನಲ್ಲ.[1] ಉಳಿದ ದೇವತೆಗಳಿಂದಲೂ ಆಗುವದಿಲ್ಲ, ಮಿಕ್ಕ ಇಂದ್ರಿಯಗಳಿಂದಲೂ[2] (ಆಗುವದಿಲ್ಲ). ತಪಸ್ಸು ಎಲ್ಲವನ್ನೂ ಪಡೆಯುವದಕ್ಕೆ ಸಾಧನವಾಗಿದ್ದರೂ (ಆ) ತಪಸ್ಸಿನಿಂದಲೂ[3] ಗ್ರಹಿಸುವದಕ್ಕೆ ಆಗುವ

1. ಆತ್ಮನಲ್ಲಿ ಜಾತಿ ಗುಣ ಮುಂತಾದವಿಲ್ಲವಾದ್ದರಿಂದ ಶಬ್ದವಾಚ್ಯನಲ್ಲ.

2. ಕಣ್ಣನ್ನು ಜ್ಞಾನೇಂದ್ರಿಯಗಳಿಗೂ ವಾಕ್ಕನ್ನು ಕರ್ಮೇಂದ್ರಿಯಗಳಿಗೂ ಉಪಲಕ್ಷಣವಾಗಿ ಹೇಳಿರುತ್ತದೆ. ಆದ್ದರಿಂದ ಯಾವ ಜ್ಞಾನೇಂದ್ರಿಯಗಳಿಗೂ ಕರ್ಮೇಂದ್ರಿಯಗಳಿಗೂ ಆತ್ಮನು ವಿಷಯನಲ್ಲ ಎಂದು ಭಾವ. 'ದೇವ' ಎಂಬ ಮಾತನ್ನು ಶ್ರುತಿಯಲ್ಲಿ ಇಂದ್ರಿಯವೆಂಬರ್ಥದಲ್ಲಿ ಅಲ್ಲಲ್ಲಿ ಹೇಳಿರುತ್ತದೆ.

3. ಇದು ಮನಸ್ಸನ್ನೂ ಇಂದ್ರಿಯಗಳನ್ನೂ ಏಕಾಗ್ರಗೊಳಿಸುವ ತಪಸ್ಸಲ್ಲ. ಏಕೆಂದರೆ

ದಿಲ್ಲ. ಹಾಗೂ ವೇದದಲ್ಲಿ ಹೇಳಿರುವ ಅಗ್ನಿಹೋತ್ರವೇ ಮುಂತಾದ ಕರ್ಮದಿಂದ, ಹೆಚ್ಚಿನ ಮಹಿಮೆಯದೆಂದು ಪ್ರಸಿದ್ಧವಾಗಿದ್ದರೂ[1] (ಅದರಿಂದಲೂ) ಗ್ರಹಿಸುವದಕ್ಕೆ ಆಗುವದಿಲ್ಲ. ಹಾಗಾದರೆ ಆ (ಆತ್ಮನನ್ನು) ಗ್ರಹಿಸುವದಕ್ಕೆ ಸಾಧನವು ಯಾವದು ? ಎಂಧರೆ (ಶ್ರುತಿ) ಹೇಳುತ್ತದೆ. ಜ್ಞಾನಪ್ರಸಾದದಿಂದ - **ಎಲ್ಲಾ ಪ್ರಾಣಿಗಳ ಜ್ಞಾನವೂ[2] ಸ್ವಭಾವದಿಂದ[3] ಆತ್ಮನನ್ನು ತಿಳಿಸುವದಕ್ಕೆ ಶಕ್ತವಾಗಿದ್ದರೂ ಹೊರಗಿನ ವಿಷಯಗಳ ಆಸೆಯೇ ಮುಂತಾದ[4] ದೋಷಗಳಿಂದ ಕೊಳೆಯಾಗಿಬಿಟ್ಟಿರುವದರಿಂದ ತಿಳಿಯಾಗದೆ ಅಶುದ್ಧವಾಗಿರುತ್ತದೆಯಾಗಿ ಧೂಳು ಬಿದ್ದಿರುವ ಕನ್ನಡಿಯಂತೆಯೂ ಅಲುಗಾಡುತ್ತಿರುವ ನೀರಿನಂತೆಯೂ[5] ಇದ್ದುಕೊಂಡು ಯಾವಾಗಲೂ ಹತ್ತಿರವೇ ಇರುವ ಆತ್ಮತತ್ತ್ವವನ್ನು ಕೂಡ ತಿಳಿಸಲಾರದೆ ಇರುತ್ತದೆ.** ಅದು ಯಾವಾಗ ಇಂದ್ರಿಯಗಳ ಮತ್ತು ವಿಷಯಗಳ ಸಂಬಂಧದಿಂದುಂಟಾಗುವ ರಾಗವೇ ಮುಂತಾದ ಮಲಗಳ ಕಲ್ಮಷವನ್ನು ತಗೆದುಹಾಕಿ ಕನ್ನಡಿ, ನೀರು - ಮುಂತಾದವುಗಳಂತೆ ತಿಳಿಮಾಡಲು ಸ್ವಚ್ಛವಾಗಿ ಶಾಂತವಾಗಿ ನಿಲ್ಲುವದೋ ಆಗ ಜ್ಞಾನದ ಪ್ರಸಾದವುಂಟಾಗುವದು.[6] ಆ ಜ್ಞಾನಪ್ರಸಾದದಿಂದ ವಿಶುದ್ಧಸತ್ತ್ವನಾಗಿ ಶುದ್ಧವಾದ ಅಂತಃಕರಣವುಳ್ಳವನಾದರೆ ಬ್ರಹ್ಮವನ್ನು ಕಂಡುಕೊಳ್ಳುವದಕ್ಕೆ ಯೋಗ್ಯನಾಗುವನು. ಆದ್ದರಿಂದ ಅದರಿಂದಲಾದರೆ ಆ (ಚಿತ್ತಶುದ್ಧಿ)ಯಿಂದಲಾದರೆ ನಿಷ್ಕಲನಾದ ಯಾವ ಅವಯವವಿಶೇಷಗಳೂ ಇಲ್ಲದ ಆ ಆತ್ಮನನ್ನು ಧ್ಯಾನಮಾಡುವಾತನು ಎಂದರೆ ಸತ್ಯವೇ ಮುಂತಾದ ಸಾಧನಗಳಿಂದೊಡಗೂಡಿ ಇಂದ್ರಿಯಗಳನ್ನು ಹಿಂದಕ್ಕೆಳೆದುಕೊಂಡು ಮನಸ್ಸಿನಲ್ಲಿ ಧ್ಯಾನಮಾಡುವಾತನು ಚಿಂತಿಸುವಾತನು[7] ಪಶ್ಯತೇ= ಪಶ್ಯತಿ, ಕಂಡುಕೊಳ್ಳುವನು ಅರಿತುಕೊಳ್ಳುವನು.

ಮುಂದೆ 'ಧ್ಯಾಯಮಾನಃ' ಎಂಬ ಮಾತಿನಿಂದ ಆ ತಪಸ್ಸು ಬೇಕೆಂದು ಹಿಂದೆ ಇಲ್ಲಿಯೇ ಹೇಳಿರುತ್ತದೆ.

1. ಸ್ವರ್ಗಾದಿಗಳನ್ನು ಕೊಡುವದೆಂದು ಪ್ರಸಿದ್ಧವಾಗಿದ್ದರೂ.

2. ಇಲ್ಲಿ ಜ್ಞಾನವೆಂದರೆ ಅಂತಃಕರಣವೃತ್ತಿ. ಗೀ. ಭಾ. ೧೮-೩೦. ಆತ್ಮಜ್ಞಾನವನ್ನು ಹೊಸದಾಗಿ ಮಾಡಿಕೊಳ್ಳಬೇಕಾದದ್ದಿಲ್ಲ ; ಅನಾತ್ಮಸಂಬಂಧವನ್ನು ಮಾತ್ರ ಕಳೆದುಕೊಳ್ಳಬೇಕು. ಗೀ.ಭಾ. ೧೮-೫೦.

3. ಮತ್ತೊಂದರ ಅರಿವಿನೊಡನೆ ಸೇರಿಕೊಂಡಿಲ್ಲದಾಗ.

4. ರಾಗ, ದ್ವೇಷ, ಭಯ - ಮುಂತಾದ.

5. ಧೂಳು ಕೂತ ಕನ್ನಡಿಯ ದೃಷ್ಟಾಂತದಿಂದ ಮಲವನ್ನೂ ಅಲುಗಾಡುವ ನೀರಿನ ದೃಷ್ಟಾಂತದಿಂದ ವಿಕ್ಷೇಪವನ್ನೂ ತಿಳಿಸಿದೆ. ಮಲವಿಕ್ಷೇಪಗಳಿದ್ದರೆ ಆತ್ಮನ ಅರಿವು ಆಗುವದಿಲ್ಲ.

6. ಸತ್ಯಾದಿಗಳನ್ನು ಹೇಳಿರುವದು ಈ ಜ್ಞಾನಪ್ರಸನ್ನತೆಗೇ ಎಂದು ಭಾವ.

7. ಇದು ಭಾವನಾರೂಪವಾದ ಚಿಂತನೆಯಲ್ಲ. ಮನಸ್ಸನ್ನು ಅಲ್ಲಿಯೇ ಇಟ್ಟು ಸಾಧಿಸುವದಕ್ಕೆ ಮಾಡುವ ಪ್ರಯತ್ನ.

ಏಷೋಽಣುರಾತ್ಮಾ ಚೇತಸಾ ವೇದಿತವ್ಯಃ
ಯಸ್ಮಿನ್ ಪ್ರಾಣಃ ಪಞ್ಚಧಾ ಸಂವಿವೇಶ ।
ಪ್ರಾಣೈಶ್ಚಿತ್ತಂ ಸರ್ವಮೋತಂ ಪ್ರಜಾನಾಂ
ಯಸ್ಮಿನ್ ವಿಶುದ್ಧೇ ವಿಭವತ್ಯೇಷ ಆತ್ಮಾ ॥೯॥

೯. ಈ ಅಣುವಾದ ಆತ್ಮನು ಯಾವದರಲ್ಲಿ ಪ್ರಾಣವು ಐದು ಬಗೆಯಿಂದ ಪ್ರವೇಶಮಾಡಿರುವದೋ (ಅಲ್ಲಿ) ಚೇತಸ್ಸಿನಿಂದ ತಿಳಿಯತಕ್ಕವನಾಗುವನು. ಜನರ ಚಿತ್ತವೆಲ್ಲವೂ ಯಾರಿಂದ ಪ್ರಾಣಗಳೊಡನೆ ವ್ಯಾಪ್ತವಾಗಿರುತ್ತದೆಯೋ, ಯಾವ (ಆ ಚಿತ್ತವು) ವಿಶುದ್ಧವಾದರೆ ಈ ಆತ್ಮನು ವಿಸ್ಪಷ್ಟನಾಗುತ್ತಾನೆ.

(ಭಾಷ್ಯ)

೧೦೬. ಯಮ್ ಆತ್ಮಾನಮ್ ಏವಂ ಪಶ್ಯತಿ ಏಷಃ ಅಣುಃ ಸೂಕ್ಷ್ಮಃ ಆತ್ಮಾ ಚೇತಸಾ ವಿಶುದ್ಧಜ್ಞಾನೇನ ಕೇವಲೇನ ವೇದಿತವ್ಯಃ । ಕ್ವಾಸೌ ? ಯಸ್ಮಿನ್ ಶರೀರೇ ಪ್ರಾಣಃ ವಾಯುಃ ಪಞ್ಚಧಾ ಪ್ರಾಣಾಪಾನಾದಿಭೇದೇನ ಸಂವಿವೇಶ ಸಮ್ಯಕ್ ಪ್ರವಿಷ್ಟಃ, ತಸ್ಮಿನ್ನೇವ ಶರೀರೇ ಹೃದಯೇ ಚೇತಸಾ ಜ್ಞೇಯಃ – ಇತ್ಯರ್ಥಃ । ಕೀದೃಶೇನ ಚೇತಸಾ ವೇದಿತವ್ಯ ಇತಿ ? ಆಹ – ಪ್ರಾಣೈಃ ಸಹೇನ್ದ್ರಿಯೈಃ ಚಿತ್ತಂ ಸರ್ವಮ್ ಅನ್ತಃಕರಣಂ ಪ್ರಜಾನಾಮ್ ಓತಂ ವ್ಯಾಪ್ತಂ ಯೇನ ಕ್ಷೀರಮಿವ ಸ್ನೇಹೇನ ಕಾಷ್ಠಮಿವ ಅಗ್ನಿನಾ । ಸರ್ವಂ ಹಿ ಪ್ರಜಾನಾಮ್ ಅನ್ತಃಕರಣಂ ಚೇತನಾವತ್ ಪ್ರಸಿದ್ಧಂ ಲೋಕೇ । ಯಸ್ಮಿಂಶ್ಚ ಚಿತ್ತೇ ಕ್ಲೇಶಾದಿಮಲವಿಯುಕ್ತೇ ಶುದ್ಧೇ ವಿಭವತಿ ಏಷಃ ಉಕ್ತಃ ಆತ್ಮಾ ವಿಶೇಷೇಣ ಸ್ವೇನ ಆತ್ಮನಾ ವಿಭವತಿ ಆತ್ಮಾನಂ ಪ್ರಕಾಶಯತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಯಾವ ಆತ್ಮನನ್ನು ಹೀಗೆ ಕಂಡುಕೊಳ್ಳುವನೋ ಈ ಆತ್ಮನು ಅಣುವು ಎಂದರೆ ಸೂಕ್ಷ್ಮನು.[1] ಇವನು ಚೇತಸ್ಸಿನಿಂದ ಬಹು ಶುದ್ಧವಾಗಿರುವ ಬರಿಯ ಜ್ಞಾನದಿಂದ ತಿಳಿಯತಕ್ಕವನಾಗಿರುವನು. ಇವನು ಎಲ್ಲಿರುವನು ? ಎಂದರೆ ಯಾವ ಶರೀರದಲ್ಲಿ ಪ್ರಾಣವು ವಾಯು ಐದು ಬಗೆಯಿಂದ ಪ್ರಾಣ, ಅಪಾನ – ಮುಂತಾದ ವಿಶೇಷರೂಪದಿಂದ[2] ಪ್ರವೇಶಮಾಡಿರುವದೋ ಚೆನ್ನಾಗಿ ಒಳಹೊಕ್ಕಿರುವದೋ ಅದೇ ಶರೀರದಲ್ಲಿಯೇ[3] ಹೃದಯದಲ್ಲಿ[4] ಚಿತ್ತದಿಂದ ತಿಳಿಯತಕ್ಕವನಾಗಿರುವನು ಎಂದರ್ಥ. ಎಂಥ ಚಿತ್ತದಿಂದ

1. ಇಂದ್ರಿಯಗಳಿಗೆ ಗೋಚರವಾಗುವಹಾಗಿಲ್ಲ.

2. ಈ ಬಗೆಯನ್ನು ಪ್ರ. ೩ರಲ್ಲಿ ವರ್ಣಿಸಿದೆ.

3. ಪ್ರ. ೬–೨.

4. ೨–೨–೭ ರಲ್ಲಿ ಹೇಳಿರುವಂತೆ ಆತ್ಮನು ಹೃದಯದಲ್ಲಿ ತಿಳಿಯಬರುತ್ತಾನೆ.

ತಿಳಿಯತಕ್ಕವನು ? ಎಂದರೆ (ಶ್ರುತಿ) ಹೇಳುತ್ತದೆ. ಜನರ ಚಿತ್ತವು ಅಂತಃಕರಣವೆಲ್ಲವೂ ಪ್ರಾಣಗಳೊಡನೆ ಇಂದ್ರಿಯಗಳೊಡಗೂಡಿದ (ಪ್ರಾಣಗಳೊಡನೆ)[1] ಹಾಲು ಜಿಡ್ಡಿನಿಂದಲೂ ಕಟ್ಟಿಗೆಯು ಬೆಂಕಿಯಿಂದಲೂ (ವ್ಯಾಪ್ತವಾಗಿರುವಂತೆ) ಯಾವ (ಆತ್ಮನಿಂದ) ಓತವಾಗಿರುವದೋ ವ್ಯಾಪ್ತವಾಗಿರುವದೋ. ಜನರ ಅಂತಃಕರಣವೆಲ್ಲವೂ ಚೇತನದಿಂದ ಕೂಡಿರುವದೆಂದು ಲೋಕದಲ್ಲಿ ಪ್ರಸಿದ್ಧವಷ್ಟೆ. **(ಆ) ಯಾವ ಚಿತ್ತವು ಕ್ಲೇಶವೇ ಮುಂತಾದ ಮಲಗಳಿಂದ ರಹಿತವಾಗಿ ಶುದ್ಧವಾದರೆ (ಅದರಲ್ಲಿ) ಈ ಮೇಲೆ ಹೇಳಿದ ಆತ್ಮನು 'ವಿಭವತಿ' ಎಂದರೆ ವಿಶೇಷವಾದ ತನ್ನ ರೂಪದಿಂದ ಆಗುವನು.** ತನ್ನ **ಸ್ವರೂಪವನ್ನು ತೋರಿಸಿಕೊಳ್ಳುವನು** ಎಂದರ್ಥ.

## ಆತ್ಮಜ್ಞಾನದ ಪ್ರಶಂಸೆ

### (ಭಾಷ್ಯ)

೧೦೭. ಯ ಏವಮ್ ಉಕ್ತಲಕ್ಷಣಂ ಸರ್ವಾತ್ಮಾನಮ್ ಆತ್ಮತ್ವೇನ ಪ್ರತಿಪನ್ನಃ ತಸ್ಯ ಸರ್ವಾತ್ಮತ್ವಾದೇವ ಸರ್ವಾವಾಪ್ತಿಲಕ್ಷಣಂ ಫಲಮ್ ಆಹ -

### (ಭಾಷ್ಯಾರ್ಥ)

ಯಾವನು ಹೀಗೆ ಮೇಲೆ ಹೇಳಿದ ಸರ್ವಾತ್ಮನನ್ನು ತಾನೆಂದು ಅರಿತುಕೊಳ್ಳುವನೋ (ಅವನು) **ಸರ್ವಾತ್ಮನಾಗಿರುವದರಿಂದಲೇ**[2] ಅವನಿಗೆ ಎಲ್ಲವನ್ನೂ ಪಡೆದುಕೊಳ್ಳುವದೆಂಬ ಫಲವಾಗುವದು ಎಂದು ಮಂತ್ರವು ಹೇಳುತ್ತಿದೆ :

**ಯಂ ಯಂ ಲೋಕಂ ಮನಸಾ ಸಂವಿಭಾತಿ**
**ವಿಶುದ್ಧಸತ್ತ್ವಃ ಕಾಮಯತೇ ಯಾಂಶ್ಚ ಕಾಮಾನ್ ।**
**ತಂ ತಂ ಲೋಕಂ ಜಯತೇ ತಾಂಶ್ಚ ಕಾಮಾಂ-**
**ಸ್ತಸ್ಮಾದಾತ್ಮಜ್ಞಂ ಹ್ಯರ್ಚಯೇದ್ ಭೂತಿಕಾಮಃ ॥೧೦॥**

೧೦. ಯಾವ ಯಾವ ಲೋಕವನ್ನು ವಿಶುದ್ಧಸತ್ತ್ವನು ಮನಸ್ಸಿನಿಂದ

1. 'ಪ್ರಾಣೈಃ' ಎಂಬುದಕ್ಕೆ 'ಸಹೇನ್ದ್ರಿಯೈಃ' ಎಂಬುದು ವ್ಯಾಖ್ಯಾನವೆಂದು ಭಾವಿಸಿ ಪ್ರಾಣಗಳಿಂದ ಎಂದರೆ ಇಂದ್ರಿಯಗಳೊಡನೆ ಎಂದೂ ಕನ್ನಡಿಸಬಹುದು.

2. ಪ್ರತಿಯೊಬ್ಬರಿಗೂ ಆತ್ಮನಾಗಿರುವದರಿಂದಲೇ, ಜ್ಞಾನಿಗೆ ಆಗುವ ಫಲವು ಮಿಕ್ಕವರಿಗೆ ಕರ್ಮ, ಉಪಾಸನೆ - ಮುಂತಾದವುಗಳ ಫಲವು ಕಾಲಾಂತರದಲ್ಲಿ ಎಲ್ಲರಿಗೂ ಆಗುವಂತೆ ಆಗುವದಿಲ್ಲ. ಜ್ಞಾನಮಾತ್ರದಿಂದ ಜ್ಞಾನಸಮಕಾಲದಲ್ಲಿ ಸರ್ವಪ್ರಾಪ್ತಿಯಾಗುವದು ಜ್ಞಾನಿಯ ಹೆಚ್ಚುಗಾರಿಕೆ. ಏಕೆಂದರೆ ಯಾರಿಗೆ ಯಾವ ಫಲವಾದರೂ ಅದು ಅವರ ಆತ್ಮನೇ ಆಗಿರುವ ಇವನದೇ ಆಗಿರುವದು. ಬೃ. ಭಾ. ೩-೯-೨೮ರಲ್ಲಿ ಆನಂದವಿಚಾರ ಭಾಷ್ಯವನ್ನು ನೋಡಿ.

ಮಾಡಿಕೊಳ್ಳುವನೋ ಮತ್ತು ಯಾವ ಕಾಮಗಳನ್ನು ಕಾಮಿಸುವನೋ, ಆಯಾ ಲೋಕವನ್ನೂ ಆ ಕಾಮಗಳನ್ನೂ ಗೆದ್ದುಕೊಳ್ಳುತ್ತಾನೆ. ಆದ್ದರಿಂದ ಭೂತಿಕಾಮನಾದವನು ಆತ್ಮಜ್ಞನನ್ನು ಪೂಜಿಸಲೇಬೇಕು.

(ಭಾಷ್ಯ)

೧೦೮. ಯಂ ಯಂ ಲೋಕಂ ಪಿತ್ರಾದಿಲಕ್ಷಣಂ ಮನಸಾ ಸಂವಿಭಾತಿ ಸಂಕಲ್ಪಯತಿ ಮಹ್ಯಮ್ ಅನ್ಯಸ್ಮೈ ವಾ ಭವೇತ್ ಇತಿ ವಿಶುದ್ಧಸತ್ತ್ವಃ ಕ್ಷೀಣಕ್ಲೇಶಃ ಆತ್ಮವಿತ್ ನಿರ್ಮಲಾನ್ತಃಕರಣಃ ಕಾಮಯತೇ ಯಾಂಶ್ಚ ಕಾಮಾನ್ ಪ್ರಾರ್ಥಯತೇ ಭೋಗಾನ್ ತಂ ತಂ ಲೋಕಂ ಜಯತೇ ಪ್ರಾಪ್ನೋತಿ ತಾಂಶ್ಚ ಕಾಮಾನ್ ಸಂಕಲ್ಪಿತಾನ್ ಭೋಗಾನ್ । ತಸ್ಮಾದ್ ವಿದುಷಃ ಸತ್ಯಸಂಕಲ್ಪತ್ವಾತ್ ಆತ್ಮಜ್ಞಮ್ ಆತ್ಮಜ್ಞಾನೇನ ವಿಶುದ್ಧಾನ್ತಃಕರಣಮ್ ಹಿ ಅರ್ಚಯೇತ್ ಪೂಜಯೇತ್ ಪಾದಪ್ರಕ್ಷಾಲನಶುಶ್ರೂಷಾನಮಸ್ಕಾರಾದಿಭಿಃ ಭೂತಿಕಾಮಃ ವಿಭೂತಿಮ್ ಇಚ್ಛುಃ ।

(ಭಾಷ್ಯಾರ್ಥ)

ಪಿತೃಲೋಕವೇ[1] ಮುಂತಾದ ಯಾವ ಯಾವ ಲೋಕವನ್ನು ನನಗೆ ಅಥವಾ ಮತ್ತೊಬ್ಬನಿಗೇ ಆಗಲಿ ! - ಎಂದು ವಿಶುದ್ಧಸತ್ತ್ವನು, ಕ್ಲೇಶಗಳನ್ನು ತೊಲಗಿಸಿಕೊಂಡಿರುವ ಆತ್ಮಜ್ಞಾನಿಯು ನಿರ್ಮಲವಾದ ಅಂತಃಕರಣದಿಂದ (ಕೂಡಿದವನಾದ್ದರಿಂದ) ಮಾಡಿಕೊಳ್ಳುವನೋ ಎಂದರೆ ಸಂಕಲ್ಪಿಸಿಕೊಳ್ಳುವನೋ ಮತ್ತು ಯಾವ ಕಾಮಗಳನ್ನು ಎಂದರೆ, ಭೋಗಗಳನ್ನು ಕಾಮಿಸುವನೋ ಬಯಸುವನೋ ಆಯಾ ಲೋಕವನ್ನು ಮತ್ತು ಆಯಾ ಕಾಮಗಳನ್ನು ಎಂದರೆ ಸಂಕಲ್ಪಿಸಿಕೊಂಡ ಭೋಗಗಳನ್ನು ಗೆದ್ದುಕೊಳ್ಳುವನು ಎಂದರೆ ಪಡೆದುಕೊಳ್ಳುತ್ತಾನೆ. ಆದ್ದರಿಂದ ಜ್ಞಾನಿಯು (ಹೀಗೆ) ಸತ್ಯಸಂಕಲ್ಪನಾಗಿರುವದರಿಂದ ಆತ್ಮಜ್ಞನನ್ನು ಎಂದರೆ ಆತ್ಮಜ್ಞಾನದಿಂದ ಅಂತಃಕರಣವನ್ನು ಶುದ್ಧಿಮಾಡಿಕೊಂಡಿರುವಾತನನ್ನು[2] ಭೂತಿಕಾಮನಾದವನು (ತನಗೆ) ಒಳ್ಳೆಯದಾಗಬೇಕೆಂದು, ಇಚ್ಛಿಸುವಾತನು, ಕಾಲುತೊಳೆಯುವದು, ಸೇವೆಮಾಡುವದು, ನಮಸ್ಕರಿಸುವದು - ಮುಂತಾದವುಗಳಿಂದ ಅರ್ಚಿಸಬೇಕು, ಪೂಜೆಮಾಡಬೇಕು.

1. ಛಾಂ. ೮-೨-೧ ರಿಂದ ೧೦ರವರೆಗಿನ ಮಂತ್ರಗಳಲ್ಲಿ ಹೇಳಿರುವ ಲೋಕಗಳು. ಇವು ಸಗುಣಬ್ರಹ್ಮವನ್ನು ಉಪಾಸನೆಮಾಡಿದಾತನಿಗೆ ಸಿಕ್ಕುವ ಲೋಕಗಳಾದರೂ ಜ್ಞಾನಿಯು ಅವನಿಗೂ ಆತ್ಮನಾದ್ದರಿಂದ ಅವನಿಗೂ ಆ ಲೋಕಗಳ ಪ್ರಾಪ್ತಿಯಾದಂತೆ ಎಂದು ಜ್ಞಾನವನ್ನು ಹೊಗಳಿದೆ.

2. ಜ್ಞಾನದಿಂದಾದ ಶುದ್ಧಿಯು ಎಲ್ಲಕ್ಕೂ ಹೆಚ್ಚಿನದು. ಗೀ.ಭಾ. ೪-೩೮.

# ಮೂರನೆಯ ಮುಂಡಕ - ಎರಡನೆಯ ಖಂಡ

## ಆತ್ಮಜ್ಞಾನದ ಪ್ರಶಂಸೆ

(ಭಾಷ್ಯ)

೧೦೯. ತತಃ ಪೂಜಾರ್ಹ ಏವಾಸೌ । ಯಸ್ಮಾತ್ -

(ಭಾಷ್ಯಾರ್ಥ)

ಆದ್ದರಿಂದ ಅವನು ಪೂಜೆಗೆ ತಕ್ಕವನೇ ; ಏಕೆಂದರೆ :

**ಸ ವೇದೈತತ್ ಪರಮಂ ಬ್ರಹ್ಮಧಾಮ**
**ಯತ್ರ ವಿಶ್ವಂ ನಿಹಿತಂ ಭಾತಿ ಶುಭ್ರಮ್ ।**
**ಉಪಾಸತೇ ಪುರುಷಂ ಯೇ ಹ್ಯಕಾಮಾ-**
**ಸ್ತೇ ಶುಕ್ರಮೇತದತಿವರ್ತನ್ತಿ ಧೀರಾಃ** ॥೧॥

೧. ಆತನು ಯಾವದರಲ್ಲಿ ಎಲ್ಲವೂ ಇಡಲ್ಪಟ್ಟಿರುವದೋ (ಯಾವದು) ಶುಭ್ರವಾಗಿ ಬೆಳಗುತ್ತಿರುವದೋ (ಆ) ಈ ಹೆಚ್ಚಿನ ಬ್ರಹ್ಮವೆಂಬ ಸ್ಥಾನವನ್ನು ಬಲ್ಲನು. ಯಾರು ಅಕಾಮರಾಗಿ (ಈ) ಪುರುಷನನ್ನು ಸೇವಿಸುತ್ತಾರೋ ಆ ಧೀರರು ಈ ಶುಕ್ರವನ್ನು ಅತಿಕ್ರಮಿಸುವರು.

(ಭಾಷ್ಯ)

೧೧೦. ಸ ವೇದ ಜಾನಾತಿ ಏತತ್ ಯಥೋಕ್ತಲಕ್ಷಣಂ ಬ್ರಹ್ಮ ಪರಮಮ್ ಧಾಮ ಉತ್ಕೃಷ್ಟಮ್[1] ಸರ್ವಕಾಮಾನಾಮಾಶ್ರಯಮ್ - ಆಸ್ಪದಮ್ । ಯತ್ರ ಯಸ್ಮಿನ್ ಬ್ರಹ್ಮಣಿ ಧಾಮ್ನಿ ವಿಶ್ವಂ ಸಮಸ್ತಂ ಜಗತ್ ನಿಹಿತಮ್ ಅರ್ಪಿತಮ್ । ಯಚ್ಚ ಸ್ವೇನ ಜ್ಯೋತಿಷಾ ಭಾತಿ ಶುಭ್ರಂ ಶುದ್ಧಮ್ । ತಮಪಿ ಏವಮಾತ್ಮಜ್ಞಂ ಪುರುಷಂ ಯೇ ಹಿ ಅಕಾಮಾಃ ವಿಭೂತಿ ತೃಷ್ಣಾವರ್ಜಿತಾಃ ಮುಮುಕ್ಷವಃ ಸನ್ತಃ ಉಪಾಸತೇ ಪರಮಿವ ದೇವಂ[2] ತೇ ಶುಕ್ರಂ ನೃ ಬೀಜಂ ಯದೇತತ್ ಪ್ರಸಿದ್ಧಂ ಶರೀರೋಪಾದಾನಕಾರಣಮ್ ಅತಿ ವರ್ತನ್ತಿ ಅತಿಗಚ್ಛನ್ತಿ ಧೀರಾಃ ಧೀಮನ್ತಃ । ನ ಪುನರ್ಯೋನಿಂ ಪ್ರಸರ್ಪನ್ತಿ "ನ ಪುನಃ ಕ್ವಚಿದ್ರತಿಂ ಕರೋತಿ" (?) ಇತಿ ಶ್ರುತೇಃ । ಅತಸ್ತಂ ಪೂಜಯೇತ್ ಇತ್ಯಭಿಪ್ರಾಯಃ ।

(ಭಾಷ್ಯಾರ್ಥ)

ಆತನು ಈ ಹಿಂದೆ ಹೇಳಿದ ಲಕ್ಷಣವುಳ್ಳ ಬ್ರಹ್ಮವೆಂಬ ಪರಮವಾದ

---

1. "ಪ್ರಕೃಷ್ಟಮ್" ಎಂದು ವಾ॥ ಪಾಠ.
2. "ಸೇವನ್ತೇ" ಎಂಬ ಆ॥ ಪಾಠಕ್ಕಿಂತ ಈ ವಾ॥ ಕಾ॥ ಪಾಠವು ಉತ್ತಮ.

ಉತ್ತಮಸ್ಥಾನವನ್ನು, ಸರ್ವಕಾಮಗಳಿಗೂ ಆಶ್ರಯವಾಗಿ, ಅವುಗಳಿಗೆ ಆಧಾರವಾಗಿರುವ ಸ್ಥಾನವನ್ನು[1] (ಎಂದರ್ಥ). ಯಾವದರಲ್ಲಿ ಎಂದರೆ ಯಾವ ಬ್ರಹ್ಮವೆಂಬ ಸ್ಥಾನದಲ್ಲಿ ಎಲ್ಲವೂ ಎಂದರೆ ಜಗತ್ತೆಲ್ಲವೂ ಇಡಲ್ಪಟ್ಟಿರುವದೋ ಸೇರಿಕೊಂಡಿರುವದೋ[2] ಮತ್ತು ಯಾವದು ತನ್ನ ಬೆಳಕಿನಿಂದ ಶುಭ್ರವಾಗಿ ಎಂದರೆ ಶುದ್ಧವಾಗಿ ಬೆಳಗುತ್ತಿರುವದೋ (ಅಂಥ ಬ್ರಹ್ಮವೆಂಬ ಸ್ಥಾನವನ್ನೂ) ಬಲ್ಲನು, ಅರಿತಿರುವನು. ಅವನನ್ನು ಈ ರೀತಿಯಲ್ಲಿ[3] ಆತ್ಮನನ್ನು ತಿಳಿದುಕೊಂಡಿರುವ ಪುರುಷನನ್ನು ಯಾರು ಅಕಾಮರಾಗಿ **ತಮಗೆ ಒಳ್ಳೆಯದಾಗಬೇಕೆಂಬ ಬಯಕೆಯೂ ಇಲ್ಲದೆ**[4] ಮುಮುಕ್ಷುಗಳಾಗಿ ಪರ (ಬ್ರಹ್ಮಸ್ವರೂಪನಾದ) ದೇವನನ್ನು ಹೇಗೋ ಹಾಗೆ[5] ಸೇವಿಸುತ್ತಾರೋ[6] ಆ ಧೀರರು (ಆ) ವಿವೇಕಿಗಳು ಈ ಶರೀರಗ್ರಹಣಕ್ಕೆ ಕಾರಣವೆಂದು ಪ್ರಸಿದ್ಧವಾಗಿದೆಯಲ್ಲ, (ಆ) ಶುಕ್ರವನ್ನು ಮನುಷ್ಯರೇತಸ್ಸನ್ನು ಅತಿಕ್ರಮಿಸುವರು ದಾಟುವರು ; ಮತ್ತೆ ಜನ್ಮವನ್ನು ಪಡೆಯುವದಿಲ್ಲ.[7] ''ಮತ್ತೆ ಎಲ್ಲಿಯೂ ರತಿಯನ್ನು ಮಾಡುವದಿಲ್ಲ'' (?) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. ಆದ್ದರಿಂದ ಆತನನ್ನು ಪೂಜಿಸಬೇಕು ಎಂದು ಅಭಿಪ್ರಾಯ.

## ಕಾಮತ್ಯಾಗವೇ ಮುಂತಾದ ಸಾಧನಗಳು

### (ಭಾಷ್ಯ)

೧೧೧. ಮುಮುಕ್ಷೋಃ ಕಾಮತ್ಯಾಗ ಏವ ಪ್ರಧಾನಮ್ ಸಾಧನಮ್ ಇತ್ಯೇತದ್ ದರ್ಶಯತಿ -

1. ಬ್ರಹ್ಮದಲ್ಲಿಯೇ ಎಲ್ಲಾ ವಸ್ತುಗಳೂ ಕಲ್ಪಿತವಾಗಿರುವದರಿಂದ ಬ್ರಹ್ಮವನ್ನು ಅರಿತು ಬ್ರಹ್ಮವನ್ನು ಪಡೆದುಕೊಂಡವನು ಎಲ್ಲಾ ಕಾಮಗಳನ್ನೂ ಒಟ್ಟಿಗೆ ಪಡೆದುಕೊಂಡಂತೆ ಆಗುವದು. ತೈ.ಭಾ. ೨-೧ ''ಸರ್ವಾನ್ ಕಾಮಾನ್ ಸಹ'' ಎಂಬುದರ ಭಾಷ್ಯ ನೋಡಿ.

2. ಚಕ್ರದ ಗುಂಬದಲ್ಲಿ ಹಾರೆಕೋಲಿನಂತೆ ಎಂಬ (ಪ್ರ. ೬-೬) ಶ್ರುತಿಯ ಸೂಚನೆ.

3. ಸರ್ವಾಶ್ರಯವಾಗಿ ಸರ್ವರ ಹೃದಯದಲ್ಲಿರುವ ಸ್ವಯಂಪ್ರಕಾಶಬ್ರಹ್ಮವೇ ತಾನೆಂದು.

4. ಸಕಾಮರು ಪೂಜೆಮಾಡಿದರೆ ಕಾಮಗಳೆಲ್ಲವೂ ದೊರಕುವವು ; ನಿಷ್ಕಾಮರಾಗಿ ಪೂಜಿಸಿದರೆ ಮುಕ್ತಿಯೇ ದೊರಕುವದು.

5. ಶ್ವೇ. ೬-೨೩ರ ಸೂಚನೆ.

6. ''ಪರಮಿವ ದೇವಮ್'' ಎಂಬ ಪಾಠದಲ್ಲಿ ''ಉಪಾಸತೇ'' ಎಂಬುದರ ಅರ್ಥವಿದು. ಆ ಪಾಠದಲ್ಲಿಯೂ ''ದೇವಮ್ ಸೇವನ್ತೇ ತೇ'' ಎಂದು ಇದ್ದಿರಬಹುದು. ''ಪರಮಿವ ಸೇವನ್ತೇ'' ಎಂಬ ಆ|| ಪಾಠದಲ್ಲಿ ''ತೇ'' ಬಿಟ್ಟು ಹೋಗಿದೆ ಎಂದು ಕಲ್ಪಿಸಬೇಕು.

7. ಕಾಮಿಗಳು ಕರ್ಮಾನುಸಾರವಾಗಿ ಹುಟ್ಟುವರಲ್ಲದೆ ಪುತ್ರಾದಿರೂಪದಿಂದಲೂ ಗೌಣ ಜನ್ಮವನ್ನು ಪಡೆಯುವರು. ಹಾಗೆ ಇವನಿಗೆ ಜನ್ಮವಿಲ್ಲ.

(ಭಾಷ್ಯಾರ್ಥ)

ಮುಮುಕ್ಷುವಾದವನಿಗೆ ಕಾಮತ್ಯಾಗವೇ ಮುಖ್ಯಸಾಧನವು ಎಂಬುದನ್ನು (ಈ ಮಂತ್ರವು) ತಿಳಿಸುತ್ತದೆ :-

**ಕಾಮಾನ್ ಯಃ ಕಾಮಯತೇ ಮನ್ಯಮಾನಃ**
**ಸ ಕಾಮಭಿರ್ಜಾಯತೇ ತತ್ರ ತತ್ರ ।**
**ಪರ್ಯಾಪ್ತಕಾಮಸ್ಯ ಕೃತಾತ್ಮನಸ್ತು**
**ಇಹೈವ ಸರ್ವೇ ಪ್ರವಿಲೀಯನ್ತಿ ಕಾಮಾಃ ॥೨॥**

೨. ಯಾವನು ಕಾಮಗಳನ್ನು ಯೋಚಿಸುತ್ತಾ ಕಾಮಿಸುತ್ತಿರುವನೋ ಅವನು ಕಾಮಗಳಿಂದ ಅಲ್ಲಲ್ಲಿ ಹುಟ್ಟುತ್ತಿರುವನು. ಪರ್ಯಾಪ್ತಕಾಮನಾದ ಕೃತಾತ್ಮನಿಗಾದರೋ ಎಲ್ಲಾ ಕಾಮಗಳೂ ಇಲ್ಲಿಯೇ ಅಡಗಿಹೋಗುವವು.

(ಭಾಷ್ಯ)

೧೧೨. ಕಾಮಾನ್ ಯಃ ದೃಷ್ಟಾದೃಷ್ಟೇಷ್ಟವಿಷಯಾನ್ ಕಾಮಯತೇ ಮನ್ಯಮಾನಃ ತದ್ಗುಣಾನ್ ಚಿನ್ತಯಾನಃ ಪ್ರಾರ್ಥಯತೇ ಸ ತೈಃ ಕಾಮಭಿಃ ಕಾಮೈಃ ಧರ್ಮಾಧರ್ಮಪ್ರವೃತ್ತಿಹೇತುಭಿಃ ವಿಷಯೇಚ್ಛಾರೂಪೈಃ ಸಹ ಜಾಯತೇ ತತ್ರ ತತ್ರ । ಯತ್ರ ಯತ್ರ ವಿಷಯಪ್ರಾಪ್ತಿನಿಮಿತ್ತಂ ಕಾಮಾಃ ಕರ್ಮಸು ಪುರುಷಂ ನಿಯೋಜಯನ್ತಿ ತತ್ರ ತತ್ರ ತೇಷು ತೇಷು ವಿಷಯೇಷು ತೈರೇವ[1] ಕಾಮೈರ್ವೇಷ್ಟಿತಃ ಜಾಯತೇ । ಯಸ್ತು ಪರಮಾರ್ಥತತ್ತ್ವವಿಜ್ಞಾನಾತ್ ಪರ್ಯಾಪ್ತಕಾಮಃ ಆತ್ಮಕಾಮತ್ವೇನ ಪರಿ ಸಮನ್ತತಃ ಆಪ್ತಾಃ ಕಾಮಾಃ ಯಸ್ಯ ತಸ್ಯ ಪರ್ಯಾಪ್ತಕಾಮಸ್ಯ ಕೃತಾತ್ಮನಃ ಅವಿದ್ಯಾಲಕ್ಷಣಾತ್ ಅಪರರೂಪಾತ್ ಅಪನೀಯ ಸ್ವೇನ ಪರೇಣ ರೂಪೇಣ ಕೃತಃ ಆತ್ಮಾ ವಿದ್ಯಯಾ ಯಸ್ಯ ತಸ್ಯ ಕೃತಾತ್ಮನಸ್ತು ಇಹೈವ ತಿಷ್ಠತ್ಯೇವ ಶರೀರೇ ಸರ್ವೇ ಧರ್ಮಾಧರ್ಮಪ್ರವೃತ್ತಿಹೇತವಃ ಪ್ರವಿಲೀಯನ್ತಿ=ಪ್ರವಿಲೀಯನ್ತೇ[2] ವಿಲಯಂ ಉಪಯಾನ್ತಿ ನಶ್ಯನ್ತಿ ಇತ್ಯರ್ಥಃ । ಕಾಮಾಃ ತಜ್ಜನ್ಮಹೇತುವಿನಾಶಾತ್ ನ ಜಾಯನ್ತೇ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಯಾವನು ಕಾಮಗಳನ್ನು ಎಂದರೆ (ಇಲ್ಲಿ) ಕಾಣುವ, (ಪರಲೋಕದಲ್ಲಿದ್ದು) ಕಾಣದೆ ಇರುವ (ತನಗೆ) ಬೇಕಾದ ವಿಷಯಗಳನ್ನು ಯೋಚಿಸುತ್ತಾ ಅವುಗಳ ಗುಣ

1. "ತೈರಿವ" ಎಂದು ಆ॥ ಪಾಠ ; ಈಗ ನಾವು ಕೊಟ್ಟಿರುವದು ವಾ॥ ಪಾಠ.
2. ಈ ಮಾತು ವಾ॥ ಕಾ॥ ಪಾಠಗಳಲ್ಲಿದೆ ; ಆ॥ ಪಾಠದಲ್ಲಿಲ್ಲ.

ಗಳನ್ನು ಚಿಂತಿಸಿಕೊಳ್ಳುತ್ತಾ ಕಾಮಿಸುತ್ತಿರುವನೋ (ಅವುಗಳನ್ನೇ) ಹಂಬಲಿಸುತ್ತಿರುವನೋ - ಅವನು ಕಾಮಭಿಃ=ಕಾಮೈಃ ಧರ್ಮದಲ್ಲಿಯೂ ಅಧರ್ಮದಲ್ಲಿಯೂ ತೊಡಗುವದಕ್ಕೆ ಕಾರಣವಾಗಿರುವ ವಿಷಯಗಳಾಸೆಯ ರೂಪವಾದ ಆ ಕಾಮಗಳೊಡನೆ ಅಲ್ಲಲ್ಲಿ ಹುಟ್ಟುತ್ತಿರುವನು. ಎಲ್ಲೆಲ್ಲಿ ವಿಷಯಗಳನ್ನು ಹೊಂದುವ ನಿಮಿತ್ತದಿಂದ ಕಾಮಗಳು ಮನುಷ್ಯನನ್ನು ಕರ್ಮಗಳಲ್ಲಿ ತೊಡಗಿಸುವವೋ ಅಲ್ಲಲ್ಲಿ ಎಂದರೆ ಆಯಾ ವಿಷಯಗಳಲ್ಲಿ ಆ ಕಾಮಗಳಿಂದಲೇ ಸುತ್ತುವರಿಯಲ್ಪಟ್ಟು[1] ಹುಟ್ಟುತ್ತಿರುವನು.

ಯಾವನಾದರೆ ಪರಮಾರ್ಥವಾದ ತತ್ತ್ವವನ್ನು ಅರಿತುಕೊಂಡು ಪರ್ಯಾಪ್ತಕಾಮನಾಗಿ, ಆತ್ಮಕಾಮನಾಗಿರುವದರಿಂದ[2] ಪರಿ ಎಂದರೆ ಎಲ್ಲಾ ಕಡೆಯಲ್ಲಿಯೂ ಕಾಮಗಳನ್ನು ಪಡೆದುಕೊಂಡಿರುವದರಿಂದ ಪರ್ಯಾಪ್ತಕಾಮನಾಗಿ **ಕೃತಾತ್ಮನಾಗಿರುವನೋ ಎಂದರೆ ಅವಿದ್ಯೆಯಿಂದ ಕಾಣುವ ಕಡಿಮೆಯ ರೂಪದಿಂದ ತಿರುಗಿಸಿ ವಿದ್ಯೆಯಿಂದ ತನ್ನದೇ ಆಗಿರುವ ಹೆಚ್ಚಿನ ರೂಪಕ್ಕೆ ಬರಮಾಡಿಕೊಂಡಿರುವ ಆತ್ಮನಾಗಿರುವನೋ[3] ಅವನಿಗಾದರೋ ಇಲ್ಲಿಯೇ ಎಂದರೆ ಶರೀರವು ಇರುವಾಗಲೇ[4] ಧರ್ಮದಲ್ಲಿಯೂ ಅಧರ್ಮದಲ್ಲಿಯೂ ತೊಡಗುವದಕ್ಕೆ ಕಾರಣವಾಗಿರುವ ಕಾಮಗಳೆಲ್ಲವೂ (ಪ್ರವಿಲೀಯನ್ತಿ=ಪ್ರವಿಲೀಯನ್ತೇ) ವಿಲಯವನ್ನು ಹೊಂದುವವು ನಾಶವಾಗುವವು. ಅವುಗಳು ಹುಟ್ಟುವದಕ್ಕೆ ಕಾರಣವು[5] ಹೋಗಿಬಿಟ್ಟಿರುವದರಿಂದ ಹುಟ್ಟುವದಿಲ್ಲ** ಎಂದು ಅಭಿಪ್ರಾಯ.

## (ಭಾಷ್ಯ)

೧೧೩. ಯದ್ಯೇವಂ ಸರ್ವಲಾಭಾತ್ ಪರಮ ಆತ್ಮಲಾಭಃ ತಲ್ಲಾಭಾಯ ಪ್ರವಚನಾದಯ ಉಪಾಯಾಃ ಬಾಹುಲ್ಯೇನ ಕರ್ತವ್ಯಾಃ ಇತಿ ಪ್ರಾಪ್ತೇ ಇದಮ್ ಉಚ್ಯತೇ -

## (ಭಾಷ್ಯಾರ್ಥ)

ಹೀಗೆ ಎಲ್ಲಾ ಲಾಭಕ್ಕಿಂತಲೂ ಆತ್ಮಲಾಭವೇ ಹೆಚ್ಚಿನದೆಂದಾದರೆ[6] ಅದನ್ನು ಪಡೆ

1. ಕಾಮಗಳೇ ನಮ್ಮನ್ನು ತಮ್ಮ ವಿಷಯಗಳು ಸಿಕ್ಕುವೆಡೆಗೆ ಒಯ್ಯುವವು.

2. ಆತ್ಮಕಾಮನೇ ಆಪ್ತಕಾಮನಾಗುವನು ಎಂಬ ಬೃ. ೪-೪-೬ರ ಸೂಚನೆ.

3. ಸಾಂಸಾರಿಕರೂಪವು ಅವಿದ್ಯಾಲಕ್ಷಣ ಎಂದರೆ ತಪ್ಪುತಿಳಿವಳಿಕೆಯಿಂದ ತೋರುತ್ತಿರುವದು. ನಿಜವಾದ ತಿಳಿವಳಿಕೆಯುಂಟಾದಕೂಡಲೆ ಪರಮಾರ್ಥಸ್ವರೂಪವು ಪ್ರಾಪ್ತವಾದಂತಾಗುವದು. ಆದ್ದರಿಂದ ಜ್ಞಾನಿಯು ಕೃತಾತ್ಮನು.

4. ಕಾಮಗಳಿಂದ ಶರೀರಾಂತರವನ್ನು ಪಡೆಯದೆ.

5. ಅಜ್ಞಾನವೇ ಕಾಮಗಳು ಹುಟ್ಟುವದಕ್ಕೆ ಕಾರಣ.

6. ಅ. ಧ. ಸೂ. ೧-೨೨-೨ರ ಸೂಚನೆ.

ಯುವದಕ್ಕೆ ಪ್ರವಚನವೇ ಮುಂತಾದ ಸಾಧನಗಳನ್ನು ಹೆಚ್ಚಾಗಿ ಮಾಡಬೇಕಾದೀತು ಎಂದಾಯಿತಾಗಿ ಇದನ್ನು (ಶ್ರುತಿ) ಹೇಳುತ್ತದೆ :-

**ನಾಯಮಾತ್ಮಾ ಪ್ರವಚನೇನ ಲಭ್ಯೋ**
**ನ ಮೇಧಯಾ ನ ಬಹುನಾ ಶ್ರುತೇನ ।**
**ಯಮೇವೈಷ ವೃಣುತೇ ತೇನ ಲಭ್ಯ-**
**ಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥೩॥**

೩. ಈ ಆತ್ಮನು ಪ್ರವಚನದಿಂದ ಸಿಕ್ಕುವವನಲ್ಲ. ಮೇಧೆಯಿಂದಲೂ (ಸಿಕ್ಕುವವನಲ್ಲ), ಬಹುವಾಗಿ (ಮಾಡುವ) ಶ್ರವಣದಿಂದಲೂ (ಸಿಕ್ಕುವವನಲ್ಲ). ಯಾವ (ಪರಮಾತ್ಮ)ನನ್ನೇ ಈತನು ವರಿಸುವನೋ ಅದರಿಂದ ಸಿಕ್ಕುವನು. ಅವನಿಗೆ ಈ ಆತ್ಮನು ತನ್ನ ಶರೀರವನ್ನು ಬಿಚ್ಚಿ ತೋರಿಸಿಕೊಡುವನು.

## (ಭಾಷ್ಯ)

೧೧೪. ಯೋಽಯಮಾತ್ಮಾ ವ್ಯಾಖ್ಯಾತಃ ಯಸ್ಯ ಲಾಭಃ ಪರಃ ಪುರುಷಾರ್ಥಃ ನಾಸೌ ವೇದಶಾಸ್ತ್ರಾಧ್ಯಯನಬಾಹುಲ್ಯೇನ ಪ್ರವಚನೇನ ಲಭ್ಯಃ । ತಥಾ ನ ಮೇಧಯಾ ಗ್ರನ್ಥಾರ್ಥಧಾರಣಶಕ್ತ್ಯಾ । ನ ಬಹುನಾ ಶ್ರುತೇನ ನಾಪಿ ಭೂಯಸಾ ಶ್ರವಣೇನ ಇತ್ಯರ್ಥಃ । ಕೇನ ತರ್ಹಿ ಲಭ್ಯಃ ಇತಿ ? ಉಚ್ಯತೇ । ಯಮೇವ ಪರಮಾತ್ಮಾನಮೇವ ಏಷಃ ವಿದ್ವಾನ್ ವೃಣುತೇ ಪ್ರಾಪ್ತುಮ್ ಇಚ್ಛತಿ ತೇನ ವರಣೇನ ಏಷ ಪರ ಆತ್ಮಾ ಲಭ್ಯಃ ನಾನ್ಯೇನ ಸಾಧನಾನ್ತರೇಣ । ನಿತ್ಯಲಬ್ಧಸ್ವಭಾವತ್ವಾತ್ ಕೀದೃಶೋಽಸೌ ವಿದುಷಃ ಆತ್ಮಲಾಭಃ ಇತಿ । ಉಚ್ಯತೇ । ತಸ್ಯ ಏಷ ಆತ್ಮಾ ಅವಿದ್ಯಾಸಂಛನ್ನಾಂ ಸ್ವಾಂ ಪರಾಂ ತನುಂ[1] ಸ್ವಾತ್ಮತತ್ತ್ವಂ ಸ್ವರೂಪಂ ವಿವೃಣುತೇ ಪ್ರಕಾಶಯತಿ । ಪ್ರಕಾಶೇ ಇವ ಘಟಾದಿಃ ವಿದ್ಯಾಯಾಂ ಸತ್ಯಾಮ್ ಆವಿರ್ಭವತಿ ಇತ್ಯರ್ಥಃ । ತಸ್ಮಾತ್ ಅನ್ಯತ್ಯಾಗೇನ ಆತ್ಮಪ್ರಾರ್ಥನೈವ[2] ಆತ್ಮಲಾಭಸಾಧನಮ್ ಇತ್ಯರ್ಥಃ ॥

## (ಭಾಷ್ಯಾರ್ಥ)

ಹಿಂದೆ ಹೇಳಿದ ಯಾವ ಈ ಆತ್ಮನುಂಟೋ, ಯಾವನನ್ನು ಪಡೆದುಕೊಳ್ಳುವದು

1. 'ತನೂಮ್' ಎಂದು ವಾ॥ ಪಾಠ.

2. ''ಆತ್ಮಪ್ರಾರ್ಥನೈವ'' ಎಂಬ ವಾ॥ ಪಾಠವನ್ನು ಇಟ್ಟುಕೊಂಡಿದೆ. ''ಆತ್ಮಲಾಭಪ್ರಾರ್ಥನಾ'' ಎಂಬ ಆ॥ ಪಾಠದಲ್ಲಿ 'ಲಾಭ' ಎಂಬ ಅರ್ಥವು ಶಬ್ದಸಾಮರ್ಥ್ಯದಿಂದಲೇ ದೊರಕುತ್ತದೆ.

(ಎಲ್ಲಕ್ಕೂ) ಹೆಚ್ಚಿನ ಪುರುಷಾರ್ಥವೆನಿಸುವದೋ,[1] ಇವನು ವೇದಶಾಸ್ತ್ರವನ್ನು ಹೆಚ್ಚಾಗಿ ಅಧ್ಯಯನಮಾಡಿ ಪ್ರವಚನಮಾಡುವದರಿಂದ ಸಿಕ್ಕುವವನಲ್ಲ. ಇದರಂತೆ ಮೇಧೆಯಿಂದ ಎಂದರೆ ಗ್ರಂಥದ ಅರ್ಥವನ್ನು ನೆನಪಿಟ್ಟುಕೊಳ್ಳುವ ಶಕ್ತಿಯಿಂದಲೂ (ಸಿಕ್ಕುವವನಲ್ಲ). ಬಹುವಾದ ಶ್ರುತದಿಂದ ಎಂದರೆ ಹೆಚ್ಚಾಗಿ ಮಾಡುವ ಶ್ರವಣದಿಂದಲೂ ಸಿಕ್ಕುವವನಲ್ಲ.[2] ಹಾಗಾದರೆ (ಇವನು) ಏತರಿಂದ ಸಿಕ್ಕುವನು ? ಎಂದರೆ (ಶ್ರುತಿ) ಹೇಳುತ್ತದೆ. **ಯಾವನನ್ನೇ ಎಂದರೆ ಯಾವ ಪರಮಾತ್ಮನನ್ನೇ ಈತನು ಎಂದರೆ (ಈ) ವಿವೇಕಿಯು ವರಿಸುವನೋ ಎಂದರೆ ಪಡೆಯಬೇಕೆಂದು ಬಯಸುತ್ತಿರುವನೋ, ಅದರಿಂದ (ಆ) ಬಯಕೆಯಿಂದ[3] ಈ ಪರಮಾತ್ಮನು ಸಿಕ್ಕುವನು,** ಮತ್ತೊಂದು ಸಾಧನದಿಂದ ಸಿಕ್ಕುವದಿಲ್ಲ. (ಇವನು) ಎಂದೆಂದಿಗೂ ಸಿಕ್ಕಿರುವ ಸ್ವಭಾವದವನಾಗಿರುತ್ತಾನೆ (ಎಂದಮೇಲೆ) ಜ್ಞಾನಿಗೆ ಆತ್ಮನು ಸಿಕ್ಕುವದೆಂಬುದು ಎಂಥದ್ದು[4] ? ಎಂದರೆ (ಶ್ರುತಿ) ಹೇಳುತ್ತದೆ. ಅವನಿಗೆ ಈ ಆತ್ಮನು ಅವಿದ್ಯೆಯಿಂದ ಮರೆಯಾಗಿರುವ[5] ತನ್ನ ಹೆಚ್ಚಿನ ಶರೀರವನ್ನು ಎಂದರೆ ತನ್ನ ತತ್ತ್ವವನ್ನು, ಸ್ವರೂಪವನ್ನು, ಬಿಚ್ಚಿ ತೋರಿಸಿಕೊಡುವನು, ಬೆಳಗುವಂತೆ ಮಾಡುವನು. ಬೆಳಕುಂಟಾದರೆ ಗಡಿಗೆಯೇ ಮುಂತಾದದ್ದು ತೋರಿಕೊಳ್ಳುವಂತೆ ವಿದ್ಯೆಯುಂಟಾದರೆ ತೋರಿಕೊಳ್ಳುವನು ಎಂದರ್ಥ. **ಆದ್ದರಿಂದ ಮಿಕ್ಕ (ದ್ದೆಲ್ಲವನ್ನೂ) ಬಿಟ್ಟು ಆತ್ಮನು (ಸಿಕ್ಕಬೇಕೆಂದು) ಬಯಸುವದೇ ಆತ್ಮನು ಸಿಕ್ಕುವದಕ್ಕೆ ಸಾಧನವು** ಎಂದರ್ಥ.

### (ಭಾಷ್ಯ)

೧೧೫. ಆತ್ಮಪ್ರಾರ್ಥನಾಸಹಾಯಭೂತಾನಿ ಏತಾನಿ ಚ ಸಾಧನಾನಿ ಬಲಾಪ್ರಮಾದತಪಾಂಸಿ ಲಿಙ್ಗಯುಕ್ತಾನಿ ಸಂನ್ಯಾಸಸಹಿತಾನಿ । ಯಸ್ಮಾತ್ -

### (ಭಾಷ್ಯಾರ್ಥ)

ಬಲ, ಅಪ್ರಮಾದ, ತಪಸ್ಸು - ಇವುಗಳೂ ಲಿಂಗದಿಂದೊಡಗೂಡಿದರೆ ಎಂದರೆ

---

1. ಆ|| ಧ|| ೧-೨೨-೨.

2. ಅವೆಲ್ಲವೂ ವ್ಯರ್ಥವೆಂದಲ್ಲ ; ಮುಂದೆ ಹೇಳುವ ಸಾಧನವಿಲ್ಲದೆ ಅವುಗಳಿಂದಲೇ ಸಿಕ್ಕುವದಿಲ್ಲ ಎಂದು ಅರ್ಥ.

3. ಸಾಧನವು ಯಾವದು ? ಎಂಬುದೇ ಪ್ರಶ್ನೆಯಾದ್ದರಿಂದ ಬಯಕೆಯಿಂದ ಎಂದು ಅರ್ಥವನ್ನು ಮಾಡಿದೆ. 'ತೇನ' ಎಂಬುದಕ್ಕೆ ಇನ್ನೊಂದು ಅರ್ಥವನ್ನು ಕೊಟ್ಟು ಇದೇ ಅಭಿಪ್ರಾಯವು ಬರುವಂತೆ ಕ.ಭಾ. ೧-೨-೨೩ರಲ್ಲಿ ವ್ಯಾಖ್ಯಾನಮಾಡಿರುತ್ತವೆ.

4. ಮೊದಲೇ ಸಿಕ್ಕಿರುವ ವಸ್ತು ಮತ್ತೆ ಸಿಕ್ಕುವದೆಂದರೇನರ್ಥ ?

5. ಆತ್ಮನು ಎಂದೆಂದಿಗೂ ಸಿಕ್ಕಿದ್ದರೂ ಅಜ್ಞಾನದಿಂದ ಸಿಕ್ಕಿಲ್ಲದಂತೆ ಆಗಿರುತ್ತಾನೆ - ಎಂದು ಭಾವ.

ಸಂನ್ಯಾಸದಿಂದೊಡಗೂಡಿದರೆ ಆತ್ಮನ ಬಯಕೆಗೆ ಸಹಾಯಕವಾದ ಸಾಧನಗಳು. ಏಕೆಂದರೆ :-

**ನಾಯಮಾತ್ಮಾ ಬಲಹೀನೇನ ಲಭ್ಯೋ**
**ನ ಚ ಪ್ರಮಾದಾತ್ತಪಸೋ ವಾಪ್ಯಲಿಙ್ಗಾತ್ ।**
**ಏತೈರುಪಾಯೈರ್ಯತತೇ ಯಸ್ತು ವಿದ್ವಾಂ -**
**ಸ್ತಸ್ಯೈಷ ಆತ್ಮಾ ವಿಶತೇ ಬ್ರಹ್ಮ ಧಾಮ ॥೪॥**

೪. ಈ ಆತ್ಮನು ಬಲಹೀನನಿಗೆ ಸಿಕ್ಕುವವನಲ್ಲ. ಪ್ರಮಾದದಿಂದಲಾಗಲಿ ಲಿಂಗವಿಲ್ಲದ ತಪಸ್ಸಿನಿಂದಾಗಲಿ (ಸಿಕ್ಕುವವನಲ್ಲ). ಈ ಉಪಾಯಗಳಿಂದ ಯಾವ ವಿದ್ವಾಂಸನು ಯತ್ನಮಾಡುವನೋ ಅವನ ಈ ಆತ್ಮನು ಬ್ರಹ್ಮ ಧಾಮವನ್ನು ಪ್ರವೇಶಿಸುವನು.

## (ಭಾಷ್ಯ)

೧೧೬. ಅಯಮಾತ್ಮಾ ಬಲಹೀನೇನ ಬಲಪ್ರಹೀಣೇನ ಆತ್ಮನಿಷ್ಠಾಜನಿತ ವೀರ್ಯಹೀನೇನ ನ ಲಭ್ಯಃ[1] । ನಾಪಿ ಲೌಕಿಕಪುತ್ರಪಶ್ವಾದಿವಿಷಯಾಸಙ್ಗನಿಮಿತ್ತಾತ್[2] ಪ್ರಮಾದಾತ್ ತಥಾ ತಪಸೋ ವಾಪಿ ಅಲಿಙ್ಗಾತ್ ಲಿಙ್ಗರಹಿತಾತ್ । ತಪೋಽತ್ರ ಜ್ಞಾನಮ್ । ಲಿಙ್ಗಂ ಸಂನ್ಯಾಸಃ । ಸಂನ್ಯಾಸರಹಿತಾತ್ ಜ್ಞಾನಾತ್ ನ ಲಭ್ಯತೇ ಇತ್ಯರ್ಥಃ । ಏತೈಃ ಉಪಾಯೈಃ ಬಲಪ್ರಮಾದಸಂನ್ಯಾಸಜ್ಞಾನೈಃ ಯತತೇ ತತ್ಪರಃ ಸನ್ ಪ್ರಯತತೇ ಯಸ್ತು ವಿದ್ವಾನ್ ವಿವೇಕೀ ಆತ್ಮವಿತ್ ತಸ್ಯ ವಿದುಷಃ ಏಷ ಆತ್ಮಾ ವಿಶತೇ ಸಂಪ್ರವಿಶತಿ ಬ್ರಹ್ಮಧಾಮ ॥

## (ಭಾಷ್ಯಾರ್ಥ)

ಈ ಆತ್ಮನು ಬಲಹೀನನಿಗೆ=ಬಲವಿಲ್ಲದವನಿಗೆ ಎಂದರೆ ಆತ್ಮನಿಷ್ಠೆಯಿಂದ ಉಂಟಾದ ವೀರ್ಯವಿಲ್ಲದವನಿಗೆ[3] ಸಿಕ್ಕುವವನಲ್ಲ. (ಈ) ಲೋಕದ ಮಕ್ಕಳುಮರಿಗಳು, ದನಕರುಗಳು ಮುಂತಾದ ವಿಷಯಗಳಲ್ಲಿರುವ ಆಸಕ್ತಿಯ ನಿಮಿತ್ತದಿಂದ ಆಗುವ ಪ್ರಮಾದದಿಂದಲೂ (ಸಿಕ್ಕುವದಿಲ್ಲ). ಹಾಗೂ ಲಿಂಗವಿಲ್ಲದ ತಪಸ್ಸಿನಿಂದಲೂ

1. ''ನಾಯಮಾತ್ಮಾ ...... ಲಭ್ಯಃ'' ಎಂದು ವಾ॥ ಪಾಠ ಮೂಲಾನುಸಾರವಾಗಿ ಭಾಷ್ಯವನ್ನು ಬರೆಯುವ ಶೈಲಿಯನ್ನು ಲಕ್ಷ್ಯದಲ್ಲಿಟ್ಟು ಈ ಪಾಠವನ್ನೂ ಅಂಗೀಕರಿಸಬಹುದು.

2. ''ನಿಮಿತ್ತಪ್ರಮಾದಾತ್'' ಎಂದು ಆ॥ ಪಾಠ. ಇಲ್ಲಿ ಕೊಟ್ಟಿರುವದು ವಾ॥ ಪಾಠ. ಆ॥ ಪಾಠದಲ್ಲಿ 'ವಿಷಯಾಸಙ್ಗ' ಎಂದಿಷ್ಟೇ ಇದೆ.

3. ಕೇ. ಭಾ. ೨-೪ರ ಸೂಚನೆ.

(ಸಿಕ್ಕುವದಿಲ್ಲ). ಇಲ್ಲಿ ತಪಸ್ಸು ಎಂದರೆ ಜ್ಞಾನವು. ಲಿಂಗವೆಂದರೆ ಸಂನ್ಯಾಸವು ; ಸಂನ್ಯಾಸವಿಲ್ಲದ ಜ್ಞಾನದಿಂದ ಸಿಕ್ಕುವದಿಲ್ಲ ಎಂದರ್ಥ.[1] ಈ ಉಪಾಯಗಳಿಂದ ಎಂದರೆ ಬಲ, ಅಪ್ರಮಾದ, ಸಂನ್ಯಾಸ, ಜ್ಞಾನ - ಇವುಗಳಿಂದ ತತ್ಪರನಾಗಿ[2] ಯಾವ ವಿದ್ವಾಂಸನು, ವಿವೇಕಿಯಾದ ಆತ್ಮಜ್ಞಾನಿಯು[3] ಯತ್ನಮಾಡುವನೋ ಪ್ರಯತ್ನ ಮಾಡುತ್ತಿರುವನೋ ಆ ಜ್ಞಾನಿಯ ಈ ಆತ್ಮನು ಬ್ರಹ್ಮಧಾಮವನ್ನು ಪ್ರವೇಶಿಸುವನು, ಚೆನ್ನಾಗಿ ಹೊಗುವನು.[4]

## ಜ್ಞಾನಿಯು ಮುಕ್ತನಾಗುವ ಬಗೆ

(ಭಾಷ್ಯ)

ಕಥಂ ಬ್ರಹ್ಮ ವಿಶತೇ[5] ಇತಿ ? ಉಚ್ಯತೇ -

(ಭಾಷ್ಯಾರ್ಥ)

ಬ್ರಹ್ಮವನ್ನು ಹೇಗೆ ಪ್ರವೇಶಿಸುವನು ? ಎಂದರೆ (ಶ್ರುತಿ) ಹೇಳುತ್ತದೆ :-

**ಸಂಪ್ರಾಪ್ಯೈನಮೃಷಯೋ ಜ್ಞಾನತೃಪ್ತಾಃ**
**ಕೃತಾತ್ಮಾನೋ ವೀತರಾಗಾಃ ಪ್ರಶಾನ್ತಾಃ ।**
**ತೇ ಸರ್ವಗಂ ಸರ್ವತಃ ಪ್ರಾಪ್ಯ ಧೀರಾ**
**ಯುಕ್ತಾತ್ಮಾನಃ ಸರ್ವಮೇವಾವಿಶನ್ತಿ ॥೫॥**

೫. ಈತನನ್ನು ಪಡೆದುಕೊಂಡು ಋಷಿಗಳು ಜ್ಞಾನತೃಪ್ತರಾಗಿ, ಕೃತಾತ್ಮರಾಗಿ, ವೀತರಾಗರಾಗಿ, ಪ್ರಶಾಂತರಾಗಿರುವರು. ಆ ಧೀರರು ಸರ್ವಗತನಾದ (ಆತ್ಮನನ್ನು) ಎಲ್ಲೆಲ್ಲಿಯೂ ಪಡೆದುಕೊಂಡವರಾಗಿ ಯುಕ್ತಾತ್ಮರಾಗಿ ಎಲ್ಲವನ್ನೂ ಪ್ರವೇಶಿಸುವರು.

---

1. ಜ್ಞಾನವು ಪಕ್ವವಾಗುವದಕ್ಕೆ ಸಂನ್ಯಾಸವೂ ಬೇಕು ಎಂದರ್ಥ. ಪೀಠಿಕೆಯನ್ನು ನೋಡಿ.

2. ಗೀ. ೪-೩೯.

3. ಪರೋಕ್ಷಜ್ಞಾನವುಳ್ಳ ಸಾಧಕನು.

4. ಬ್ರಹ್ಮವೆಂಬ ಸ್ಥಾನವನ್ನು ಪ್ರವೇಶಿಸುವನು ಎಂದರೆ ಉಪಾಧಿಯಿಂದ ಬೇರೆಯಾಗಿದ್ದಂತೆ ಇದ್ದ ಸ್ವರೂಪವನ್ನು ತೊರೆದು ಬ್ರಹ್ಮಸ್ವರೂಪವನ್ನು ಪಡೆಯುವನು ಎಂದರ್ಥ. ಮುಂದಿನ ಮಂತ್ರದ ಭಾಷ್ಯವನ್ನು ನೋಡಿ. ಬ್ರಹ್ಮಪ್ರಾಪ್ತಿಗೆ ಬ್ರಹ್ಮವೇ ಬೇಕೆಂಬ ಮುಮುಕ್ಷುತೆಯಲ್ಲದೆ ಇಲ್ಲಿ ಹೇಳಿರುವ ಬಲವೇ ಮುಂತಾದ ಸಹಾಯಕ ಸಾಧನಗಳೂ ಬೇಕು ಎಂದು ವಾಕ್ಯಾರ್ಥ.

5. ''ಸಂವಿಶತೇ'' ಎಂಬ ಆ॥ ಪಾಠದಲ್ಲಿ ''ಸಂ'' ಹೆಚ್ಚು.

(ಭಾಷ್ಯ)

೧೧೭. ಸಂಪ್ರಾಪ್ಯ ಸಮವಗಮ್ಯ ಏನಮ್ ಆತ್ಮಾನಮ್ ಋಷಯಃ ದರ್ಶನವನ್ತಃ ತೇನೈವ ಜ್ಞಾನೇನ ತೃಪ್ತಾಃ ನ ಬಾಹ್ಯೇನ ತೃಪ್ತಿಸಾಧನೇನ ಶರೀರೋಪಚಯಕಾರಣೇನ ಕೃತಾತ್ಮಾನಃ ಪರಮಾತ್ಮಸ್ವರೂಪೇಣೈವ ನಿಷ್ಪನ್ನಾತ್ಮಾನಃ ಸನ್ತಃ ವೀತರಾಗಾಃ ವಿಗತ ರಾಗಾದಿದೋಷಾಃ ಪ್ರಶಾನ್ತಾಃ ಉಪರತೇನ್ದ್ರಿಯಾಃ । ತೇ ಏವಂ ಭೂತಾಃ ಸರ್ವಗಂ ಸರ್ವವ್ಯಾಪಿನಮ್ ಆಕಾಶವತ್ ಸರ್ವತಃ ಸರ್ವತ್ರ ಪ್ರಾಪ್ಯ ನೋಪಾಧಿಪರಿಚ್ಛಿನ್ನೇನ ಏಕದೇಶೇನ, ಕಿಂ ತರ್ಹಿ ತದ್ಬ್ರಹ್ಮೈವಾದ್ವಯಮ್ ಆತ್ಮತ್ವೇನ ಪ್ರತಿಪದ್ಯ ಧೀರಾಃ ಅತ್ಯನ್ತವಿವೇಕಿನಃ ಯುಕ್ತಾತ್ಮಾನಃ ನಿತ್ಯಸಮಾಹಿತಸ್ವಭಾವಾಃ ಸರ್ವಮೇವ ಸಮಸ್ತಂ ಶರೀರಪಾತಕಾಲೇಽಪಿ ಆವಿಶನ್ತಿ. ಭಿನ್ನೇ ಘಟೇ[1] ಘಟಾಕಾಶವತ್ ಅವಿದ್ಯಾಕೃತೋಪಾಧಿಪರಿಚ್ಛೇದಂ ಜಹತಿ । ಏವಂ ಬ್ರಹ್ಮವಿದೋ ಬ್ರಹ್ಮಧಾಮ ಪ್ರವಿಶನ್ತಿ ॥

(ಭಾಷ್ಯಾರ್ಥ)

ಈ ಆತ್ಮನನ್ನು ಪಡೆದುಕೊಂಡು ಚೆನ್ನಾಗಿ ಅರಿತುಕೊಂಡು[2] ಋಷಿಗಳು ಎಂದರೆ (ಆತ್ಮನನ್ನು) ಕಂಡುಕೊಂಡವರು ಅದೇ ಜ್ಞಾನದಿಂದಲೇ ತೃಪ್ತರಾಗಿ ಶರೀರವು ಬೆಳೆಯುವದಕ್ಕೆ ಕಾರಣವಾಗಿರುವ ಹೊರಗಿನ ತೃಪ್ತಿಸಾಧನದಿಂದ (ತೃಪ್ತಿಯನ್ನು ಬಯಸದೆ),[3] ಕೃತಾತ್ಮರಾಗಿ ಎಂದರೆ ಪರಮಾತ್ಮಸ್ವರೂಪದಿಂದಲೇ ಏರ್ಪಟ್ಟಿರುವ ಆತ್ಮವುಳ್ಳವರಾಗಿ,[4] ವೀತರಾಗರಾಗಿ ಎಂದರೆ ರಾಗವೇ ಮುಂತಾದದೋಷಗಳಿಲ್ಲದವರಾಗಿ ಪ್ರಶಾಂತರಾಗಿರುವರು, ಇಂದ್ರಿಯಗಳ ವ್ಯಾಪಾರವನ್ನು ತಡೆಗಟ್ಟಿಕೊಂಡಿರುವರು. ಆ (ಧೀರರು ಎಂದರೆ ಅತ್ಯಂತವಿವೇಕಿಗಳು[5] ಈ ರೂಪವನ್ನು ಹೊಂದಿದ)ವರಾಗಿ ಸರ್ವಗತನಾದ ಆಕಾಶದಂತೆ ಎಲ್ಲವನ್ನೂ ವ್ಯಾಪಿಸಿಕೊಂಡಿರುವ,[6] ಎಲ್ಲೆಲ್ಲಿಯೂ ಎಲ್ಲಾ ಕಡೆಯಲ್ಲಿಯೂ ಉಪಾಧಿಯ ಅಳತೆಗೆ ಕಟ್ಟುಬಿದ್ದು ಒಂದೇ ಕಡೆಯಲ್ಲಿರುವ ಆತ್ಮನನ್ನಲ್ಲ,[7] ಮತ್ತೇನೆಂದರೆ ಆ ತನಗೆರಡನೆಯದಿಲ್ಲದ ಬ್ರಹ್ಮವನ್ನೇ (ತಮ್ಮ)

---

1. "ಭಿನ್ನಘಟಾಕಾಶವತ್" ಎಂದು ವಾ॥ ಪಾಠ.

2. "ಸಂಪ್ರಾಪ್ಯ" ಎಂಬ ಮೂಲದಲ್ಲಿ ಸಂ ಎಂದರೆ ಚೆನ್ನಾಗಿ, ಪ್ರಾಪ್ಯ ಎಂದರೆ ಅರಿತುಕೊಂಡು ಎಂಬರ್ಥವನ್ನು ತೆಗೆದಿದೆ.

3. ತೈ. ೨-೭ರಲ್ಲಿ ರಸಃ ಎಂಬುದರ ವ್ಯಾಖ್ಯಾನವನ್ನು ನೋಡಿ.

4. ೩-೨-೨ ರಲ್ಲಿ ಕೃತಾತ್ಮನಃ ಎಂಬುದರ ವ್ಯಾಖ್ಯಾನವನ್ನು ನೋಡಿ.

5. ದೇಹಕ್ಕಿಂತ ಬೇರೆಯಾದ ಅಹಂಪ್ರತ್ಯಯಗಮ್ಯನಾದ ಆತ್ಮನನ್ನು ಕಂಡವರಿಗಿಂತಲೂ ಸಾಕ್ಷಿರೂಪನಾದ ಆತ್ಮನನ್ನು ಕಂಡವರು ಹೆಚ್ಚು ವಿವೇಕಿಗಳು.

6. "ಆಕಾಶವತ್ ಸರ್ವಗತಶ್ಚ ನಿತ್ಯಃ" ಎಂಬ ಶ್ರುತಿಯ ಸೂಚನೆ.

7. ಅಂತಃಕರಣಪರಿಚ್ಛಿನ್ನನಾಗಿ ದೇಹದಲ್ಲಿರುವವನನ್ನಲ್ಲ.

ಆತ್ಮನೆಂದು ಅರಿತುಕೊಂಡು ಯುಕ್ತಾತ್ಮರಾಗಿ[1] ಎಂದರೆ ಯಾವಾಗಲೂ ಸಮಾಧಾನದಲ್ಲಿರುವ ಸ್ವಭಾವದವರಾಗಿ ಸರ್ವವನ್ನೇ ಎಲ್ಲವೂ ಆಗಿರುವ ಬ್ರಹ್ಮವನ್ನೇ[2] ಶರೀರವು ಬಿದ್ದು ಹೋಗುವ ಕಾಲದಲ್ಲಿಯೂ[3] ಪ್ರವೇಶಿಸುವರು. **ಗಡಿಗೆಯು ಒಡೆದುಕೊಂಡರೆ ಗಡಿಗೆಯ ಆಕಾಶದಂತೆ ಅವಿದ್ಯೆಯಿಂದಾಗಿರುವ ಉಪಾಧಿಯಿಂದಾಗಿರುವ[4] (ಭೇದವನ್ನು) ಅಳತೆಯಕಟ್ಟನ್ನು ಬಿಟ್ಟುಬಿಡುತ್ತಾರೆ.** ಈ ರೀತಿಯಲ್ಲಿ ಬ್ರಹ್ಮಜ್ಞಾನಿಗಳು ಬ್ರಹ್ಮಧಾಮವನ್ನು ಪ್ರವೇಶಿಸುವರು[5] (ಎಂದರ್ಥ).

**ವೇದಾನ್ತವಿಜ್ಞಾನಸುನಿಶ್ಚಿತಾರ್ಥಾಃ**
**ಸಂನ್ಯಾಸಯೋಗಾದ್ ಯತಯಃ ಶುದ್ಧಸತ್ತ್ವಾಃ ।**
**ತೇ ಬ್ರಹ್ಮಲೋಕೇಷು ಪರಾನ್ತಕಾಲೇ**
**ಪರಾಮೃತಾಃ ಪರಿಮುಚ್ಯನ್ತಿ ಸರ್ವೇ ॥೬॥**

೬. ವೇದಾಂತವಿಜ್ಞಾನದ ಅರ್ಥವನ್ನು ಚೆನ್ನಾಗಿ ನಿಶ್ಚಯಮಾಡಿಕೊಂಡವರಾಗಿ ಸಂನ್ಯಾಸಯೋಗದಿಂದ ಶುದ್ಧಸತ್ತ್ವರಾಗಿ ಅವರು ಬ್ರಹ್ಮಲೋಕಗಳಲ್ಲಿ ಪರಾಂತಕಾಲದಲ್ಲಿ ಹೆಚ್ಚಿನ ಅಮೃತರಾಗಿ ಎಲ್ಲರೂ ಪರಿಮುಕ್ತರಾಗುವರು.

(ಭಾಷ್ಯ)

೧೧೮. ಕಿಂಚ ವೇದಾನ್ತ ಜನಿತಂ ವಿಜ್ಞಾನಂ ವೇದಾನ್ತವಿಜ್ಞಾನಂ ತಸ್ಯಾರ್ಥಃ ಪರಮಾತ್ಮಾ[6] ವಿಜ್ಞೇಯಃ । ಸೋಽರ್ಥಃ ಸುನಿಶ್ಚಿತಃ ಯೇಷಾಂ ತೇ ವೇದಾನ್ತ

1. ಬ್ರಹ್ಮವು ಕೂಟಸ್ಥವಾಗಿರುವದರಿಂದ ನಿತ್ಯಸಮಾಹಿತವಾಗಿರುತ್ತವೆ. ಆದ್ದರಿಂದ ಬ್ರಹ್ಮಜ್ಞಾನಿಗಳೂ ನಿತ್ಯಸಮಾಹಿತರಾಗಿರುತ್ತಾರೆ.

2. ಸರ್ವವೆಂದರೆ ಬ್ರಹ್ಮವೇ. ಪ್ರ ೪-೧೧ನ್ನು ನೋಡಿ.

3. ಸಾಯುವ ಮುಂಚೆಯೇ ಎಲ್ಲವೂ ತಾವೇ ಎಂಬ ಜ್ಞಾನವುಂಟಾಗಿರುವದರಿಂದ ದೇಹವು ಬಿದ್ದುಹೋದಮೇಲೆ ಬ್ರಹ್ಮವನ್ನು ಸೇರುವರೆಂಬ ಮಾತು ಉಳಿದ ಜನರ ದೃಷ್ಟಿಯಿಂದ.

4. ಗಡಿಗೆಯ ಆಕಾಶವು ಯಾವಾಗಲೂ ಆಕಾಶವೇ ಆಗಿರುತ್ತದೆ ; ಗಡಿಗೆಯೆಂಬ ಉಪಾಧಿಯೂ ಆಕಾಶವೇ ಆದರೂ ತಪ್ಪುತಿಳಿವಿನಿಂದ ಬೇರೆಯೆಂದು ತೋರುತ್ತಿರುವದು ; ಗಡಿಗೆಯು ಒಡೆದರೆ ಗಡಿಗೆಯ ಆಕಾಶವು ಒಟ್ಟಿನ ಆಕಾಶದಲ್ಲಿ ಸೇರಿತೆಂಬ ವ್ಯವಹಾರವಾಗುತ್ತದೆ. ಮಾಂ. ಕಾ. ಭಾ. ೩-೩, ೪.

5. ಹೇಗೆ ಬ್ರಹ್ಮಧಾಮವನ್ನು ಪ್ರವೇಶಿಸುತ್ತಾನೆ ? ಎಂಬ ಪೀಠಿಕೆಯ ಶಂಕೆಗೆ ಉತ್ತರವಿದು ಎಂದು ಭಾವ. ವಿದೇಹಮುಕ್ತಿಯು ಗೌಣವೆಂದಾಯಿತು.

6. ''ಪರ ಆತ್ಮಾ'' ವಾ॥ ಪಾಠ.

ವಿಜ್ಞಾನಸುನಿಶ್ಚಿತಾರ್ಥಾಃ । ತೇ ಚ ಸಂನ್ಯಾಸಯೋಗಾತ್ ಸರ್ವಕರ್ಮಪರಿತ್ಯಾಗಲಕ್ಷಣಯೋಗಾತ್ ಕೇವಲಬ್ರಹ್ಮನಿಷ್ಠಾಸ್ವರೂಪಾತ್ ಯೋಗಾತ್ ಯತಯಃ ಯತನಶೀಲಾಃ । ಶುದ್ಧಸತ್ತ್ವಾಃ ಶುದ್ಧಂ ಸತ್ತ್ವಂ ಯೇಷಾಂ ಸಂನ್ಯಾಸಯೋಗಾತ್ ತೇ ಶುದ್ಧಸತ್ತ್ವಾಃ । ತೇ ಬ್ರಹ್ಮಲೋಕೇಷು । ಸಂಸಾರಿಣಾಂ ಯೇ ಮರಣಕಾಲಾಃ ತೇ ಅಪರಾನ್ತಾಃ[1] । ತಾನ್ ಅಪೇಕ್ಷ್ಯ ಮುಮುಕ್ಷೂಣಾಂ ಸಂಸಾರಾವಸಾನೇ ದೇಹಪರಿತ್ಯಾಗಕಾಲಃ ಪರಾನ್ತಕಾಲಃ । ತಸ್ಮಿನ್ ಪರಾನ್ತಕಾಲೇ । ಸಾಧಕಾನಾಂ ಬಹುತ್ವಾತ್ ಬ್ರಹ್ಮೈವ ಲೋಕಃ ಬ್ರಹ್ಮಲೋಕಃ ಏಕೋಽಪಿ ಅನೇಕವತ್ ದೃಶ್ಯತೇ ಪ್ರಾಪ್ಯತೇ ವಾ । ಅತೋ ಬಹುವಚನಂ ಬ್ರಹ್ಮಲೋಕೇಷು ಇತಿ । ಬ್ರಹ್ಮಣಿ ಇತ್ಯರ್ಥಃ[2] । ಪರಾಮೃತಾಃ ಪರಮ್ ಅಮೃತಮ್ ಅಮರಣಧರ್ಮಕಂ ಬ್ರಹ್ಮ ಆತ್ಮಭೂತಂ ಯೇಷಾಂ ತೇ ಪರಾಮೃತಾಃ । ಜೀವನ್ತ ಏವ ಬ್ರಹ್ಮಭೂತಾಃ । ಪರಾಮೃತಾಃ ಸನ್ತಃ ಪರಿಮುಚ್ಯನ್ತಿ ಪರಿ ಸಮನ್ತಾತ್ ಪ್ರದೀಪನಿರ್ವಾಣವತ್ ಭಿನ್ನಘಟಾಕಾಶವಚ್ಚ[3] ನಿವೃತ್ತಿಮ್ ಉಪಯಾನ್ತಿ ಪರಿಸಮನ್ತಾತ್ ?[4] ಮುಚ್ಯನ್ತೇ ಸರ್ವೇ ನ ದೇಶಾನ್ತರಗನ್ತವ್ಯಮ್ ಅಪೇಕ್ಷನ್ತೇ ॥

## (ಭಾಷ್ಯಾರ್ಥ)

ಮತ್ತು ವೇದಾಂತದಿಂದ ಉಂಟಾದ ವಿಜ್ಞಾನವು[5] ವೇದಾಂತವಿಜ್ಞಾನವು. ಅದರ ಅರ್ಥವೆಂದರೆ ಅರಿಯಬೇಕಾದ ಪರಮಾತ್ಮನು. ಆ ಅರ್ಥವು ಸುನಿಶ್ಚಿತವಾಗಿ ಯಾರಿಗೆ ಉಂಟಾಗಿರುವದೋ ಅವರು ವೇದಾಂತವಿಜ್ಞಾನಸುನಿಶ್ಚಿತಾರ್ಥರು ಮತ್ತು ಅವರು **ಸಂನ್ಯಾಸಯೋಗದಿಂದ** ಎಂದರೆ ಕರ್ಮಗಳನ್ನೆಲ್ಲ ಬಿಡುವದೆಂಬ ಯೋಗದಿಂದ, ಬರಿಯ ಬ್ರಹ್ಮನಿಷ್ಠೆಯ ರೂಪವಾದ ಯೋಗದಿಂದ[6] ಯತಿಗಳಾಗಿ ಪ್ರಯತ್ನವನ್ನು

---

1. ''ಅಪರಾನ್ತಕಾಲಾಃ'' ವಾ॥ ಪಾಠ. ''ತೇ ಪರಾನ್ತಾಃ'' ಎಂದು ಆ॥ ಪಾಠದಲ್ಲಿ ಆಕಾರವು ಬರೆದವರ ಕೈತಪ್ಪಿನಿಂದ ಬಿಟ್ಟುಹೋಗಿದೆ.

2. ಈ ವಾಕ್ಯವು ಮುದ್ರಿತಪುಸ್ತಕಗಳಲ್ಲಿ ಇಲ್ಲಿಯೇ ಇದೆ ; ''ಏಕೋಽಪಿ . . . ಬ್ರಹ್ಮಣಿ ಇತ್ಯರ್ಥಃ'' ಇಷ್ಟುಭಾಗವು ''ಬ್ರಹ್ಮಲೋಕೇಷು'' ಎಂಬ ಮಾತು ಆಗುತ್ತಲೂ ಇರಬೇಕಾಗಿತ್ತು ಎಂದು ಭಾಷ್ಯಕಾರರ ಶೈಲಿಯನ್ನು ಅರಿತವರಿಗೆ ಅನ್ನಿಸುತ್ತದೆ. ''ಪ್ರಾಪ್ಯತೇ ಚ'' ಎಂದು ವಾ॥ ಪಾಠ.

3. ''ಭಿನ್ನ'' ಎಂಬ ಮಾತು ಆ॥ ಪಾಠದಲ್ಲಿಲ್ಲ.

4. ಇದು ಎರಡು ಸಲ ಏತಕ್ಕೆ ಬಂದಿದೆಯೆಂಬುದು ತಿಳಿಯುವದಿಲ್ಲ. ''ಘಟಾಕಾಶವಚ್ಚ ಮುಚ್ಯನ್ತಿ ಮುಚ್ಯನ್ತೇ ನಿವೃತ್ತಿಮ್ ಉಪಯಾನ್ತಿ'' ಎಂದಿದ್ದರೆ ಚೆನ್ನಾಗಿರುತ್ತಿತ್ತು. ಎನಿಸುತ್ತದೆ.

5. ವಿಶೇಷಾನುಭವವು.

6. ಕರ್ಮವೂ ಬ್ರಹ್ಮನಿಷ್ಠೆಯೂ ಒಬ್ಬನಲ್ಲಿಯೇ ಒಂದೇ ಕಾಲದಲ್ಲಿ ಇರಲಾರವಾದ್ದರಿಂದ ಸರ್ವಕರ್ಮಸಂನ್ಯಾಸಸಹಿತಬ್ರಹ್ಮನಿಷ್ಠೆಯನ್ನು ಇಲ್ಲಿ ''ಸಂನ್ಯಾಸಯೋಗ''ವೆಂದು ಕರೆದಿದೆ. ಗೀ.ಭಾ. ೧೮-೪೯ ಇಲ್ಲಿ ''ನೈಷ್ಕರ್ಮ್ಯಸಿದ್ಧಿಮ್'' ಎಂಬುದರ ವ್ಯಾಖ್ಯಾನವನ್ನು ನೋಡಿ.

ಮಾಡುತ್ತಿರುವವರಾಗಿ. ಶುದ್ಧಸತ್ತ್ವರಾಗಿ ಯಾರಿಗೆ ಸತ್ತ್ವವು ಸಂನ್ಯಾಸಯೋಗದಿಂದ ಶುದ್ಧವಾಗಿರುವದೋ ಅವರು ಶುದ್ಧಸತ್ತ್ವರು. ಅವರು ಬ್ರಹ್ಮಲೋಕಗಳಲ್ಲಿ (ಮುಕ್ತರಾಗುವರು). ಸಂಸಾರಿಗಳ ಸಾವಿನ ಕಾಲಗಳು ಇವೆಯಲ್ಲ, ಅವು ಅಪರಾಂತಗಳು (ಕೊನೆಯವಲ್ಲ).[1] ಆ ಕಾಲಗಳಿಗೆ ಹೋಲಿಸಿದರೆ ಮುಮುಕ್ಷುಗಳಿಗೆ ಸಂಸಾರವು ಮುಗಿಯುವಾಗ ದೇಹವನ್ನು ಬಿಡುವ ಕಾಲವು ಪರಾಂತಕಾಲವು (ತೀರಕೊನೆಯ ಕಾಲವು).[2] ಆ ಪರಾಂತಕಾಲದಲ್ಲಿ ಬ್ರಹ್ಮವು ಒಂದೇ ಆದರೂ ಸಾಧಕರು ಅನೇಕರಾಗಿರುವದರಿಂದ ಅನೇಕವಾಗಿ ಕಾಣಬರುತ್ತದೆ ಅಥವಾ ಪಡೆಯಲ್ಪಡುತ್ತದೆ.[3] ಆದ್ದರಿಂದ ಬ್ರಹ್ಮವೆಂಬ ಲೋಕವು ಬ್ರಹ್ಮಲೋಕವು (ಎಂದಿರಬೇಕಾದದ್ದು)[4] ''ಬ್ರಹ್ಮಲೋಕಗಳಲ್ಲಿ'' ಎಂದು ಬಹುವಚನವು ಪ್ರಯುಕ್ತವಾಗಿದೆ. ಬ್ರಹ್ಮದಲ್ಲಿ ಎಂದೇ ಅರ್ಥ. (ಇವರು) ಹೆಚ್ಚಿನ ಅಮೃತರಾಗಿ ; ಹೆಚ್ಚಿನ ಅಮೃತವು, ಮರಣವಿಲ್ಲದ ಬ್ರಹ್ಮವು, ಯಾರಿಗೆ ಆತ್ಮನಾಗಿರುವದೋ ಅವರು ಪರಾಮೃತರು ; **ಬದುಕಿರುವಾಗಲೇ ಬ್ರಹ್ಮಸ್ವರೂಪರಾಗಿ (ಹೀಗೆ) ಪರಾಮೃತರಾಗಿ ಪರಿಮುಕ್ತರಾಗುವರು**[5] **ಪರಿ ಎಂದರೆ ಎಲ್ಲಾ ವಿಧ(ವಾದ ಬಂಧದಿಂದಲೂ) ದೊಡ್ಡದೀಪವು ಆರಿಹೋಗುವಂತೆಯೂ ಒಡೆದ ಗಡಿಗೆಯ ಆಕಾಶವು (ಹೊರಗಿನ ಆಕಾಶದಲ್ಲಿ ಅಡಗು)ವಂತೆಯೂ**[6]

---

1. ಸಾವನ್ನು ಕೊನೆಗಾಲವೆಂದು ಜನರು ಭಾವಿಸುವರಾದರೂ ಮತ್ತೆ ಜನ್ಮವು ಇದ್ದೇ ಇರುವದರಿಂದ ಅದು ಕೊನೆಯದಲ್ಲ.

2. ದೇಹವನ್ನು ಬಿಟ್ಟ ಬಳಿಕ ಅವರು ಮತ್ತೊಂದು ದೇಹವನ್ನು ಪಡೆಯುವುದಿಲ್ಲ. ಬೃ.ಭಾ. ೪-೪-೬ ರಲ್ಲಿ ''ಬ್ರಹ್ಮಾಪ್ಯೇತಿ'' ಎಂಬುದರ ವಿವರಣೆಯನ್ನು ನೋಡಿ.

3. ಒಬ್ಬೊಬ್ಬನಾಗಿ ಮುಕ್ತನಾಗುತ್ತಾನೆ ; ಕ್ರಮಮುಕ್ತಿಯಿಂದಲೂ ಸದ್ಯೋಮುಕ್ತಿಯಿಂದಲೂ ಒಬ್ಬೊಬ್ಬನಿಗೂ ಹೊಸದಾಗಿಯೇ ಬ್ರಹ್ಮವು ದೊರೆತಂತೆ ಆಗಿ ವಿಲಕ್ಷಣವಾದ ಬ್ರಹ್ಮಾನುಭವವಾಗುತ್ತದೆ. ಬ್ರಹ್ಮವನ್ನೇ ಸಾಧಕರು ತಮ್ಮತಮ್ಮ ಇಷ್ಟದೈವವಾಗಿ ಕಾಣುತ್ತಾರೆ, ಆಯಾ ಇಷ್ಟವನ್ನೇ ಪಡೆಯುತ್ತಾರೆ. ಗೀ. ೭-೨೧, ೨೨, ೨೩, ೯-೨೪.

4. ಬ್ರಹ್ಮವನ್ನೇ ಲೋಕವೆಂದು ಕರೆದಿರುವದು ಇತರ ಲೋಕಗಳ ಫಲವೆಲ್ಲ ಅದರಲ್ಲಿ ಅಡಕವಾಗಿರುವದೆಂಬ ಭಾವದಿಂದ. ಬೃ. ೪-೩-೩೨.

5. ಇವರು ಬದುಕಿರುವಾಗಲೇ ಬ್ರಹ್ಮಸ್ವರೂಪರಾಗಿರುವದರಿಂದ ಶರೀರವು ಬಿದ್ದ ಮೇಲೆ ಮುಕ್ತರಾಗುವರೆಂಬುದು ವ್ಯವಹಾರದ ದೃಷ್ಟಿಯಿಂದ. ಬೃ. ೪-೪-೬ರ ಭಾಷ್ಯವನ್ನು ನೋಡಿ.

6. ಆರಿಹೋದ ದೀಪವು ಮತ್ತೆಲ್ಲಿಗೂ ಹೋಗದೆ ಇದ್ದಲ್ಲಿಯೇ ಅವ್ಯಕ್ತವಾಗುವಂತೆಯೂ ಗಡಿಗೆಯ ಆಕಾಶವು ಗಡಿಗೆಯು ಒಡೆದುಕೊಂಡು ಇದ್ದಲ್ಲಿಯೇ ಸುತ್ತಲಿನ ಆಕಾಶದಲ್ಲಿ ಸೇರಿ ಹೋಗುವಂತೆಯೂ ಎಂದರ್ಥ.

ಮುಕ್ತರಾಗುವರು. ಎಲ್ಲರೂ ಬಿಡುಗಡೆಯನ್ನು ಹೊಂದುವರು, (ಅವರು) ಮತ್ತೊಂದು ಸ್ಥಳಕ್ಕೆ ಹೋಗಬೇಕಾಗಿರುವದಿಲ್ಲ.[1]

(ಭಾಷ್ಯ)

೧೧೯. ''ಶುಕನೀನಾಮಿವಾಕಾಶೇ ಜಲೇ ವಾರಿಚರಸ್ಯ ಚ । ಪದಂ ಯಥಾ ನ ದೃಶ್ಯೇತ ತಥಾ ಜ್ಞಾನವತಾಂ ಗತಿಃ ॥'' (ಮೋ. ಧ. ೧೮೧-೧೯) ''ಅನಧ್ವಗಾ ಅಧ್ವಸು ಪಾರಯಿಷ್ಣವಃ'' (?) ಇತಿ ಶ್ರುತಿಸ್ಮೃತಿಭ್ಯಾಮ್[2] । ದೇಶಪರಿಚ್ಛಿನ್ನಾ ಹಿ ಗತಿಃ ಸಂಸಾರ ವಿಷಯೈವ । ಪರಿಚ್ಛಿನ್ನಸಾಧನಸಾಧ್ಯತ್ವಾತ್ । ಬ್ರಹ್ಮ ತು ಸಮಸ್ತತ್ವಾನ್ನ ದೇಶಪರಿಚ್ಛೇದೇನ ಗನ್ತವ್ಯಮ್ । ಯದಿ ಹಿ ದೇಶಪರಿಚ್ಛಿನ್ನಂ ಬ್ರಹ್ಮ ಸ್ಯಾತ್ ಮೂರ್ತದ್ರವ್ಯವತ್ ಆದ್ಯನ್ತವತ್ ಅನ್ಯಾಶ್ರಿತಂ ಸಾವಯವಮ್ ಅನಿತ್ಯಂ ಕೃತಕಂ ಚ ಸ್ಯಾತ್ । ನ ತ್ವೇವಂ ವಿಧಂ ಬ್ರಹ್ಮ ಭವಿತುಮರ್ಹತಿ । ಅತಸ್ತತ್ಪ್ರಾಪ್ತಿಶ್ಚ ನೈವ ದೇಶಪರಿಚ್ಛಿನ್ನಾ ಭವಿತುಂ ಯುಕ್ತಾ । ಅಪಿ ಚ ಅವಿದ್ಯಾದಿಸಂಸಾರಬನ್ಧಾಪನಯನಮೇವ ಮೋಕ್ಷಮಿಚ್ಛನ್ತಿ ಬ್ರಹ್ಮ ವಿದೋ ನ ತು ಕಾರ್ಯಭೂತಮ್ ॥

(ಭಾಷ್ಯಾರ್ಥ)

''ಆಕಾಶದಲ್ಲಿ ಹಕ್ಕಿಗಳಿಗೂ ನೀರಿನಲ್ಲಿ ಜಲಚರಕ್ಕೂ ಹೇಗೆ ಹೆಜ್ಜೆಯ ಗುರುತು ಕಾಣಲಾರದೋ ಹಾಗೆಯೇ ಜ್ಞಾನಿಗಳ ಗತಿಯೂ (ಕಾಣಲಾರದು)'' (ಮೋ. ಧ. ೧೮೧-೧೯).[3] ''ದಾರಿಯಲ್ಲಿ ನಡೆಯದೆ ದಾರಿಗಳನ್ನು ದಾಟುವವರು'' (?) ಎಂಬ ಶ್ರುತಿಸ್ಮೃತಿಗಳು[4] ಇದಕ್ಕೆ ಆಧಾರವು. ಇಂಥ ಕಡೆಯಲ್ಲಿರುವದೆಂಬ ಸ್ಥಳಕ್ಕೆ ಹೋಗುವದೆಂಬುದು ಸಂಸಾರದ ವಿಷಯದಲ್ಲಿಯೇ. ಏಕೆಂದರೆ (ಆ ಗತಿಯು) ಇಷ್ಟೆಂಬ ಅಳತೆಯ ಸಾಧನದಿಂದ ದೊರೆಯತಕ್ಕದ್ದಾಗಿರುತ್ತದೆ. ಆದರೆ **ಬ್ರಹ್ಮವು ಎಲ್ಲವೂ (ತಾನೇ) ಆಗಿರುವದರಿಂದ ಇಂಥ ಕಡೆಯಲ್ಲಿ ಗೊತ್ತಾಗಿ (ಇದನ್ನು) ಪಡೆಯಬೇಕೆಂಬುದಿಲ್ಲ.** ಬ್ರಹ್ಮವು ದೇಶದ ಅಳತೆಯುಳ್ಳದ್ದೆಂದಾದರೆ ಮೂರ್ತದ್ರವ್ಯ

1. ಜ್ಞಾನಿಗಳು ಇಲ್ಲಿಯೇ ಮುಕ್ತರಾಗಿರುವದರಿಂದ ಅವರು ಮುಕ್ತಿಗಾಗಿ ಎಲ್ಲಿಗೂ ಹೋಗಬೇಕಾದದ್ದಿರುವದಿಲ್ಲ. ಉಪಾಸಕರು ಮಾತ್ರ ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮವನ್ನು ಪಡೆಯಬೇಕು. ಬೃ. ೩-೨-೧೧, ಸೂ.ಭಾ. ೪-೩-೭, ೮, ೧೩.

2. ''ಶ್ರುತಿಸ್ಮೃತಿಭ್ಯಃ'' ಎಂಬ ಆ॥ ಪಾಠವು 'ಇತ್ಯಾದಿಶ್ರುತಿಭ್ಯಃ' ಎಂದಿದ್ದರೆ ಸರಿಯಾಗುವದು.

3. ಮೋಕ್ಷಧರ್ಮದಲ್ಲಿ ''ಜಲೇ ವಾರಿಚರಸ್ಯ ಚ'' ಎಂಬುದರ ಬದಲು ''ಮತ್ಸ್ಯಾನಾಮಿವ ಚೋದಕೇ'' ಎಂದಿದೆ.

4. ಇದು ಯಾವ ಶ್ರುತಿಯೋ ತಿಳಿಯದು ಒಂದು ಶ್ಲೋಕದ ಭಾಗದಂತೆ ಕಾಣುತ್ತದೆ.

ದಂತೆ ಮೊದಲುಕೊನೆಯುಳ್ಳದ್ದಾಗಿಯೂ ಮತ್ತೊಂದನ್ನು ಆಶ್ರಯಿಸಿರುವದಾಗಿಯೂ ಅವಯವಗಳಿಂದ ಕೂಡಿದ್ದಾಗಿಯೂ ಅನಿತ್ಯವಾಗಿಯೂ ಒಂದರಿಂದ ಆದದ್ದಾಗಿಯೂ ಆಗಿರಬೇಕಾಗುವದು. ಆದರೆ ಇಂಥದ್ದು ಬ್ರಹ್ಮವಾಗಲಾರದು. ಆದ್ದರಿಂದ ಅದರ ಪ್ರಾಪ್ತಿಗೂ ಇಂಥ ಕಡೆಯಲ್ಲಿ ಎಂಬ ಅಳತೆಯಿರುವದು ಸರಿಯಲ್ಲ. ಇದಲ್ಲದೆ ಅವಿದ್ಯೆಯೇ ಮುಂತಾದ ಸಂಸಾರಬಂಧನವನ್ನು ಹೋಗಲಾಡಿಸಿಕೊಳ್ಳುವದೇ ಮೋಕ್ಷವೆಂದು[1] ಬ್ರಹ್ಮಜ್ಞಾನಿಗಳು ಅಭಿಪ್ರಾಯಪಡುವರೇ ಹೊರತು (ಇದು ಒಂದರ) ಕಾರ್ಯವೆಂದು (ಹೇಳುವದಿಲ್ಲ).

**ಗತಾಃ ಕಲಾಃ ಪಞ್ಚದಶ ಪ್ರತಿಷ್ಠಾ**
**ದೇವಾಶ್ಚ ಸರ್ವೇ ಪ್ರತಿದೇವತಾಸು ।**
**ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ**
**ಪರೇಽವ್ಯಯೇ ಸರ್ವ ಏಕೀಭವನ್ತಿ ॥೭॥**

೭. ಕಲೆಗಳು ಹದಿನೈದೂ (ತಮ್ಮ) ಪ್ರತಿಷ್ಠೆಗಳನ್ನು ಹೋಗಿ ಸೇರುತ್ತವೆ. ದೇವತೆಗಳೆಲ್ಲರೂ ಪ್ರತಿದೇವತೆಗಳಲ್ಲಿ (ಸೇರುತ್ತಾರೆ). ಕರ್ಮಗಳೂ ವಿಜ್ಞಾನಮಯಾತ್ಮನೂ ಅವ್ಯಯನಾದ ಪರನಲ್ಲಿ ಎಲ್ಲರೂ ಒಂದಾಗುವರು.

(ಭಾಷ್ಯ)

೧೨೦. ಕಿಂಚ ಮೋಕ್ಷಕಾಲೇ ಯಾ ದೇಹಾರಮ್ಭಿಕಾಃ ಕಲಾಃ ಪ್ರಾಣಾದ್ಯಾಃ ತಾಃ ಸ್ವಾಃ ಪ್ರತಿಷ್ಠಾಃ[2] ಗತಾಃ ಸ್ವಂ ಸ್ವಂ ಕಾರಣಂ ಗತಾ ಭವನ್ತಿ ಇತ್ಯರ್ಥಃ । ಪ್ರತಿಷ್ಠಾಃ ಇತಿ ದ್ವಿತೀಯಾಬಹುವಚನಮ್ । ಪಂಚದಶಸಂಖ್ಯಾಕಾಃ ಯಾ ಅನ್ತ್ಯಪ್ರಶ್ನಪರಿಪಠಿತಾಃ ಪ್ರಸಿದ್ಧಾಃ । ದೇವಾಶ್ಚ ದೇಹಾಶ್ರಯಾಃ ಚಕ್ಷುರಾದಿಕರಣಸ್ಥಾಃ ಸರ್ವೇ ಪ್ರತಿದೇವತಾಸು ಆದಿತ್ಯಾದಿಷು ಗತಾ ಭವನ್ತಿ ಇತ್ಯರ್ಥಃ । ಯಾನಿ ಚ ಮುಮುಕ್ಷುಣಾ ಕೃತಾನಿ ಕರ್ಮಾಣಿ ಅಪ್ರವೃತ್ತಫಲಾನಿ । ಪ್ರವೃತ್ತಫಲಾನಾಮ್ ಉಪಭೋಗೇನೈವ ಕ್ಷೀಯಮಾಣತ್ವಾತ್ । ವಿಜ್ಞಾನಮಯಶ್ಚ ಆತ್ಮಾ ಅವಿದ್ಯಾಕೃತಬುದ್ಧ್ಯಾದ್ಯುಪಾಧಿಮ್ ಆತ್ಮ

1. ಬ್ರಹ್ಮಲೋಕಕ್ಕೆ ಹೋಗುವದೆಂಬುದುಕೂಡ ಅವಿದ್ಯೆಯ ವಿಷಯವೆಂದು ೧-೨-೧೧ ರಲ್ಲಿ ಹೇಳಿದೆ. "ನ ಚ ನಿಗಡಭಙ್ಗ ಇವಾಭಾವಭೂತೋ ಮೋಕ್ಷೋ ಬನ್ಧನನಿವೃತ್ತಿರುಪಪದ್ಯತೇ", "ಅವಿದ್ಯಾನಿವೃತ್ತಿಮಾತ್ರೇ ಮೋಕ್ಷವ್ಯವಹಾರಃ" ಎಂಬ ಬೃ. ಭಾ. ೪-೪-೬ ವಾಕ್ಯಗಳನ್ನು ನೋಡಿರಿ.

2. "ಸ್ವಾಂ ಸ್ವಾಂ ಪ್ರತಿಷ್ಠಾಮ್" ಎಂಬ ಆ॥ ಪಾಠವು ಮೂಲಕ್ಕೆ ಅನುಗುಣವಾಗಿಲ್ಲ. "ಸ್ವಾಃ ಪ್ರತಿಷ್ಠಾಃ" ಎಂಬ ವಾ॥ ಪಾಠದಲ್ಲಿಕೂಡ "ಸ್ವಾಃ" ಎಂಬುದು ಅವಶ್ಯವಿಲ್ಲವೆಂದು ತೋರುತ್ತದೆ.

ತ್ವೇನ ಗತ್ವಾ[1] ಜಲಾದಿಷು ಸೂರ್ಯಾದಿಪ್ರತಿಬಿಮ್ಬವತ್ ಇಹ ಪ್ರವಿಷ್ಟೋ ದೇಹಭೇದೇಷು । ಕರ್ಮಣಾಂ ತತ್ಫಲಾರ್ಥತ್ವಾತ್ ಸಹ ತೇನೈವ ವಿಜ್ಞಾನಮಯೇನ ಆತ್ಮನಾ । ಅತೋ ವಿಜ್ಞಾನಮಯೋ ವಿಜ್ಞಾನಪ್ರಾಯಃ । ತ ಏತೇ ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ ಉಪಾಧ್ಯಪನಯನೇ ಸತಿ ಪರೇ ಅವ್ಯಯೇ ಅನನ್ತೇ, ಅಕ್ಷಯೇ, ಬ್ರಹ್ಮಣಿ ಆಕಾಶಕಲ್ಪೇ ! ಅಜೇ, ಅಜರೇ, ಅಮೃತೇ, ಅಭಯೇ, ಅಪೂರ್ವೇ, ಅನಪರೇ, ಅನನ್ತರೇ, ಅಬಾಹ್ಯೇ, ಅದ್ವಯೇ, ಶಿವೇ, ಶಾನ್ತೇ, ಸರ್ವೇ ಏಕೀಭವನ್ತಿ ಅವಿಶೇಷತಾಂ ಗಚ್ಛನ್ತಿ ಏಕತ್ವಮ್ ಆಪದ್ಯನ್ತೇ ಜಲಾದ್ಯಾಧಾರಾಪನಯೇ ಇವ ಸೂರ್ಯಾದಿಪ್ರತಿಬಿಮ್ಬಾಃ ಸೂರ್ಯೇ, ಘಟಾದ್ಯಪನಯೇ ಇವ ಆಕಾಶೇ ಘಟಾದ್ಯಾಕಾಶಾಃ ॥

## (ಭಾಷ್ಯಾರ್ಥ)

ಮತ್ತು ದೇಹಕ್ಕೆ ಕಾರಣವಾಗಿದ್ದ ಯಾವ ಪ್ರಾಣವೇ ಮುಂತಾದ ಕಲೆಗಳಿದ್ದವೋ ಅವು ಮೋಕ್ಷಕಾಲದಲ್ಲಿ ತಮ್ಮ ಪ್ರತಿಷ್ಠೆಗಳನ್ನು ಹೋಗಿ ಸೇರುತ್ತವೆ. ತಮ್ಮ ತಮ್ಮ ಕಾರಣದಲ್ಲಿ ಸೇರುತ್ತವೆ ಎಂದರ್ಥ.[2] (ಉಪನಿಷತ್ತಿನಲ್ಲಿ) "ಪ್ರತಿಷ್ಠಾ" ಎಂಬುದು ದ್ವಿತೀಯಾಬಹುವಚನವು. ಹದಿನೈದು ಎಂದರೆ **ಕೊನೆಯ ಪ್ರಶ್ನೆಯಲ್ಲಿ** (ಪ್ರ. ೬-೪ರಲ್ಲಿ) ಹೇಳಿರುವ ಪ್ರಸಿದ್ಧವಾದ ಹದಿನೈದು ಸಂಖ್ಯೆಯುಳ್ಳ **(ಕಲೆಗಳು)** ಮತ್ತು ದೇಹವನ್ನು ಆಶ್ರಯಿಸಿಕೊಂಡು ಚಕ್ಷುವೇ ಮುಂತಾದ ಕರಣಗಳಲ್ಲಿ ನಿಂತಿರುವ ದೇವತೆಗಳು ಎಲ್ಲರೂ ಪ್ರತಿದೇವತೆಗಳಲ್ಲಿ ಎಂದರೆ ಸೂರ್ಯಾದಿಗಳಲ್ಲಿ ಹೋಗಿ ಸೇರಿಕೊಳ್ಳುವರು ಎಂದರ್ಥ. ಮತ್ತು ಯಾವ **ಕರ್ಮಗಳು** ಮುಮುಕ್ಷುವಾದವನು ಹಿಂದೆ ಮಾಡಿದ್ದು ಇನ್ನೂ ಫಲವನ್ನು ಕೊಡದೆ ಇರುವವೋ (ಅವೂ ಸೇರುವವು). ಫಲವನ್ನು ಕೊಡು ವದಕ್ಕೆ ಪ್ರಾರಂಭಿಸಿರುವ ಕರ್ಮಗಳು ಅನುಭವಿಸುವದರಿಂದಲೇ ಕ್ಷಯವಾಗುವದರಿಂದ (ಅವನ್ನು ಇಲ್ಲಿ ಹೇಳಿಲ್ಲ) ಮತ್ತು **ವಿಜ್ಞಾನಮಯನಾದ ಆತ್ಮನು**, ಎಂದರೆ ಅವಿದ್ಯೆಯಿಂದಾಗಿರುವ ಬುದ್ಧಿಯೇ ಮುಂತಾದ ಉಪಾಧಿಯನ್ನು ತಾನೇ ಎಂದುಕೊಂಡು ನೀರು ಮುಂತಾದದ್ದರಲ್ಲಿ ಸೂರ್ಯನೇ ಮುಂತಾದವುಗಳ ಪ್ರತಿಬಿಂಬವು ಹೋಗುವಂತೆ[3] ಇಲ್ಲಿ ಬೇರಬೇರೆಯ ದೇಹಗಳಲ್ಲಿ ಹೊಕ್ಕಿರುವ (ಆತ್ಮನು). ಕರ್ಮಗಳು ಅವನಿಗೆ ಫಲವನ್ನು ಕೊಡುವದಕ್ಕಾಗಿ ಉಂಟಾಗುವದರಿಂದ ಆ ವಿಜ್ಞಾನಮಯನಾದ

1. "ಮತ್ವಾ" ಎಂದು ಆ॥ ಪಾಠ. ಇಲ್ಲಿರುವದು ವಾ॥ ಪಾಠ.

2. ಇದು ವ್ಯವಹಾರದೃಷ್ಟಿಯಿಂದ ; ಜ್ಞಾನಿಯ ದೃಷ್ಟಿಯಲ್ಲಿ ಇವು ಬ್ರಹ್ಮವೇ ಆಗುತ್ತವೆ ; ಪ್ರ. ೬-೫, ಸೂ.ಭಾ. ೪-೨-೧೫.

3. ಪ್ರ.ಭಾ. ೪-೯, ಸೂ.ಭಾ. ೨-೩-೫೦. ಬುದ್ಧಿಯಲ್ಲಿ ತೋರುವ ಚಿದಾಭಾಸಕ್ಕೆ ಜೀವವೆಂದು ಹೆಸರು.

ಆತ್ಮನೊಡನೆಯೇ (ಲಯವಾಗುವವು). ಹೀಗೆ ವಿಜ್ಞಾನಮಯನೆಂದರೆ ವಿಜ್ಞಾನವೇ ಮುಖ್ಯವಾಗಿ (ಉಪಾಧಿಯಾಗಿರುವ)ವನು.[1] ಆ ಈ ಕರ್ಮಗಳೂ ವಿಜ್ಞಾನಮಯನಾದ ಆತ್ಮನೂ ಉಪಾಧಿಯು ಹೋಗಲಾಗಿ ಅವ್ಯಯನೂ ಅಂತವಿಲ್ಲದವನೂ ಕ್ಷಯವಾಗದವನೂ ಆದ ಆಕಾಶದಂತಿರುವ ಪರಬ್ರಹ್ಮದಲ್ಲಿ ಹುಟ್ಟಿಲ್ಲದ, ಮುಪ್ಪಿಲ್ಲದ, ನಾಶವಾಗುವದಲ್ಲದ, ಅಂಜಿಕೆಯಿಲ್ಲದ, ಹಿಂದಿಲ್ಲದ, ಮುಂದಿಲ್ಲದ, ಒಳಗಿಲ್ಲದ, ಹೊರಗಿಲ್ಲದ, ತನಗೆರಡನೆಯದಿಲ್ಲದ, ಮಂಗಳಕರವಾದ, ಶಾಂತವಾದ[2] (ಬ್ರಹ್ಮದಲ್ಲಿ) ಎಲ್ಲವೂ ಒಂದಾಗುವವು ಎಂದರೆ ನೀರು ಮುಂತಾದ ಆಧಾರವು ಹೋಗಲಾಗಿ ಸೂರ್ಯನೇ ಮುಂತಾದವುಗಳ ಪ್ರತಿಬಿಂಬಗಳು ಸೂರ್ಯನಲ್ಲಿಯೂ ಗಡಿಗೆಯೇ ಮುಂತಾದವುಗಳು ಹೋದರೆ ಗಡಿಗೆಯ ಆಕಾಶವೇ ಮುಂತಾದವು ಆಕಾಶದಲ್ಲಿಯೂ (ಒಂದಾಗು)ವಂತೆ[3] ಬೇರೆಬೇರೆಯಲ್ಲವೆಂಬಂತಾಗುವವು, ಒಂದೇ ಸ್ವರೂಪವನ್ನು ಪಡೆಯುವವು.

**ಯಥಾ ನದ್ಯಃ ಸ್ಯನ್ದಮಾನಾ ಸಮುದ್ರೇ**
**ऽಸ್ತಂ ಗಚ್ಛನ್ತಿ ನಾಮರೂಪೇ ವಿಹಾಯ ।**
**ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ**
**ಪರಾತ್ಪರಂ ಪುರುಷಮುಪೈತಿ ದಿವ್ಯಮ್ ॥೮॥**

೮. ಹೇಗೆ ನದಿಗಳು ಹರಿಯುತ್ತಾ (ಹೋಗಿ) ನಾಮರೂಪಗಳನ್ನು ಬಿಟ್ಟು ಸಮುದ್ರದಲ್ಲಿ ಅಸ್ತಂಗತವಾಗುವವೋ ಹಾಗೆ ವಿದ್ವಾಂಸನು ನಾಮರೂಪದಿಂದ ಬಿಡುಗಡೆಯಾಗಿ ಪರಾತ್ಪರನಾದ ದಿವ್ಯಪುರುಷನನ್ನು ಬಳಿಸಾರುವನು.

೧೨೧. ಕಿಂಚ ಯಥಾ ನದ್ಯಃ ಗಙ್ಗಾದ್ಯಾಃ ಸ್ಯನ್ದಮಾನಾಃ ಗಚ್ಛನ್ತ್ಯಃ ಸಮುದ್ರೇ ಸಮುದ್ರಂ ಪ್ರಾಪ್ಯ ಅಸ್ತಂ ಅದರ್ಶನಮ್ ಅವಿಶೇಷಾತ್ಮಭಾವಮ್ ಗಚ್ಛನ್ತಿ ಪ್ರಾಪ್ನುವನ್ತಿ ನಾಮ ಚ ರೂಪಂ ಚ ನಾಮರೂಪೇ ವಿಹಾಯ ಹಿತ್ವಾ ತಥಾ ಅವಿದ್ಯಾಕೃತನಾಮ

---

1. ವಿಜ್ಞಾನದ ವಿಕಾರನು ಎಂದೇ ಅರ್ಥವಲ್ಲ ; ವಿಜ್ಞಾನದ ಧರ್ಮಗಳನ್ನು ಮುಖ್ಯವಾಗಿ ತನ್ನದೆಂದು ಸಂಸಾರದಲ್ಲಿ ಭಾವಿಸುವವನು ಎಂದರ್ಥ. ಸೂ.ಭಾ. ೨-೩-೨೯.

2. ಬೃ. ೪-೪-೨೫, ೩-೮-೮, ಮಾಂ. ೭ ಮುಂತಾದ ಶ್ರುತಿಗಳನ್ನು ಸೂಚಿಸುವ ವಿಶೇಷಣಗಳಿವು.

3. ಈ ದೃಷ್ಟಾಂತಗಳಿಂದ ಈಚೆಗೆ ಅವಚ್ಛೇದವಾದ, ಪ್ರತಿಬಿಂಬವಾದ - ಎಂಬ ಎರಡು ವಾದಗಳೇ ಹುಟ್ಟಿಕೊಂಡಿರುವವು. ಪೀಠಿಕೆಯನ್ನು ನೋಡಿ.

ರೂಪಾತ್ ವಿಮುಕ್ತಃ ಸನ್ ವಿದ್ವಾನ್ ಪರಾತ್ ಅಕ್ಷರಾತ್ ಪೂರ್ವೋಕ್ತಾತ್ ಪರಂ ದಿವ್ಯಂ ಪುರುಷಂ ಯಥೋಕ್ತಲಕ್ಷಣಮ್ ಉಪೈತಿ ಉಪಗಚ್ಛತಿ ॥

(ಭಾಷ್ಯಾರ್ಥ)

ಮತ್ತು ಹೇಗೆ ಗಂಗೆ ಮುಂತಾದ ನದಿಗಳು ಹರಿಯುತ್ತಾ ಹೋಗಿ ಸಮುದ್ರದಲ್ಲಿ ಸಮುದ್ರವನ್ನು ಸೇರಿದ ಬಳಿಕ ನಾಮರೂಪಗಳನ್ನು ನಾಮವನ್ನೂ ರೂಪವನ್ನೂ ಬಿಟ್ಟು ತೆಗೆದುಹಾಕಿ ಅಸ್ತವನ್ನು ಎಂದರೆ ಕಾಣದಿರುವಿಕೆಯನ್ನು, ತಮ್ಮ ವಿಶೇಷಸ್ವರೂಪವು ಇಲ್ಲದಿರುವ ರೂಪವನ್ನು ಹೊಂದುವವೋ ಪಡೆದುಕೊಳ್ಳುವವೋ ಹಾಗೆ **ಅವಿದ್ಯೆಯಿಂದ ಆಗಿರುವ ನಾಮರೂಪದಿಂದ**[1] **ಬಿಡುಗಡೆಹೊಂದಿದವನಾಗಿ** ವಿದ್ವಾಂಸನು ಪರಾತ್ ಎಂದರೆ ಹಿಂದೆ ಹೇಳಿದಂತೆ (ಮಿಕ್ಕದ್ದೆಲ್ಲಕ್ಕಿಂತ) ಹೆಚ್ಚಿನ ಅಕ್ಷರಕ್ಕಿಂತ[2] ಹೆಚ್ಚಿನವನಾದ ದಿವ್ಯಪುರುಷನನ್ನು ಹಿಂದೆ ಹೇಳಿದಂಥ ಪುರುಷನನ್ನು[3] ಬಳಿಸಾರುವನು, ಹೋಗಿ ಸೇರಿಕೊಳ್ಳುವನು.

(ಭಾಷ್ಯ)

೧೨೨. ನನು ಶ್ರೇಯಸಿ ಅನೇಕೇ ವಿಘ್ನಾಃ ಪ್ರಸಿದ್ಧಾಃ ಅತಃ ಕ್ಲೇಶಾನಾಮನ್ಯತಮೇನ ಅನ್ಯೇನ ವಾ ದೇವಾದಿನಾ[4] ವಿಘ್ನಿತೋ ಬ್ರಹ್ಮವಿದಪಿ ಅನ್ಯಾಂ ಗತಿಂ ಮೃತೋ ಗಚ್ಛತಿ ನ ಬ್ರಹ್ಮೈವ । ನ । ವಿದ್ಯಯೈವ ಸರ್ವಪ್ರತಿಬನ್ಧಸ್ಯಾಪನೀತತ್ವಾತ್ । ಅವಿದ್ಯಾಪ್ರತಿಬನ್ಧಮಾತ್ರೋ ಹಿ ಮೋಕ್ಷೋ ನಾನ್ಯ ಪ್ರತಿಬನ್ಧಃ ನಿತ್ಯತ್ವಾತ್ ಆತ್ಮಭೂತತ್ವಾಚ್ಚ । ತಸ್ಮಾತ್ -

(ಭಾಷ್ಯಾರ್ಥ)

(ಆಕ್ಷೇಪ) ಒಳ್ಳೆಯದಕ್ಕೆ ಅನೇಕ ಅಡ್ಡಿಗಳಿರುವವೆಂಬುದು ಗೊತ್ತೇ ಇದೆ. ಆದ್ದರಿಂದ ಯಾವದಾದರೊಂದು **ಕ್ಲೇಶದಿಂದಲೋ**[5] ದೇವತೆ

1. 'ನಾಮರೂಪ' ಎಂಬುದು ಸಮಾಹಾರದ್ವಂದ್ವ. ನಾಮರೂಪವು ಅವಿದ್ಯೆಯಿಂದ ಆಗಿದೆ ಎಂದು ಇಲ್ಲಿ ಸ್ಪಷ್ಟವಾಗಿ ಹೇಳಿರುವದರಿಂದ ನಾಮರೂಪವೆಂಬುದೇ ಅವಿದ್ಯಾ ಶಕ್ತಿಯ ಹೆಸರು ಎಂದು ಹೇಳುವ ವ್ಯಾಖ್ಯಾನಕಾರರ ಮತವು ಭಾಷ್ಯಕ್ಕೆ ವಿರುದ್ಧವೆಂದು ಸ್ಫುಟವಾಗುತ್ತದೆ. ಪೀಠಿಕೆಯನ್ನು ನೋಡಿ.

2. ೨-೧-೨ರಲ್ಲಿ ಹೇಳುವ ಅವ್ಯಾಕೃತಕ್ಕಿಂತ.

3. ಅದೃಶ್ಯತ್ವಾದಿಗಳುಳ್ಳವನಾಗಿ ಸರ್ವಕಾರಣನಾಗಿ ಸರ್ವಾಧಾರನಾಗಿ ಸರ್ವಾತ್ಮನಾಗಿ ಸರ್ವರ ಹೃದಯದಲ್ಲಿರುವ ಪುರುಷನನ್ನು.

4. ''ದೇವಾದಿನಾ ಚ'' ಎಂಬ ಆ॥ ಪಾಠದಲ್ಲಿ ಚ ಹೆಚ್ಚು, ವಾ ಎಂದಾದರೂ ಇರಬೇಕು.

5. ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶ - ಎಂಬ ಕ್ಲೇಶಗಳು ಯೋ.ಸೂ. ೨-೩.

ಗಳೇ[1] ಮುಂತಾದ ಇನ್ನೂ ಯಾವದಾದರೊಂದರಿಂದಲೋ ಅಡ್ಡಿಯಾಗಿ ಬ್ರಹ್ಮ ಜ್ಞಾನಿಯೂ ಸತ್ತಮೇಲೆ ಮತ್ತೊಂದು ಗತಿಯನ್ನು ಪಡೆಯಬಹುದು; ಬ್ರಹ್ಮವನ್ನೇ (ಪಡೆಯಬೇಕೆಂಬುದೇನೂ) ಇಲ್ಲವಲ್ಲ !

(ಸಮಾಧಾನ) :- ಹಾಗಲ್ಲ, ಏಕೆಂದರೆ ಜ್ಞಾನದಿಂದಲೇ ಎಲ್ಲಾ ಅಡ್ಡಿಗಳೂ ಹೋಗಿಬಿಟ್ಟಿರುತ್ತವೆ.[2] **ಮೋಕ್ಷಕ್ಕೆ ಅವಿದ್ಯೆಯೊಂದೇ ಅಡ್ಡಿಯೇ ಹೊರತು ಮತ್ತೆ ಬೇರೆ (ಯಾವ) ಅಡ್ಡಿಗಳೂ ಇರುವದಿಲ್ಲ ; ಏಕೆಂದರೆ (ಅದು)ನಿತ್ಯವಾದದ್ದು ಮತ್ತು (ನಮ್ಮಗಳ) ಆತ್ಮನೇ ಆಗಿರುತ್ತದೆ.**[3] ಆದ್ದರಿಂದ :-

**ಸ ಯೋ ಹ ವೈ ತತ್ ಪರಮಂ ಬ್ರಹ್ಮ ವೇದ**
**ಬ್ರಹ್ಮೈವ ಭವತಿ ನಾಸ್ಯಾಬ್ರಹ್ಮವಿತ್ ಕುಲೇ ಭವತಿ ।**
**ತರತಿ ಶೋಕಂ ತರತಿ ಪಾಪ್ಮಾನಂ ಗುಹಾಗ್ರನ್ಥಿಭ್ಯೋ**
**ವಿಮುಕ್ತೋಽಮೃತೋ ಭವತಿ ॥೯॥**

೯. ಯಾವಾತನಾದರೆ ಆ ಪರಮಬ್ರಹ್ಮವನ್ನು ಅರಿತುಕೊಳ್ಳುವನೋ (ಅವನು) ಬ್ರಹ್ಮವೇ ಆಗುವನು. ಇವನ ಕುಲದಲ್ಲಿ ಬ್ರಹ್ಮವಿದನಲ್ಲದವನು ಹುಟ್ಟುವದಿಲ್ಲ. ಶೋಕವನ್ನು ದಾಟುವನು, ಪಾಪವನ್ನು ದಾಟುವನು, ಗುಹಾ ಗ್ರಂಥಿಗಳಿಂದ ಬಿಡುಗಡೆಹೊಂದಿ ಅಮೃತನಾಗುವನು.

**(ಭಾಷ್ಯ)**

೧೨೩. ಸಃ ಯಃ ಕಶ್ಚಿತ್ ಹ ವೈ ಲೋಕೇ ತತ್ ಪರಮಂ ಬ್ರಹ್ಮ ವೇದ ಸಾಕ್ಷಾತ್ ಅಹಮೇವಾಸ್ಮೀತಿ ಜಾನಾತಿ ಸ ನಾನ್ಯಾಂ ಗತಿಂ ಗಚ್ಛತಿ । ದೇವೈರಪಿ ತಸ್ಯ ಬ್ರಹ್ಮಪ್ರಾಪ್ತಿಂ ಪ್ರತಿ ವಿಘ್ನೋ ನ ಶಕ್ಯತೇ ಕರ್ತುಮ್ । ಆತ್ಮಾ ಹ್ಯೇಷಾಂ ಸ ಭವತಿ । ತಸ್ಮಾತ್ ಬ್ರಹ್ಮ ವಿದ್ವಾನ್ ಬ್ರಹ್ಮೈವ ಭವತಿ । ಕಿಂಚ ನಾಸ್ಯ ವಿದುಷಃ ಅಬ್ರಹ್ಮವಿತ್ ಕುಲೇ ಭವತಿ ।

---

1. ದೇವತೆಗಳಿಗೆ ಮನುಷ್ಯರು ಬ್ರಹ್ಮವನ್ನು ಅರಿತುಕೊಳ್ಳುವದು ಇಷ್ಟವಲ್ಲ ಎಂಬುದು ಶ್ರುತಿಪ್ರಸಿದ್ಧವಾಗಿದೆ. ಬೃ. ೧-೪-೧೦.

2. ಅಡ್ಡಿಗಳೆಲ್ಲವೂ ಅಜ್ಞಾನಕಲ್ಪಿತವೇ ಆಗಿರುವದರಿಂದ ಅದ್ವಿತೀಯಾತ್ಮಜ್ಞಾನ ದಿಂದಲೇ ಅವುಗಳು ಆತ್ಮನಿಗಿಂತ ಬೇರೆಯಾಗಿಲ್ಲವೆಂದಾಗಿಬಿಟ್ಟಿರುತ್ತದೆ.

3. ನಮ್ಮ ಆತ್ಮನು ನಿತ್ಯಮುಕ್ತನು. ಮೋಕ್ಷವೆಂಬುದು ಅವನ ಸ್ವರೂಪಕ್ಕಿಂತ ಬೇರೆಯಲ್ಲ. ಸೂ.ಭಾ. ३-४-೫೨. ಅಶರೀರತ್ವವೆಂಬ ಮೋಕ್ಷವು ಸ್ವಭಾವದಿಂದಲೇ ಇದ್ದುಕೊಂಡಿರುತ್ತದೆ. ತಪ್ಪುತಿಳಿವಳಿಕೆಯಿಂದ ಸಶರೀರತ್ವವು ತೋರುತ್ತದೆ. ಸೂ.ಭಾ. ೧-೧-೪ನ್ನು ನೋಡಿ.

ಕಿಂಚ ತರತಿ ಶೋಕಂ ಅನೇಕೇಷ್ಟವೈಕಲ್ಯನಿಮಿತ್ತಂ ಮಾನಸಂ ಸನ್ತಾಪಂ ಜೀವನ್ನೇವ ಅತಿಕ್ರಾನ್ತೋ ಭವತಿ । ತರತಿ ಪಾಪ್ಮಾನಂ ಧರ್ಮಾಧರ್ಮಾಖ್ಯಮ್ । ಗುಹಾಗ್ರನ್ಥಿಭ್ಯಃ ಹೃದಯಾವಿದ್ಯಾಗ್ರನ್ಥಿಭ್ಯಃ ವಿಮುಕ್ತಃ ಸನ್ ಅಮೃತೋ ಭವತಿ ಇತಿ ಉಕ್ತಮೇವ 'ಭಿದ್ಯತೇ ಹೃದಯಗ್ರನ್ಥಿಃ' (೨-೨-೮) ಇತ್ಯಾದಿ ॥

## (ಭಾಷ್ಯಾರ್ಥ)

**ಯಾವನೇ ಆಗಲಿ ಲೋಕದಲ್ಲಿ ಆ ಪರಬ್ರಹ್ಮವನ್ನು "ಅದೇ ನಾನಾಗಿರುವೆನು" ಎಂದು ನೇರಾಗಿ ಅರಿತುಕೊಳ್ಳುವನೋ ಅವನು (ಮತ್ತೆ ಯಾವ) ಬೇರೆಯ ಗತಿಯನ್ನೂ ಹೊಂದುವದಿಲ್ಲ. "ಅವನು ಬ್ರಹ್ಮವನ್ನು ಪಡೆಯದಂತೆ ಅಡ್ಡಿಮಾಡುವದು ದೇವತೆಗಳಿಂದಲೂ ಆಗಲಾರದು ; ಏಕೆಂದರೆ ಆ (ಬ್ರಹ್ಮಜ್ಞಾನಿಯು) ಇವರ ಆತ್ಮನೇ ಆಗಿರುತ್ತಾನೆ".**[1] ಆದ್ದರಿಂದ ಬ್ರಹ್ಮವನ್ನು ಅರಿತುಕೊಂಡವನು ಬ್ರಹ್ಮವೇ ಆಗುವನು. ಮತ್ತು ಈ ಜ್ಞಾನಿಯ ಕುಲದಲ್ಲಿ ಬ್ರಹ್ಮವನ್ನು ಅರಿಯದವನು ಹುಟ್ಟುವದಿಲ್ಲ.[2] ಇದಲ್ಲದೆ (ಇವನು) ಶೋಕವನ್ನು ದಾಟುವನು. ತನಗೆ ಬೇಕಾಗಿರುವ ಅನೇಕ (ವಸ್ತುಗಳು) ಇಲ್ಲವೆಂಬ ಕಾರಣದಿಂದಾದ ಮನಸ್ಸಿನ ಬೇನೆಯನ್ನು ಬದುಕಿರುವಾಗಲೇ ದಾಟುವವನಾಗುವನು.[3] ಧರ್ಮ, ಅಧರ್ಮ ಎಂಬ ಪಾಪವನ್ನು[4] ದಾಟುವನು. **ಗುಹಾಗ್ರಂಥಿಗಳಿಂದ** ಎಂದರೆ **ಹೃದಯದಲ್ಲಿ ಅವಿದ್ಯೆಯಿಂದಾಗಿರುವ ಗಂಟುಗಳಿಂದ ಬಿಡುಗಡೆಹೊಂದಿ ಅಮೃತನಾಗುವನು** ಎಂಬಿದು "ಭಿದ್ಯತೇ ಹೃದಯಗ್ರನ್ಥಿಃ" (೨-೨-೮) ಎಂದು ಮುಂತಾಗಿರುವ (ಮಂತ್ರ ವಾಕ್ಯದಲ್ಲಿ) ಹೇಳಿದ್ದೇ.[5]

1. ಬೃ. ೧-೪-೧೦ರಲ್ಲಿರುವ "ತಸ್ಯ ಹ ನ ದೇವಾಶ್ಚ" ಎಂಬ ವಾಕ್ಯದ ಅರ್ಥದ ಸೂಚನೆ.

2. ಬ್ರಹ್ಮವಿಚಾರವನ್ನು ಮಾಡುವವರೇ ಜ್ಞಾನಿಯ ಕುಲದಲ್ಲಿ ಹುಟ್ಟುವರೆಂಬುದು ಜ್ಞಾನದ ಸ್ತುತಿ. ಜ್ಞಾನಿಗಳ ವಂಶದಲ್ಲಿ ಯೋಗಭ್ರಷ್ಟರಾದವರು ಹುಟ್ಟುವರೆಂಬ ಗೀತಾವಾಕ್ಯ (೬-೪೨)ವನ್ನು ನೋಡಿ.

3. ಬ್ರಹ್ಮವೇ ತಾನೆಂದು ತಿಳಿದಿರುವದರಿಂದ ಎಲ್ಲಾ ಕಾಮಗಳೂ ಅವನಿಗೆ ಪ್ರಾಪ್ತವಾಗಿರುವವು ; ಆದ್ದರಿಂದ ಅವನಿಗೆ ಶೋಕವಿರುವದಿಲ್ಲ. ಛಾಂ. ೭-೧-೩.

4. ಶ್ರುತಿಯಲ್ಲಿ ಪುಣ್ಯವನ್ನೂ ಪಾಪವೆಂದು ಕರೆದಿದೆ. ಏಕೆಂದರೆ ಜ್ಞಾನಕ್ಕೆ ಪಾಪದಂತೆ ಪುಣ್ಯವೂ ಅಡ್ಡಿಯಾಗಿರುತ್ತದೆ. ಸೂ.ಭಾ. ೪-೧-೧೪ ; ಛಾಂ. ಭಾ. ೮-೪-೧.

5. ಜ್ಞಾನದ ಫಲವೆಂದರೆ ಅವಿದ್ಯಾಕಾಮಕರ್ಮಗಳ ನಾಶವೇ ಎಂಬುದನ್ನು ಹಿಂದೆಯೇ ಹೇಳಿದ್ದನ್ನು ಇಲ್ಲಿ ಉಪಸಂಹಾರಕ್ಕಾಗಿ ಹೇಳಿರುತ್ತದೆ.

## ಉಪಸಂಹಾರ

(ಭಾಷ್ಯ)

೧೨೪. ಅಥೇದಾನೀಂ ಬ್ರಹ್ಮವಿದ್ಯಾಸಂಪ್ರದಾನವಿಧ್ಯುಪಪ್ರದರ್ಶನೇನ ಉಪಸಂಹಾರಃ ಕ್ರಿಯತೇ -

(ಭಾಷ್ಯಾರ್ಥ)

ಇನ್ನು ಈಗ ಬ್ರಹ್ಮವಿದ್ಯೆಯನ್ನು ಉಪದೇಶಮಾಡುವ ಕ್ರಮವನ್ನು ತಿಳಿಸಿಕೊಟ್ಟು (ಎಲ್ಲವನ್ನೂ) ಉಪಸಂಹಾರಮಾಡಲಾಗುತ್ತದೆ :-

**ತದೇತದೃಚಾಭ್ಯುಕ್ತಮ್-**
**ಕ್ರಿಯಾವನ್ತಃ ಶ್ರೋತ್ರಿಯಾ ಬ್ರಹ್ಮನಿಷ್ಠಾಃ**
**ಸ್ವಯಂ ಜುಹ್ವತ ಏಕರ್ಷಿಂ ಶ್ರದ್ಧಯನ್ತಃ ।**
**ತೇಷಾಮೇವೈತಾಂ ಬ್ರಹ್ಮವಿದ್ಯಾಂ ವದೇತ**
**ಶಿರೋವ್ರತಂ ವಿಧಿವದ್ ಯೈಸ್ತು ಚೀರ್ಣಮ್ ॥೧೦॥**

೧೦. ಇದು ಋಕ್ಕಿನಿಂದ ಅಭ್ಯುಕ್ತವಾಗಿರುತ್ತದೆ ಕ್ರಿಯಾವಂತರೂ ಶ್ರೋತ್ರಿಯರೂ ಬ್ರಹ್ಮನಿಷ್ಠರೂ ತಾವು ಏಕರ್ಷಿಯನ್ನು ಹೋಮಮಾಡುತ್ತಾ ಶ್ರದ್ಧೆಯುಳ್ಳವರು (ಯಾರೋ), ಯಾರಿಂದಲಾದರೆ ಶಿರೋವ್ರತವು ವಿಧಿವತ್ತಾಗಿ ಆಚರಿಸಲ್ಪಟ್ಟಿರುವದೋ ಅವರಿಗೇ ಈ ಬ್ರಹ್ಮವಿದ್ಯೆಯನ್ನು ಹೇಳಬೇಕು.

(ಭಾಷ್ಯ)

೧೨೫. ತದೇತತ್ ವಿದ್ಯಾಸಂಪ್ರದಾನವಿಧಾನಮ್ ಋಚಾ ಮನ್ತ್ರೇಣ ಅಭ್ಯುಕ್ತಮ್ ಅಭಿಪ್ರಕಾಶಿತಮ್ । ಕ್ರಿಯಾವನ್ತಃ ಯಥೋಕ್ತಕರ್ಮಾನುಷ್ಠಾನಯುಕ್ತಾಃ ಶ್ರೋತ್ರಿಯಾಃ ಬ್ರಹ್ಮನಿಷ್ಠಾಃ ಅಪರಸ್ಮಿನ್ ಬ್ರಹ್ಮಣಿ ಅಭಿಯುಕ್ತಾಃ ಪರಂ[1] ಬ್ರಹ್ಮ ಬುಭುತ್ಸವಃ ಸ್ವಯಮ್ ಏಕರ್ಷಿಂ ಏಕರ್ಷಿನಾಮಾನಮ್ ಅಗ್ನಿಂ ಜುಹ್ವತೇ ಜುಹ್ವತಿ ಶ್ರದ್ಧಯನ್ತಃ ಶ್ರದ್ಧಧಾನಾಃ ಸನ್ತಃ ಯೇ ತೇಷಾಮೇವ ಸಂಸ್ಕೃತಾತ್ಮನಾಂ ಪಾತ್ರಭೂತಾನಾಂ ಏತಾಂ ಬ್ರಹ್ಮವಿದ್ಯಾಂ ವದೇತ ಬ್ರೂಯಾತ್ ಶಿರೋವ್ರತಂ ಶಿರಸಿ ಅಗ್ನಿಧಾರಣಲಕ್ಷಣಮ್ ಯಥಾ ಅಥರ್ವಣಾನಾಂ ವೇದವ್ರತಂ ಪ್ರಸಿದ್ಧಮ್ । ಯೈಸ್ತು ಯೈಶ್ಚ ತತ್ ಚೀರ್ಣಂ ವಿಧಿವತ್ ಯಥಾವಿಧಾನಂ ತೇಷಾಮೇವ ಚ[2] ವದೇತ[3] ॥

1. "ಪರಬ್ರಹ್ಮ" ಎಂದು ಆ॥ ಪಾಠ. 2. "ತೇಷಾಮೇವ" ಎಂದು ವಾ॥ ಪಾಠ.
3. "ವದೇತ" ಎಂಬುದು ಆ॥ ಪಾಠದಲ್ಲಿಲ್ಲ.

(ಭಾಷ್ಯಾರ್ಥ)

ಆ ಇದು ಎಂದರೆ ವಿದ್ಯೆಯನ್ನು ಉಪದೇಶಮಾಡುವ ರೀತಿಯು[1] ಋಕ್ಕಿನಿಂದ ಎಂದರೆ ಮಂತ್ರದಿಂದ ಅಭ್ಯುಕ್ತವಾಗಿರುತ್ತದೆ ಅಭಿ(ಪ್ರಾಯಪೂರ್ವಕವಾಗಿ) ತಿಳಿಸಲ್ಪಟ್ಟಿರುತ್ತದೆ. ಕ್ರಿಯಾವಂತರು ಎಂದರೆ (ಶಾಸ್ತ್ರದಲ್ಲಿ) ಹೇಳಿರುವಂತೆ ಕರ್ಮವನ್ನು ಮಾಡುವ (ಸ್ವಭಾವ)ವುಳ್ಳವರಾದವರು, (ಮತ್ತು) ಶ್ರೋತ್ರಿಯರೂ ಬ್ರಹ್ಮನಿಷ್ಠರೂ ಎಂದರೆ ಅಪರಬ್ರಹ್ಮದಲ್ಲಿ ಮನಸ್ಸಿಟ್ಟವರೂ ಪರಬ್ರಹ್ಮವನ್ನು ತಿಳಿಯುವ ಇಚ್ಛೆಯುಳ್ಳವರೂ[2] ಮತ್ತು ತಾವು ಏಕರ್ಷಿಯನ್ನು ಎಂದರೆ **ಏಕರ್ಷಿ** ಎಂಬ **ಅಗ್ನಿಯನ್ನು**[3] ಶ್ರದ್ಧಯನ್ತಃ ಶ್ರದ್ಧಧಾನಾಃ ಸನ್ತಃ ಶ್ರದ್ಧೆಯುಳ್ಳವರಾಗಿ ಯಾರು ಹೋಮಮಾಡುತ್ತಿರುವರೋ ಅವರಿಗೇ[4] ಸಂಸ್ಕಾರವನ್ನು ಹೊಂದಿರುವ ಅಂತಃಕರಣವುಳ್ಳ[5] ಯೋಗ್ಯರಾಗಿರುವ (ಅವರಿಗೇ) ಈ ಬ್ರಹ್ಮವಿದ್ಯೆಯನ್ನು ಹೇಳಬೇಕು, ತಿಳಿಸಬೇಕು. ಮತ್ತು **ಶಿರೋವ್ರತವು** ಎಂದರೆ ಅಥರ್ವಣಶಾಖೆಯವರಿಗೆ **ವೇದವ್ರತವು** ಹೇಗೆ ಪ್ರಸಿದ್ಧವಾಗಿರುವದೋ ಹಾಗೆ ಶಿರಸ್ಸಿನಲ್ಲಿ ಅಗ್ನಿಯನ್ನು ಧರಿಸುವದೆಂಬ (ವ್ರತವು ವೇದವ್ರತವು) ; ಅದನ್ನು ಯಾರಿಂದ ವಿಧಿವತ್ತಾಗಿ ವಿಧಿಸಿರುವದಕ್ಕೆ ಅನುಗುಣವಾಗಿ ಆಚರಿಸಲ್ಪಟ್ಟಿರುವದೋ ಅವರಿಗೇ ಹೇಳಬೇಕು.

**ತದೇತತ್ ಸತ್ಯಮೃಷಿರಙ್ಗಿರಾಃ**
**ಪುರೋವಾಚ ನೈತದಚೀರ್ಣವ್ರತೋಽಧೀತೇ ।**
**ನಮಃ ಪರಮಋಷಿಭ್ಯೋ**
**ನಮಃ ಪರಮಋಷಿಭ್ಯಃ** ॥೧೧॥

---

1. "ಏತತ್" (ಇದು) ಎಂಬುದು ಹಿಂದಿನ ಮುಕ್ತಿವಿಷಯವಲ್ಲ ; ಬುದ್ಧಿಸ್ಥವಾದ ವಿದ್ಯಾಸಂಪ್ರದಾನವಿಚಾರವನ್ನು ತಿಳಿಸುವದು.

2. ಪ್ರ. ಭಾ. ೧-೧ನ್ನು ನೋಡಿರಿ.

3. ಅಥರ್ವವೇದದಲ್ಲಿ ಹೇಳಿರುವ ಅಗ್ನಿಯ ಹೆಸರಿದು.

4. ಯಾರು ಕರ್ಮದಿಂದ ಚಿತ್ತಶುದ್ಧಿಯನ್ನು ಹೊಂದಿ ಅಪರಬ್ರಹ್ಮದ ಉಪಾಸನೆಯಿಂದ ಚಿತ್ತೈಕಾಗ್ರ್ಯವನ್ನು ಸಂಪಾದಿಸಿಕೊಂಡಿರುವರೋ ಅಂಥ ಈ ಬ್ರಹ್ಮವಿದ್ಯೆಯನ್ನು ಹೇಳಬೇಕು.

5. ವೇದೋಕ್ತಕರ್ಮದಿಂದ ಚಿತ್ತಸಂಸ್ಕಾರವನ್ನು ಹೊಂದಿರುವವರಿಗೇ ಬೋಧಿಸಬೇಕು. ಕರ್ಮಗಳಿಂದ ಈ ಸಂಸ್ಕಾರವಾಗುವದೆಂಬುದನ್ನು "ಕ್ರಿಯಾವನ್ತಃ" ಎಂಬ ವಿಶೇಷಣವು ತಿಳಿಸುತ್ತದೆ ಎಂದು ಭಾವ.

೧೧. ಆ ಈ ಸತ್ಯವನ್ನು ಅಂಗಿರಸ್ಸು ಎಂಬ ಋಷಿಯು ಪೂರ್ವದಲ್ಲಿ ಹೇಳಿದನು. ಇದನ್ನು ವ್ರತವನ್ನು ಆಚರಿಸದೆ ಇರುವವನು ಅಧ್ಯಯನಮಾಡ ತಕ್ಕದ್ದಲ್ಲ. ಪರಮಋಷಿಗಳಿಗೆ ನಮಸ್ಕಾರ ! ಪರಮಋಷಿಗಳಿಗೆ ನಮಸ್ಕಾರ !

(ಭಾಷ್ಯ)

೧೨೬. ತದೇತತ್ ಅಕ್ಷರಂ ಪುರುಷಂ ಸತ್ಯಮ್ ಋಷಿಃ ಅಙ್ಗಿರಾಃ ನಾಮ ಪುರಾ ಪೂರ್ವಂ ಶೌನಕಾಯ ವಿಧಿವತ್ ಉಪಸನ್ನಾಯ ಪೃಷ್ಟವತೇ ಉವಾಚ । ತದ್ವತ್ ಅನ್ಯೋಽಪಿ ತಥೈವ ಶ್ರೇಯೋಽರ್ಥಿನೇ ಮುಮುಕ್ಷವೇ ಮೋಕ್ಷಾರ್ಥಂ ವಿಧಿವತ್ ಉಪಸನ್ನಾಯ ಬ್ರೂಯಾತ್ ಇತ್ಯರ್ಥಃ । ನೈತತ್ ಗ್ರನ್ಥರೂಪಮ್ ಅಚೀರ್ಣವ್ರತಃ ಅಚರಿತವ್ರತೋಽಪಿ ಅಧೀತೇ ನ ಪಠತಿ । ಚೀರ್ಣವ್ರತಸ್ಯಹಿ ವಿದ್ಯಾ ಫಲಾಯ ಸಂಸ್ಕೃತಾ ಭವತಿ ಇತಿ । ಸಮಾಪ್ತಾ ಬ್ರಹ್ಮವಿದ್ಯಾ । ಸಾ ಯೇಭ್ಯೋ ಬ್ರಹ್ಮಾದಿಭ್ಯಃ ಪಾರಮ್ಪರ್ಯಕ್ರಮೇಣ ಸಂಪ್ರಾಪ್ತಾ ತೇಭ್ಯೋ ನಮಃ ಪರಮ ಋಷಿಭ್ಯಃ । ಪರಮಂ ಬ್ರಹ್ಮ ಸಾಕ್ಷಾತ್ ದೃಷ್ಟವನ್ತೋ ಯೇ ಬ್ರಹ್ಮಾದಯಃ ಅವಗತವನ್ತಃ[1] ತೇ ಪರಮರ್ಷಯಃ । ತೇಭ್ಯೋ ಭೂಯೋಽಪಿ ನಮಃ । ದ್ವಿರ್ವಚನಮ್ ಅತ್ಯಾದರಾರ್ಥಮ್ । ಮುಣ್ಡಕಸಮಾಪ್ತ್ಯರ್ಥಂ ಚ ॥

(ಭಾಷ್ಯಾರ್ಥ)

ಆ ಈ ಅಕ್ಷರನೆಂಬ ಪುರುಷನಾದ ಸತ್ಯವನ್ನು ಅಂಗಿರಸ್ಸು ಎಂಬ ಋಷಿಯು ಪುರಾ ಎಂದರೆ ಪೂರ್ವದಲ್ಲಿ ವಿಧಿವತ್ತಾಗಿ ಬಳಿಸಾರಿ ಕೇಳಿದ[2] ಶೌನಕನಿಗೆ ಹೇಳಿದನು. ಇದರಂತೆ ಮಿಕ್ಕವರೂ ಹಾಗೆಯೇ ಶ್ರೇಯಸ್ಸನ್ನು ಬಯಸಿ ಮುಮುಕ್ಷುವಾಗಿ ಮೋಕ್ಷಕ್ಕಾಗಿ ವಿಧಿಪೂರ್ವಕವಾಗಿ (ತಮ್ಮನ್ನು) ಬಳಿಸಾರಿದ (ಶಿಷ್ಯನಿಗೆ) ಹೇಳಬೇಕು ಎಂದರ್ಥ.[3] ಈ ಗ್ರಂಥರೂಪವಾದ (ಉಪನಿಷತ್ತನ್ನು) ಅಚೀರ್ಣವ್ರತನು ಎಂದರೆ ವ್ರತವನ್ನು ಆಚರಿಸದೆ ಇರುವವನೂ ಅಧ್ಯಯನಮಾಡಬಾರದು, ಓದಬಾರದು.

1. "ಅವಗತವನ್ತಶ್ಚ" ಎಂಬ ಆ॥ ಪಾಠದಲ್ಲಿ ಚಕಾರವು ಹೆಚ್ಚು.

2. ಶಿಷ್ಯನಾಗಿ ಬಂದು ಗುರುಶುಶ್ರೂಷೆಯನ್ನು ಮಾಡಿದವನಿಗೇ ಹೇಳಬೇಕು ; ಕೇಳದವನಿಗೆ ಅಥವಾ ನ್ಯಾಯವನ್ನು ಮೀರಿ ಕೇಳುವವನಿಗೆ ಹೇಳಬಾರದು. ಗೀ.ಭಾ. ೪-೩೪ ; ೧೮-೬೭.

3. ಅಂಗಿರಸ್ಸು ಹೇಳಿದನು ಎಂದಿರುವದು ಗುರುವಾದವನು ಶಿಷ್ಯರಿಗೆ ಅವಶ್ಯವಾಗಿ ಹೇಳಬೇಕು ಎಂದು ತಿಳಿಸುವದಕ್ಕೆ.

ಏಕೆಂದರೆ ವ್ರತವನ್ನು ಆಚರಿಸಿದ ವ್ರತವುಳ್ಳವನಿಗೆ ವಿದ್ಯೆಯು ಸಂಸ್ಕಾರವನ್ನು ಹೊಂದಿ ಫಲವುಳ್ಳದ್ದಾಗುತ್ತದೆ.[1]

ಬ್ರಹ್ಮವಿದ್ಯೆಯು (ಇಲ್ಲಿಗೆ) ಮುಗಿಯಿತು. ಅದು ಯಾವ ಬ್ರಹ್ಮಾದಿಗಳಿಂದ ಪರಂಪರೆಯ ಕ್ರಮದಿಂದ ಸಿಕ್ಕಿರುವದೋ ಆ ಪರಮಋಷಿಗಳಿಗೆ ನಮಸ್ಕಾರ ! **ಪರಮವನ್ನು ಎಂದರೆ ಬ್ರಹ್ಮವನ್ನು ಯಾರು (ಯಾವ) ಬ್ರಹ್ಮಾದಿಗಳು ನೇರಾಗಿ ಕಂಡುಕೊಂಡರೋ ಅರಿತುಕೊಂಡರೋ ಅವರು ಪರಮಋಷಿಗಳು.**[2] ಅವರಿಗೆ ಮತ್ತೊ (ಒಂದುಸಲ) ನಮಸ್ಕಾರ ! ಎರಡು ಸಲ (''ನಮಃ ಪರಮಋಷಿಭ್ಯಃ'' ಎಂದು) ಹೇಳಿರುವದು ಅತ್ಯಂತ ಆದರವನ್ನು (ಸೂಚಿಸುವದ)ಕ್ಕೆ ಮತ್ತು (ಈ) ಮುಂಡಕವು ಮುಗಿಯಿತೆಂದು (ತಿಳಿಸುವದ)ಕ್ಕೆ.

**|| ಇತಿ ಮುಣ್ಡಕೋಪನಿಷದ್ಭಾಷ್ಯಂ ಸಂಪೂರ್ಣಮ್ ||**

---

1. ವೇದಾಧ್ಯಯನವು ಸಂಸ್ಕಾರವುಳ್ಳದ್ದಾಗಿ ಆತ್ಮವಿದ್ಯೆಯೆಂಬ ಫಲವನ್ನು ಕೊಡುತ್ತದೆ ; ಅಥವಾ ವಿಧಿವತ್ತಾಗಿ ಅಧ್ಯಯನಮಾಡಿ ವೇದವಾಕ್ಯವಿಚಾರದಿಂದ ಪಡೆದುಕೊಂಡ ವಿದ್ಯೆಯು ಫಲಪರ್ಯಂತವಾಗುತ್ತದೆ ಎಂದರ್ಥ.

2. ಋಷಿ ಎಂಬ ಶಬ್ದಕ್ಕೆ ತತ್ತ್ವವನ್ನು ಅರಿತವರು ಎಂದು ಅರ್ಥ. ಪರಮಋಷಿ ಎಂದರೆ ಪರತತ್ತ್ವವಾದ ಬ್ರಹ್ಮವನ್ನು ಕಂಡುಕೊಂಡವರು ಎಂದರ್ಥ.

# ಉಪನಿಷತ್ತಿನ ಸಾರ

## ಒಂದನೆಯ ಮುಂಡಕ - ಒಂದನೆಯ ಖಂಡ

೧-೨. ಬ್ರಹ್ಮವಿದ್ಯೆಯ ಸಂಪ್ರದಾಯಕರ್ತರಲ್ಲಿ ಮೊದಲನೆಯವನು ದೇವತೆಗಳೆಲ್ಲರಲ್ಲಿ ಹಿರಿಯವನಾದ **ಹಿರಣ್ಯಗರ್ಭನು**. ಆ ಹಿರಣ್ಯಗರ್ಭಬ್ರಹ್ಮನಿಂದ **ಅಥರ್ವನು**, ಅಥರ್ವನಿಂದ **ಅಂಗಿರನು**, ಅವನಿಂದ **ಭಾರದ್ವಾಜಸತ್ಯವಹನು**, ಅವನಿಂದ **ಅಂಗಿರಸ್ಸು**. ಹೀಗೆ ವಿದ್ಯೆಯು ಗುರುಶಿಷ್ಯಪರಂಪರೆಯಿಂದ ಒಬ್ಬರಿಂದೊಬ್ಬರಿಗೆ ಬಂದಿತು.

೩. **ಶೌನಕನೆಂಬ** ಮಹಾಗೃಹಸ್ಥನೊಬ್ಬನು ಈ **ಅಂಗಿರಸ್ಸಿನ** ಬಳಿಗೆ ಶಿಷ್ಯನಾಗಿ ಬಂದು ''ಪೂಜ್ಯನೆ, ಯಾವದೊಂದನ್ನು ತಿಳಿದರೆ ಇದೆಲ್ಲವನ್ನೂ ತಿಳಿದಂತೆ ಆಗುವದು ?'' ಎಂದು ಕೇಳಿದನು.

೪-೯. ಆಗ ಅಂಗಿರಸ್ಸು ಹೇಳಿದ್ದು ಏನೆಂದರೆ : ಋಗ್ವೇದವೇ ಮುಂತಾದ ಶಬ್ದರಾಶಿಯನ್ನು ಅಧ್ಯಯನಮಾಡಿ ಕರ್ಮೋಪಾಸನೆಗಳನ್ನು ಮಾಡುವ ತಿಳಿವಳಿಕೆಯು **ಅಪರವಿದ್ಯೆ**, ಕಡಿಮೆಯ ವಿದ್ಯೆಯು. ಆದರೆ ನಾಶವಿಲ್ಲದ ಬ್ರಹ್ಮವನ್ನು ತಿಳಿಯುವ ವಿದ್ಯೆಯು **ಪರವಿದ್ಯೆ**, ಹೆಚ್ಚಿನ ವಿದ್ಯೆ. ಬ್ರಹ್ಮವು ಅಕ್ಷರವು, ನಾಶವಿಲ್ಲದ್ದು, ಸರ್ವವ್ಯಾಪಿ, ಸೂಕ್ಷ್ಮವಾದದ್ದು, ಎಂದಿಗೂ ಸವೆಯುವದಲ್ಲ. ಅದು ಸಮಸ್ತಭೂತಗಳಿಗೂ ಕಾರಣವಾದ ಸರ್ವಜ್ಞಸ್ವರೂಪವು. ಜೇಡರಹುಳು ದಾರವನ್ನು ತಾನೇ ಮಾಡಿಕೊಂಡು ತನ್ನಲ್ಲಿಯೇ ಒಳಕೊಳ್ಳುವಂತೆಯೂ, ಭೂಮಿಯು ಸ್ಥಾವರಗಳಿಗೆ ಜನ್ಮಾದಿಸ್ಥಾನವಾಗಿರುವಂತೆಯೂ ಮನುಷ್ಯನ ಶರೀರವು ವಿಲಕ್ಷಣವಾದ ಕೂದಲು ಮುಂತಾದವುಗಳಿಗೆ ಕಾರಣವಾಗಿರುವಂತೆಯೂ ವಿಚಿತ್ರರೂಪದಿಂದಿರುವ ಪ್ರಪಂಚಕ್ಕೆ ಈ ಬ್ರಹ್ಮವು ಕಾರಣವಾಗಿರುವದು. ಅವ್ಯಾಕೃತವು ಹೊರಹೊಮ್ಮುವದಕ್ಕೂ ಪ್ರಾಣ, ಮನಸ್ಸು, ಕರ್ಮ, ಲೋಕ - ಇವುಗಳೆಲ್ಲಕ್ಕೂ ಬ್ರಹ್ಮವೇ ಕಾರಣವು. ಇದನ್ನು ತಿಳಿದುಕೊಂಡರೆ ಎಲ್ಲವನ್ನೂ ಅರಿತಂತೆ ಆಗುವದು.

## ಒಂದನೆಯ ಮುಂಡಕ - ಎರಡನೆಯ ಖಂಡ

೧-೧೦. ಅಪರವಿದ್ಯೆಗೆ ಸಂಸಾರವೇ ಗತಿ. ಕರ್ಮವು ಅವಶ್ಯವಾಗಿ ತನ್ನ ಫಲವನ್ನು ಕೊಡುತ್ತದೆಯಾದರೂ ಅದನ್ನು ವಿಧಿವತ್ತಾಗಿ ಮಾಡುವದು ಬಲುಕಷ್ಟ. ನಿತ್ಯವೂ ಕಾಲಕ್ಕೆ ಸರಿಯಾಗಿ ಶಾಸ್ತ್ರದಲ್ಲಿ ಹೇಳಿರುವಂತೆ ಅಗ್ನಿಹೋತ್ರಾದಿಕರ್ಮಗಳನ್ನು ಮಾಡಿದರೆ ಸ್ವರ್ಗವನ್ನು ಪಡೆಯಬಹುದು. ಆದರೆ ಇದೇ ಕೊನೆಯ ಶ್ರೇಯಸ್ಸೆಂದು ನಂಬುವವರು ಮೂಢರು ; ಅವರು ತಮಗೆ ತತ್ತ್ವವು ತಿಳಿಯದೆ ಇದ್ದರೂ ತಾವೇ ತಿಳಿದವರೆಂದುಕೊಂಡು ಇದಕ್ಕಿಂತ ಹೆಚ್ಚಿನ ಶ್ರೇಯಸ್ಸಿಲ್ಲ ಎಂದು ಇತರರಿಗೂ ಬೋಧಿಸುತ್ತಾ ಕುರುಡರಿಗೆ ದಾರಿಯನ್ನು ತೋರಿಸುವದಕ್ಕೆ ಹೊರಟಿರುವ ಕುರುಡರಂತೆ ಉಪಹಾಸ್ಯರಾಗಿರುತ್ತಾರೆ. ಏಕೆಂದರೆ ಅವರು ಮಾಡಿದ ಕರ್ಮವು ಸರಿಯಾಗಿ ಮಾಡದೆ ಇರುವಾಗ ಫಲವನ್ನೇ ಕೊಡುವದಿಲ್ಲ ; ಸರಿಯಾಗಿ ಮಾಡಿದರೆ ಸ್ವರ್ಗದಲ್ಲಿ ಪುಣ್ಯಫಲವನ್ನು ಅನುಭವಿಸಿದ ಬಳಿಕ ಈ ಮನುಷ್ಯಜನ್ಮವನ್ನೋ ಅಥವಾ ಇದಕ್ಕಿಂತ ಕೀಳಾದ

ಮೃಗಜಂತುಗಳೇ ಮುಂತಾದವುಗಳ ಜನ್ಮವನ್ನೋ ಉಳಿದಿರುವ ಕರ್ಮಕ್ಕೆ ತಕ್ಕಂತೆ ಪಡೆಯ ಬೇಕಾಗುತ್ತದೆ.

೧೧. ಕೆಲವರು ವಾನಪ್ರಸ್ಥಾಶ್ರಮವನ್ನೂ ಸಂನ್ಯಾಸಾಶ್ರಮವನ್ನೂ ಹೊಂದಿ ತಮ್ಮ ಆಶ್ರಮದ ಕರ್ಮಗಳನ್ನೂ ಹಿರಣ್ಯಗರ್ಭನೇ ಮುಂತಾದ ವಿಷಯದ ಉಪಾಸನೆಯನ್ನೂ ಮಾಡುವರು. ಇವರಿಗೆ ಕೇವಲ ಕರ್ಮಿಗಳಿಗಿಂತ ಹೆಚ್ಚಿನ ಫಲವು ಸಿಕ್ಕುವದು ನಿಜ. ಹಿರಣ್ಯಗರ್ಭನ ಉಪಾಸನೆಯಿಂದ ಸಿಕ್ಕುವ ಬ್ರಹ್ಮಲೋಕವು ಬಹುಕಾಲದವರೆಗೂ ಇರುವದೂ ನಿಜ. ಆದರೆ ಇದೆಲ್ಲವೂ ಸಂಸಾರಗತಿಯಲ್ಲಿಯೇ ಸೇರಿರುತ್ತದೆ.

೧೨-೧೩. ಯಾವನು ಈ ಕರ್ಮೋಪಾಸನೆಗಳಿಂದ ಸಿಕ್ಕುವ ಲೋಕಗಳು ಯಾವವೂ ನಿತ್ಯವಲ್ಲವೆಂಬುದನ್ನು ಮನಗಂಡು ವಿರಕ್ತನಾಗಿರುವನೋ ಅವನು ನಿತ್ಯವಾದ ಮೋಕ್ಷದ ವಿಚಾರಕ್ಕಾಗಿ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆಗಿರುವ ಗುರುವನ್ನೇ ಶಿಷ್ಯನಾಗಿ ಬಳಿಸಾರುವನು. ಆ ಗುರುವು ಯೋಗ್ಯನಾದ ಈ ಶಿಷ್ಯನಿಗೆ ಮೇಲೆ ಹೇಳಿದ ಅಕ್ಷರವೆಂಬ ಪರಮಾರ್ಥ ಸತ್ಯವನ್ನು ಸರಿಯಾಗಿ ತಿಳಿಸುವ ಬ್ರಹ್ಮವಿದ್ಯೆ ಎಂಬ ಪರವಿದ್ಯೆಯನ್ನು ಉಪದೇಶಿಸುವನು.

## ಎರಡನೆಯ ಮುಂಡಕ - ಒಂದನೆಯ ಖಂಡ

೧-೬. ಪರವಿದ್ಯೆಯ ವಿಷಯವಾದ ಅಕ್ಷರವೆಂಬುದು ಪರಮಾರ್ಥವಾಗಿ ಸತ್ಯವಾಗಿರುತ್ತದೆ. ಚೇತನರೂಪರಾದ ಎಲ್ಲಾ ಜೀವರೂ ಬೆಂಕಿಯಿಂದ ಹೊರಡುವ ಕಿಡಿಗಳಂತೆ ಇದರಿಂದಲೇ ಬಂದಿರುವರು. ಎಲ್ಲಾ ಪ್ರಪಂಚವೂ ಇದರಿಂದಲೇ ಬಂದಿರುವದು. ನಿರಾಕಾರವಾಗಿ, ಒಳಗು ಹೊರಗುಗಳಿಲ್ಲದೆ, ಜನ್ಮಾದಿಗಳಿಲ್ಲದೆ, ಪ್ರಾಣ, ಮನಸ್ಸು - ಮುಂತಾದದ್ದು ಯಾವದೂ ತನ್ನಲ್ಲಿಲ್ಲದ ಸ್ವಭಾವವುಳ್ಳದ್ದು, ಈ ಅಕ್ಷರಬ್ರಹ್ಮವು. ಆದರೂ ಈ ಬ್ರಹ್ಮದಿಂದಲೇ ಪ್ರಾಣಾದಿ ಗಳೆಲ್ಲವೂ ಆಗುತ್ತಿರುವವು. ಆದ್ದರಿಂದ ಅವುಗಳು ಅನೃತ, ಅಕ್ಷರವೊಂದೇ ಸತ್ಯವು.

೭-೯. ಹಿರಣ್ಯಗರ್ಭನೂ ಆತನಿಂದ ಹುಟ್ಟುವಂತೆ ತೋರುವ ವಿರಾಟ್‌ಪುರುಷನೂ ಈ ಅಕ್ಷರದಿಂದಲೇ ಬಂದಿರುತ್ತಾರೆ. ದ್ಯುಲೋಕ, ಪರ್ಜನ್ಯ, ಸಸ್ಯಗಳು, ಪುರುಷ, ಸ್ತ್ರೀ ಎಂಬ ಪಂಚಾಗ್ನಿಕ್ರಮದಿಂದ ಹುಟ್ಟುವ ಶರೀರಗಳು, ಅವರು ಪಠಿಸುವ ವೇದಗಳು, ಅವರು ಮಾಡುವ ಕರ್ಮಗಳು, ಕರ್ಮಕ್ಕೆ ಸಾಧನವಾಗಿರುವ ಧ್ಯಾನಾದಿಗಳು, ತಪಸ್ಸು, ಅಧ್ಯಾತ್ಮಸಾಮಗ್ರಿಗಳಾದ ಇಂದ್ರಿಯಾದಿಗಳು - ಎಲ್ಲವೂ ಅಕ್ಷರದಿಂದಲೇ ಆಗಿರುವವು. ಸಮುದ್ರಗಳು, ಪರ್ವತಗಳು, ನದಿಗಳು, ಮರಗಿಡಗಳು - ಮುಂತಾದವೆಲ್ಲವೂ ಈ ಅಕ್ಷರದಿಂದಲೇ ಆಗಿರುವವು.

೧೦. ಕರ್ಮ, ಉಪಾಸನೆ, ಇವುಗಳ ಫಲ - ಇಷ್ಟೇ ಈ ಪ್ರಪಂಚವೆಂಬುದು. ಇದೆಲ್ಲವೂ ಈ ಅಕ್ಷರವೆಂಬ ಪುರುಷನಿಂದಲೇ ಉಂಟಾಗುತ್ತದೆ. ಪುರುಷನಿಗಿಂತ ಬೇರೆಯಾಗಿ ಯಾವ ದೊಂದೂ ಇರುವದಿಲ್ಲ. ಯಾವನು ಈ ಪುರುಷನೆಂಬ ತತ್ತ್ವವು ತನ್ನ ಹೃದಯದಲ್ಲಿಯೇ ಇರುವ ದೆಂದು ಅರಿತುಕೊಳ್ಳುವನೋ ಅವನು ಅವಿದ್ಯೆಯ ಗಂಟನ್ನು ಬಿಚ್ಚಿಕೊಳ್ಳುವನು. ಆದ್ದರಿಂದ ಈ ಪುರುಷನನ್ನು ತಿಳಿದುಕೊಂಡರೇ ಎಲ್ಲವನ್ನೂ ಅರಿತುಕೊಂಡಂತೆ ಆಗುತ್ತದೆ.

## ಎರಡನೆಯ ಮುಂಡಕ-ಎರಡನೆಯ ಖಂಡ

೧-೭. ಹೃದಯದಲ್ಲಿರುವ ಈ ಅಕ್ಷರದಲ್ಲಿ ಎಲ್ಲವೂ ಸೇರಿಕೊಂಡಿರುವದರಿಂದ ಇದಕ್ಕೆ **"ಗುಹಾಚರ"** ಎಂಬ ಹೆಸರು ಬಂದಿರುತ್ತದೆ. ಇದು ಸಾಮಾನ್ಯರ ಅರಿವಿಗೆ ಗೋಚರವಾಗುವದಿಲ್ಲ. ಇದು ಅತ್ಯಂತಸೂಕ್ಷ್ಮವಾಗಿರುತ್ತದೆ ; ಇದನ್ನು ಎಲ್ಲಾ ಲೋಕಗಳೂ ಲೋಕವಾಸಿಗಳೂ ಅವಲಂಬಿಸಿಕೊಂಡಿರುವರು. ಉಪನಿಷತ್ತಿನಲ್ಲಿ ಹೇಳಿರುವ ಓಂಕಾರವನ್ನು ಬಿಲ್ಲುಮಾಡಿಕೊಂಡು, ತಾನೇ ಬಾಣವಾಗಿ, ಬ್ರಹ್ಮವೇ ಲಕ್ಷ್ಯವು ಎಂದು ಭಾವಿಸಿ ಹೊರಗಿನ ವಿಷಯಗಳನ್ನೆಲ್ಲ ಮರೆತು ಏಕಾಗ್ರತೆಯಿಂದ ಚಿಂತಿಸುತ್ತಾ ಬಾಣವು ತನ್ನ ಗುರಿಯನ್ನು ಮುಟ್ಟುವಂತೆ ಬ್ರಹ್ಮವನ್ನು ಹೋಗಿ ಸೇರಬೇಕು. ನಮ್ಮ ಶರೀರದಲ್ಲಿಯೇ ಇರುವ ಹೃದಯದಲ್ಲಿರುವ ಈ ಅಕ್ಷರಪುರುಷನನ್ನು ಜಾಣರಾದವರು ಶಾಸ್ತ್ರಾಚಾರ್ಯರ ಉಪದೇಶದಿಂದ ಲಕ್ಷ್ಯವಿಟ್ಟು ನೋಡಿ ಅರಿತುಕೊಳ್ಳುವರು.

೮-೧೦. ಎಲ್ಲಕ್ಕೂ ಹೆಚ್ಚಿನ ಈ ಬ್ರಹ್ಮವನ್ನು ಹೀಗೆ ಕಂಡುಕೊಂಡರೆ ಹೃದಯದ ಗಂಟು ಬಿಚ್ಚಿಕೊಳ್ಳುತ್ತದೆ, ಸಕಲ ಸಂಶಯಗಳೂ ಕತ್ತರಿಸಿಹೋಗುತ್ತವೆ, ಕರ್ಮಗಳೆಲ್ಲವೂ ಸವೆಯುತ್ತವೆ. ಬೆಳಕುಗಳಿಗೆಲ್ಲ ಬೆಳಕಾಗಿರುವ ಈ ಬ್ರಹ್ಮವನ್ನು ''ಆತ್ಮಪ್ರತ್ಯಯ''ವನ್ನು (ನಾನು ಎಂಬ ಅರಿವನ್ನು) ಕುರಿತು ವಿಮರ್ಶಿಸುತ್ತಾ ಅರಿತುಕೊಳ್ಳಬೇಕು. ಸೂರ್ಯನೇ ಮುಂತಾದ ಎಂಥ ಜ್ಯೋತಿಯಾದರೂ ಈ ಬ್ರಹ್ಮಚೈತನ್ಯದ ಬೆಳಕಿಲ್ಲದೆ ಬೆಳಗಲಾರದು. ಇನ್ನು ಅದರಿಂದ ಇದನ್ನು ಅರಿಯುವದೆಲ್ಲಿ ಬಂತು ?

೧೧. ಹೀಗೆ ವಿಮರ್ಶಿಸಿ ನೋಡಿದರೆ ಈ ಅಕ್ಷರ, ಸತ್ಯ, ಪುರುಷ - ಎಂಬ ಹೆಸರಿನ ಬ್ರಹ್ಮವೇ ಮುಂದೆಯೂ ಹಿಂದೆಯೂ ಎಡಕ್ಕೂ ಬಲಕ್ಕೂ ಮೇಲಕ್ಕೂ ಕೆಳಕ್ಕೂ ಕಾಣುತ್ತಿರುವದು. ಇದೆಲ್ಲವೂ ಬ್ರಹ್ಮವೇ, ಬ್ರಹ್ಮವನ್ನು ಬಿಟ್ಟು ಯಾವದೊಂದೂ ಇರುವದೇ ಇಲ್ಲ.

## ಮೂರನೆಯ ಮುಂಡಕ-ಒಂದನೆಯ ಖಂಡ

೧-೪. ಜೀವ, ಈಶ್ವರ - ಇಬ್ಬರೂ ಒಂದೇ ಮರವನ್ನಾಶ್ರಯಿಸಿರುವ ಎರಡು ಹಕ್ಕಿಗಳಂತೆ ಇರುವರು. ಜೀವನಲ್ಲಿ ಕರ್ಮವೂ ಫಲವೂ ಕಾಣುತ್ತಿರುವವು ; ಈಶ್ವರನಲ್ಲಿ ಸಾಕ್ಷಿತ್ವವೊಂದೇ ಇರುವದು. ಆ ಈಶ್ವರಸ್ವರೂಪವೇ ತನ್ನದೆಂದು ಯಾವಾಗ ಅರಿತುಕೊಳ್ಳುವನೋ ಆಗ ಆ ಪರಮಾರ್ಥವಾದ ತನ್ನ ಬ್ರಹ್ಮಾತ್ಮಸ್ವರೂಪದ ಜ್ಞಾನದಿಂದ ಪುಣ್ಯಪಾಪಗಳಿಗೆ ದೂರನಾಗುವನು. ಆಗ ಇವನು ತನಗಿಂತ ಎರಡನೆಯ ವಸ್ತುವನ್ನೇ ಕಾಣುವದಿಲ್ಲ. ಆತ್ಮರತಿಯಾಗಿ, ಆತ್ಮಕ್ರೀಡನಾಗಿ ಕೃತಕೃತನಾಗಿದ್ದುಕೊಂಡಿರುವನು.

೫-೯. ಈ ಜ್ಞಾನಕ್ಕೆ ಸತ್ಯವೇ ಮುಂತಾದವು ಸಹಕಾರಿಗಳು. ಸತ್ಯ, ಇಂದ್ರಿಯಗಳನ್ನೂ ಮನಸ್ಸನ್ನೂ ಏಕಾಗ್ರಗೊಳಿಸುವದೆಂಬ ತಪಸ್ಸು, ಬ್ರಹ್ಮಚರ್ಯ - ಇವುಗಳಿಂದ ಚಿತ್ತಶುದ್ಧಿಯಾದರೆ ಆತ್ಮಜ್ಞಾನವಾಗುವದು. ಸ್ವಯಂಪ್ರಕಾಶವಾದ ಈ ಬ್ರಹ್ಮವು ದೊಡ್ಡದಕ್ಕಿಂತಲೂ ದೊಡ್ಡದಾಗಿ ಸೂಕ್ಷ್ಮವಾದದ್ದೆಲ್ಲಕ್ಕಿಂತಲೂ ಸೂಕ್ಷ್ಮವಾಗಿರುತ್ತದೆ ; ಅಜ್ಞಾನಿಗಳಿಗೆ ಬಲುದೂರವಾಗಿ ಜ್ಞಾನಿಗಳಿಗೆ ಅವರ ಆತ್ಮನೇ ಆಗಿ ತೀರ ಹತ್ತಿರವಿರುತ್ತದೆ. ಇದನ್ನು ಇಂದ್ರಿಯಗಳಿಂದ ಕಾಣಲಾಗುವದಿಲ್ಲ, ವೈದಿಕಕರ್ಮಕ್ಕೆ ಸಿಕ್ಕುವದೂ ಇದಲ್ಲ. ಸಂಪೂರ್ಣವಾದ ಸತ್ಯಾದಿಗಳಿಂದ ಯಾರು ಚಿತ್ತಶುದ್ಧಿ

ಯನ್ನು ಹೊಂದಿ ತಮ್ಮ ಅಂತಃಕರಣದಲ್ಲಿಯೇ ಹುಡುಕುವರೋ ಅವರಿಗೆ ಗೋಚರವಾಗುತ್ತದೆ. ಅಂತಃಕರಣವನ್ನೆಲ್ಲ ತನ್ನ ಚೈತನ್ಯದಿಂದ ವ್ಯಾಪಿಸಿಕೊಂಡಿರುವ ಈ ತತ್ತ್ವವನ್ನು ಅಂಥವರು ಮಾತ್ರ

೧೦. ಈ ಆತ್ಮನನ್ನು ಅರಿತುಕೊಂಡವನು ಸತ್ಯಕಾಮನೂ ಸತ್ಯಸಂಕಲ್ಪನೂ ಆಗಿರುತ್ತಾನೆ. ಆದ್ದರಿಂದ ಕಾಮಿಗಳಾದ ಭಕ್ತರು ಅವನನ್ನು ಪೂಜಿಸಿದರೆ ಅವರ ಇಷ್ಟಾರ್ಥಗಳು ನೆರವೇರುವವು.

## ಮೂರನೆಯ ಮುಂಡಕ - ಎರಡನೆಯ ಖಂಡ

೧-೨. ಆದರೆ ಯಾರು ನಿಷ್ಕಾಮಬುದ್ಧಿಯಿಂದ ಇವನನ್ನು ಸೇವಿಸುವರೋ ಅವರು ಸಂಸಾರದಿಂದಲೇ ಬಿಡುಗಡೆಯನ್ನು ಹೊಂದುವರು, ಮುಮುಕ್ಷುವಿಗೆ ಕಾಮತ್ಯಾಗವೆಂಬುದು ಮುಖ್ಯವಾದ ಸಾಧನವು. ಏಕೆಂದರೆ ಕಾಮದಿಂದಲೇ ಜೀವರಿಗೆ ಜನ್ಮಾಂತರಗಳಾಗುತ್ತಿರುವವು.

೩-೪. ಎಲ್ಲಾ ಸಾಧನಗಳಿಗಿಂತಲೂ **ಮುಮುಕ್ಷುತ್ವ** ಎಂಬುದು ಪ್ರಧಾನವಾದದ್ದು. ವೇದವನ್ನು ಓದುವದು, ಮತ್ತೊಬ್ಬರಿಗೆ ಹೇಳುವದು, ನೆನಪಿಡುವದು, ಬಹುವಾಗಿ ಶ್ರವಣ ಮಾಡುವದು - ಇವೆಲ್ಲ ಅಷ್ಟು ಮುಖ್ಯವಲ್ಲ,

ಪರಮಾತ್ಮಸ್ವರೂಪವೇ ತನಗೆ ಬೇಕೆಂಬ ಹಂಬಲು ಇರಬೇಕು. ಈ ಹಂಬಲಿಗೆ ಆತ್ಮನಿಷ್ಠೆಯ ಬಲ, ವಿಷಯಾಸಕ್ತಿ ಇಲ್ಲದಿರುವದು, ಶಾಸ್ತ್ರಜ್ಞಾನ, ಅಭಿಮಾನತ್ಯಾಗ - ಇವುಗಳೂ ಸಹಾಯವಾಗುತ್ತವೆ.

೫-೬. ಈ ಬ್ರಹ್ಮವನ್ನು ಪಡೆದವರು ಜ್ಞಾನವೊಂದರಲ್ಲೇ ಸಂತೃಪ್ತರಾಗಿರುವರು, ವಿರಕ್ತರಾಗಿರುವರು, ಪರಮಶಾಂತರಾಗಿರುವರು. ಅವರು ಬದುಕಿರುವಾಗಲೇ ಸರ್ವಗತವಾದ ಬ್ರಹ್ಮವಾಗಿದ್ದುಕೊಂಡು ಸತ್ತಮೇಲೂ ಬ್ರಹ್ಮದಲ್ಲಿಯೇ ಐಕ್ಯವಾಗಿ ಬಿಡುವರು. ವೇದಾಂತಜ್ಞಾನಕ್ಕೆ ವಿಷಯವಾದ ಬ್ರಹ್ಮಸ್ವರೂಪದ ವಿಷಯಕ್ಕೆ ನಿಶ್ಚಿತವಾದ ಜ್ಞಾನ, **ಸಂನ್ಯಾಸಪೂರ್ವಕವಾಗಿ ಆತ್ಮನಿಷ್ಠೆಯಲ್ಲಿರುವದು**. ಇವೆರಡೇ ಇವರಿಗೆ ಬ್ರಹ್ಮಪ್ರಾಪ್ತಿಗೆ ಕಾರಣವಾಗಿರುತ್ತವೆ.

೭-೯. ಮುಕ್ತರ ಶರೀರದ ಬೇರೆಬೇರೆಯ ಭಾಗಗಳು ತಮ್ಮ ತಮ್ಮ ಕಾರಣಗಳಲ್ಲಿ ಸೇರಿಕೊಳ್ಳುವವು. ಕರ್ಮವೂ ಆತ್ಮವೂ ಬ್ರಹ್ಮದಲ್ಲಿ ಒಂದಾಗಿಬಿಡುವವು. ಇನ್ನು ಮುಂದೆ ಅವರಿಗೆ ಯಾವ ನಾಮವಾಗಲಿ ರೂಪವಾಗಲಿ ಇರುವದಿಲ್ಲ ; ನದಿಗಳು ಸಮುದ್ರದಲ್ಲಿ ಸೇರಿದ ಮೇಲೆ ಇಂಥ ನದಿ ಎಂಬ ನಾಮರೂಪಗಳು ಇಲ್ಲದೆ, ಎಲ್ಲವೂ ಸಮುದ್ರವೇ ಆಗಿಬಿಡುವಂತೆ ಎಲ್ಲರೂ ಬ್ರಹ್ಮರೇ ಆಗಿಬಿಡುವರು. ಹೆಚ್ಚೇನು ? ಬ್ರಹ್ಮವನ್ನು ಅರಿತವನು ಬ್ರಹ್ಮವೇ ಆಗಿಬಿಡುವನು. ಅವನಿಗೆ ಶೋಕವಿಲ್ಲ, ಧರ್ಮಾಧರ್ಮಗಳಿಲ್ಲ, ಅಜ್ಞಾನವಿಲ್ಲ, ಸಂಸಾರವಿಲ್ಲ, ಅವನ ಕುಲದಲ್ಲಿ ಹುಟ್ಟುವವರೆಲ್ಲ ಬ್ರಹ್ಮಜ್ಞಾನಿಗಳೇ.

೧೦-೧೧. ಈ ಬ್ರಹ್ಮವಿದ್ಯೆಯನ್ನು ಕರ್ಮ, ಉಪಾಸನೆ ಇವುಗಳಿಂದ ಸಂಸ್ಕಾರವನ್ನು ಹೊಂದಿ ಬ್ರಹ್ಮಜ್ಞಾನಕ್ಕೆ ಹಾತುವರಿಯುತ್ತಿರುವ ಶ್ರದ್ಧಾವಂತರಿಗೆ ಮಾತ್ರ ಉಪದೇಶಮಾಡಬೇಕು. ಈ ಮುಂಡಕೋಪನಿಷತ್ತನ್ನು ಅಥರ್ವವೇದದ ಅಧ್ಯಯನಕ್ಕೆ ಹೇಳಿರುವ ಶಿರೋವ್ರತವನ್ನು ಆಚರಿಸುವವರು ಮಾತ್ರ ಅಧ್ಯಯನಮಾಡಬೇಕು.

# ಶಬ್ದಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಸಂಸ್ಕೃತಭಾಷ್ಯದಭಾಗವನ್ನು ಸೂಚಿಸುವವು.


**೧. ಅಕ್ಷರಮ್ -**

ಪರಮಾತ್ಮ. ೧೬, ೧೭, ೧೯, ೨೦, ೨೧, ೨೩, ೨೫, ೨೬, ೪೮, ೪೯, ೫೧, ೫೯ ; ೭೪, ೭೫, ೭೬, ೭೭, ೯೦, ೧೨೬ ; ಅವ್ಯಾಕೃತ, ೫೨, ೫೫, ೧೨೧ ; ಶಬ್ದ, ೧೨, ೧೭.

**೨. ಅಗ್ನಿಹೋತ್ರಮ್ -**

ಒಂದು ವೈದಿಕಕರ್ಮ, ೧೮, ೨೮, ೨೯, ೩೨, ೩೪, ೬೫, ೯೭, ೧೦೫.

**೩. ಅಗ್ರಜಃ -**

ದೇವತೆಗಳಿಗಿಂತಲೂ ಮೊದಲು ಹುಟ್ಟಿದ ಹಿರಣ್ಯಗರ್ಭಬ್ರಹ್ಮನು, ೮.

**೪. ಅಣ್ಡಮ್ -**

ವಿರಾಟ್‌ಪುರುಷನ ಉತ್ಪತ್ತಿಗೆ ಮೊದಲು ಆಗುವ ಬ್ರಹ್ಮಾಂಡ, ೬೦.

**೫. ಅಣ್ಡಕ್ರಮಃ -**

ಅಂಡವು ಉತ್ಪತ್ತಿಯಾಗುವ ಕ್ರಮ, ೨೩.

**೬. ಅಧಿಕಾರಃ -**

ತಕ್ಕ ಯೋಗ್ಯತೆ, ೪, ೪೪.

**೭. ಅನೃತಮ್ -**

ಹುಸಿತೋರಿಕೆ, ೫೦, ೫೭, ೮೮ ; ಸುಳ್ಳಾಡುವದು, ೬೬, ೯೯, ೧೦೧.

**೮. ಅನ್ತರಾತ್ಮಾ -**

ಆತ್ಮನಿಗೂ ಶರೀರಕ್ಕೂ ನಡುವೆ ಆತ್ಮನಂತೆ ಕಾಣುತ್ತಿರುವ ಸೂಕ್ಷ್ಮಶರೀರ, ೬೧, ೬೮.

**೯. ಅನ್ನಮ್ -**

ಬತ್ತ, ಜವೆ ಮುಂತಾದ ಆಹಾರವಸ್ತು ೨೫ ; ಅವ್ಯಾಕೃತ, ೨೩.

**೧೦. ಅಪರಂ ರೂಪಮ್ -**

ತಪ್ಪುತಿಳಿವಳಿಕೆಯಿಂದ ಆತ್ಮನಲ್ಲಿ ತೋರುವ ಆತ್ಮನ ಕೀಳುರೂಪ, ೧೧೨.

**೧೧. ಅಪರಂ ಬ್ರಹ್ಮ, ಕಾರ್ಯಲಕ್ಷಣಂ ಬ್ರಹ್ಮ -**

ಕಡಿಮೆ ಬ್ರಹ್ಮ, ಸಗುಣಬ್ರಹ್ಮ, ಹಿರಣ್ಯಗರ್ಭ, ೯೪, ೧೨೫.

**೧೨. ಅಪರಾ ವಿದ್ಯಾ -**

ಕಡಿಮೆಯ ವಿದ್ಯೆ, ವೇದರಾಶಿಯನ್ನು ತಿಳಿದುಕೊಳ್ಳುವದು, ಕರ್ಮೋಪಾಸನೆಗಳನ್ನು ಮಾಡುವದು, ೨, ೧೩, ೧೫, ೨೬, ೨೭, ೪೨, ೪೩, ೪೫, ೪೯, ೫೦, ೭೭.

**೧೩. ಅಪ್ರವೃತ್ತಫಲಾನಿ -**

ಫಲವನ್ನು ಕೊಡುವದಕ್ಕೆ ತೊಡಗದಿರುವ ಕರ್ಮಗಳು, ೮೩, ೧೨೦.

**೧೪. ಅಬ್ರಹ್ಮಪ್ರತ್ಯಯಃ -**

ಬ್ರಹ್ಮವಲ್ಲದ ವಸ್ತುವಿನ ಜ್ಞಾನ, ೮೯.

**೧೫. ಅಭಿನ್ನಾರ್ಥಮರ್ಯಾದಃ -**

ಧರ್ಮಾಧರ್ಮಗಳ ವ್ಯವಸ್ಥೆಯ ಕಟ್ಟನ್ನು ಒಡೆಯದವನು, ೯೭.

**೧೬. ಅಮೃತ -**

ಕರ್ಮವು ಸವೆಯುವವರೆಗೂ ನಾಶವಾಗದ (ಫಲ) ೨೩ ; ಕಲ್ಪಾಂತದವರೆಗೂ ಇರುವ

ಹಿರಣ್ಯಗರ್ಭ, ೪೨ ; ಎಂದಿಗೂ ನಾಶವಾಗದ ಬ್ರಹ್ಮ, ೭೦, ೭೪ ; ೮೧, ೧೧೮ ; ಮೋಕ್ಷ ೭೭.

**೧೭. ಅವರಂ ಕರ್ಮ -**

ಕೀಳಾದ, ಉಪಾಸನೆಯಿಲ್ಲದ ಬರಿಯ ಕರ್ಮ, ೩೮.

**೧೮. ಅವಿದ್ಯಾ -**

ತಪ್ಪು ತಿಳಿವು, ಬ್ರಹ್ಮವನ್ನು ಬೇರೆಯಾಗಿ ತಿಳಿಯುವದು, ೨, ೬, ೧೪, ೧೬, ೩೯, ೪೦, ೪೫, ೫೪, ೭೮, ೮೩, ೮೫, ೧೦೩, ೧೦೭, ೧೧೯, ೧೨೨.

**೧೯. ಅವಿದ್ಯಾಕಾಮಕರ್ಮಾಣಿ -**

ಬ್ರಹ್ಮವನ್ನು ತಪ್ಪಾಗಿ ತಿಳಿಯುವದು, ವಿಷಯಗಳ ಬಯಕೆ, ಅವುಗಳನ್ನು ಪಡೆದು ಕೊಳ್ಳುವದಕ್ಕಾಗಿ ಮಾಡುವ ಕರ್ಮ, ೨೩, ೩೭, ೪೫.

**೨೦. ಅವಿದ್ಯಾಕೃತ -**

ಅವಿದ್ಯೆಯಿಂದ ಮಾಡಲ್ಪಟ್ಟಿರುವ, ಬ್ರಹ್ಮ ವಿಷಯಕವಾದ ತಪ್ಪುತಿಳಿವಳಿಕೆಯಿಂದ ಕಾಣ ಬರುವ (ನಾಮರೂಪಗಳು), ೧೨೧ ; (ಅಂತಃ ಕರಣ ಮುಂತಾದ ಉಪಾಧಿಗಳು), ೧೨೦.

**೨೧. ಅವಿದ್ಯಾಗ್ರನ್ಥಿಃ -**

ಬಲವಾಗಿರುವ ಅವಿದ್ಯಾವಾಸನೆ, ೭೦.

**೨೨. ಅವಿದ್ಯಾದಿಸಂಸಾರಕಾರಣಮ್, ಅವಿದ್ಯಾದಿಸಂಸಾರಬನ್ಧಃ -**

ಅವಿದ್ಯೆ, ಕಾಮ, ಕರ್ಮ - ಎಂಬ ಸಂಸಾರದ ಬಂಧಕ್ಕೆ ಕಾರಣಗಳು, ೬, ೧೧೯.

**೨೩. ಅವಿದ್ಯಾದೃಷ್ಟಯಃ -**

ತಪ್ಪು ತಿಳಿವಳಿಕೆಯ ಬುದ್ಧಿಯಿಂದ ನೋಡುವವರು, ೮೯.

**೨೪. ಅವಿದ್ಯಾಸಞ್ಛನ್ನ-**

ಅವಿದ್ಯೆಯಿಂದ ಮರೆಯಾಗಿರುವ ಆತ್ಮನ ಸ್ವರೂಪ, ೧೧೪.

**೨೫. ಅವಿದ್ವಾಂಸಃ -**

ಅಜ್ಞಾನಿಗಳು, ೧೦೩.

**೨೬. ಅವ್ಯಕ್ತಾದಿಸ್ಥಾವರಾನ್ತಾಃ -**

ಅವ್ಯಾಕೃತಾತ್ಮನಲ್ಲಿ ಸೇರುವದರಿಂದ ಹಿಡಿದು ಸ್ಥಾವರಪ್ರಾಣಿಯ ಜನ್ಮವನ್ನು ಪಡೆಯುವವರೆಗಿನ ಲೋಕಗಳು, ೪೫.

**೨೭. ಅವ್ಯಯಮ್ -**

ಸ್ವರೂಪದಿಂದಲಾಗಲಿ, ಧರ್ಮದಿಂದ ಲಾಗಲಿ, ಸವೆಯದ ಬ್ರಹ್ಮ, ೧೯.

**೨೮. ಅವ್ಯಯಾತ್ಮಾ -**

ಕಲ್ಪಾಂತದವರೆಗೆ ಸವೆಯದ ಸ್ವಭಾವವುಳ್ಳ ಹಿರಣ್ಯಗರ್ಭ, ೪೨.

**೨೯. ಅವ್ಯಾಕೃತಮ್ -**

ನಾಮರೂಪಾತ್ಮಕವಾದ ಜಗತ್ತಿನ ಸೂಕ್ಷ್ಮ ಸ್ಥಿತಿ, ೨೩, ೫೨, ೫೫; ಈ ಸ್ಥಿತಿಯನ್ನು ಉಪಾಧಿಯಾಗುಳ್ಳ ಬ್ರಹ್ಮ, ೫೫.

**೩೦. ಆಕಾಶಮ್ -**

ಜಗತ್ತಿನ ಸೂಕ್ಷ್ಮ ಸ್ಥಿತಿ; ಅವ್ಯಾಕೃತ, ೫೫; ಪಂಚಭೂತಗಳಲ್ಲಿ ಮೊದಲು ಹುಟ್ಟಿದ್ದು, ೫೮.

**೩೧. ಆಚಾರ್ಯಃ -**

ತತ್ತ್ವವನ್ನು ಹೇಳಬಲ್ಲ ಗುರು, ೧೦, ೪೭, ೪೮, ೭೮.

**೩೨. ಆತ್ಮಜ್ಞಾನಮ್ -**

ಪರಮಾತ್ಮನನ್ನು ಇದ್ದಂತೆ ಅರಿತು ಕೊಳ್ಳುವದು, ೭೭, ೧೦೮.

**೩೩. ಆತ್ಮನಿಷ್ಠಾ -**

ಪರಮಾತ್ಮನ ಜ್ಞಾನದಿಂದ ಅವನಲ್ಲಿಯೇ ನೆಲೆ ನಿಲ್ಲುವದು, ೧೧೬.

**೩೪. ಆತ್ಮಪ್ರತ್ಯಯಾನುಸಾರಿಣಃ -**

ಒಳಗಿನ ಆತ್ಮನನ್ನೇ, ನಾನು ಎಂಬ ಅರಿವಿನ ಬಲದಿಂದ ಕಾಣುತ್ತಿರುವವರು, ೮೫.

**೩೫. ಆತ್ಮಯಾಜಿನಃ -**

ಅಂತಃಕರಣವು ಸಂಸ್ಕೃತವಾಗಲೆಂದು ನಿಷ್ಕಾಮಕರ್ಮವನ್ನು ಮಾಡುವವರು, ೬೭.

**೩೬. ಆತ್ಮಲಾಭಃ -**

ಅವಿದ್ಯೆಯಿಂದ ಕಳೆದುಕೊಂಡಂತೆ ಆಗಿರುವ ಆತ್ಮಸ್ವರೂಪವನ್ನು ಜ್ಞಾನದಿಂದ ಪಡೆದುಕೊಳ್ಳುವದು, ೧೧೩, ೧೧೪.

**೩೭. ಆತ್ಮವಿದಃ -**

ಪರಮಾತ್ಮನನ್ನು ಇದ್ದಂತೆ ಅರಿತಿರುವವರು, ೧೧೬.

**೩೮. ಆತ್ಮಾ -**

ಪರಮಾತ್ಮ, ನಮ್ಮ ನಿಜವಾದ ಸ್ವರೂಪ, ೭೮, ೮೧, ೯೫, ೯೬, ೧೦೩, ೧೦೭, ೧೧೪, ೧೧೬, ೧೧೭; ಉಪಾಧಿಯಿಂದ ಜೀವನಾಗಿ ತೋರುತ್ತಿರುವ ಆತ್ಮ, ೭೬.

**೩೯. ಆಪೇಕ್ಷಿಕಂ ಸತ್ಯಮ್ -**

ಮತ್ತೊಂದಕ್ಕೆ ಹೋಲಿಸಿದರೆ ಸತ್ಯವಾಗಿರುವ, ೫೦.

**೪೦. ಆಪ್ಯಮ್ -**

ಹೊಸದಾಗಿ ಪಡೆದುಕೊಳ್ಳತಕ್ಕದ್ದು, ಕರ್ಮದ ಕಾರ್ಯವಾಗಿರುವ ನಾಲ್ಕು ಬಗೆಗಳಲ್ಲಿ ಒಂದು, ೪೬.

**೪೧. ಇಷ್ಟಾಪೂರ್ತಮ್ -**

ಶ್ರೌತಸ್ಮಾರ್ತಕರ್ಮಗಳು, ೪೧.

**೪೨. ಉತ್ತರಾಯಣಮ್ -**

ಉಪಾಸಕರು ದೇವಲೋಕಕ್ಕೆ ಹೋಗುವ ಮಾರ್ಗ, ೪೨.

**೪೩. ಉತ್ಪಾದ್ಯಮ್ -**

ಹೊಸದಾಗಿ ಉಂಟುಮಾಡತಕ್ಕದ್ದು, ನಾಲ್ಕು ಬಗೆಯ ಕರ್ಮದ ಕಾರ್ಯಗಳಲ್ಲಿ ಒಂದು, ೪೬.

**೪೪. ಉಪನಿಷತ್ -**

ಬ್ರಹ್ಮವಿದ್ಯೆ, ೬; ಈ ವಿದ್ಯೆಯನ್ನು ತಿಳಿಸುವ ಗ್ರಂಥ, ೧, ೬, ೧೭.

**೪೫. ಉಪಸಂಹೃತಕರಣಃ -**

ಇಂದ್ರಿಯಗಳನ್ನು ಒಳಕ್ಕೆಳೆದುಕೊಂಡ ಮುಮುಕ್ಷು, ೧೦೫.

**೪೬. ಉಪಸದನವಿಧಿಃ -**

ಗುರುವಿನ ಬಳಿಗೆ ಪೂಜ್ಯಬುದ್ಧಿಯಿಂದ ವಿದ್ಯೆಗಾಗಿ ಬರುವ ಕ್ರಮವನ್ನು ತಿಳಿಸುವ ವೇದ ವಚನ, ೧೦.

**೪೭. ಉಪರತದರ್ಪಾದಿದೋಷಃ -**

ಹೆಮ್ಮೆಯೇ ಮುಂತಾದ ದೋಷಗಳನ್ನು ಬಿಟ್ಟುಳಿದ ಶಿಷ್ಯ, ೪೮.

**೪೮. ಉಪಾಧಿದ್ವಯಮ್ -**

ಆತ್ಮನಲ್ಲಿ ತಪ್ಪು ತಿಳಿವಳಿಕೆಯಿಂದ ಕಲ್ಪಿತವಾಗಿರುವ ಪ್ರಾಣ, ಮನಸ್ಸು - ಎಂಬ ಎರಡು ಉಪಾಧಿಗಳು, ೭೪.

**೪೯. ಉಪಾಧಿಭೇದದೃಷ್ಟಯಃ -**

ಉಪಾಧಿಗಳಿಂದಾಗಿರುವ ಭೇದವನ್ನೇ ಕಾಣುವ ಅಜ್ಞರು, ೫೪.

**೫೦. ಋಷಯಃ -**

ಕರ್ಮವನ್ನು ಕಂಡುಹಿಡಿದವರು, ೨೮; ಉಪಾಸನೆಯ ಸಾಕ್ಷಾತ್ಕಾರವುಳ್ಳವರು, ೧೦೧; ತತ್ತ್ವಜ್ಞಾನಿಗಳು, ೧೧೭, ೧೨೬.

**೫೧. ಕರ್ಮ -**

ಶಾಸ್ತ್ರದಲ್ಲಿ ವಿಹಿತವಾಗಿರುವ ಅಗ್ನಿಹೋತ್ರವೇ ಮುಂತಾದದ್ದು, ೪, ೨೩, ೨೮, ೩೧, ೩೨, ೩೪, ೩೭, ೩೮, ೪೦, ೪೧, ೪೨, ೪೫, ೪೬, ೪೭, ೫೦, ೬೬, ೬೭, ೭೦, ೭೮, ೮೦, ೮೩, ೯೨, ೯೭, ೧೨೦.

**೫೨. ಕರ್ಮಕಾರ್ಯಮ್ -**

ಕರ್ಮದಿಂದಾಗುವ ಫಲವು; ಉತ್ಪಾದ್ಯ, ಆಪ್ಯ, ಸಂಸ್ಕಾರ್ಯ, ವಿಕಾರ್ಯ - ಎಂಬ ನಾಲ್ಕರಲ್ಲಿ ಒಂದು, ೪೬.

**೫೩. ಕರ್ಮೇನ್ದ್ರಿಯಾಣಿ -**

ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ- ಎಂಬ ಕರ್ಮದಲ್ಲಿ ತೊಡಗಿಸುವ ಇಂದ್ರಿಯಗಳು, ೧೯, ೫೪.

**೫೪. ಕಲಾಃ -**

ದೇಹಕ್ಕೆ ಕಾರಣವಾಗಿರುವ ಪ್ರಾಣವೇ ಮುಂತಾದ ಹದಿನಾರು, ೧೨೦.

**೫೫. ಕಾರಕೋಪಸಂಹಾರಃ -**

ಕ್ರಿಯೆಯ ಸಾಧನಗಳನ್ನು ಕೂಡಿಹಾಕಿಕೊಳ್ಳುವದು, ೧೮.

**೫೬. ಕಾರ್ಯಲಕ್ಷಣಂ ಬ್ರಹ್ಮ -**

ಅವ್ಯಾಕೃತಾತ್ಮನಿಂದ ಉಂಟಾಗಿರುವ ಹಿರಣ್ಯಗರ್ಭ, ೨೫.

**೫೭. ಕಾರ್ಯಕಾರಣಬೀಜಮ್ -**

ಕಾರಣರೂಪವಾಗಿಯೂ ಕಾರ್ಯರೂಪವಾಗಿಯೂ ತೋರ್ಝುತ್ತಿರುವ ಆಕಾಶಾದಿಗಳಿಗೂ ಕಾರಣವಾಗಿರುವ ಅವ್ಯಾಕೃತ, ೫೫.

**೫೮. ಕೂಟಸ್ಥಮ್ -**

ಯಾವ ವಿಕಾರವೂ ಇಲ್ಲದ ಬ್ರಹ್ಮ, ೪೬.

**೫೯. ಕೃತಾತ್ಮಾ -**

ವಿದ್ಯೆಯಿಂದ ನಿಜವಾದ ಆತ್ಮರೂಪವನ್ನು ಪಡೆದುಕೊಂಡವನು, ೧೧೨, ೧೧೭.

**೬೦. ಕ್ರಿಯಾಕಾರಕಫಲಭೇದಭಿನ್ನಮ್ -**

ಕೆಲಸ, ಅದರ ಸಾಮಗ್ರಿ, ಅದರ ಫಲ - ಎಂದು ಬೇರೆಬೇರೆಯಾಗಿ ತೋರುವ (ದ್ವೈತ), ೪೩.

**೬೧. ಕ್ರಿಯಾಶಕ್ತಿಃ -**

ಬ್ರಹ್ಮದಲ್ಲಿರುವ ಕ್ರಿಯೆಗಳನ್ನುಂಟು ಮಾಡುವ ಶಕ್ತಿ, ೨೩.

**೬೨. ಕ್ಲೇಶಾಃ -**

ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶ-ಎಂಬಿವು, ೧೨೨.

**೬೩. ಗುರುಃ -**

ತತ್ತ್ವವನ್ನು ಹೇಳಬಲ್ಲ ಆಚಾರ್ಯ, ೨, ೪೭.

**೬೪. ಗುರ್ವಭಿಗಮನಮ್ -**

ತತ್ತ್ವೋಪದೇಶಕ್ಕಾಗಿ ಗುರುವಿನ ಬಳಿಗೆ ಪೂಜ್ಯಬುದ್ಧಿಯಿಂದ ಹೋಗುವದು, ೧೭, ೪೭.

**೬೫. ಗುಹಾ -**

ಹೃದಯ, ಅಂತಃಕರಣ, ೬೭, ೭೦, ೭೨, ೧೦೩.

**೬೬. ಗುಹಾಗ್ರನ್ಥಯಃ -**

ಹೃದಯಗ್ರಂಥಿ, ಅವಿದ್ಯಾಗ್ರಂಥಿ - ಎಂದು ಕರೆಯಿಸಿಕೊಳ್ಳುವ ಅವಿದ್ಯಾಕೃತವಾದ ಕಾಮಗಳು, ೧೨೩.

**೬೭. ಘಟಾಕಾಶಃ -**

ಗಡಿಗೆಯಲ್ಲಿ ಕಟ್ಟುವಡೆದಿರುವಂತೆ ತೋರುವ ಆಕಾಶ, ಉಪಾಧಿಪರಿಚ್ಛಿನ್ನಾತ್ಮನಿಗೆ ಉಪಮಾನ, ೧೧೭, ೧೧೮, ೧೨೦.

**೬೮. ಜಗದಾತ್ಮಾ -**

ಜಗತ್ತಿಗೆ ಆತ್ಮನಾಗಿರುವ ಹಿರಣ್ಯಗರ್ಭ, ೨೩.

**೬೯. ಜ್ಞಾನಮ್ -**

ಉಪಾಸನೆ, ೩೭, ೩೮, ೪೨, ೯೭; ಆತ್ಮನ ತಿಳಿವಳಿಕೆ, ೨೩, ೪೧, ೪೭, ೮೩, ೯೭, ೧೦೮, ೧೧೬.

**೭೦. ಜ್ಞಾನಶಕ್ತಿಃ -**

ಬ್ರಹ್ಮದಲ್ಲಿರುವ ಎಲ್ಲವನ್ನೂ ಅರಿಯುವ ಶಕ್ತಿ, ೨೩, ೫೪.

**೭೧. ತಪಃ -**

ಕೃಚ್ಛ್ರ, ಚಾಂದ್ರಾಯಣ - ಮುಂತಾದ ದೇಹಾಯಾಸರೂಪವಾದ ತಪಸ್ಸು, ೨೫, ೧೦೫; ಆಶ್ರಮಕರ್ಮ, ೪೨, ಇಂದ್ರಿಯಗಳನ್ನೂ ಮನಸ್ಸನ್ನೂ ಏಕಾಗ್ರವಾಗಿಸುವದು, ೯೯; ಜ್ಞಾನ, ೨೩, ೨೫, ೧೧೬.

**೭೨. ತ್ರೈಲೋಕ್ಯದೇಹೋಪಾಧಿಃ -**

ಮೂರು ಲೋಕಗಳನ್ನೂ ತನ್ನ ದೇಹವಾಗಿ ಮಾಡಿಕೊಂಡಿರುವ ವಿರಾಟ್‌ಪುರುಷ,

**೭೩. ದಕ್ಷಿಣಾಯನೋತ್ತರಾಯಣಮಾರ್ಗೌ, ದಕ್ಷಿಣೋತ್ತರಮಾರ್ಗೌ -**

ಕರ್ಮಿಗಳು ಪಿತೃಲೋಕಕ್ಕೂ ಉಪಾಸಕರು ದೇವಲೋಕಕ್ಕೂ ಸತ್ತ ಬಳಿಕ ಹೋಗುವ ಮಾರ್ಗಗಳು, ೪೫, ೬೫.

**೭೪.**

ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಬೇಕಾಗುವ ವಿಷಯಗಳು, ೧೧೨.

**೭೫. ದೇವಯಾನಃ -**

ದೇವಲೋಕಕ್ಕೆ ಹೋಗುವ ಮಾರ್ಗ, ಉತ್ತರಾಯಣ, ೧೦೧.

**೭೬. ದೇಹಾತ್ಮಭಾವಃ -**

ದೇಹವೇ ತಾನೆಂಬ ಅರಿವು, ೯೨.

**೭೭. ದೇಹಾದ್ಯುಪಾಧಿಭೇದಾಃ -**

ದೇಹ, ಪ್ರಾಣ, ಮನಸ್ಸು- ಮುಂತಾದ ಆತ್ಮನ ಉಪಾಧಿಗಳು, ೫೪.

**೭೮. ಧರ್ಮಜ್ಞಾನವೈರಾಗ್ಯೈಶ್ವರ್ಯಾಣಿ-**

ಹಿರಣ್ಯಗರ್ಭನಲ್ಲಿರುವ ಮಿಗಿಲಿಲ್ಲದ ಧರ್ಮಾದಿಗಳು, ೭.

**೭೯. ನಾಮರೂಪಬೀಜಭೂತಮ್ -**

ನಾಮರೂಪಗಳ ಕಾರಣವಾದ ಸೂಕ್ಷ್ಮಸ್ಥಿತಿ, ಅವ್ಯಾಕೃತ ೫೨, ೫೫.

**೮೦. ನಾಮರೂಪಬೀಜೋಪಲಕ್ಷಿತ -**

ಅವ್ಯಾಕೃತದಿಂದ ಗುರುತಿಸಿ ತಿಳಿಯಬೇಕಾಗಿರುವ ಕಾರಣಬ್ರಹ್ಮ, ೫೨, ೫೭.

**೮೧. ನಾಮರೂಪಕೃತದೇಹೋಪಾಧಿಃ -**

ನಾಮರೂಪಗಳಿಂದಾಗಿರುವ ದೇಹವೆಂಬ ಉಪಾಧಿ, ೫೧.

**೮೨. ನಾಮರೂಪೇ -**

ಶ್ರೋತ್ರ, ಚಕ್ಷುಸ್ಸು - ಇವುಗಳಿಗೆ ಗೋಚರವಾಗುವ ಶಬ್ದ, ರೂಪ - ಇವು, ೧೯, ೨೫, ೧೨೧.

**೮೩. ನಿತ್ಯಸಾಕ್ಷಿತ್ವಮ್ -**

ಯಾವಾಗಲೂ ಒಂದೇ ರೂಪದಲ್ಲಿದ್ದುಕೊಂಡು ಎಲ್ಲವನ್ನೂ ನೋಡುತ್ತಿರುವದು, ೯೧.

**೮೪. ನಿರುಪಾಧಿಕಃ -**

ಯಾವ ಉಪಾಧಿಯ ಹಂಗೂ ಇಲ್ಲದ ಶುದ್ಧಾತ್ಮ, ೫೫.

**೮೫. ನಿರ್ವಿಶೇಷಃ -**

ಯಾವ ವಿಶೇಷಗಳೂ ಇಲ್ಲದ ಆತ್ಮ, ೫೯.

**೮೬. ನಿಷ್ಕಲಮ್ -**

ಅವಯುವಗಳಿಲ್ಲದ ಬ್ರಹ್ಮ, ೮೫, ೧೦೫.

**೮೭. ಪಞ್ಚಾಗ್ನಯಃ -**

ದ್ಯುಲೋಕ, ಪರ್ಜನ್ಯ, ಪೃಥಿವಿ, ಪುರುಷ, ಸ್ತ್ರೀ-ಎಂದು ಛಾಂದೋಗ್ಯದಲ್ಲಿ ಉಪಾಸನೆಗೆ ಹೇಳಿರುವ ಐದು ಕಲ್ಪಿತಾಗ್ನಿಗಳು, ೬೨.

**೮೮. -- ಜ ಪ್ರ**

ಚಕ್ಷುಸ್ಸು, ಶ್ರೋತ್ರ - ಮುಂತಾದ ಐದು ಜ್ಞಾನೇಂದ್ರಿಯಗಳು, ೧೯.

**೮೯. ಪರಃ ಪುರುಷಃ -**

ಹೆಚ್ಚಿನ ಪುರುಷ, ಪರಮಾತ್ಮ, ೧೨೧.

**೯೦. ಪರಃ ಪುರುಷಾರ್ಥಃ, ಪರಮ ಪುರುಷಾರ್ಥಃ -**

ಜನರು ಬಯಸುವ ಹೆಚ್ಚಿನ ಫಲ, ಮೋಕ್ಷ, ೧, ೧೧೪.

**೯೧. ಪರಪ್ರಾಪ್ತಿಃ -**

ಹೆಚ್ಚಿನ ಬ್ರಹ್ಮವನ್ನು ಪಡೆಯುವದು, ಮೋಕ್ಷ, ೧, ೧೧೪.

**೯೨. ಪರಮಂ ಸಾಮ್ಯಮ್ -**

ಬ್ರಹ್ಮವೇ ತಾನಾಗುವ ಅದ್ವೈತ ಪ್ರಾಪ್ತಿ, ೯೪.

**೯೩. ಪರಮಾತ್ಮವಿದ್ಯಾ, ಪರಮಾತ್ಮಜ್ಞಾನಮ್ -**

ಪರಮಾತ್ಮನನ್ನು ಇದ್ದಂತೆ ಅರಿತುಕೊಳ್ಳುವದು, ಬ್ರಹ್ಮವಿದ್ಯೆ, ೮, ೧೩, ೮೨.

**೯೪. ಪರಮಾರ್ಥತತ್ತ್ವಮ್ -**

ನಿಜವಾಗಿರುವ ತತ್ತ್ವವು, ಬ್ರಹ್ಮಸ್ವರೂಪ, ೧೦೧, ೧೧೨.

**೯೫. ಪರಮಾತ್ಮಾ, ಪರ ಆತ್ಮಾ -**

ನಮ್ಮೆಲ್ಲರ ಆತ್ಮ, ಬ್ರಹ್ಮ, ೧೧೪, ೧೧೮.

**೯೬. ಪರಮಾರ್ಥದರ್ಶಿನಃ -**

ಪರಮಾರ್ಥವನ್ನೇ ಕಾಣುವವರು, ೧೩.

**೯೭. ಪರಮಾರ್ಥವಸ್ತು, ಪರಮಾರ್ಥಃ -**

ನಿಜವಾಗಿರುವ ವಸ್ತು, ಬ್ರಹ್ಮ, ೪೮, ೯೦.

**೯೮. ಪರಮಾರ್ಥಸತ್, ಪರಮಾರ್ಥಸತ್ಯಮ್ -**

ನಿಜವಾಗಿಯೂ ಇರುವದು, ವ್ಯವಹಾರದಲ್ಲಿ ಸತ್ಯವೆಂದು ಹೇಳಿಸಿಕೊಳ್ಳುವದು ಮಾತ್ರವಲ್ಲ, ೫೦, ೮೯.

**೯೯. ಪರಮಂ ಬ್ರಹ್ಮ, ಪರಬ್ರಹ್ಮ -**

ಶುದ್ಧವಾದ, ಎಲ್ಲಕ್ಕೂ ಹೆಚ್ಚಿನ ಬ್ರಹ್ಮ, ೬, ೧೨೫, ೧೨೬.

**೧೦೦. ಪರಾವರ -**

ಒಬ್ಬರಿಂದೊಬ್ಬರಿಗೆ ಪರಂಪರೆಯಾಗಿ ಬಂದಿರುವ ವಿದ್ಯೆ, ಅಥವಾ ಪರಬ್ರಹ್ಮ, ಅಪರಬ್ರಹ್ಮ, ಎರಡೂ ಬ್ರಹ್ಮಗಳ ವಿಷಯದ ವಿದ್ಯೆ ೯; ಕಾರ್ಯಕಾರಣರೂಪವಾಗಿ ತೋರುವ ಬ್ರಹ್ಮ, ೮೩.

**೧೦೧. ಪರಾ ವಿದ್ಯಾ -**

ಎಲ್ಲಕ್ಕೂ ಹೆಚ್ಚಿನ ಬ್ರಹ್ಮವನ್ನು ಅರಿಯುವ ವಿದ್ಯೆ, ೧೩, ೧೬, ೧೭, ೧೮, ೧೯, ೨೬, ೨೭, ೫೦, ೫೯, ೯೦.

**೧೦೨. ಪರಾನ್ತಕಾಲಃ -**

ತೀರ ಕೊನೆಯ ಕಾಲ, ಜ್ಞಾನಿಗಳು ದೇಹವನ್ನು ಬಿಟ್ಟು ವಿದೇಹಮುಕ್ತರಾಗುವ ಕಾಲ, ೧೧೮.

**೧೦೩. ಪುರುಷಃ -**

ಪೂರ್ಣನಾದ, ಪುರದಲ್ಲಿ ಎಂದರೆ ಹೃದಯದಲ್ಲಿ ತಿಳಿಯಬರುವ ಪರಮಾತ್ಮ, ೪೭, ೪೮, ೫೩, ೬೦, ೬೨, ೬೩, ೬೫, ೬೬, ೬೭, ೧೨೧, ೧೨೬; ಜೀವ, ೯೨; ಮನುಷ್ಯ, ೨೧, ೧೧೦.

**೧೦೪. ಪುರುಷಾರ್ಥಃ -**

ಜನರು ಬಯಸುವ ಹೆಚ್ಚಿನ ಪ್ರಯೋಜನ, ಮುಕ್ತಿ, ೧, ೪೧, ೬೬, ೧೦೧.

**೧೦೫. ಪೂರ್ವಪಕ್ಷಃ -**

ತಟ್ಟನೆ ನೋಡಿದರೆ ಮೊದಲು ತೋರುವ ತಪ್ಪುಪಕ್ಷ, ೧೪.

**೧೦೬. ಪ್ರತಿದೇವತಾಃ -**

ಆದಿತ್ಯಾದಿದೇವತೆಗಳು; ಮುಕ್ತಿಯಾಗುವಾಗ ಕರಣಗಳಲ್ಲಿದ್ದ ದೇವತೆಗಳು. ಈ ದೇವತೆಗಳಲ್ಲಿ ಸೇರಿಹೋಗುವವರು, ೧೨೦.

**೧೦೭. ಪ್ರತ್ಯಕ್ಸ್ವರೂಪಮ್ -**

ನಮ್ಮ ಒಳಗಿನ ಸ್ವರೂಪ, ಆತ್ಮ, ೭೭.

**೧೦೮. ಪ್ರತ್ಯಕ್ಷಾನುಮಾನೋಪಮಾನಾಗಮಾಃ -**

ವಿಷಯದ ತತ್ತ್ವವನ್ನು ನಿರ್ಧರಿಸುವ ನಾಲ್ಕು ಪ್ರಮಾಣಗಳು, ೪೫.

**೧೦೯. ಪ್ರಥಮಃ, ಪ್ರಥಮಜಃ -**

ದೇವತೆಗಳೆಲ್ಲರಿಗಿಂತಲೂ ಮೊದಲು ಹುಟ್ಟಿದ ಮಿಗಿಲಿಲ್ಲದ ಉತ್ತಮಗುಣಗಳುಳ್ಳ ಹಿರಣ್ಯಗರ್ಭನು, ೭, ೪೨, ೬೦.

**೧೧೦. ಪ್ರಥಮಶರೀರೀ -**

ಮೊದಲು ಶರೀರಿಯಾಗಿ ಹಿರಣ್ಯಗರ್ಭನಿಂದ ಹುಟ್ಟಿದ ವಿರಾಟ್ಪುರುಷ, ೬೧.

**೧೧೧. ಪ್ರದೀಪನಿರ್ವಾಣಮ್ -**

ದೀಪವು ಆರಿ ಅವ್ಯಕ್ತವಾಗುವದು, ಮುಕ್ತರು ಪರಮಾತ್ಮನಲ್ಲಿ ಸೇರುವದಕ್ಕೆ ದೃಷ್ಟಾಂತ, ೧೧೮.

**೧೧೨. ಪ್ರಯೋಜನಮ್ -**

ವಿದ್ಯೆಗೆ ಫಲ, ಗ್ರಂಥಕ್ಕೆ ಇರಬೇಕಾದ ನಾಲ್ಕು ಅನುಬಂಧಗಳಲ್ಲಿ ಒಂದು, ೨, ೩, ೬.

**೧೧೩. ಪ್ರವೃತ್ತಫಲಾನಿ -**

ಫಲವನ್ನು ಕೊಟ್ಟುಬಿಟ್ಟಿರುವ, ಪ್ರಾರಬ್ಧಕರ್ಮಗಳು, ೧೨೦.

**೧೧೪. ಪ್ರಾಣಃ -**

ಕ್ರಿಯಾಶಕ್ತಿಪ್ರಧಾನವಾದ ವಾಯು, ಹಿರಣ್ಯಗರ್ಭ, ೨೩, ೫೪, ೫೭, ೬೦ ; ಮುಖ್ಯಪ್ರಾಣ, ೮೧, ೧೨೦.

**೧೧೫. ಪ್ರಾಣಾಃ -**

ಇಂದ್ರಿಯಗಳು, ೬೭, ೭೭, ೧೦೬.

**೧೧೬. ಬಾಹ್ಯಾರ್ಥಪ್ರತ್ಯಯಾನುಸಾರಿಣಃ -**

ಹೊರಗಿನ ವಿಷಯವನ್ನೇ ಕಾಣುವ ಅರಿವಿನ ಅಜ್ಞರು, ೮೫.

**೧೧೭. ಬುದ್ಧಿಪ್ರತ್ಯಯಸಾಕ್ಷೀ, ಬೌದ್ಧಪ್ರತ್ಯಯಸಾಕ್ಷೀ -**

ಅಂತಃಕರಣದಲ್ಲಿ ಆಗುವ ಅರಿವುಗಳಿಗೆ ಸಾಕ್ಷಿ, ೭೬, ೭೮.

**೧೧೮. ಬುದ್ಧೀನ್ದ್ರಿಯಾಣಿ -**

ಅರಿಯುವ ಇಂದ್ರಿಯಗಳು, ಚಕ್ಷುರಾದಿಗಳು, ೧೯, ೫೪.

**೧೧೯. ಬ್ರಹ್ಮ -**

ಎಲ್ಲಕ್ಕೂ ದೊಡ್ಡದು, ಪರಮಾತ್ಮ, ೬, ೮, ೪೭, ೭೨, ೭೩, ೭೪, ೭೬, ೮೦, ೮೭, ೧೦೩, ೧೧೦, ೧೧೬, ೧೧೮, ೧೧೯.

**೧೨೦. ಬ್ರಹ್ಮನಿಷ್ಠಃ -**

ಉಪಾಸನೆಯಿಂದ ಅಥವಾ ಜ್ಞಾನದಿಂದ ಬ್ರಹ್ಮದಲ್ಲಿಯೇ ನೆಲೆನಿಂತವನು, ೪೭.

**೧೨೧. ಬ್ರಹ್ಮಪುರಮ್ -**

ಬ್ರಹ್ಮವನ್ನು ಅರಿತುಕೊಳ್ಳಬಹುದಾದ ಸ್ಥಾನ ಹೃದಯ, ೮೦.

**೧೨೨. ಬ್ರಹ್ಮಲೋಕಃ -**

ಕರ್ಮಕ್ಕೆ ಸಿಕ್ಕುವ ಹೆಚ್ಚಿನ ಲೋಕ, ಸ್ವರ್ಗ, ೩೬ ; ಬ್ರಹ್ಮ, ೧೧೮.

**೧೨೩. ಬ್ರಹ್ಮವಿದಃ -**

ವೇದಾರ್ಥವನ್ನು ಬಲ್ಲವರು, ೧೩; ಬ್ರಹ್ಮವನ್ನು ಅರಿತಿರುವವರು, ೪೮, ೯೭, ೧೧೭, ೧೨೨, ೧೨೩.

**೧೨೪. ಬ್ರಹ್ಮವಿದ್ಯಾ -**

ಪರಮಾತ್ಮನನ್ನು ಅರಿತುಕೊಳ್ಳುವದು, ೨, ೪, ೫, ೬, ೮, ೯, ೧೭, ೪೫, ೪೮, ೪೯, ೭೮, ೯೭, ೧೨೪, ೧೨೫, ೧೨೬.

**೧೨೫. ಬ್ರಹ್ಮಾ -**

ಬ್ರಹ್ಮವಿದ್ಯಾ ಸಂಪ್ರದಾಯಕರ್ತೃವಾದ ಹಿರಣ್ಯಗರ್ಭನು, ೭, ೮.

**೧೨೬. ಬ್ರಹ್ಮಾತ್ಮೈಕತ್ವದರ್ಶನಮ್ -**

ಬ್ರಹ್ಮರೂಪನಾದ ಆತ್ಮನು ಒಬ್ಬನೇ ಪರಮಾರ್ಥವೆಂದು ಕಂಡುಕೊಳ್ಳುವದು, ೫.

**೧೨೭. ಬ್ರಹ್ಮಾದಿಸ್ತಮ್ಬಪರ್ಯನ್ತಾನಿ ಭೂತಾನಿ, ಬ್ರಹ್ಮಾದಿಸ್ಥಾವರಾನ್ತಾಃ ಪ್ರಾಣಿನಃ -**

ಹಿರಣ್ಯಗರ್ಭನಿಂದ ಹಿಡಿದು ಸ್ಥಾವರ ಪ್ರಾಣಿಗಳವರೆಗಿನ ಜೀವರುಗಳು, ೧೯, ೯೫.

**೧೨೮. ಭಾವವಿಕಾರಾಃ -**

ಪದಾರ್ಥಗಳಿಗೆ ಆಗುವ ಹುಟ್ಟು, ಇರವು, ಮಾರ್ಪಾಡು ಮುಂತಾದ ಆರು ವಿಕಾರಗಳು, ೫೩.

**೧೨೯. ಭಾವಾಃ -**

ಜೀವರುಗಳು, ೫೧.

**೧೩೦. ಭೂತಯೋನಿಃ -**

ಭೂತಗಳಿಗೆಲ್ಲ ಕಾರಣವಾದ ಬ್ರಹ್ಮ, ೧೯, ೨೦, ೨೩.

**೧೩೧. ಮನಃ -**

ಸಮಷ್ಟಿಯ ಜ್ಞಾನಶಕ್ತಿ, ಅಂತಃಕರಣ, ೨೩, ೫೭.

**೧೩೨. ಮನೋಮಯಃ -**

ಮನೋವೃತ್ತಿಗಳಿಂದ ತಿಳಿಯಬರುವ ಆತ್ಮ, ೮೧.

**೧೩೩. ಮಾಯಾಮರೀಚ್ಯುದಕ ಗನ್ಧರ್ವನಗರಾಕಾರ(?) ಸ್ವಪ್ನ ಜಲಬುದ್ಬುದಫೇನಸಸಮಾಃ -**

ಮಾಯೆ, ಬಿಸಿಲುಕುದುರೆಯ ನೀರು, ಗಂಧರ್ವನಗರ, ಕನಸು, ನೀರುಗುಳ್ಳೆ ನೊರೆ-ಇವುಗಳಂತೆ ಅಸತ್ಯ, ಅನಿತ್ಯ, ಅಶುಚಿಯಾಗಿರುವ ಲೋಕಗಳು, ೪೫.

**೧೩೪. ಮಾಯಾತ್ಮಾ -**

ಹುಸಿತೋರಿಕೆಯ ಆತ್ಮ, ಜೀವ, ೯೨.

**೧೩೫. ಮೋಕ್ಷಃ -**

ಸಂಸಾರದಿಂದ ಬಿಡುಗಡೆ, ೨೭, ೪೩, ೭೭, ೭೮.

**೧೩೬. ಯೋಗಃ -**

ಜ್ಞಾನಪ್ರಾಪ್ತಿಗೆ ಉಪಾಯ, ಧ್ಯಾನ, ಅಹಿಂಸೆ, ಸತ್ಯ-ಮುಂತಾದ ಸಾಧನ, ೯೨.

**೧೩೭. ಯೋಗಿನಃ -**

ಇಂದ್ರಿಯಪ್ರಧಾನರಲ್ಲದೆ ಅಂತರ್ಮುಖರಾದವರು, ೧೦೩.

**೧೩೮. ಲಿಙ್ಗಮ್ -**

ವಚನವು ನೇರಾಗಿ ಹೇಳದೆ ಇದ್ದರೂ ಅರ್ಥವಶದಿಂದ ಅಭಿಪ್ರಾಯವನ್ನು ತಿಳಿಸುವ ಗುರುತು, ೫ ; ಸೂಕ್ಷ್ಮ ಶರೀರ, ೬೮; ಸಂನ್ಯಾಸ, ೧೧೬.

**೧೩೯. ಲಿಙ್ಗೋಪಾಧಿಃ -**

ಲಿಂಗ (ಸೂಕ್ಷ್ಮ) ಶರೀರವೆಂಬ ಉಪಾಧಿಯುಳ್ಳ ಜೀವನು, ೯೧.

**೧೪೦. ಲೋಕಃ -**

ಭೋಗಸ್ಥಾನ, ೩೨, ೩೬, ೪೨, ೬೧, ೬೫, ೭೪, ೧೦೮ ; ಇಂದ್ರಿಯಸ್ಥಾನ, ೬೭ ; ಕರ್ಮಫಲ, ೨೮, ೪೦, ೪೧, ೪೫, ೬೫; ಬ್ರಹ್ಮ, ೧೧೮.

**೧೪೧. ಲೌಕಿಕವಿಜ್ಞಾನಮ್ -**
ಸಾಮಾನ್ಯರ ತಿಳಿವಳಿಕೆ, ಇಂದ್ರಿಯಗಳಿಂದಾಗುವ ಅರಿವು, ೭೩.

**೧೪೨. ವಿಜ್ಞಾನಮ್ -**
ಬ್ರಹ್ಮವನ್ನು ಶಾಸ್ತ್ರಾಚಾರ್ಯರ ಉಪದೇಶದಿಂದ ಇಂಥದ್ದೆಂದು ಗೊತ್ತಾಗಿ ಅರಿತುಕೊಳ್ಳುವದು, ೪೭, ೭೦, ೮೧, ೮೩, ೧೧೨, ೧೧೮.

**೧೪೩. ವಿಜ್ಞಾನಮಯಃ -**
ಬುದ್ಧಿ ವಿಜ್ಞಾನವೆಂಬ ಉಪಾಧಿಯುಳ್ಳ ಜೀವ, ೧೨೦.

**೧೪೪. ವಿದ್ಯಾ -**
ಆತ್ಮಜ್ಞಾನ, ೧, ೨, ೫, ೬, ೮, ೯, ೧೧೨, ೧೧೪, ೧೨೨, ೧೨೬.

**೧೪೫. ವಿದ್ಯಾಸಂಪ್ರದಾಯಕರ್ತೃಪಾರಂಪರ್ಯಮ್ -**
ಬ್ರಹ್ಮವಿದ್ಯೆಯನ್ನು ಶಿಷ್ಯರಿಗೆ ಹೇಳಿಕೊಡುವ ಗುರುಗಳ ಪರಂಪರೆ, ೧.

**೧೪೬. ವಿದ್ವಾನ್ -**
ಉಪಾಸಕ, ೬೭ ; ಜ್ಞಾನಿ, ೧೦೩.

**೧೪೭. ವಿರಾಟ್ -**
ಹಿರಣ್ಯಗರ್ಭನಿಂದ ಉತ್ಪನ್ನನಾಗುವ ತ್ರೈಲೋಕ್ಯಶರೀರನಾದ ಆತ್ಮ, ೬೦.

**೧೪೮. ವಿಷ್ಣುಃ -**
ವಿರಾಟ್ಪುರುಷ, ೬೧.

**೧೪೯. ವ್ಯಾಕೃತಾವ್ಯಾಕೃತಲಕ್ಷಣಾಃ -**
ಸೂಕ್ಷ್ಮರೂಪದಿಂದ ಅವ್ಯಕ್ತವಾಗಿಯೂ ಕಾರ್ಯರೂಪದಿಂದ ವಿಂಗಡಿಸಿಕೊಂಡೂ ಇರುವ ಲೋಕಗಳು, ೪೫.

**೧೫೦. ಶರೀರಪಾತಃ -**
ದೇಹವು ಬೀಳುವದು, ಸಾವು, ೧೧೭.

**೧೫೧. ಶಿರೋವ್ರತಮ್ -**
ಶಿರಸ್ಸಿನಲ್ಲಿ ಅಗ್ನಿಧಾರಣೆ ಮಾಡುವ ಅಥರ್ವವೇದಪ್ರಸಿದ್ಧವಾದ ವ್ರತ, ೧೨೫.

**೧೫೨. ಶಿಷ್ಟಪ್ರವಾದಃ -**
ಬ್ರಹ್ಮವನ್ನು ತಿಳಿದವರು ಹೇಳಿಕೊಳ್ಳುವ ಮಾತು, ೧೧.

**೧೫೩. ಶ್ರದ್ಧಾ -**
ಹಿರಣ್ಯಗರ್ಭಾದ್ಯುಪಾಸನೆ, ೪೨.

**೧೫೪. ಶ್ರೇಯಃ -**
ಒಳ್ಳೆಯದು, ಉತ್ತಮಫಲವಾದ ಮುಕ್ತಿ, ೩೮, ೪೧.

**೧೫೫. ಶ್ರೌತಂಕರ್ಮ -**
ಶ್ರುತಿಯಲ್ಲಿ ವಿಧಿಸಿರುವ ಅಗ್ನಿಹೋತ್ರವೇ ಮುಂತಾದ ಕರ್ಮ, ೪೧.

**೧೫೬. ಸಂಸಾರಗತಯಃ -**
ಸಂಸಾರಿಗಳು ಹೋಗಿ ಪಡೆಯುವ ಲೋಕಗಳು ೪೩, ೪೫.

**೧೫೭. ಸಂಕ್ಷೇಪವಿಸ್ತರೋಕ್ತಿಃ -**
ಮೊದಲು ಸಂಗ್ರಹವಾಗಿಯೂ ಆಮೇಲೆ ವಿಸ್ತಾರವಾಗಿಯೂ ಹೇಳಿದ ವಿಷಯ, ೫೯.

**೧೫೮. ಸತ್ಯಮ್ -**
ಭೂತಪಂಚಕ, ೨೩; ಪರಮಾರ್ಥಸತ್ಯವಾದ ಬ್ರಹ್ಮ, ೪೯, ೫೦; ನಿಜವಾಗಿ ಫಲವನ್ನು ಕೊಡುವದು, ೨೮; ಸುಳ್ಳಾಡದಿರುವದು, ೬೬, ೯೯, ೧೦೧.

**೧೫೯. ಸತ್ಯಲೋಕಃ -**
ಬ್ರಹ್ಮನ ಲೋಕ, ೩೨, ೪೨.

**೧೬೦. ಸದಸತ್ -**
ಸ್ಥೂಲ ಸೂಕ್ಷ್ಮ ರೂಪದಲ್ಲಿರುವ ಮೂರ್ತಾಮೂರ್ತಗಳಾಗಿರುವ ಬ್ರಹ್ಮ, ೭೩.

**೧೬೧. ಸಂನ್ಯಾಸಯೋಗಃ -**
ಸರ್ವಕರ್ಮವನ್ನೂ ತ್ಯಾಗ ಮಾಡುವದೆಂಬ ಜ್ಞಾನಸಾಧನ, ೧೧೮.

**೧೬೨. ಸಮ್ಯಗ್ಜ್ಞಾನಮ್ -**

ಆತ್ಮನ ಸರಿಯಾದ ತಿಳಿವಳಿಕೆ, ೯೮, ೯೯.

**೧೬೩. ಸರ್ವಜ್ಞಃ -**

ಎಲ್ಲವನ್ನೂ ಜ್ಞಾನದಿಂದ ಬೆಳಗುವ ಪರಮಾತ್ಮ, ೨೩, ೨೫, ೮೦.

**೧೬೪. ಸರ್ವಭೂತಾನ್ತರಾತ್ಮಾ -**

ಸರ್ವಭೂತಗಳಿಗೂ ಒಳಗಿನ ಆತ್ಮನಾಗಿರುವ ವಿರಾಟ್ಪುರುಷ, ೬೧.

**೧೬೫. ಸರ್ವವಿತ್ -**

ಎಲ್ಲದರ ತಿರುಳನ್ನೂ ಬಲ್ಲವ, ೧೧, ೧೨ ; ಎಲ್ಲವನ್ನೂ ಬೇರೆಬೇರೆಯಾಗಿ ಅರಿಯುವ ಪರಮಾತ್ಮ, ೨೫, ೮೦.

**೧೬೬. ಸರ್ವಸತ್ತ್ವೋಪಾಧಿಃ -**

ಒಟ್ಟು ಅಂತಃಕರಣದ ಸತ್ತ್ವಗುಣವೇ ಉಪಾಧಿಯಾಗಿರುವ ಈಶ್ವರ, ೯೧.

**೧೬೭. ಸರ್ವಾತ್ಮಾ -**

ಪ್ರತಿಯೊಬ್ಬನಿಗೂ ಆತ್ಮನಾಗಿರುವವನು, ೯೫, ೧೦೭.

**೧೬೮. ಸರ್ವಾನ್ತರಮ್ -**

ಎಲ್ಲಕ್ಕೂ ಒಳಗಿರುವ ನಮ್ಮ ಆತ್ಮನಾದ ಬ್ರಹ್ಮ, ೧೦೩.

**೧೬೯. ಸಹಕಾರಿಸಾಧನಾನಿ -**

ಜ್ಞಾನವುಂಟಾಗುವದಕ್ಕೆ ಸಹಾಯವಾಗುವ ಸತ್ಯಾದಿಸಾಧನಗಳು, ೯೮.

**೧೭೦. ಸಾಧ್ಯಸಾಧನಾನಿ, ಸಾಧನ ಸಾಧ್ಯಾನಿ -**

ಪ್ರಜೆ, ಕರ್ಮ, ಉಪಾಸನೆ - ಎಂಬ ಸಾಧನಗಳು, ಅವುಗಳಿಂದಾಗುವ ಮನುಷ್ಯಪಿತೃಲೋಕಗಳು, ೨, ೪೩, ೪೪.

**೧೭೧. ಸಿದ್ಧಾನ್ತಃ -**

ವಿಚಾರ ಮಾಡಿದ ಬಳಿಕ ಏರ್ಪಡುವ ನಿರ್ಣಯ, ೧೪.

**೧೭೨. ಸೂಕ್ಷ್ಮಶರೀರಮ್ -**

ಕರಣಗಳ ಗುಂಪು, ಲಿಂಗಶರೀರ, ೬೮.

**೧೭೩. ಸೂತ್ರಭಾಷ್ಯೋಕ್ತಿವತ್ -**

ಸಂಗ್ರಹವಾಗಿರುವ ಸೂತ್ರದ ವಿಷಯವನ್ನೇ ಭಾಷ್ಯದ ವಿಸ್ತಾರವಾದ ಮಾತಿನಿಂದ ತಿಳಿಸುವಂತೆ (ಸಂಗ್ರಹವಾಗಿ ಒಂದು ಸಲ ಹೇಳಿ ಮತ್ತೊಮ್ಮೆ ವಿಸ್ತಾರವಾಗಿ ಹೇಳುವದು), ೫೯.

**೧೭೪. ಸೃಷ್ಟಿಸ್ಥಿತಿಸಂಹಾರಶಕ್ತಿ ವಿಜ್ಞಾನವತ್ -**

ಜಗತ್ತನ್ನು ಹುಟ್ಟಿಸುವದು, ಕಾಪಾಡುವದು, ಲಯಗೊಳಿಸುವದು - ಇವುಗಳಿಗೆ ಬೇಕಾದ ಶಕ್ತಿಯೂ ತಿಳಿವಳಿಕೆಯೂ ಇರುವ ಬ್ರಹ್ಮ, ೨೩.

**೧೭೫. ಸ್ಮಾರ್ತಂ ಕರ್ಮ -**

ಸ್ಮೃತಿಯಲ್ಲಿ ಹೇಳಿರುವ ಕರ್ಮ, ೪೧.

**೧೭೬. ಸ್ವರ್ಗಃ -**

ಕರ್ಮಕ್ಕೆ ಫಲವಾಗಿ ಸಿಕ್ಕುವ ಲೋಕ, ೩೪, ೩೮, ೪೦, ೪೧.

**೧೭೭. ಸ್ವಾತ್ಮಪ್ರತಿಷ್ಠಾ -**

ತಮ್ಮ ಆತ್ಮನಲ್ಲಿ ನಿಲುಗಡೆಯನ್ನು ಹೊಂದುವ ಮುಕ್ತಿ, ೨೭.

**೧೭೮. ಸ್ವಾಭಾವಿಕ -**

ವಿಚಾರದಿಂದಾಗುವ ತಿಳಿವಳಿಕೆಯಿಲ್ಲದವರಿಗೆ ಸ್ವಭಾವದಿಂದಿರುವ, ೪೫.

**೧೭೯. ಹಿರಣ್ಯಗರ್ಭಃ -**

ವ್ಯಾಕೃತಪ್ರಪಂಚದಲ್ಲಿ ಎಲ್ಲರಿಗೂ ಕಾರಣನಾಗಿರುವ ಬ್ರಹ್ಮನು, ಕಾರ್ಯಬ್ರಹ್ಮ, ಪ್ರಾಣ, ಅಪರಬ್ರಹ್ಮ, ೨೩, ೨೫.

**೧೮೦. ಹೃದಯಗ್ರನ್ಥಿಃ -**

ಹೃದಯಕ್ಕೆ ಗಂಟುಬಿದ್ದಿರುವಂತೆ ಇರುವ ಅವಿದ್ಯಾವಾಸನೆಯ ಫಲವಾದ ಕಾಮವು, ೮೩.

# ಮಂತ್ರಗಳ ಅನುಕ್ರಮಣಿಕೆ



| ಮಂತ್ರಗಳ ಪ್ರತೀಕ | ಮುಂ. | | | ಪುಟ |
|---|---|---|---|---|
| ಅಗ್ನಿರ್ಮೂರ್ಧಾ ಚಕ್ಷುಷೀ | ೨ | ೧ | | ೬೬ |
| ಅತಃ ಸಮುದ್ರಾ ಗಿರಯಶ್ಚ | ೨ | ೧ | | ೭೫ |
| ಅಥ ಪರಾ ಯಯಾ ತದಕ್ಷರ .. | ೧ | ೧ | | ೧೬ |
| ಅಥರ್ವಣೇ ಯಾಂ ಪ್ರವದೇತ | ೧ | ೧ | ೨ | ೧೦ |
| ಅರಾ ಇವ ರಥನಾಭೌ | ೨ | ೨ | ೬ | ೯೦ |
| ಅವಿದ್ಯಾಯಾಮನ್ತರೇ | ೧ | ೨ | ೮ | ೪೨ |
| ಅವಿದ್ಯಾಯಾಂ ಬಹುಧಾ | ೧ | ೨ | ೯ | ೪೩ |
| ಆವಿಃ ಸಂನಿಹಿತಮ್ | ೨ | ೨ | ೧ | ೮೦ |
| ಇಷ್ಟಾಪೂರ್ತಂ ಮನ್ಯಮಾನಾ | ೧ | ೨ | ೧೦ | ೪೪ |
| ಏತಸ್ಮಾಜ್ಜಾಯತೇ ಪ್ರಾಣಃ | ೧ | ೨ | ೩ | ೬೩ |
| ಏತೇಷು ಯಶ್ಚರತೇ | ೧ | ೨ | ೫ | ೩೮ |
| ಏಷೋಽಣುರಾತ್ಮಾ ಚೇತಸಾ | ೩ | ೧ | ೯ | ೧೨೮ |
| ಏಹ್ಯೇಹೀತಿ ತಮಾಹುತಯಃ | ೧ | ೨ | ೬ | ೩೯ |
| ಕಾಮಾನ್ ಯಃ ಕಾಮಯತೇ | | ೨ | ೨ | ೧೩೩ |
| ಕಾಲೀ ಕರಾಲೀ ಚ | ೧ | ೨ | | ೩೭ |
| ಗತಾಃ ಕಲಾಃ ಪಂಚದಶ | ೩ | ೨ | | ೧೪೪ |
| ತತ್ರಾ ಪರಾ ಋಗ್ವೇದೋ | ೧ | ೧ | | ೧೬ |
| ತದೇತತ್ ಸತ್ಯಂ ಯಥಾ | ೨ | ೧ | ೧ | ೫೫ |
| ತದೇತತ್ ಸತ್ಯಮೃಷಿಃ | ೩ | ೨ | ೧೧ | ೧೫೧ |
| ತದೇತತ್ ಸತ್ಯಂ ಮನ್ತ್ರೇಷು | ೧ | ೨ | ೧ | ೩೧ |
| ತದೇತದೃಚಾಭ್ಯುಕ್ತಮ್ | ೩ | ೨ | ೧೦ | |
| ತಪಸಾ ಚೀಯತೇ ಬ್ರಹ್ಮ | ೧ | ೧ | ೮ | |
| ತಪಃ ಶ್ರದ್ಧೇ ಯೇ ಹ್ಯುಪವಸನ್ತಿ | ೧ | ೨ | ೧೧ | |
| ತಸ್ಮಾಚ್ಚ ದೇವಾ ಬಹುಧಾ | ೨ | ೧ | ೭ | ೭೨ |
| ತಸ್ಮಾದಗ್ನಿಃ ಸಮಿಧಃ | ೨ | ೧ | | ೬೮ |
| ತಸ್ಮಾದೃಚಃ ಸಾಮ ಯಜೂಂಷಿ | ೨ | ೧ | | ೭೦ |
| ತಸ್ಮೈ ಸ ವಿದ್ವಾನುಪಸನ್ನಾಯ | ೧ | ೨ | ೧೩ | ೫೩ |
| ತಸ್ಮೈ ಸ ಹೋವಾಚ | ೧ | ೧ | ೪ | ೧೪ |
| ದಿವ್ಯೋ ಹ್ಯಮೂರ್ತಃ ಪುರುಷಃ | ೨ | ೧ | ೨ | ೫೮ |
| ದ್ವಾ ಸುಪರ್ಣಾ ಸಯುಜಾ | ೩ | ೧ | ೧ | ೧೦೬ |
| ಧನುರ್ಗೃಹೀತ್ವೌಪನಿಷದಮ್ | ೨ | ೨ | ೩ | ೮೫ |
| ನ ಚಕ್ಷುಷಾ ಗೃಹ್ಯತೇ | ೩ | ೧ | ೮ | ೧೨೫ |

| ಮಂತ್ರಗಳ ಪ್ರತೀಕ | ಮುಂ. | ಖಂ. | ಮಂ. | ಪುಟ |
|---|---|---|---|---|
| ನ ತತ್ರ ಸೂರ್ಯೋ ಭಾತಿ | ೨ | ೨ | ೧೧ | ೧೦೦ |
| ನಾಯಮಾತ್ಮಾ ಪ್ರವಚನೇನ | ೩ | ೨ | ೩ | ೧೩೫ |
| ನಾಯಮಾತ್ಮಾ ಬಲಹೀನೇನ | ೩ | ೨ | ೪ | ೧೩೭ |
| ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ | ೧ | ೨ | ೧೨ | ೪೮ |
| ಪುರುಷ ಏವೇದಂ ವಿಶ್ವಮ್ | ೨ | ೧ | ೧೦ | ೭೭ |
| ಪ್ಲವಾ ಹ್ಯೇತೇ ಅದೃಢಾಃ | ೧ | ೨ | ೭ | ೪೧ |
| ಪ್ರಣವೋ ಧನುಃ ಶರೋ ಹ್ಯಾತ್ಮಾ | ೨ | ೨ | ೪ | ೮೬ |
| ಪ್ರಾಣೋ ಹ್ಯೇಷ ಯಃ ಸರ್ವಭೂತೈಃ | ೩ | ೧ | ೪ | ೧೧೩ |
| ಬೃಹಚ್ಚ ತದ್ದಿವ್ಯಮ್ | ೩ | ೧ | ೭ | ೧೨೩ |
| ಬ್ರಹ್ಮಾ ದೇವಾನಾಂ ಪ್ರಥಮಃ | ೧ | ೧ | ೧ | ೭ |
| ಬ್ರಹ್ಮೈವೇದಮಮೃತಮ್ | ೨ | ೨ | ೧೨ | ೧೦೩ |
| ಭಿದ್ಯತೇ ಹೃದಯಗ್ರನ್ಥಿಃ | ೨ | ೨ | ೯ | ೯೬ |
| ಮನೋಮಯಃ ಪ್ರಾಣಶರೀರನೇತಾ | ೨ | ೨ | ೮ | ೯೪ |
| ಯಥಾ ನದ್ಯಃ ಸ್ಯನ್ದಮಾನಾಃ | ೩ | ೨ | ೮ | ೧೪೬ |
| ಯಥೋರ್ಣನಾಭಿಃ ಸೃಜತೇ | ೧ | ೧ | ೭ | ೨೨ |
| ಯದರ್ಚಿಮದ್ಯದಣುಭ್ಯಃ | ೨ | ೨ | ೨ | ೮೩ |
| ಯದಾ ಪಶ್ಯಃ ಪಶ್ಯತೇ | ೩ | ೧ | ೩ | ೧೧೨ |
| ಯದಾ ಲೇಲಾಯತೇ ಹ್ಯರ್ಚಿಃ | ೧ | ೨ | ೨ | ೩೩ |
| ಯಂ ಯಂ ಲೋಕಂ ಮನಸಾ | ೩ | ೧ | ೧೦ | ೧೨೯ |
| ಯಃ ಸರ್ವಜ್ಞಃ ಸರ್ವವಿದ್ಯಸ್ಯ | ೧ | ೧ | ೯ | ೨೭ |
| ಯಃ ಸರ್ವಜ್ಞಃ ಸರ್ವವಿತ್ | ೨ | ೨ | ೭ | ೯೨ |
| ಯಸ್ಮಿನ್ ದ್ಯೌಃ ಪೃಥಿವೀ | ೨ | ೨ | ೫ | ೮೮ |
| ಯಸ್ಯಾಗ್ನಿಹೋತ್ರಮದರ್ಶಮ್ | ೧ | ೨ | ೩ | ೩೪ |
| ವೇದಾನ್ತವಿಜ್ಞಾನಸುನಿಶ್ಚಿತಾರ್ಥಾಃ | ೩ | ೨ | ೬ | ೧೪೦ |
| ಶೌನಕೋ ಹ ವೈ ಮಹಾಶಾಲಃ | ೧ | ೧ | ೩ | ೧೧ |
| ಸತ್ಯಮೇವ ಜಯತೇ | ೩ | ೧ | ೬ | ೧೨೧ |
| ಸತ್ಯೇನ ಲಭ್ಯಸ್ತಪಸಾ | ೩ | ೧ | ೫ | ೧೧೮ |
| ಸಪ್ತ ಪ್ರಾಣಾಃ ಪ್ರಭವನ್ತಿ | ೨ | ೧ | ೮ | ೭೩ |
| ಸಮಾನೇ ವೃಕ್ಷೇ ಪುರುಷಃ | ೩ | ೧ | ೨ | ೧೦೮ |
| ಸಂಪ್ರಾಪ್ಯೈನಮೃಷಯಃ | ೩ | ೨ | ೫ | ೧೩೮ |
| ಸ ಯೋ ಹ ವೈ ತತ್ ಪರಮಂ | ೩ | ೨ | ೯ | ೧೪೮ |
| ಸ ವೇದೈತತ್ ಪರಮಂ | ೩ | ೨ | ೧ | ೧೩೧ |
| ಹಿರಣ್ಮಯೇ ಪರೇ ಕೋಶೇ | ೨ | ೨ | ೧೦ | ೯೮ |

# ಕೆಲವು ಪ್ರಕರಣ ಗ್ರಂಥಗಳು

೧. **ಪ್ರಕರಣಗಳು - ೧ ನೆಯ ಸಂಪುಟ : ಉಪದೇಶಸಾಹಸ್ರಿ**. ಇದು ಪದ್ಯಭಾಗವೆಂದೂ ಗದ್ಯಭಾಗವೆಂದೂ ಎರಡು ಭಾಗಗಳಾಗಿವೆ. ಪದ್ಯ ಪ್ರಬಂಧವು ಶ್ರೀ ಶ್ರೀ ಗಳವರಿಂದ (ಪೂರ್ವಾಶ್ರಮ : ವೈ. ಸುಬ್ಬರಾವ್) ಕನ್ನಡಾನುವಾದ, ಟಿಪ್ಪಣಿ, ವಿವರಣೆ - ಮುಂತಾದ ಸೌಕರ್ಯಗಳೊಡನೆ ಪ್ರಥಮ ಬಾರಿಗೆ 1939ರಲ್ಲಿ ಒಂದನೆಯ ಭಾಗವು ಪ್ರಕಟಿತವಾಯಿತು. 1947 ರಲ್ಲಿ ಎರಡನೆಯ ಮತ್ತು 1956 ರಲ್ಲಿ ಮೂರನೆಯ ಭಾಗವೂ ಕ್ರಮವಾಗಿ ಪ್ರಕಟನವಾಗಿ ಪೂರ್ತಗೊಂಡಿತ್ತು. 1995 ರಲ್ಲಿ ಮೂರು ಪದ್ಯ ಭಾಗಗಳನ್ನೂ ಒಟ್ಟುಗೂಡಿಸಿ ಮೂಲ, ಅನುವಾದ, ಅನ್ವಯ, ಟಿಪ್ಪಣಿ, ವಿವರಣೆಗಳೊಡನೆ ಒಂದೇ ಸಂಪುಟದಲ್ಲಿ ಹೊರತಂದಿದೆ. ವಿಚಾರ ಶೈಲಿಯಲ್ಲಿ ಪ್ರಸ್ಥಾನತ್ರಯಿಗಳೊಡನೆ ಸರಿತೂಗುವ ಗ್ರಂಥವಿದು.

*[ಮೊದಲನೆಯ ಹೊಸ ಮುದ್ರಣ (1995) : ಪು. ಡೆಮ್ಮಿ ೧೬ + ೫೨೮]*

ಇದೇ ಗ್ರಂಥದ ಗದ್ಯಭಾಗವು 1983ರಲ್ಲಿ ಪ್ರತ್ಯೇಕ ಗ್ರಂಥವಾಗಿ ಪ್ರಕಟವಾಗಿದ್ದು ಈಗ ಪುನರ್ಮುದ್ರಣಕ್ಕಾಗಿ ಕಾದಿದೆ. ಇದರಲ್ಲಿ ಗುರುಶಿಷ್ಯಸಂವಾದರೂಪವಾಗಿ ವೇದಾಂತ ತತ್ತ್ವವನ್ನು ವಿಚಾರಮಾಡಲಾಗಿದೆ. ಪ್ರಸ್ಥಾನತ್ರಯಭಾಷ್ಯಗಳಂತೆಯೇ ಪರಿಶುದ್ಧವೇದಾಂತ ತತ್ತ್ವವನ್ನು ನಿರೂಪಿಸಲಾಗಿದೆ.

*[ಮೂರನೆಯ ಮುದ್ರಣ : (1983) ಪು. ಡೆಮ್ಮಿ ೧೨ + ೧೮೦]*

೨. **ಪ್ರಕರಣಗಳು : ೨ ನೆಯ ಸಂಪುಟ** : ಇದರಲ್ಲಿ ಸ್ವಾತ್ಮನಿರೂಪಣ, ಮನೀಷಾ ಪಂಚಕ, ನಿರ್ವಾಣಷಟ್ಕ, ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕೀ - ಈ ಆರು ಪ್ರಕರಣಗಳಿವೆ. ಪ್ರತಿಯೊಂದಕ್ಕೂ ಅರ್ಥ, ಟಿಪ್ಪಣಿಗಳು, ವಿಚಾರ ಪ್ರಚೋದಕವಾದ ಪೀಠಿಕೆ ಮುಂತಾದವುಗಳಿವೆ. *[ಮೊದಲನೆಯ ಮುದ್ರಣ : (1957) ಪು. ಡೆಮ್ಮಿ + ೧೩೬]*

೩. **ಪ್ರಕರಣಗಳು - ೩ ನೆಯ ಸಂಪುಟ ಅಥವಾ ವಿವೇಕಚೂಡಾಮಣಿ** : ಶ್ರೀ ಶಂಕರಾಚಾರ್ಯ ರಚಿತವೆಂದು ಪ್ರಸಿದ್ಧವಾಗಿರುವ ಈ ಗ್ರಂಥವು ತನ್ನ ಸರಳವಾದ ಶೈಲಿಯಿಂದ ತತ್ತ್ವಪ್ರತಿಪಾದನೆ ಮಾಡುವದರಿಂದ ಬಹುಜನಪ್ರಿಯವಾದ ಪ್ರಕರಣವಾಗಿದೆ. 'ಗೀತಾ ತಾತ್ಪರ್ಯ ಬೋಧಿನಿ' ಕರ್ತೃಗಳಾದ ಶ್ರೀ ಶಂಕರಾನಂದರ ಕೃತಿಯಿದು - ಎಂಬುದನ್ನು ಶ್ರೀ ಶ್ರೀ ಗಳವರು ಪರಿಶಿಷ್ಟದಲ್ಲಿ ಎರಡೂ ಗ್ರಂಥಗಳ ಭಾಗಗಳ ಪರಸ್ಪರ ಹೋಲಿಕೆಯಿಂದ ಪ್ರತಿಪಾದಿಸಿದ್ದಾರೆ. ಮುಮುಕ್ಷುಗಳಿಗೂ ವಿಚಾರಪರರಾದ ಸಂಶೋಧಕರಿಗೂ ಅಗತ್ಯವಾಗಿ ಬೇಕಾದ ಗ್ರಂಥವಾಗಿದೆ.

*[ಮೂರನೆಯ ಮುದ್ರಣ : (1957, 1975, 1993) ಪು. ಡೆಮ್ಮಿ ೧೮ + ೨೨೦]*

೪. **ಪ್ರಕರಣಗಳು - ೪ ನೆಯ ಸಂಪುಟ** : ಇದರಲ್ಲಿ ಜೀವನ್ಮುಕ್ತಾನಂದಲಹರೀ, ಯತಿಪಂಚಕ, ಮಾಯಾಪಂಚಕ, ನಿರ್ವಾಣಮಂಜರಿ, ಬ್ರಹ್ಮಜ್ಞಾನಾವಳೀಮಾಲೆ, ಅನಾತ್ಮಶ್ರೀವಿಗರ್ಹಣ, ತತ್ತ್ವೋಪದೇಶ, ಪ್ರೌಢಾನುಭೂತಿ, ಉಪದೇಶಪಂಚಕ, ಸ್ವರೂಪಾನುಸಂಧಾನ, ಮಹಾವಾಕ್ಯದರ್ಪಣ ಈ ಹನ್ನೊಂದು ಪ್ರಕರಣಗಳು ಮೂಲ, ಅರ್ಥ

ಸಮೇತ ಇವೆ. ಮಹಾವಾಕ್ಯದರ್ಪಣವು ಸ್ವಲ್ಪ ದೊಡ್ಡ ಪ್ರಕರಣವಾಗಿದ್ದು ಮಹಾವಾಕ್ಯ ವಿಚಾರವನ್ನೊಳಗೊಂಡಿದೆ.[ಮೊದಲನೆಯ ಮುದ್ರಣ : (1961) ಪು. ಡೆಮ್ಮಿ ೧೬ + ೧೭೦]

೫. ಪ್ರಕರಣಗಳು - ೫ನೆಯ ಸಂಪುಟ : ಸರ್ವವೇದಾಂತ ಸಿದ್ಧಾಂತ ಸಾರ ಸಂಗ್ರಹವೆಂಬ ಅಪೂರ್ವ ಪ್ರಕರಣವನ್ನು ಈ ಸಂಪುಟದಲ್ಲಿ ಅಳವಡಿಸಲಾಗಿದೆ. ಅಧ್ಯಾರೋಪಾಪವಾದ, ಅವಸ್ಥಾತ್ರಯ, (ಪಂಚಕೋಶ)ಪರಿಶೀಲನೆಯಿಂದ ವಿಶ್ವ ವೈಶ್ವಾನರ, ತೈಜಸ ಹಿರಣ್ಯಗರ್ಭ, ಪ್ರಾಜ್ಞ ಈಶ್ವರ - ಎಂಬ ಸಮಷ್ಟಿವ್ಯಷ್ಟ್ಯುಪಾಧಿಗಳಿಂದ ಆತ್ಮವಿಭಾಗ ಮತ್ತು ಅವರ ಐಕ್ಯವನ್ನು ಪ್ರತಿಪಾದಿಸಿ ಶ್ರವಣಮನನನಿದಿಧ್ಯಾಸನಗಳನ್ನು ವಾಕ್ಯಾರ್ಥ ಜ್ಞಾನಕ್ಕೆ ಸಾಧನವಾಗಿ ಹೇಳಿರುವದಲ್ಲದೆ ಸಮಾಧಿಯ ವಿವರಗಳನ್ನೂ ತಿಳಿಸಿದೆ. ವೇದಾಂತವಿಚಾರಪರಿಶೀಲಕರು ಅವಶ್ಯವಾಗಿ ಓದಬೇಕಾದ ಗ್ರಂಥವಿದು.

[ಮೊದಲನೆಯ ಮುದ್ರಣ : (1969) ಪು. ಡೆಮ್ಮಿ ೧೨ + ೨೩೮]

೬. ಪ್ರಕರಣಗಳು - ೬ನೆಯ ಸಂಪುಟ : - ವಿಷ್ಣುಸಹಸ್ರನಾಮಭಾಷ್ಯ ; ಶ್ರೀ ಶಂಕರಾಚಾರ್ಯ ವಿರಚಿತವೆಂದು ಪ್ರಸಿದ್ಧವಾಗಿರುವ ವಿಷ್ಣುಸಹಸ್ರನಾಮ ಭಾಷ್ಯವನ್ನು ಮೂಲ, ಅನುವಾದ, ಟಿಪ್ಪಣಿ - ಇತ್ಯಾದಿಗಳೊಡನೆ ಕೊಡಲಾಗಿದೆ. ಅತ್ಯಮೂಲ್ಯವಾದ ಗ್ರಂಥವಿದು. [ಎರಡನೆಯ ಮುದ್ರಣ : (1974, 1986) ಪು. ಡೆಮ್ಮಿ ೧೧ + ೩೦೫]

೭. ಪ್ರಕರಣಗಳು - ೭ ನೆಯ ಸಂಪುಟ : ಸನತ್ಸುಜಾತೀಯಮ್ ; ಮಹಾಭಾರತದಲ್ಲಿ ಉದ್ಯೋಗಪರ್ವದಲ್ಲಿರುವ ಈ ಭಾಗವು ಧೃತರಾಷ್ಟ್ರನಿಗೆ ಸನತ್ಸುಜಾತರು ಮಾಡಿರುವ ತತ್ತ್ವೋಪದೇಶಗಳನ್ನು ಒಳಗೊಂಡಿದೆ. ಶಾಂಕರಭಾಷ್ಯ, ಮೂಲ, ಅನುವಾದ, ಟಿಪ್ಪಣಿಗಳೊಡನೆ ಜಿಜ್ಞಾಸುಗಳಿಗೆ ಉಪಯುಕ್ತವಾಗಿದೆ.

[ಮೊದಲನೆಯ ಮುದ್ರಣ : (1976) ಪು. ಡೆಮ್ಮಿ ೧೪ + ೨೪೦]

೮. ಪ್ರಕರಣಗಳು - ೮ನೆಯ ಸಂಪುಟ : ಪ್ರಬೋಧಸುಧಾಕರ ಇತ್ಯಾದಿ : ಶ್ರೀಶಂಕರಭಗವತ್ಪಾದ ರಚಿತವೆಂದು ಸುಪ್ರಸಿದ್ಧವಾಗಿರುವ 'ಪ್ರಬೋಧಸುಧಾಕರ' ಎಂಬ ಚಿಕ್ಕ ಪ್ರಕರಣ ಗ್ರಂಥ. ಭಕ್ತಿ ಹಾಗೂ ಯೋಗದರ್ಶನಗಳಿಂದ ಮಿಶ್ರವಾದ ವೇದಾಂತ ಸಿದ್ಧಾಂತವು ಇದರಲ್ಲಿ ನಿರೂಪಿಸಲ್ಪಟ್ಟಿದೆ. 'ಪ್ರಶ್ನೋತ್ತರಮಾಲಿಕಾ' ಎಂಬ ಹೆಸರಿನ ಪ್ರಸಿದ್ಧವಾಗಿರುವ ಆಚಾರ್ಯರ ಮತ್ತೊಂದು ಕೃತಿಯನ್ನೂ, ಶ್ರೀರಾಮಭುಜಂಗ ಪ್ರಯಾತಸ್ತೋತ್ರ, ದತ್ತಲಹರೀ - ಎಂಬ ವಿಷಯಗಳನ್ನೂ ಸೇರಿಸಿ ಸಂಪುಟವನ್ನು ಹೊರತಂದಿದೆ.

[ಮೊದಲನೆಯ ಮುದ್ರಣ : (1978) ಪು. ಡೆಮ್ಮಿ ೮ + ೧೧೦]

**ಹೆಚ್ಚಿನ ವಿವರಗಳಿಗೆ ಮತ್ತು ಪುಸ್ತಕಗಳ ಪೂರ ಬೆಲೆಪಟ್ಟಿಗೆ ಸಂಪರ್ಕಿಸಿ**


**ಅ. ಪ್ರ. ಕಾ. ಹೊಳೆನರಸೀಪುರ**
**ಹಾಸನ ಜಿಲ್ಲೆ - 573211**
**ದೂ. : 08175 - 73820**

**ಅ. ಪ್ರ. ಕಾ. ತ್ಯಾಗರಾಜನಗರ**
**ಬೆಂಗಳೂರು - 560 028.**
**ದೂ. : 080 - 6525548**

ಕಾರಿಕೆಗಳೂ ಶಾಂಕರಭಾಷ್ಯಸಮೇತ ಈ ಉಪನಿಷತ್ತಿಗೆ ಇರುವದು ಒಂದು ವಿಶೇಷ. ವೇದಾಂತಸಾರ ಸಂಗ್ರಹವನ್ನೂ, ಬೌದ್ಧರ ಪ್ರಕ್ರಿಯೆಗೂ ವೇದಾಂತಪ್ರಕ್ರಿಯೆಗೂ ಇರುವ ತಾರತಮ್ಯವನ್ನೂ ಇದರಲ್ಲಿ ಕಾಣಬಹುದು. *(ನಾಲ್ಕನೆಯ ಮುದ್ರಣ : ಪುಟಗಳು ಡೆಮ್ಮಿ ೩೨+೪೯೦)*

**7. ಐತರೇಯೋಪನಿಷತ್ತು :** ಪರಮಾತ್ಮನೇ ಈ ಇಡಿಯ ಜಗತ್ತನ್ನು ಸೃಷ್ಟಿಸಿ ಅದರೊಳಗಿನ ಬೇರೆಬೇರೆಯ ಶರೀರಗಳೊಳಗೆ ಹೊಕ್ಕಿರುವ ಪ್ರಜ್ಞಾನರೂಪನು. ಅವನೇ ಅಜ್ಞಾನದಿಂದ ಸಂಸಾರಿಯಾಗಿ ಕಾಣುತ್ತಿರುವನು. ಆ ಪರಮಾತ್ಮನ ನಿಜವಾದ ಸ್ವರೂಪವನ್ನು ನಿರ್ಧರಿಸಿಕೊಂಡರೆ ಸದ್ಯೋಮುಕ್ತಿಯಾಗುವದು ಎಂಬುದನ್ನು ವಿವರಿಸುವ ಉಪನಿಷತ್ತು.

*(ಮೂರನೆಯ ಮುದ್ರಣ ; ಪುಟಗಳು ಡೆಮ್ಮಿ ೧೬+೧೩೦)*

**8. ತೈತ್ತಿರೀಯೋಪನಿಷತ್ತು :** ಇದರಲ್ಲಿ ಶೀಕ್ಷಾವಲ್ಲಿ, ಆನಂದವಲ್ಲಿ, ಭೃಗುವಲ್ಲಿ - ಎಂಬ ಮೂರು ಭಾಗಗಳಿವೆ. ವೇದಾಂತಸಿದ್ಧಾಂತಕ್ಕೆ ಅಡಿಗಲ್ಲಾಗಿರುವ ಅನೇಕ ವಿಷಯಗಳನ್ನು ಇಲ್ಲಿ ಪ್ರತಿಪಾದಿಸಿದೆ. ಮುಖ್ಯವಾಗಿ ಕರ್ಮಗಳಿಗೂ, ಜ್ಞಾನಕ್ಕೂ ಇರುವ ಸಂಬಂಧ, ಪರಬ್ರಹ್ಮಪ್ರಾಪ್ತಿಗೂ ಅಪರ ಬ್ರಹ್ಮಪ್ರಾಪ್ತಿಗೂ ಇರುವ ತಾರತಮ್ಯ, ನಿರ್ವಿಶೇಷವಾದ ಬ್ರಹ್ಮಾನಂದವನ್ನು ಇಲ್ಲಿಯೇ ಅನುಭವಕ್ಕೆ ತಂದುಕೊಂಡರೆ ಪರಮಮುಕ್ತಿಯು ಲಭಿಸುವದು - ಎಂಬುದರ ರಹಸ್ಯ, ದ್ವೈತವೂ ಜೀವನ ಸಂಸಾರಿತ್ವವೂ ಆವಿದ್ಯಕವೆಂಬುದು, ವಿದ್ಯಾವಿದ್ಯೆಗಳು ಆತ್ಮನ ಧರ್ಮವಲ್ಲ - ಎಂಬಿದೇ ಮುಂತಾದ ವಿಷಯಗಳನ್ನು ಇಲ್ಲಿ ಪ್ರತಿಪಾದಿಸಿದೆ.

*(ಮೂರನೆಯ ಮುದ್ರಣ ; ಪುಟಗಳು ಡೆಮ್ಮಿ ೧೮+೩೩೮)*

**9. ಛಾಂದೋಗ್ಯೋಪನಿಷತ್ತು :** ಈ ಉಪನಿಷತ್ತು ಸಾಮವೇದಕ್ಕೆ ಸೇರಿದ್ದು. ಇದರಲ್ಲಿ ಮೊದಲನೆಯ ಐದು ಅಧ್ಯಾಯಗಳಲ್ಲಿ ಕ್ರಮವಾಗಿ ಉಪಾಸನೆಗಳ ವಿವರವನ್ನು ವಿಸ್ತಾರವಾಗಿ ತಿಳಿಸಿ ಅನಂತರ ಆರನೆಯ ಅಧ್ಯಾಯದಿಂದ ಮುಂದೆ ಆತ್ಮಜ್ಞಾನವನ್ನು ಪ್ರತಿಪಾದಿಸಿದೆ. ಈ ಉಪನಿಷತ್ತಿನಲ್ಲಿರುವ ವಿಷಯವಾಕ್ಯಗಳು ಬ್ರಹ್ಮಸೂತ್ರಭಾಷ್ಯದಲ್ಲಿ ವಿಚಾರಕ್ಕೆ ಬಹಳವಾಗಿ ತೆಗೆದುಕೊಳ್ಳಲ್ಪಟ್ಟಿವೆ. ತತ್ತ್ವಮಸಿ ಮಹಾವಾಕ್ಯದ ವಿಸ್ತಾರವಾದ ವಿವರವು ಇದರಲ್ಲಿ ಅಡಕವಾಗಿವೆ. ಶಾಂಕರವೇದಾಂತದ ಅಮೋಘವಿಚಾರಗಳ ಮನನಕ್ಕೆ ಅತ್ಯುತ್ತಮ ಗ್ರಂಥವಿದು. ಎಂಟು ಅಧ್ಯಾಯಗಳ ಪೂರ ಭಾಷ್ಯ ಗ್ರಂಥವು ಒಂದೇ ಸಂಪುಟವಾಗಿ ಪ್ರಕಟವಾಗಿದೆ.

*(ಎರಡನೆಯ ಮುದ್ರಣ ; ಪುಟಗಳು ಡೆಮ್ಮಿ ೬೧+೧೦೯೫)*

**10. ಬೃಹದಾರಣ್ಯಕೋಪನಿಷತ್ತು (ಭಾಗ ೧, ಭಾಗ ೨) :** ಹೆಸರಿಗೆ ತಕ್ಕಂತೆ ಉಪನಿಷತ್ತುಗಳಲ್ಲೆಲ್ಲ ದೊಡ್ಡದಾಗಿರುವ, ಶುಕ್ಲಯಜುರ್ವೇದಕ್ಕೆ ಸೇರಿರುವ ಈ ಉಪನಿಷತ್ತಿಗೆ ಆಚಾರ್ಯರು ವಿಸ್ತಾರವಾಗಿ ಭಾಷ್ಯವನ್ನು ಬರೆದಿರುತ್ತಾರೆ. ಮಧುಕಾಂಡವೆಂದು ಪ್ರಸಿದ್ಧವಾಗಿರುವ ಇದರ ಮೊದಲನೆಯ ಎರಡು ಅಧ್ಯಾಯಗಳಲ್ಲಿ ಆಗಮಪ್ರಧಾನವಾಗಿ ತತ್ತ್ವವನ್ನು ತಿಳಿಸಿರುತ್ತದೆ. ಮೂರು - ನಾಲ್ಕು ಅಧ್ಯಾಯಗಳು ಮುನಿಕಾಂಡವೆಂಬ ಹೆಸರಿನಿಂದ ತರ್ಕಪ್ರಧಾನವಾಗಿದ್ದು ಆಗಮ ಉಪಪತ್ತಿಗಳಿಂದ ತತ್ತ್ವವನ್ನು ವಿವರಿಸಿರುತ್ತದೆ. ಕೊನೆಯ ಎರಡು ಅಧ್ಯಾಯಗಳು ಖಿಲಕಾಂಡವೆಂದು ಪ್ರಸಿದ್ಧವಾಗಿದ್ದು ಉಪಾಸನಾಭಾಗವನ್ನು ಒಳಗೊಂಡಿದೆ. ಆತ್ಮಸ್ವರೂಪವನ್ನು ಅವಸ್ಥಾತ್ರಯ ಪರೀಕ್ಷೆಯಿಂದ ಗೊತ್ತುಪಡಿಸುವ ವಿಚಾರಸರಣಿಯು ಇದರಲ್ಲಿ ಬಹಳ ಸುಂದರವಾಗಿದೆ. ಯಾಜ್ಞವಲ್ಕ್ಯ - ಮೈತ್ರೇಯಿಯಾ ಸಂವಾದ, ಜನಕ - ಯಾಜ್ಞವಲ್ಕ್ಯಸಂವಾದ - ಮುಂತಾದ ಕಥಾರೂಪಗಳಿಂದ ತತ್ತ್ವವನ್ನು ಹೃದಯಂಗಮವಾಗಿ ಪ್ರತಿಪಾದಿಸುವ ಉಪನಿಷತ್ತಿದು. ಆಚಾರ್ಯರು ತಮ್ಮ ಭಾಷ್ಯದಲ್ಲಿ ಅನೇಕ ವಿಷಯಗಳ ವಿಸ್ತಾರವಾದ ಚರ್ಚೆಯನ್ನು ಮಾಡಿ ಈ ಉಪನಿಷತ್ತಿನ ರಹಸ್ಯವನ್ನು ಹೊರಗೆಡವಿರುತ್ತಾರೆ. ಇಂಥ ಅಮೂಲ್ಯಗ್ರಂಥವು ವಿಷಯದಲ್ಲೂ ಆಕಾರದಲ್ಲೂ ಬ್ರಹ್ಮಸೂತ್ರ ಭಾಷ್ಯಕ್ಕೆ ಸರಿಸಮಾನವಾಗಿದೆ. ಎರಡು ಸಂಪುಟಗಳಲ್ಲಿ ಪೂರ್ತಿ ಉಪನಿಷತ್ತು ಭಾಷ್ಯ ಸಮೇತ ಪ್ರಕಟವಾಗಿದೆ. ಜಿಜ್ಞಾಸುಗಳು ಅವಶ್ಯವಾಗಿ ಸಂಗ್ರಹಿಸಬೇಕಾದ ಉಪನಿಷತ್ತಿದು.

*(೧ನೆಯ ಸಂಪುಟ : ಎರಡನೆಯ ಮುದ್ರಣ ; ಪುಟಗಳು ಡೆಮ್ಮಿ ೩೨+೭೩೬.*
*೨ನೆಯ ಸಂಪುಟ : ಎರಡನೆಯ ಮುದ್ರಣ ; ಪುಟಗಳು ಡೆಮ್ಮಿ ೫೦+೧೦೧೦)*

# ಸಂಸ್ಥಾಪಕರ ಸ್ಮರಣೆ



ಕರ್ನಾಟಕದೇಶದ ಅಭಿನವಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಶಾಂಕರವೇದಾಂತದ ವಿಷಯಕ್ಕೆ ೨೦ನೆಯ ಶತಮಾನದ ಅಧಿಕೃತವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯ ಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯಭಾಷ್ಯಗಳು ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

5.1.1880 ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು ವೈ.ಸುಬ್ಬರಾವ್ ಎಂದಿತ್ತು. 1948 ರವರೆಗೆ (68 ನೆಯ ವಯಸ್ಸಿನವರೆಗೆ) ಅವರು ''ಸುಬ್ರಾಯ'' ರೆಂದೇ ಪ್ರಖ್ಯಾತರಾಗಿದ್ದರು. 10.6.1948 ರಂದು ಸಂನ್ಯಾಸವನ್ನು ಸ್ವೀಕರಿಸಿ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಾದರು.

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀ ಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು ''ಪುರುಷಸರಸ್ವತಿ'' ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ದೇಶವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕದ ಅಭಿನವಶಂಕರಾಚಾರ್ಯರಾಗಿ ಬಾಳಿ 1975ನೇ ಆಗಸ್ಟ್ 5 (1880-1975) ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ।।

'' ಓಂ ನಮೋ ಭಗವತೇ ಸಚ್ಚಿದಾನಂದಾಯ ''